ಕರ್ನಾಟಕ ವಿಧಾನ ಮಂಡಲ

## ಜಂಟಿ ಸದನ ಸಮಿತಿ

# ಬೆಂಗಳೂರು ನಗರ /ನಗರ ಜಿಲ್ಲೆಯಲ್ಲಿ ಸರ್ಕಾರಿ ಜಮೀನು ಒತ್ತುವರಿ ಕುರಿತು

## ಮಧ್ಯಂತರ ವರದಿ ಭಾಗ-2

ವಿಧಾನ ಸಭೆಯಲ್ಲಿ ಮಂಡಿಸಿದ ದಿನಾಂಕ: 26 JUL 2007
ವಿಧಾನ ಪರಿಷತ್ತಿನಲ್ಲಿ ಮಂಡಿಸಿದ ದಿನಾಂಕ:

# ಸಮಿತಿಯ ರಚನೆ

ಸಮಿತಿಯ ಅಧ್ಯಕ್ಷರು

## ಶ್ರೀ ಎ.ಟಿ.ರಾಮಸ್ವಾಮಿ

### ಸಮಿತಿಯ ಸದಸ್ಯರುಗಳು:

### ವಿಧಾನಸಭೆ ಸದಸ್ಯರುಗಳು:

**ಶ್ರೀಯುತರುಗಳಾದ:–**

1. ರೋಷನ್ ಬೇಗ್ ಆರ್.
2. ಎನ್.ಯೋಗೀಶ್ ಭಟ್
3. ವಿಶ್ವೇಶ್ವರ ಹೆಗಡೆ ಕಾಗೇರಿ
4. ರಘು ಎಸ್.
5. ಎ.ನಾರಾಯಣಸ್ವಾಮಿ
6. ಮಾಧುಸ್ವಾಮಿ ಜೆ.ಸಿ.
7. ವಾಟಾಳ್ ನಾಗರಾಜ್
8. ನರಸಿಂಹ ನಾಯಕ
9. ಕೆ.ಎನ್.ರಾಜಣ್ಣ
10. ಮಹಿಮ ಜೆ.ಪಟೇಲ್ (ದಿನಾಂಕ:09.03.2007ರವರೆಗೆ)
11. ಜಿ.ವಿ.ಶ್ರೀರಾಮರೆಡ್ಡಿ
12. ವಿಶ್ವನಾಥ್ ಪಾಟೀಲ್ ಹೆಬ್ಬಾಳ್ ( ದಿನಾಂಕ: 15.03.2007 ರಿಂದ)

### ವಿಧಾನ ಪರಿಷತ್ತಿನ ಸದಸ್ಯರುಗಳು

ಶ್ರೀಯುತರುಗಳಾದ:–

1. ಡಾ: ಮಲ್ಲನಗೌಡ ನಾಡಗೌಡ
2. ಮುಖ್ಯಮಂತ್ರಿ ಚಂದ್ರು
3. ವಿ.ಎಸ್.ಉಗ್ರಪ್ಪ
4. ಕೆ.ಬಿ.ಮುನಿವೆಂಕಟರೆಡ್ಡಿ
5. ವೈ.ಎಸ್.ವಿ.ದತ್ತ

## ವಿಧಾನ ಮಂಡಲದ ಅಧಿಕಾರಿಗಳು

ಶ್ರೀಯುತರುಗಳಾದ:–

| | | |
|---|---|---|
| 1. | ಡಿಸೋಜಾ ರಾಬಿನ್‌ಸನ್ | ಪ್ರಧಾನ ಕಾರ್ಯದರ್ಶಿ |
| 2. | ಎಸ್.ಬಿ.ಪಾಟೀಲ್ | ಅಪರ ಕಾರ್ಯದರ್ಶಿ |
| 3. | ಲಕ್ಷ್ಮಣ್ ರಾಜ್ ಅರಸ್ | ಉಪ ಕಾರ್ಯದರ್ಶಿ(ಪ್ರ) |
| 4. | ಎನ್.ನರಸಿಂಹಮೂರ್ತಿ | ಶಾಖಾಧಿಕಾರಿ |

## ಜಂಟಿ ಸದನ ಸಮಿತಿಯ ಅಧಿಕಾರಿಗಳು

ಶ್ರೀಯುತರುಗಳಾದ:–

| | | |
|---|---|---|
| 1. | ವಿ.ಬಾಲಸುಬ್ರಮಣಿಯನ್, ಐ.ಎ.ಎಸ್.,<br>ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ | ಸಲಹೆಗಾರರು |
| 2. | ಜಿ.ಕೆ.ಭಟ್ | ಕಾನೂನು ಸಲಹೆಗಾರರು |
| 3. | ಕೆ.ನರಸಿಂಹಯ್ಯ, ಕೆ.ಎ.ಎಸ್(ನಿವೃತ್ತ) | ವಿಶೇಷಾಧಿಕಾರಿ |
| 4. | ವಿನಾಯಕ್, ಕೆ.ಎ.ಎಸ್(ನಿವೃತ್ತ) | ವಿಶೇಷಾಧಿಕಾರಿ–II |
| 5. | ಹೆಚ್.ಜಿ.ಶ್ರೀವರ, ಕೆ.ಎ.ಎಸ್.,<br>ಅಪರ ವ್ಯವಸ್ಥಾಪಕ ನಿರ್ದೇಶಕರು,<br>ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ<br>ತಂತ್ರಜ್ಞಾನ ಸೇವೆಗಳು | ಸಮಿತಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಸೇವೆ |
| 6. | ಸೈಯದ್ ಇಲಿಯಾಸ್ ಅಹ್ಮದ್<br>ಭೂ ದಾಖಲೆಗಳ ಜಂಟಿ ನಿರ್ದೇಶಕರು<br>ಮತ್ತು ಉಪ ಆಯುಕ್ತರು(ಆಸ್ತಿಗಳು)<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಸಮಿತಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಸೇವೆ |

# ಪೀಠಿಕೆ

ಸಮಿತಿಯು ಇಲ್ಲಿಯವರೆಗೆ 40 ಬಾರಿ ಸಭೆ ಸೇರಿದೆ, 20 ದಿನಗಳಲ್ಲಿ ಒತ್ತುವರಿ ದೂರುಗಳ 90 ಸ್ಥಳಗಳಿಗೆ ಭೇಟಿ ನೀಡಿದೆ, ಸುಮಾರು 200ಕ್ಕೂ ಹೆಚ್ಚು ಆಂತರಿಕ ಪುನರೀಕ್ಷಣಾ ಸಭೆಗಳನ್ನು ನಡೆಸಿದೆ ಹಾಗೂ ದಿನಾಂಕ 01-02-2007ರಂದು ಒಂದು ಮಧ್ಯಂತರ ವರದಿಯನ್ನು ಸದನಕ್ಕೆ ಸಲ್ಲಿಸಿದೆ. ಇಲ್ಲಿಯವರೆಗೆ ಸಮಿತಿಯು ಒಟ್ಟು 1101 ದೂರುಗಳನ್ನು ಸ್ವೀಕರಿಸಿದೆ. ಈ ಎಲ್ಲಾ ದೂರುಗಳನ್ನು ದಾಖಲಿಸಿಕೊಂಡು ಸ್ವೀಕೃತಿಯನ್ನು ನೀಡಿದೆ ಮತ್ತು ಅವುಗಳ ಬಗ್ಗೆ ವಿಚಾರಣೆಯನ್ನು ನಡೆಸುತ್ತಿದೆ. ಇಪ್ಪತ್ತೆಂಟು ಇಲಾಖೆಗಳಿಗೆ ಮತ್ತು ಶಾಸನಬದ್ಧ ಸಂಸ್ಥೆಗಳಿಗೆ ಸಮಿತಿಯು ಸಮಯವನ್ನು ನೀಡಿ, ವಿಚಾರಣೆ ನಡೆಸಿದೆ ಹಾಗೂ ಅವರು ತಮಗೆ ಕಳುಹಿಸಿದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ವಿವರಣೆಗಳನ್ನು ಸಮಿತಿಗೆ ನೀಡುತ್ತಿದ್ದಾರೆ. ಸಮಿತಿಗೆ ಪೂರ್ಣ ತೃಪ್ತಿಕರವಾದ ವಿವರಣೆ ಯಾರಿಂದಲೂ ಬಂದಿಲ್ಲ. ಆಂಧ್ರ ಪ್ರದೇಶ ಭೂ ಕಬಳಿಕೆ (ನಿಷೇಧ) ಅಧಿನಿಯಮ ಎಷ್ಟು ಫಲಪ್ರದವಾಗಿದೆ ಎಂಬ ಬಗ್ಗೆ ತಿಳಿದುಕೊಳ್ಳಲು ಮತ್ತು ಹೈದರಬಾದ್ ನಗರಾಭಿವೃದ್ಧಿ ಪ್ರಾಧಿಕಾರ (HUDA) ಹಾಗೂ ಹೈದರಾಬಾದ್ ನಗರಪಾಲಿಕೆಗಳು (MCH) ಭೂ ಒತ್ತುವರಿಯನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮದ ಬಗ್ಗೆ ಅಧ್ಯಯನ ನಡೆಸಲು ಈ ಸಮಿತಿಯ ಅಧಿಕಾರಿಗಳು, ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹೈದರಾಬಾದಿಗೆ ಭೇಟಿಯನ್ನು ನೀಡಿದರು. ಇದರ ಫಲವಾಗಿ ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007 ಮತ್ತು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ 2007ನ್ನು ಸಿದ್ಧಪಡಿಸಲಾಗಿದೆ ಹಾಗೂ ಕರ್ನಾಟಕ ವಿಧಾನ ಮಂಡಲವು ಅದನ್ನು ಅಂಗೀಕರಿಸಿದೆ. (ಅನುಬಂಧ -1 ಮತ್ತು 2).

ಜಂಟಿ ಸದನ ಸಮಿತಿಯು ಮಧ್ಯಂತರ ವರದಿ ಭಾಗ-2ನ್ನು ದಿನಾಂಕ 12.07.2007 ರಂದು ಪರಿಶೀಲಿಸಿ ಅಂಗೀಕರಿಸಿದೆ.

ಎ.ಟಿ.ರಾಮಸ್ವಾಮಿ
ಅಧ್ಯಕ್ಷರು,
ಜಂಟಿ ಸದನ ಸಮಿತಿ

ಬೆಂಗಳೂರು.
ದಿನಾಂಕ 12.07.2007

# ವಿಷಯ ಸೂಚಿ


| ಕ್ರ. ಸಂ. | ಪರಿಚ್ಛೇದಗಳು | ಪುಟ ಸಂಖ್ಯೆ |
|---|---|---|
| | ಪ್ರಸ್ತಾವನೆ<br>ಭೂ ಕಬಳಿಕೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಪರಿಗಣಿಸಲೇಬೇಕಾದ ಕೆಲವು ಪ್ರಮುಖ ಹಾಗೂ ಮೂಲಭೂತ ಅಂಶಗಳು | 01–03 |
| | ಸಾರಾಂಶ (ಕಂಡಿಕೆ 1 ರಿಂದ 15 ರವರೆಗೆ) | 04–11 |
| | **ವಿವರವಾದ ವರದಿ:** | |
| 1. | ಜಮೀನುಗಳ ಒತ್ತುವರಿಯ ಅಪೂರ್ಣ ಮಾಹಿತಿ ಒದಗಿಸಿರುವ ಬಗ್ಗೆ | 12 |
| 2. | ಭೂ ಕಬಳಿಕೆದಾರರ ಮತ್ತು ಭೂ ಕಬಳಿಕೆಗೆ ದುಷ್ಪ್ರೇರಣೆ ಮಾಡುವವರ ವಿರುದ್ಧ ಕ್ರಿಮಿನಲ್ ಪ್ರಾಸಿಕ್ಯೂಷನ್ ಹೂಡಬೇಕಾದ ಅಗತ್ಯ | 13–14 |
| 3. | ಕರ್ನಾಟಕ ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಿಚಿತ್ರ ಪ್ರಕರಣ–ಕಾಪಾಡುವ ದೊರೆಯನ್ನೇ ಕಾಯುವವರು ಯಾರು? | 15–19 |
| 4. | ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿನ್ನಮಂಗಲ ಮನವಾರ್ತೆ ಕಾವಲ್, ಬೈಯಪ್ಪನಹಳ್ಳಿಯಲ್ಲಿ ಪೂರ್ವಂಕರ ಬಿಲ್ಡರ್ಸ್‌ರವರು ನೋಂದಣಿ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಶಾಮೀಲಿನಿಂದ ಸಾರ್ವಜನಿಕ ರಸ್ತೆಗಳನ್ನು **"ಗುಳುಂ"** ಮಾಡಿರುವುದು | 20–21 |
| 5. | ಬೈರಸಂದ್ರ ಕೆರೆಯಂಗಳವನ್ನೇ ಬ್ಯಾಂಕಿನಲ್ಲಿ ಒತ್ತೆಯಿಟ್ಟು ಸಾಲ ಪಡೆದಿರುವ ಬಗ್ಗೆ | 22–24 |
| 6. | ಬೆಂಗಳೂರು ಪೂರ್ವ ತಾಲ್ಲೂಕಿನ ಪಟ್ಟಂದೂರ ಅಗ್ರಹಾರದಲ್ಲಿರುವ 11 ಎಕರೆ 20 ಗುಂಟೆ ಸರ್ಕಾರಿ ಕೆರೆಯಂಗಳ ಜಮೀನನ್ನು ಕೋಟಾ ದಾಖಲೆ ಸೃಷ್ಟಿಸಿ ಕಬಳಿಸಿರುವುದು | 25–28 |
| 7. | ನಕಲಿ ದಾಖಲೆಗಳನ್ನು ಸೃಷ್ಟಿಸಿ , ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಡಮನವರ್ತೆ ಕಾವಲ್ ಹಳ್ಳಿಯ 180 ಎಕರೆ ಸರ್ಕಾರಿ ಪಡ ಭೂಮಿಯನ್ನು ಕಬಳಿಸಿರುವುದು | 29–32 |
| 8. | ಚೌಬೀನಾ ಸುಬ್ಬರಾವ್ ಧರ್ಮಾದಾಯ ಸಂಸ್ಥೆ ಪ್ರಕರಣ: ದಾನಿಯೊಬ್ಬರು ಉಯಿಲು ದಾನ ನೀಡಿದ 15 ಕೋಟಿ ಬೆಲೆ ಬಾಳುವಂತಹ 9770 ಚದರ ಅಡಿ ಭೂಮಿ ಮತ್ತು ಕಟ್ಟಡವನ್ನು ಬೆಂಗಳೂರು ಮಹಾನಗರಪಾಲಿಕೆ ಅಧಿಕಾರಿಗಳ ನೆರವಿನಿಂದ ಖಾಸಗಿ ವ್ಯಕ್ತಿಗಳು ಕಬಳಿಸುತ್ತಿರುವ ಬಗ್ಗೆ | 33–37 |
| 9. | ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆಗೆ (ನಿಮ್ಹಾನ್ಸ್) ಸೇರಿದಂತಹ 3 ಎಕರೆ 26 ಗುಂಟೆ ಜಮೀನನ್ನು ಮಹಾನಗರ ಪಾಲಿಕೆ ಅಧಿಕಾರಿಗಳ ನೆರವಿನಿಂದ ಒಬ್ಬ ಬಿಲ್ಡರ್ ಕಬಳಿಸಿರುವುದು | 38–41 |

| | | |
|---|---|---|
| 10. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಯಿಂದ 12 ಕಿ.ಮೀ.ಒಳಗೆ ಇರುವ ತುರಹಳ್ಳಿ ಕಿರು ಅರಣ್ಯ ಪ್ರದೇಶದಲ್ಲಿ, ಭೂ ಕಬಳಿಕೆದಾರರಿಂದ ಭೂ ಕಬಳಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಇದಕ್ಕೆ ಉತ್ತೇಜನ | 42–49 |
| | ತುರಹಳ್ಳಿ ಕಿರು ಅರಣ್ಯ ಪ್ರದೇಶದಲ್ಲಿ ಭೂ ಕಬಳಿಕೆಗೆ ದುಷ್ಪ್ರೇರಿಸುವಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳ ಪಾತ್ರ | |
| | ತುರಹಳ್ಳಿ ಕಿರು ಅರಣ್ಯ ಪ್ರದೇಶದ–ನಕಲಿ "ಸಾಗುವಳಿದಾರರು" ಹಾಗೂ ಭೂ ಕಬಳಿಕೆದಾರರು ಸಲ್ಲಿಸಿದ್ದ ಖೋಟಾ ಅರ್ಜಿಯ ಮೇಲೆ ಉಚ್ಚ ನ್ಯಾಯಾಲಯದ ಆದೇಶಗಳ ಪರಿಣಾಮಗಳು | |
| 11. | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಬೆಂಗಳೂರು ಅರಣ್ಯ ವಿಭಾಗ ಇವುಗಳಲ್ಲಿ ಭೂ ಕಬಳಿಕೆ ಮತ್ತು ಉದ್ಯಾನವನ್ನು ರಕ್ಷಿಸುವಲ್ಲಿ ಹಾಗೂ ಒತ್ತುವರಿ ಮಾಡಿದವರನ್ನು ತೆರವುಗೊಳಿಸುವಲ್ಲಿ ಅರಣ್ಯ ಇಲಾಖೆಯ ವೈಫಲ್ಯ | 50–53 |
| 12. | ಬೆಂಗಳೂರು ನಗರ ಅರಣ್ಯ ವಿಭಾಗದ ನಿಯಂತ್ರಣದಲ್ಲಿರುವ ಕೆರೆಗಳ ಒತ್ತುವರಿ | 54–56 |
| 13. | ಆಸ್ತಿ ಹಕ್ಕಿನ ದಾಖಲಾತಿ ಬಗ್ಗೆ ಒಂದು ವಿಶ್ವಾಸಾರ್ಹ ಪದ್ಧತಿ ಅಭಿವೃದ್ಧಿ ಪಡಿಸುವುದು ಮತ್ತು ಇತರ ಅನೇಕ ದೇಶಗಳಲ್ಲಿ ಜಾರಿಯಲ್ಲಿರುವ ಟಾರೆನ್ಸ್ ಪದ್ಧತಿ ಮಾದರಿಯಲ್ಲಿ ಆದಷ್ಟು ಅದನ್ನು ನಿರ್ವಹಿಸಿಕೊಂಡು ಬರುವುದು | 57–61 |
| 14. | ಕಾನೂನು ಇಲಾಖೆಯವರು, ಸರ್ಕಾರಿ ಮತ್ತು ಶಾಸನಬದ್ಧ ಸಂಸ್ಥೆಗಳ ನ್ಯಾಯವಾದಿಗಳು ಮೊಕದ್ದಮೆಗಳಲ್ಲಿ ಪ್ರತಿವಾದವನ್ನು ಪರಿಣಾಮಕಾರಿಯಾಗಿ ಮಾಡುವ ಬಗ್ಗೆ | 62 |
| 15. | ಸರ್ಕಾರದ ದಾವೆಗಳನ್ನು ಪ್ರತಿವಾದಿಸುವಲ್ಲಿ ಕಾನೂನು ಕೋಶಗಳು ಮತ್ತು ಕಾನೂನು ವಿಭಾಗಗಳ ಅತೃಪ್ತಿಕರ ಕಾರ್ಯನಿರ್ವಹಣೆ | 63–65 |
| 16. | ನ್ಯಾಯಾಲಯಗಳಲ್ಲಿ ಸರ್ಕಾರಿ ಪ್ರಕರಣಗಳನ್ನು ಯಶಸ್ವಿಯಾಗಿ ಪ್ರತಿವಾದಿಸುವುದು | 66–67 |
| 17. | ಕಾನೂನು ಇಲಾಖೆಯ ಗಣಕೀಕರಣ | 68 |
| 18. | ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007 | 69–70 |
| 19. | ಈ ಅಧಿನಿಯಮದ ಉಪಬಂಧಗಳ ಮತ್ತು ವಿಶೇಷ ನ್ಯಾಯಾಲಯದ ವ್ಯಾಪ್ತಿಯೊಳಗೆ ಒಂದು ವಿಶ್ವಾಸಾರ್ಹ ತನಿಖೆ ಹಾಗೂ ಅಭಿಯೋಜನೆ ಪ್ರಾಧಿಕಾರ ರಚಿಸಬೇಕಾದ ಅವಶ್ಯಕತೆ | 71–72 |
| 20. | ಒತ್ತುವರಿದಾರರಿಂದ ಹಿಂತೆಗೆದುಕೊಂಡಿರುವಂತಹ ಜಮೀನುಗಳ ಬಳಕೆಗೆ ಒಂದು ಮಾಸ್ಟರ್ ಪ್ಲ್ಯಾನ್ | 73–74 |
| 21. | ನಿಷ್ಕ್ರಿಯ ಆಡಳಿತದಿಂದ ತಪ್ಪಿತಸ್ಥರಿಗೆ ರಕ್ಷಣೆ ದೊರಕುತ್ತಿರುವ ಬಗ್ಗೆ | 75 |
| | ಅನುಬಂಧಗಳು – 1 ರಿಂದ 5 ರವರೆಗೆ | 79–136 |

# ಬೆಂಗಳೂರು ನಗರ /ನಗರ ಜಿಲ್ಲೆಯಲ್ಲಿ ಭೂ ಒತ್ತುವರಿ ಕುರಿತು

## ಜಂಟಿ ಸದನ ಸಮಿತಿ

## ಮಧ್ಯಂತರ ವರದಿ ಭಾಗ –II

**ಪ್ರಸ್ತಾವನೆ:**

2007ರ ಮೇನಲ್ಲಿ ಇದ್ದಂತೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳು (ಪ್ರಮುಖ ಇಲಾಖೆಗಳು) ಹಾಗೂ ಶಾಸನಬದ್ಧ ಸಂಸ್ಥೆಗಳಿಗೆ ಸೇರಿದ ಜಮೀನುಗಳಲ್ಲಿ ಒತ್ತುವರಿಯಾಗಿರುವ ಭೂ ಪ್ರದೇಶವು ಸರಿ ಸುಮಾರು 30,000 ಎಕರೆಗಳು ಆಗಬಹುದು. ವಿವರಣೆ ಮುಂದಿನಂತಿದೆ:

| ಕ್ರ. ಸಂ | ಇಲಾಖೆ /ಸಂಸ್ಥೆಗಳು | | ಎಕರೆಗಳು | | ಒತ್ತುವರಿದಾರರ ಸಂಖ್ಯೆ |
|---|---|---|---|---|---|
| 1 | ಕಂದಾಯ ಇಲಾಖೆ | 21,706.00 | 25,713 | | |
| 2 | **ಅರಣ್ಯ ಇಲಾಖೆ** | | | | |
| | (ಎ) ಬೆಂಗಳೂರು ನಗರ ವಿಭಾಗ | 1099 | 312 | | |
| | (ಬಿ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 767 | 813 | | |
| | (ಸಿ) ಅರಣ್ಯ ಇಲಾಖೆಯ ಅಡಿಯಲ್ಲಿರುವ ಕೆರೆಗಳು | 313 | 2,179.00 | 553 | 1,678 |
| 3 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | | 2,878.00 | | 4,595 |
| 4 | ವಕ್ಫ್ ಮಂಡಳಿ | | 263.00 | | 97 |
| 5 | ಸಹಕಾರ ಇಲಾಖೆ | | 86.00 | | 2 |
| 6 | ಪಶುಸಂಗೋಪನೆ ಇಲಾಖೆ | | 48.00 | | 248 |
| 7 | ಮುಜರಾಯಿ ಇಲಾಖೆ | | 61.00 | | 199 |
| 8 | ಕರ್ನಾಟಕ ಗೃಹ ಮಂಡಳಿ | | 34.00 | | 302 |
| 9 | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | | 32.00 | | 601 |
| 10 | ಕರ್ನಾಟಕ ಕೊಳಚೆ ಪ್ರದೇಶ ನಿರ್ಮೂಲನಾ ಮಂಡಳಿ | | 12.00 | | 202 |
| 11 | ಪುರಸಭೆಗಳು / ನಗರ ಸಭೆಗಳು | | 8.00 | | ಮಾಹಿತಿ ಬಂದಿರುವುದಿಲ್ಲ |
| 12 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | | 13.09 | | 124 |
| 13 | ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) | | 3.00 | | 1 |
| 14 | ಬೆಂಗಳೂರು ವಿಶ್ವವಿದ್ಯಾಲಯ | | 13.00 | | 50 |
| | | **ಒಟ್ಟು** | **27,336.09** | | **33,812** |

ಸಮಿತಿಯು ಪತ್ತೆಹಚ್ಚಿದ ಮೇಲ್ಕಂಡ ಒತ್ತುವರಿ ಪ್ರಕರಣಗಳಷ್ಟೇ ಅಲ್ಲದೆ, ಇನಾಂ ರದ್ಧತಿ ಅಧಿನಿಯಮ, ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಅಧಿನಿಯಮ ಹಾಗೂ ಭೂಸುಧಾರಣಾ ಅಧಿನಿಯಮ ಮುಂತಾದವುಗಳ ಅಡಿಯಲ್ಲಿ ಬರುವ ಭೂಮಿಗಳೂ ಇವೆ. ಇವುಗಳ ಒಟ್ಟು ವಿಸ್ತೀರ್ಣ 12,012 ಎಕರೆಗಳು. ಈ ಭೂಮಿಗಳಲ್ಲಿ ವಾಸ್ತವವಾಗಿ ಆಗಿರುವ ಒತ್ತುವರಿಯನ್ನು ಕಂದಾಯ ಇಲಾಖೆ ಇನ್ನು ನಿರ್ಧರಿಸಬೇಕಾಗಿದೆ.

## ಭೂ ಕಬಳಿಕೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಪರಿಗಣಿಸಲೇಬೇಕಾದ ಕೆಲವು ಪ್ರಮುಖ ಹಾಗೂ ಮೂಲಭೂತ ಅಂಶಗಳು

ದೂರುಗಳು, ನ್ಯಾಯಾಲಯದ ತೀರ್ಮಾನಗಳು ಹಾಗೂ ಸಂಬಂಧಪಟ್ಟ ಸರ್ಕಾರಿ ಅಧಿಕಾರಿಗಳ ವಿವರಣೆಗಳನ್ನು ವಿಶ್ಲೇಷಿಸಿದ ತರುವಾಯ ಭೂ ಕಬಳಿಕೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕಾದರೆ ಕೆಲವೊಂದು ಮೂಲಭೂತ ಅಂಶಗಳನ್ನು ಪರಿಗಣಿಸುವುದು ಅವಶ್ಯವೆಂದು ಸಮಿತಿ ಅಭಿಪ್ರಾಯಪಟ್ಟಿದೆ. ಮುಂಬೈ ಹಾಗೂ ನವದೆಹಲಿಗಳನ್ನು ಬಿಟ್ಟರೆ ಭೂಮಿಯ ಬೆಲೆ ಬೆಂಗಳೂರಿನಲ್ಲಿಯೇ ಅತಿ ಹೆಚ್ಚು ಎಂಬುದು ಎಲ್ಲರಿಗೂ ತಿಳಿದ ವಿಷಯ. ಉದಾಹರಣೆಗೆ ಜಯನಗರ ವಾಣಿಜ್ಯ ಸಂಕೀರ್ಣದ ಬಳಿಯಲ್ಲಿ 60' x 40' ನಿವೇಶನವೊಂದನ್ನು ಪ್ರತಿ ಚದರಡಿಗೆ ರೂ. 22,000/- ರಂತೆ ಹರಾಜು ಮಾಡಲಾಗಿದೆಯೆಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತಿಳಿಸಿದೆ. ಇದು ಒಂದು ಎಕರೆಗೆ 96 ಕೋಟಿ ರೂಪಾಯಿಗೆ ಸಮ. ಇದೊಂದು ಅಪರೂಪದ ಪ್ರಸಂಗ ಎಂದುಕೊಂಡರೂ ಬೆಂಗಳೂರಿನ ಸುತ್ತಮುತ್ತ ಮತ್ತು ಉಪನಗರ ಪ್ರದೇಶಗಳಲ್ಲಿಯ ಭೂಮಿಯ ಬೆಲೆ ಪ್ರತಿ ಎಕರೆಗೆ 1 ರಿಂದ 4 ಕೋಟಿ ರೂಪಾಯಿಗಳವರೆಗೆ ಇರುವುದನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. 2007ರ ಮಾರ್ಚಿನಲ್ಲಿ ವರದಿಯಾದಂತೆ ಬೆಂಗಳೂರು ನಗರದಲ್ಲಿ ರಿಯಲ್ ಎಸ್ಟೇಟ್ ಏಜಂಟರನ್ನು ಹಾಡು-ಹಗಲಿನಲ್ಲಿಯೇ ಮಾಫಿಯಾ ರೀತಿಯಲ್ಲಿ ಕಗ್ಗೊಲೆ ಮಾಡಿರುವ ಕನಿಷ್ಠ ಎರಡು ಉದಾಹರಣೆಗಳಿವೆ. ಹೀಗಿರುವಾಗ ಏಳು ನಗರ ಸಭೆಗಳು ಹಾಗೂ ಒಂದು ಪುರ ಸಭೆಯ ಪ್ರದೇಶಗಳನ್ನು ಸೇರಿಸಿಕೊಂಡು ನಗರ ಪಾಲಿಕೆ ಪ್ರದೇಶವನ್ನು ಈಗಿರುವ 250 ಚದರ ಕಿಲೋ ಮೀಟರಿನಿಂದ ಸುಮಾರು 790 ಚದರ ಕಿಲೋ ಮೀಟರ್‌ವರೆಗಿನ ವಿಸ್ತರಣೆ ಮಾಡಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ) ರಚಿಸಿದ ಮೇಲೆ, ಬೆಂಗಳೂರಿನಲ್ಲಿ ಭೂಕಬಳಿಕೆ ಚಟುವಟಿಕೆಗಳು ಹೆಚ್ಚಾಗುವುದರಲ್ಲಿ ಸಂದೇಹವೇ ಇಲ್ಲ.

ನಮ್ಮ ಹಿಂದಿನ ವರದಿಯಲ್ಲಿ ಬೆಂಗಳೂರು ಭೂ ಮಾಫಿಯಾದವರಿಗೆ ಸ್ವರ್ಗವಾಗಿರುವುದಾಗಿ ಪ್ರಸ್ತಾಪಿಸಿದ್ದೆವು. ಮಿತಿ ಮೀರಿದ ನಗರೀಕರಣ, ಗಗನಕ್ಕೇರಿದ ಭೂಮಿ ಬೆಲೆ ಮತ್ತು ಆಸ್ತಿ ವ್ಯವಹಾರಗಳಲ್ಲಿ ಲಂಗುಲಗಾಮಿಲ್ಲದ ಅವ್ಯವಹಾರಗಳಿಗೆ ಆಶ್ರಯ ತಾಣವಾಗಿರುವಂಥಹ ಬೆಂಗಳೂರನ್ನು ದುಷ್ಟ ದುರಾಸೆಯ ಬಿಲ್ಡರ್‌ಗಳು ಮತ್ತು ಬ್ರೋಕರ್‌ಗಳು ತಮ್ಮ ನೆಲೆಯನ್ನಾಗಿ ಮಾಡಿಕೊಂಡಿರುತ್ತಾರೆ. ಅದಕ್ಕೆ ಕಾರಣಗಳು ಏನೆಂದರೆ ಕಾನೂನು ಬಾಹಿರ ಕೃತ್ಯಗಳಿಗೆ ಸಂಪೂರ್ಣ ಬೆಂಬಲವೇ ಸಿಕ್ಕುತ್ತಿದ್ದು, ತಪ್ಪು ಮಾಡಿದವರ ಮೇಲೆ ಸರಿಯಾದ ಕ್ರಮಗಳಾಗದೇ, ಭಯವಿಲ್ಲದಂತಾಗಿರುತ್ತದೆ. ತೀವ್ರವಾಗಿ ಕಾನೂನು ಬಾಹಿರ ರಿಯಲ್ ಎಸ್ಟೇಟ್ ದಂಧೆಗಳು ನಿರಂತರವಾಗಿ ನಡೆಯುತ್ತಿರುವುದು, ಅದನ್ನು ನಿಯಂತ್ರಿಸದೆ **"ಕಾನೂನಿನ**

**ಆಡಳಿತವನ್ನು ಎತ್ತಿ ಹಿಡಿಯಬೇಕಾದವರೇ"** ಶಾಮೀಲಾಗಿರುವುದು ದೇಶದಲ್ಲಿಯ ಕಾನೂನು **"ಕಾನೂನು ಮಾಡುವವರಿಗೆ ಮತ್ತು ಕಾನೂನು ರಕ್ಷಿಸುವ ಹೊಣೆಗಾರರಿಗೆ"** ಅನ್ವಯಿಸುವುದಿಲ್ಲ ಎಂದು ಕಂಡುಬರುತ್ತದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಕ್ಕು ಸ್ಥಾಪಿಸಿಕೊಂಡು ಮಾರಾಟ ಮಾಡಿರುವ ಹಲವಾರು ನಿದರ್ಶನಗಳಿದ್ದು, ಸದರಿ ಲೋಪ–ದೋಷಗಳಲ್ಲಿ ಶಾಮೀಲಾಗಿರುವ ವ್ಯಕ್ತಿ ಮತ್ತು ನೌಕರರ ವರ್ಗದವರ ಮೇಲೆ ಕ್ರಮ ಕೈಗೊಳ್ಳಲು ಆಡಳಿತ ವ್ಯವಸ್ಥೆ ವಿಫಲವಾಗಿರುತ್ತದೆ. ಸರ್ಕಾರದ ಅಂಗವಾಗಿರುವ ಇಲಾಖೆಯು ದೃಢೀಕರಿಸಿರುವ ದಾಖಲೆಗಳ ಆಧಾರದ ಮೇಲೆ ಕೊಂಡುಕೊಂಡಿರುವ ಎಷ್ಟೋ ಪ್ರಕರಣಗಳು ಸುಳ್ಳು ಸೃಷ್ಟಿಯವುಗಳಾಗಿದ್ದು, ಅವುಗಳನ್ನು ಕೊಂಡುಕೊಂಡ ಸಾವಿರಾರು ಅಮಾಯಕರು ತೊಂದರೆಗಳನ್ನು ಅನುಭವಿಸುವಂತಾಗಿರುತ್ತದೆ. ಆದುದರಿಂದ ಸರ್ಕಾರದ ದಾಖಲೆಗಳನ್ನೇ ನಂಬಿ ಕೊಂಡುಕೊಂಡಿರುವ ಅಮಾಯಕರನ್ನು ರಕ್ಷಿಸುವ ಹೊಣೆಗಾರಿಕೆ ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಹಣ ಸಂಪಾದನೆಗಾಗಿ ಸುಳ್ಳು ದಾಖಲೆ ಸೃಷ್ಟಿಸಿದ ಮತ್ತು ಶಾಮೀಲಾದ ವ್ಯಕ್ತಿಗಳು ಮತ್ತು ನೌಕರ ವರ್ಗದವರಿಗೆ ಯಾವುದೇ ಶಿಕ್ಷೆ ಆಗದಿರುವುದು ಅತ್ಯಂತ ಕೆಟ್ಟ ಹಾಗೂ ಭ್ರಷ್ಟ ಆಡಳಿತದ ನಿದರ್ಶನವಾಗಿರುತ್ತದೆ. ಇಂಥಹ ಅಕ್ರಮ ವ್ಯವಹಾರ ಮಾಡುವ ಪ್ರಭಾವ ಶಾಲಿಗಳ ಜೊತೆಯಲ್ಲಿ ಆಡಳಿತ ವರ್ಗ ಕೈಜೋಡಿಸಿರುವುದರಿಂದ ದೇಶದಲ್ಲಿಯ ಕಾನೂನು ಜೇಡರ ಬಲೆಯಂತಾಗಿರುತ್ತದೆ. ಜೇಡರ ಬಲೆಯು ಸಣ್ಣ–ಪುಟ್ಟ ಹುಳುಗಳನ್ನು ಬಂದಿಸುತ್ತದೆಯೇ ಹೊರತು, ದೊಡ್ಡ ದೊಡ್ಡ ಹುಳುಗಳು ಅದನ್ನು ಹರಿದುಕೊಂಡು ಹೋಗುತ್ತವೆ. ಶ್ರೀ ಸಾಮಾನ್ಯನಾದರೋ ಸದಾ ಕಾನೂನು ಮತ್ತು ನಿಯಮಗಳ ಜೇಡರ ಬಲೆಯಲ್ಲಿ ಸಿಕ್ಕು ಒದ್ದಾಡುತ್ತಿರುತ್ತಾನೆ. ಆದರೆ, ಹಣವಂತರು ಮತ್ತು ತೋಳ್ಬಲ ಇರುವವರು ಕಾನೂನಿನ ಬಲೆಯನ್ನು ಕಿತ್ತೊಗೆಯುವಷ್ಟು ಬಲಿಷ್ಠರಾಗಿರುತ್ತಾರೆ. ಉನ್ನತ ಅಧಿಕಾರದಲ್ಲಿರುವ ವ್ಯಕ್ತಿಗಳು ಕಾನೂನಿಗೆ ಎಳ್ಳಷ್ಟು ಗೌರವ ನೀಡದಿರುವುದಕ್ಕೆ ಒಂದು ಜ್ವಲಂತ ಉದಾಹರಣೆಯೆಂದರೆ ಈ ವರದಿಯಲ್ಲಿ ನಾವು ವಿವರಿಸಿರುವ **ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಪ್ರಕರಣ.** ಪ್ರಭಾವಶಾಲಿ ಮತ್ತು ಬಲಿಷ್ಠ ವ್ಯಕ್ತಿಗಳು ಒಂದಿಷ್ಟು ಅಳುಕಿಲ್ಲದೇ ಕಾನೂನಿನ ಮುಂದೆ ಸರ್ವರೂ ಸಮಾನರು ಮುಂತಾದ ಸರ್ವೋತ್ತಮ ತತ್ವಗಳನ್ನು ಉಲ್ಲಂಘಿಸುತ್ತಿದ್ದಾರೆ. ಈ ವರದಿಯಲ್ಲಿ ಸಮಿತಿಯು ವರದಿ ಮಾಡಿರುವಂತೆ, ಅನೇಕ ನಿರ್ದಿಷ್ಟ ಪ್ರಕರಣಗಳಲ್ಲಿ ಶ್ರೀಮಂತರು ಮತ್ತು ಬಲಿಷ್ಠರಾದಂತ ಭೂ ಕಬಳಿಕೆದಾರರು ಈ ಕಾನೂನು ವ್ಯವಸ್ಥೆಯ ಸುರಕ್ಷ ಜಾಲದ ಕಂಡಿಗಳಲ್ಲಿ ತಪ್ಪಿಸಿಕೊಂಡು ಬಿಡುತ್ತಿದ್ದಾರೆ ಹಾಗೂ ತಮ್ಮ ಅಕ್ರಮ ಸಂಪಾದನೆಯ ಫಲಗಳನ್ನು ಆನಂದದಿಂದ ಅನುಭವಿಸುತ್ತಿದ್ದಾರೆ. ಆದರೆ ಸಾಮಾನ್ಯವಾಗಿ ಕಾನೂನಿಗೆ ಹೆದರುವ ಬಡ ಜನರು ಅದಕ್ಕೆ ಬಲಿಪಶುಗಳಾಗುತ್ತಿದ್ದಾರೆ. ಈ ಪ್ರಕರಣಗಳನ್ನು ನೋಡಿದಾಗ, ಕಾನೂನು ಮತ್ತು ರಾಜಕೀಯ ವ್ಯವಸ್ಥೆಯ ಉದಾತ್ತ ಉದಾರತೆಯ ಪ್ರಯೋಜನಗಳು ಶ್ರೀಮಂತರು ಮತ್ತು ಬಲಿಷ್ಠರಾದವರಿಗೆ ಮಾತ್ರ ದಕ್ಕುತ್ತಿದೆ. ಆದರೆ ಕಾನೂನಿನ ಕಠೋರ ಘಾತ ಮಾತ್ರ ಸಮಾಜದ ಬಡಜನರಿಗೆ ತಗಲುತ್ತಿದೆ. **"ಮುಂದಿನ ದಿನಗಳಲ್ಲಿ ಸಮಿತಿಯು ಇಲಾಖಾವಾರು ವರದಿಗಳನ್ನು ಸಿದ್ಧಪಡಿಸಿ, ಅದರಲ್ಲಿ ಆಯಾಯ ಇಲಾಖೆಯ ಭೂಮಿಯನ್ನು ಒತ್ತುವರಿ ಮಾಡಿರುವವರ ಹೆಸರು ಮತ್ತು ವಿಳಾಸಗಳನ್ನು ಪ್ರಕಟಿಸಲಾಗುವುದು".** ಮುಂಬರುವ ಪ್ಯಾರಗಳಲ್ಲಿ ನಿರ್ಭಯ ಭೂಕಬಳಿಕೆ, ಅಧಿಕಾರಿಗಳು ಮತ್ತು ಇತರರು ಶಾಮೀಲಾಗಿರುವುದು, ಭೂ ಕಬಳಿಕೆಗೆ ನೆರವಾಗಲು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ನಿಷ್ಕ್ರಿಯತೆಯ ಇಂಥ ಅನೇಕ ಪ್ರಕರಣಗಳನ್ನು ವರದಿ ಮಾಡಲಾಗಿದೆ. ಅವುಗಳನ್ನು ಗಂಭೀರವಾಗಿ ಗಮನಿಸಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

* * * * *

# ಸಾರಾಂಶ

## (1) ಒತ್ತುವರಿ ನಿಯಂತ್ರಣಕ್ಕೆ ಕ್ರಮಗಳು:

ಇನ್ನು ಮುಂದೆ ಜಮೀನು ಒತ್ತುವರಿ ಆಗದಂತೆ ತಡೆಗಟ್ಟಲು, ಕೆಲವು ಮೂಲಭೂತ ಹಾಗೂ ಬಹುಕಾಲ ಉಳಿಯುವಂತಹ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಾಗುತ್ತದೆ. ಅವು ಏನೆಂದರೆ, ಭೂ ಕಬಳಿಕೆದಾರರು ಮತ್ತು ಅವರಿಗೆ ದುಷ್ಪ್ರೇರಿಸುವವರ ವಿರುದ್ಧ ಕ್ರಿಮಿನಲ್ ಪ್ರಾಸಿಕ್ಯೂಷನ್ ಹೂಡುವುದು, ಸರ್ಕಾರಕ್ಕೆ ಹಾಗೂ ಶಾಸನಬದ್ಧ ಸಂಸ್ಥೆಗಳಿಗೆ ಸೇರಿದ ಎಲ್ಲ ಜಮೀನನ್ನು ಕರಾರುವಕ್ಕಾಗಿ ಸರ್ವೆ ಮಾಡುವುದು, ಟಾರೆನ್ಸ್ ಪದ್ಧತಿಯ ಮಾದರಿಯಲ್ಲಿ ಸ್ವತ್ತು ಹಕ್ಕು ಸ್ವಾಮ್ಯದ ಒಂದು ವಿಶ್ವಾಸಾರ್ಹ ಪದ್ಧತಿಯನ್ನು ಸರ್ವೆ ಇಲಾಖೆಯವರು ಅಭಿವೃದ್ಧಿ ಪಡಿಸುವುದು ಮತ್ತು ಸರ್ಕಾರಿ ಮೊಕದ್ದಮೆಗಳನ್ನು ಪ್ರತಿವಾದಿಸಲು ಸಕಾಲದಲ್ಲಿ ತಕ್ಕ ಕ್ರಮ ಕೈಗೊಳ್ಳುವಂತೆ ಕಾನೂನು ಕೋಶಗಳು ಮತ್ತು ಕಾನೂನು ಇಲಾಖೆಗಳನ್ನು ಕ್ರಿಯಾಶೀಲವಾಗಿಸುವುದು.

## (2) ಮೇಲ್ನೋಟಕ್ಕೆ ಎದ್ದು ಕಾಣುವ ಪ್ರಕರಣಗಳಿಗೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡುವುದರ ಬಗ್ಗೆ:

ಭೂ ಕಬಳಿಕೆದಾರರು ಮತ್ತು ಅವರಿಗೆ ದುಷ್ಪ್ರೇರಿಸುವ ಅಧಿಕಾರಿಗಳು ಹಾಗೂ ಅಧಿಕಾರೇತರ ವ್ಯಕ್ತಿಗಳನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುವುದು ಅತ್ಯಂತ ಅಗತ್ಯವಾಗಿ ಆಗಲೇಬೇಕಾದ ಕಾರ್ಯ. ಏಕೆಂದರೆ ಭೂ ಕಬಳಿಕೆದಾರರು, ಅಧಿಕಾರಿಗಳು ಮತ್ತು ಇತರ ಪ್ರಭಾವಿ ವ್ಯಕ್ತಿಗಳು ಶಾಮೀಲಾಗಿರುವ ಅನೇಕ ರಾಜಾರೋಷ ಭೂ ಕಬಳಿಕೆಯ ಪ್ರಕರಣಗಳು ಜರುಗಿವೆ. ಕೆಲವು ಉದಾಹರಣೆಗಳು ಈ ರೀತಿಯಾಗಿವೆ: ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿ.ಎಂ.ಕಾವಲ್ ಗ್ರಾಮದಲ್ಲಿ 180.00 ಎಕರೆಗಳನ್ನು ಪ್ರಭಾವಿ ವ್ಯಾಪಾರಿ ಕುಟುಂಬವೊಂದೇ ಕಬಳಿಸಿದೆ, ಖೊಟ್ಟಿ ದಾಖಲೆ ಸೃಷ್ಟಿ ಮಾಡಿ, ಬೆಂಗಳೂರು ಪೂರ್ವ ತಾಲ್ಲೂಕಿನ ಪಟ್ಟಂದೂರು ಅಗ್ರಹಾರದಲ್ಲಿ 11½ ಎಕರೆ ಕೆರೆ ಅಂಗಳ ಒತ್ತುವರಿ, ಅರಣ್ಯದ 1099 ಎಕರೆಗಳು, ಕೆರೆಯಂಗಳ ಭೂಮಿಯ 313.00 ಎಕರೆಗಳು, ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನವನದಲ್ಲಿ 767 ಎಕರೆಗಳ ಒತ್ತುವರಿ, ಧರ್ಮರಾಯಸ್ವಾಮಿ ದೇವಸ್ಥಾನದ ಮತ್ತು ಇತರ ದೇವಸ್ಥಾನಗಳ ಜಮೀನುಗಳ ಒತ್ತುವರಿ, ಮುಜರಾಯಿ ಇಲಾಖೆಗೆ ಉಯಿಲು ಮಾಡಿದ ಚಾಮರಾಜಪೇಟೆಯಲ್ಲಿ ಅತ್ಯಂತ ಬೆಲೆಬಾಳುವ ಭೂ ಸ್ವತ್ತನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಅಧಿಕಾರಿಗಳು ಭೂ ಕಬಳಿಕೆದಾರರ ಮಡಿಲಿಗೆ ಹಾಕಿರುವ ಪ್ರಕರಣ, ಬಿಬಿಎಂಪಿಯ ಸಹಾಯದಿಂದ ಪೂರ್ವಂಕರ್ ಬಿಲ್ಡರ್ಸ್‌ರವರು ಸಾರ್ವಜನಿಕ ರಸ್ತೆಗಳನ್ನು ಕಾನೂನು ಬಾಹಿರವಾಗಿ ಹಕ್ಕು ಸ್ಥಾಪಿಸಿಕೊಂಡಿರುವುದು, ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ವಯ್ಯಾಲಿ ಕಾವಲ್ ಗೃಹ ನಿರ್ಮಾಣ ಸಹಕಾರ ಸಂಘ, ಶಾಂತಿನಗರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಕಲಿ ಮತ್ತು ಅನರ್ಹ ಸದಸ್ಯರನ್ನು ಸದಸ್ಯರಾಗಿ ಸೇರಿಸಿಕೊಂಡಿರುವುದು ಇವೇ ಮುಂತಾದುವುಗಳು ಸಮಿತಿಯು ಗಮನಿಸಿದ ಅನೇಕಾನೇಕ ಹಗರಣಗಳಲ್ಲಿ ಕೆಲವು ಉದಾಹರಣೆಗಳು ಮಾತ್ರ. ಇವುಗಳ ಪೈಕಿ ಕೆಲವೊಂದನ್ನು ವರದಿಯಲ್ಲಿ ವಿವರಿಸಲಾಗಿದೆ.

## (3) ಪಟ್ಟಂದೂರು ಅಗ್ರಹಾರದ ಕೆರೆಭೂಮಿ ಕಬಳಿಕೆ:

ಅಂತಾರಾಷ್ಟ್ರೀಯ ತಂತ್ರಜ್ಞಾನ ಪಾರ್ಕ್ ಬಳಿಯ ಪಟ್ಟಂದೂರು ಅಗ್ರಹಾರದ ಕೆರೆಯಂಗಳದ 11 ½ ಎಕರೆಗಳ ಭೂಮಿಯ ಕಬಳಿಕೆಯ ಪ್ರಕರಣದಲ್ಲಿ ಕೆರೆ ಅಂಗಳ ಭೂಮಿಯನ್ನು "ಮಂಜೂರಾತಿ" ಮಾಡಲಾಗಿದೆ ಎಂದು ಮೋಸದ ಮತ್ತು ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಸರ್ಕಾರಿ ವಕೀಲರು, ಅಭಿಯೋಗಗಳ ನಿರ್ದೇಶಕರು, ಕಾನೂನು ಇಲಾಖೆ ಮತ್ತು ಲೋಕಾಯುಕ್ತರು ಸಹ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವಲ್ಲಿ ವಿಫಲರಾಗಿದ್ದಾರೆ ಹಾಗೂ ಸರ್ಕಾರಕ್ಕೆ ತಪ್ಪು ಸಲಹೆಗಳನ್ನು ನೀಡಿದ್ದಾರೆ ಎಂದು ಉಚ್ಚನ್ಯಾಯಾಲಯವೇ ಅಭಿಪ್ರಾಯಪಟ್ಟಿದೆ.

## (4) ಬಿ.ಎಂ. ಕಾವಲಿನಲ್ಲಿ ಭೂ ಕಬಳಿಕೆ:

ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಡ ಮನವಾರ್ತೆ ಕಾವಲಿನಲ್ಲಿ ಖೋಡೆ ಕುಟುಂಬದವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಅಧಿಕಾರಿಗಳು 180.00 ಎಕರೆಗಳ ಸರ್ಕಾರಿ ಜಮೀನನ್ನು ಕಬಳಿಸುವುದಕ್ಕಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ.

## (5) ಮುಜರಾಯಿ ಇಲಾಖೆಯ ಭೂ ಸ್ವತ್ತಿನ ಕಬಳಿಕೆ:

1912ರಲ್ಲಿ ಮುಜರಾಯಿ ಇಲಾಖೆಗೆ ಉಯಿಲಿನ ಮೂಲಕ ದಾನವಾಗಿ ನೀಡಿದ ಚಾಮರಾಜಪೇಟೆಯ 15.00 ಕೋಟಿ ರೂಪಾಯಿಗಳ ಮೌಲ್ಯದ ಸ್ಥಿರ ಸ್ವತ್ತಿನ ಸಂಬಂಧದಲ್ಲಿ 91 ವರ್ಷಗಳ ತರುವಾಯ 2002ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸಲ್ಲಿಸಿದ ಎರಡನೆಯ ನಕಲಿ ಉಯಿಲಿನ ಆಧಾರದ ಮೇಲೆ ಸದರಿ ಅಧಿಕಾರಿಗಳು ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತಾ ಬದಲಾಯಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ ಮುಜರಾಯಿ ಇಲಾಖೆಯು ತನ್ನ ಹಕ್ಕು ಸ್ವಾಮ್ಯ ಮತ್ತು ಸ್ವಾಧೀನತೆಯ ಸಾಕ್ಷ್ಯವಾಗಿ ಮಂಡಿಸಿದ ದಾಖಲೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಆಯುಕ್ತರು ಸಾರಾಸಗಟಾಗಿ ತಿರಸ್ಕರಿಸಿ ಕಾನೂನುಬಾಹಿರವೆಂದು ಎದ್ದು ಕಾಣುವಂತಹ ಆದೇಶವನ್ನು ಹೊರಡಿಸಿದ್ದಾರೆ.

## (6) ನಿಮ್ಹಾನ್ಸ್ ಸಂಸ್ಥೆಯ ಭೂಮಿಯ ಕಬಳಿಕೆ:

1944ರ ಪ್ರಾರಂಭದಲ್ಲಿ ಭೂ ಸ್ವಾಧೀನ ಅಧಿನಿಯಮದಡಿಯಲ್ಲಿ ಸರ್ಕಾರವು ಸ್ವಾಧೀನ ಪಡಿಸಿಕೊಂಡ 3 ಎಕರೆ 26 ಗುಂಟೆ ಭೂಮಿಯ ಒಡೆತನವನ್ನು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹೊಂದಿತ್ತು. ಈ ಸಂಬಂಧ ಕೆಲವು ಭೂ ಮಾಲೀಕರಿಗೆ ಪರಿಹಾರವನ್ನೂ ನೀಡಲಾಗಿದೆ. ಇಷ್ಟಾದರೂ ಕೆಲವು ಬಿಲ್ಡರ್‌ಗಳ ಹೆಸರಿಗೆ ಕಾನೂನು ಬಾಹಿರವಾಗಿ ಮಾರಾಟ ಪತ್ರಗಳನ್ನು ಸೃಷ್ಟಿ ಮಾಡಲಾಗಿದೆ ಮತ್ತು ಬೃಹತ್ ಬೆಂಗಳೂರು ಮಹಾನಗರ

ಪಾಲಿಕೆಯು 127.00 ಕೋಟಿ ರೂಪಾಯಿಗಳ ಮೌಲ್ಯದ ಸರ್ಕಾರಿ ಜಮೀನಿನ ಖಾತಾವನ್ನು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಅವರುಗಳ ಹೆಸರಿಗೆ ಮಾಡಿಕೊಟ್ಟು ಬಿಲ್ಡರುಗಳಿಗೆ ಸಹಾಯ ಮಾಡಿರುತ್ತಾರೆ.

## (7) ಅರಣ್ಯ ಭೂಮಿಯ ಕಾನೂನು ಬಾಹಿರ ಸ್ವಾಧೀನ:

ಬೆಂಗಳೂರು ದಕ್ಷಿಣ ತಾಲೂಕಿನ ತುರಹಳ್ಳಿ ಗ್ರಾಮದಲ್ಲಿ ಉತ್ತರ ಹಳ್ಳಿ ಮನವಾರ್ತೆ ಕಾವಲ್ ಕಿರು ಅರಣ್ಯದ 344 ಎಕರೆಯನ್ನು ಹೈದರಾಬಾದಿನಿಂದ ಬಂದ ಕೆಲವು ಬಿಲ್ಡರ್‌ಗಳು ಸೇರಿದಂತೆ ರಿಯಲ್ ಎಸ್ಟೇಟ್ ಏಜೆಂಟರ್‌ಗಳು ಅರಣ್ಯ ಭೂಮಿಯ ಮಾರಾಟದ ನಕಲಿ ದಾಖಲೆಗಳನ್ನು ಸಿದ್ಧಪಡಿಸಿ ಇಡೀ ಭೂಮಿಯನ್ನು ಕಬಳಿಸಿರುತ್ತಾರೆ. ಈ ಭೂಮಿಗಳಲ್ಲಿ 42 ಎಕರೆಗಳನ್ನು ಬಿಡಿಎಯು ಬನಶಂಕರಿ VIನೇ ಹಂತದಲ್ಲಿ "ಸ್ವಾಧೀನ" ಪಡಿಸಿಕೊಳ್ಳಲು ಕ್ರಮಕೈಗೊಂಡಿದೆ ಮತ್ತು ಅನಧಿಕೃತ ಸಾಗುವಳಿದಾರರೆಂದು ಕ್ಲೇಮು ಮಾಡಿದ ವ್ಯಕ್ತಿಗಳ ಹೆಸರಿಗೆ 3.6 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ಭೂಮಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಮಿತಿಯ 15 ಕಿಲೋ ಮೀಟರುಗಳ ಒಳಗೆ ಇದೆಯಾದುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮದಡಿಯಲ್ಲಿ ಯಾವುದೇ ಅನಧಿಕೃತವಾಗಿ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಸಕ್ರಮಗೊಳಿಸುವುದಕ್ಕೆ ಸ್ಪಷ್ಟ ನಿಷೇಧವಿದೆ. ಈ ಭೂಮಿಯು 15 ಕಿಲೋ ಮೀಟರ್‌ಗಳೊಳಗೆ ಇದೆ ಎಂಬುದನ್ನು ತಿಳಿದೂ ತಿಳಿದೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಭೂ ನ್ಯಾಯ ಮಂಡಳಿಯವರು ಆ ನಿಯಮವನ್ನು ಉಲ್ಲಂಘಿಸಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರಣ್ಯ ಭೂಮಿಗೆ ಸಂಬಂಧಿಸಿದಂತೆ ಖಾಸಗಿ ವ್ಯಕ್ತಿಗಳ ಹೆಸರಿಗೆ ಅವಾರ್ಡ್ ನೀಡಿದೆ. ಆ ಭೂಮಿಗಳನ್ನು ಸಕ್ರಮಗೊಳಿಸಲು ಸಾಧ್ಯವೇ ಇಲ್ಲಾ ಎಂಬ ಆಧಾರದ ಮೇಲೆ ಭೂ ನ್ಯಾಯ ಮಂಡಳಿಯು ಆ ಅರ್ಜಿಗಳನ್ನು ಕೂಡಲೇ ವಿಲೆ ಮಾಡಬೇಕಿತ್ತು. ಆದರೆ ಅದು ಹಾಗೆ ಮಾಡಲಿಲ್ಲ. ಅರಣ್ಯ ಇಲಾಖೆಯು, ಈ ಭೂ ಕಬಳಿಕೆದಾರರಿಗೆ ಶಿಕ್ಷೆ ನೀಡಲು ಕರ್ನಾಟಕ ಅರಣ್ಯ ಅಧಿನಿಯಮ, 1963ರ ಪ್ರಕಾರ ತನಗಿದ್ದ ಅಗಾಧ ಅಧಿಕಾರವನ್ನು ಬಳಸಿಕೊಳ್ಳಲೇ ಇಲ್ಲ. ಮುಖ್ಯ ಕಾರ್ಯದರ್ಶಿಯವರು ಆಗಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಅರಣ್ಯ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬಾರದೆಂದು ಪತ್ರ ಬರೆದಿದ್ದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಭೂ ಸ್ವಾಧೀನ ಮಾಡಿಕೊಳ್ಳಲು ಮುಂದುವರಿದದ್ದೇ ಅಲ್ಲದೆ ಮುಂದುವರಿದು ಅರಣ್ಯ ಭೂಮಿಯಲ್ಲಿ ರಚಿಸಲಾದ ಲೇಔಟ್ "ಅಭಿವೃದ್ಧಿ"ಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 113.00 ಲಕ್ಷಗಳನ್ನು ಖರ್ಚು ಮಾಡಿದೆ! ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಅಂದಿನ ಶಾಸಕರು ಹಾಗೂ ಭೂ ನ್ಯಾಯ ಮಂಡಳಿಯ ಮುಖ್ಯಸ್ಥರು ಕರ್ತವ್ಯಲೋಪ ಮಾಡಿದ್ದಾರೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾನೂನುಬಾಹಿರ ಕ್ರಮಕೈಗೊಂಡು ಅಪರಾಧವೆಸಗಿದೆ. ಆದ್ದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾನೂನುಬಾಹಿರ ಲೇಔಟಿಗಾಗಿ ವೆಚ್ಚ ಮಾಡಿದ 113.00 ಲಕ್ಷ ರೂಪಾಯಿಗಳನ್ನು ಅದಕ್ಕೆ ಹೊಣೆಗಾರರಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳಿಂದಲೇ, ಎಂದರೆ ಹಿಂದಿನ ಆಯುಕ್ತರಾಗಿದ್ದ ಶ್ರೀ ಜೈಕರ್ ಜೆರೋಮೆ, ಆಗಿನ ಉಪ ಆಯುಕ್ತರಾಗಿದ್ದ ಶ್ರೀ ಚನ್ನಗಂಗಪ್ಪ ಮತ್ತು ಆಗಿನ ಕಾನೂನು ಅಧಿಕಾರಿಯಾಗಿದ್ದ ಶ್ರೀ ದ್ವಾರಕನಾಥ್ ಇವರಿಂದ ಸಮ ಪಾಲುಗಳಲ್ಲಿ ವಸೂಲು ಮಾಡಬೇಕು.

## (8) ಅರಣ್ಯ ಭೂಮಿ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಭೂಮಿಯ ಒತ್ತುವರಿ:

ಬೆಂಗಳೂರು ನಗರ ಜಿಲ್ಲಾ ಅರಣ್ಯ ವಿಭಾಗದಲ್ಲಿ 312 ಜನರು 1099 ಎಕರೆಗಳಷ್ಟು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಅಷ್ಟೇ ಅಲ್ಲದೆ 553 ಜನರು 313 ಎಕರೆಗಳಷ್ಟು ಕೆರೆಯಂಗಳ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. 7374 ಎಕರೆಗಳಷ್ಟಿರುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಪ್ರದೇಶದಲ್ಲಿ 813 ಜನರು 313 ಎಕರೆಗಳಷ್ಟು ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಈ ಒತ್ತುವರಿ ಮಾಡಿಕೊಂಡವರಲ್ಲಿ ಕೈಗಾರಿಕೋದ್ಯಮಿಗಳು, ಜಿಲ್ಲಾ ಪಂಚಾಯಿತಿ ಸದಸ್ಯರು, ಸಾ ಮಿಲ್ ಮತ್ತು ಟಿಂಬರ್ ಮಿಲ್ ಮಾಲೀಕರು, ಅಪಾರ್ಟ್‌ಮೆಂಟ್ ಬಿಲ್ಡರ್‌ಗಳು, ಕಂಪನಿಗಳ ಮಾಲೀಕರು, ರೆಸಾರ್ಟ್‌ಗಳ ಮಾಲೀಕರುಗಳು ಮುಂತಾದ ಶ್ರೀಮಂತ ಮತ್ತು ಪ್ರಭಾವಶಾಲಿ ಜನರು ಸೇರಿದ್ದಾರೆ. ಅರಣ್ಯ ಭೂಮಿಯನ್ನು ಇನ್ನಾವುದೇ ಉದ್ದೇಶಕ್ಕೆ ಬಳಸಿಕೊಳ್ಳಬಾರದು ಎಂದು 1996ರಲ್ಲಿಯೇ ಸರ್ವೋಚ್ಚ ನ್ಯಾಯಾಲಯವು ತೀರ್ಪನ್ನು ನೀಡಿದ್ದರೂ ಮತ್ತು ಅರಣ್ಯ ಭೂಮಿಗಳಲ್ಲಿ ಒತ್ತುವರಿ ಮಾಡಿದವರನ್ನು ಖಾಲಿ ಮಾಡಿಸುವಂತೆ ಎಲ್ಲಾ ರಾಜ್ಯಗಳ ಅರಣ್ಯ ಇಲಾಖೆಗಳಿಗೆ ಭಾರತ ಸರ್ಕಾರವು 2002ರಲ್ಲಿಯೇ ನಿರ್ದೇಶನ ನೀಡಿದ್ದರೂ ಕರ್ನಾಟಕ ಅರಣ್ಯ ಇಲಾಖೆಯು, ಈ ಒತ್ತುವರಿಗಳನ್ನು ಖಾಲಿ ಮಾಡಿಸದಂತೆ ಒತ್ತುವರಿದಾರರು ನ್ಯಾಯಾಲಯಗಳ ಮೊರೆ ಹೋಗಿ ತಡೆಯಾಜ್ಞೆಗಳನ್ನು ಪಡೆದುಕೊಳ್ಳಲು ಅನುಕೂಲ ಮಾಡಿಕೊಡಲೆಂದೇ ನೋಟೀಸುಗಳನ್ನು ನೀಡುವುದನ್ನು ಬಿಟ್ಟರೆ ಬೇರೆ ಯಾವ ಗಂಭೀರ ಕ್ರಮವನ್ನು ತೆಗೆದುಕೊಂಡಿಲ್ಲ. ಅರಣ್ಯ ಇಲಾಖೆಯ ಅಧಿಕಾರಿಗಳು ಗೋಧಾವರ್ಮನ್ ಪ್ರಕರಣದ ತೀರ್ಪನ್ನೇ ಜಪಿಸುತ್ತಾ ಮತ್ತು ಭಜನೆ ಮಾಡುತ್ತ ಕುಳಿತಿದ್ದರೆ, ಅರಣ್ಯ ಭೂಮಿ ಮತ್ತು ಕೆರೆಯಂಗಳ ಭೂಮಿಗಳ ಒತ್ತುವರಿದಾರರನ್ನು ಹೊರಹಾಕಿ ಅವುಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂಬುದನ್ನು ಮನಗಾಣಬೇಕು. ಕರ್ನಾಟಕ ಅರಣ್ಯ ಅಧಿನಿಯಮದ ಅಡಿಯಲ್ಲಿ ಅಗಾಧ ಅಧಿಕಾರ ತಮಗಿದ್ದರೂ ಅದನ್ನು ಬಳಸಿಕೊಳ್ಳದೇ ಇರುವುದನ್ನು ಗಮನಿಸಿದರೆ ಅವರು ಒತ್ತುವರಿದಾರರೊಡನೆ ಶಾಮೀಲಾಗಿ ಅವರ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬ ತೀರ್ಮಾನಕ್ಕೆ ನಾವು ಬರಲೇ ಬೇಕಾಗುತ್ತದೆ.

## (9) ಗೃಹ ನಿರ್ಮಾಣ ಸಹಕಾರ ಸಂಘಗಳು ಸ್ವಾಧೀನ ಪಡಿಸಿಕೊಂಡ ಭೂಮಿಯ ಕಾನೂನು ಬಾಹಿರ ಬಳಕೆ:

ಬೆಂಗಳೂರು ನಗರ ಜಿಲ್ಲೆಯಲ್ಲಿ 305 ಗೃಹ ನಿರ್ಮಾಣ ಸಹಕಾರ ಸಂಘಗಳಿದ್ದು ಅವುಗಳ ಪೈಕಿ 72 ಸಂಘಗಳು ಕಾರ್ಯ ನಿರ್ವಹಿಸುತ್ತಿಲ್ಲ. ಉಳಿದ ಸಂಘಗಳಲ್ಲಿ 137ಸಂಘಗಳು ಲೇಔಟ್‌ಗಳನ್ನು ನಿರ್ಮಿಸಿ ನಿವೇಶನಗಳನ್ನು ಹಂಚಿಕೆ ಮಾಡಿವೆ. ಅನೇಕ ಗೃಹ ನಿರ್ಮಾಣ ಸಹಕಾರ ಸಂಘಗಳು ಬಹಳಷ್ಟು ಅವ್ಯವಹಾರಗಳನ್ನು ಅಕ್ರಮಗಳನ್ನು ಎಸಗಿವೆ ಎಂದರೆ, **"ಜಂಟಿ ಅಭಿವೃದ್ಧಿ"** ಎಂಬ ಹೆಸರಿನಲ್ಲಿ ಬಿಲ್ಡರ್‌ಗಳ ಜೊತೆ ಷಾಮೀಲಾಗಿ ಸರ್ಕಾರದ ಮೂಲಕ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಅವರಿಗೆ ಒದಗಿಸಿಕೊಡುವುದು, ನಕಲಿ ಮತ್ತು ಬೇನಾಮಿ ಸದಸ್ಯರನ್ನು ಸೃಷ್ಟಿಸುವುದು, ನಾಗರಿಕ ಸೌಲಭ್ಯಗಳು, ಉದ್ಯಾನಗಳು, ರಸ್ತೆಗಳು ಮುಂತಾದುವುಗಳಿಗಾಗಿ ಅಗತ್ಯ ಪಡಿಸಲಾದಷ್ಟು ಸಂಖ್ಯೆಯಲ್ಲಿ ಶೇಕಡ 50ರಷ್ಟು ಭೂಮಿಯನ್ನು ಒದಗಿಸದೇ ಇರುವುದು, ಸಾರ್ವಜನಿಕ ಉದ್ದೇಶಕ್ಕಾಗಿ ಮತ್ತು ಸೌಲಭ್ಯಗಳಿಗಾಗಿ ಮೀಸಲಿಟ್ಟ ನಿವೇಶನಗಳನ್ನು ಹಂಚಿಕೆ ಮಾಡಿರುವುದು, ವಿಶ್ವಭಾರತಿ ಗೃಹ ನಿರ್ಮಾಣ ಸಂಘ ನಿ.,ದ ಅಧ್ಯಕ್ಷರು ದಿನಾಂಕ

07.10.2006ರ ಟೈಮ್ಸ್ ಆಫ್ ಇಂಡಿಯಾ ಆಂಗ್ಲ ಪತ್ರಿಕೆಯಲ್ಲಿ ತಮ್ಮ ಕಾನೂನುಬಾಹಿರ ಕಾರ್ಯಗಳನ್ನು ಸಕ್ರಮಗೊಳಿಸುವುದಕ್ಕಾಗಿ ಲಂಚವನ್ನು ನೀಡಿರುವುದಾಗಿ ಹೇಳಿಕೆ ನೀಡಿರುವ ಮತ್ತು ಇಂತಹ ಹಲವು ಕಳಂಕಿತ ಗೃಹ ನಿರ್ಮಾಣ ಸಹಕಾರ ಸಂಘಗಳ ದೊಡ್ಡ ಪಟ್ಟಿಯೇ ಇದ್ದು, ಅವುಗಳ ಪೈಕಿ ಅತ್ಯಂತ ಕುಖ್ಯಾತವಾದ ಸಂಘವೆಂದರೆ ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ. ಇತರ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಮಾದರಿಯಾಗುವ ಬದಲು, ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಲಂಗುಲಗಾಮಿಲ್ಲದ ಹಗರಣಗಳ ಸುನಾಮಿಯನ್ನೇ ಎಸಗಿ **"ಅವ್ಯವಹಾರಗಳ ತವರು"** ಎಂಬ ಅಖಿಲ ಭಾರತ ದಾಖಲೆ ಸ್ಥಾಪಿಸಿದೆ. ಮಾನ್ಯ ಉಚ್ಚ ನ್ಯಾಯಾಲಯವೇ ನೀಡಿದ ತೀರ್ಪಿನ ಪ್ರಕಾರ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಾಗಲು ಮತ್ತು ನಿವೇಶನಗಳನ್ನು ಪಡೆದುಕೊಳ್ಳುವುದು ಸಾಧ್ಯವೇ ಇಲ್ಲ.

ನ್ಯಾಯಾಂಗ ಇಲಾಖೆಯ ನೌಕರರೇ ಆಗಿರದ ಪೋಲೀಸ್ ಅಧಿಕಾರಿಗಳು ಮತ್ತು ಪಿಡಬ್ಲ್ಯೂಡಿ ಕಂಟ್ರಾಕ್ಟರ್‌ಗಳಿಗೆ ಸೈಟುಗಳನ್ನು ನೀಡಲಾಗಿದೆ. ಈ ಗೃಹ ನಿರ್ಮಾಣ ಸಹಕಾರ ಸಂಘವು ಭೂ ಸುಧಾರಣಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ಅದರ ಕಾರ್ಯದರ್ಶಿ ಹಾಗೂ ಮೆನೇಜರ್ ಆಗಿರುವಂಥಹ ವ್ಯಕ್ತಿಯು ಅನೇಕ ನಿವೇಶನಗಳನ್ನು ತನ್ನ ಹತ್ತಿರದ ಸಂಬಂಧಿಗಳಿಗೆ ಅಕ್ರಮವಾಗಿ ಹಂಚಿದ್ದಾರೆ. ಇದರ ಬಡಾವಣೆಯನ್ನು ಕಾನೂನಿನಲ್ಲಿ ಅಗತ್ಯಪಡಿಸಿರುವಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಮೋದಿಸಿರುವುದಿಲ್ಲ. ನಿಯಮಗಳಲ್ಲಿ ಅಗತ್ಯಪಡಿಸಿರುವಂತೆ, ಬಡಾವಣೆಯ ಶೇಕಡ 50 ರಷ್ಟು ಭಾಗವನ್ನು ನಾಗರೀಕ ಸೌಲಭ್ಯಗಳು, ಉದ್ಯಾನವನಗಳು ಮತ್ತು ರಸ್ತೆಗಳಿಗೆ ಬಿಟ್ಟಿರುವುದಿಲ್ಲ. ಹೀಗೆ ಇತರ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಮಾದರಿ ಸ್ಥಾನದಲ್ಲಿರಬೇಕಾದ ಈ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಭ್ರಷ್ಟಚಾರ ಮತ್ತು ಕಾನೂನು ಉಲ್ಲಂಘನೆಯ ಕೂಪವಾಗಿದೆ.

## (10) ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ:

ಬೆಂಗಳೂರಿನಲ್ಲಿ ಭೂಮಿ ಬಳಕೆಯು ಸಂಪೂರ್ಣವಾಗಿ ಹದಗೆಡುವಂತೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವುದನ್ನು ತಪ್ಪಿಸಲು ಅಧಿಕಾರಿಗಳು ಮತ್ತಿತ್ತರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ದುರಾಸೆಯ ಅಧಿಕಾರಿಗಳ ವಿರುದ್ಧ ಕೇವಲ ಶಿಸ್ತು ಕ್ರಮ ತೆಗೆದುಕೊಂಡರೆ ಏನೇನೂ ಸಾಲದು. ತಪ್ಪಿತಸ್ಥರ ವಿರುದ್ಧ ಭಾರತ ದಂಡ ಸಂಹಿತೆಯ ಈಗಿರುವ ಉಪಬಂಧಗಳ ಅಡಿಯಲ್ಲಿ, ಭೂ ಸುಧಾರಣ ಕಾಯಿದೆಗೆ ತಂದಿರುವ ಹೊಸ ತಿದ್ದುಪಡಿಯ ಅಡಿಯಲ್ಲಿ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿದಾಗ ಮತ್ತು ಗೂಂಡಾ ಅಧಿನಿಯಮದ ಅಡಿಯಲ್ಲಿ ಅವರನ್ನು ಬಂಧನದಲ್ಲಿ ಇಟ್ಟಾಗ ಮಾತ್ರ ಈ ದಿಕ್ಕೆಟ್ಟ ಪರಿಸ್ಥಿತಿಯಲ್ಲಿ ಒಂದಿಷ್ಟು ಶಿಸ್ತು ಬರುವುದು ಸಾಧ್ಯ. ಕರ್ನಾಟಕ ವಿಧಾನ ಮಂಡಲವು ಈಗಾಗಲೇ ಭೂ ಕಬಳಿಕೆ (ನಿಷೇಧ) ಅಧಿನಿಯಮವನ್ನು ಅನುಮೋದಿಸಿದ್ದು, ಅದರಡಿಯಲ್ಲಿ ಭೂ ಕಬಳಿಕೆದಾರರನ್ನು ಮತ್ತು ಅದಕ್ಕೆ ದುಷ್ಪ್ರೇರಿಸುವವರನ್ನು ವಿಚಾರಣೆ ನಡೆಸಿ, ಶಿಕ್ಷೆ ನೀಡಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲಾಗುವುದು.

ಈ ಅಧಿನಿಯಮವನ್ನು ರಾಷ್ಟ್ರಪತಿಗಳ ಒಪ್ಪಿಗೆಗಾಗಿ ಕಳುಹಿಸಿಕೊಡಲಾಗಿದೆ. ಇದು ಕಾನೂನಾಗಿ ಜಾರಿಯಾದ ಮೇಲೆ ಈ ಭೂ ಕಬಳಿಕೆಯನ್ನು ನಿಷೇಧಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗುವಂತೆ ಅತಿ ಶೀಘ್ರದಲ್ಲಿ ವಿಶೇಷ ನ್ಯಾಯಾಲಯವನ್ನು ಮತ್ತು ಅದರ ಆಡಳಿತ ವಿಭಾಗವನ್ನು ಸ್ಥಾಪಿಸಬೇಕಾಗಿರುತ್ತದೆ.

## (11) ಆಸ್ತಿ ಹಕ್ಕು ಸ್ವಾಮ್ಯದ ಬಗ್ಗೆ ಒಂದು ವಿಶ್ವಾಸಾರ್ಹ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು:

ಅನಾದಿಕಾಲದಿಂದಲೂ ನಡೆದುಕೊಂಡು ಬಂದಿರುವ ಭೂ ದಾಖಲೆ ಪದ್ಧತಿ ಮತ್ತು ಕ್ರಯಪತ್ರಗಳ ನೊಂದಣಿ ವ್ಯವಸ್ಥೆಗೆ ಈಗ ಯಾವ ಪಾವಿತ್ರ್ಯವೂ ಉಳಿದಿಲ್ಲ. ಯಾರ ಭಯವೂ ಇಲ್ಲದೆ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗುತ್ತಿದೆ ಮತ್ತು ಖಾತೆ ನೊಂದಣಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಆಡದೇ ಇರುವಂಥ ಆಟವೇ ಇಲ್ಲ. ಈ ಸಮಿತಿಯ ಮುಂದೆ ಬಂದಂಥ ಸರ್ಕಾರದ ಮತ್ತು ಶಾಸನಬದ್ಧ ಸಂಸ್ಥೆಗಳ ಹಿರಿಯ ಅಧಿಕಾರಿಗಳು ನಿವೇದಿಸಿಕೊಂಡಿರುವುದು ಏನೆಂದರೆ, ಆಸ್ತಿಗಳ ಹಕ್ಕು ಸ್ವಾಮ್ಯದ ಬಗ್ಗೆ ಒಂದು ವಿಶ್ವಾಸಾರ್ಹ ಪದ್ಧತಿಯನ್ನು ಅಭಿವೃದ್ಧಿಪಡಿಸದೆ ಹೋದರೆ ಆಸ್ತಿಗಳ ಹಕ್ಕು ಸ್ವಾಮ್ಯದ ಬಗ್ಗೆ ಕೆಳ ಅಧಿಕಾರಿಗಳು ತಮ್ಮ ವಿವೇಚನಾಧಿಕಾರಗಳನ್ನು ತಪ್ಪಾಗಿ ಬಳಸಿಕೊಳ್ಳುವುದು ಮುಂದುವರಿಯುತ್ತಲೇ ಹೋಗುತ್ತದೆ. ಇಂತಹ ಒಂದು ಹೆಚ್ಚು ವಿಶ್ವಾಸಾರ್ಹವಾದಂಥಹ ವ್ಯವಸ್ಥೆಯನ್ನು ಸೃಷ್ಟಿಸುವುದು ಸಾಧ್ಯವಿದೆ. ಟೋಟಲ್ ಸ್ಟೇಷನ್‌ನಂತಹ ಲಭ್ಯ ನವೀನ ತಂತ್ರಜ್ಞಾನವನ್ನು ಬಳಸಿಕೊಂಡು ಒಂದು ವರ್ಷದೊಳಗೆ ಭೂ–ಆಸ್ತಿಪಾಸ್ತಿಗಳನ್ನು ಬೇಗನೆ ಮತ್ತು ಕರಾರುವಕ್ಕಾಗಿ ಸಮೀಕ್ಷೆ ಮಾಡುವುದು ಸಾಧ್ಯವಿದೆ. ಇದರ ಜೊತೆ ಜೊತೆಯಲ್ಲೇ ಕರ್ನಾಟಕ ಭೂ ಕಂದಾಯ ಅಧಿನಿಯಮದ 12ನೇ ಅಧ್ಯಾಯದ ಅಡಿಯಲ್ಲಿ ಉಪಬಂಧಿಸಿರುವಂತೆ ಸರ್ವೆ ಇಲಾಖೆಯವರು ಹಕ್ಕುಸ್ವಾಮ್ಯದ ಬಗ್ಗೆ ವಿಚಾರಿಸುವ ಕಾರ್ಯವನ್ನು ಮಾಡಬೇಕು. ಇತರ ಅನೇಕ ರಾಷ್ಟ್ರಗಳಲ್ಲಿ ಇರುವ ಹಕ್ಕು ಸ್ವಾಮ್ಯದ ನೊಂದಣಿಯ ಟಾರೆನ್ಸ್ ಪದ್ಧತಿಯ ಮಾದರಿಯಲ್ಲಿ ಇದನ್ನು ಮಾಡಲಾಗುವುದು. ಟಾರೆನ್ಸ್ ಪದ್ಧತಿಯಲ್ಲಿ ಹಕ್ಕುಸ್ವಾಮ್ಯವನ್ನು ನೊಂದಾಯಿಸುತ್ತಾರೆ ಆದರೆ, ಭಾರತದ ಪ್ರಸ್ತುತ ಪದ್ಧತಿಯಲ್ಲಿ, ಕ್ರಯಪತ್ರಗಳನ್ನು ನೊಂದಾಯಿಸಲಾಗುತ್ತಿದೆ. ಹಕ್ಕುಸ್ವಾಮ್ಯದ ಮಾಲೀಕತ್ವವನ್ನು ನೊಂದಾಯಿಸುವಂತಹ ವಿಶ್ವಾಸಾರ್ಹ ಪದ್ಧತಿಯನ್ನು ಸ್ವಲ್ಪ ಮಟ್ಟಿಗೆ ಬೆಳಗಾಂ ನಗರದಲ್ಲಿ ಜಾರಿಗೆ ತರಲಾಗಿದೆ. ಬೆಂಗಳೂರು ಜಿಲ್ಲೆಯ ಮಹಾನಗರ ಪ್ರದೇಶಗಳಲ್ಲಿ ಉತ್ತಮ ಸಮನ್ವಯ ಮತ್ತು ಹಣಕಾಸಿನೊಂದಿಗೆ ಭೂ ಸಮೀಕ್ಷೆ ಮತ್ತು ಹಕ್ಕು ಸ್ವಾಮ್ಯದ ವಿಚಾರಣೆಯನ್ನು ನಡೆಸಬೇಕು. ಇದಕ್ಕೆ ತಗಲುವ ವೆಚ್ಚ 60.00 ಕೋಟಿ ರೂಪಾಯಿಗಿಂತಲೂ ಕಡಿಮೆ. ಇದು ಹಕ್ಕು ಪತ್ರದ ದಾಖಲೆಗಳಿಗೆ ಒಂದು ಆಧಾರವನ್ನು ಉಂಟು ಮಾಡುವ ಮಹಾನ್ ಪ್ರಯೋಜನವನ್ನು ನೀಡುತ್ತದೆ ಮತ್ತು ಈ ದಾಖಲೆಗಳನ್ನು ಎಲ್ಲಾ ಸರ್ಕಾರಿ ಇಲಾಖೆಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಗ್ರಾಮ ಪಂಚಾಯತ್‌ಗಳು, ಪುರಸಭೆಗಳು ಮತ್ತು ನಾಗರಿಕರು ವಿಶ್ವಾಸದಿಂದ ಬಳಸಿಕೊಳ್ಳಬಹುದು. ಇಷ್ಟೊಂದು ಅಮೂಲ್ಯ ಹಕ್ಕುಸ್ವಾಮ್ಯವನ್ನು ದಾಖಲಿಸುವ ಕಾರಣ, ಈ ಸಮೀಕ್ಷಾ ಕಾರ್ಯಕ್ಕೆ ಶುಲ್ಕ ವಿಧಿಸಿದರೆ ಬಳಕೆದಾರರು ಮನಪೂರ್ವಕವಾಗಿ ಹಣ ನೀಡುತ್ತಾರೆ, ಹೀಗಾಗಿ ಖರ್ಚು ಸಹ ಸುಲಭವಾಗಿ ವಸೂಲಾಗುತ್ತದೆ.

## (12) ನ್ಯಾಯಾಲಯಗಳಲ್ಲಿ ಸರ್ಕಾರಿ ಪ್ರಕರಣಗಳನ್ನು ಯಶಸ್ವಿಯಾಗಿ ಪ್ರತಿವಾದಿಸುವುದು

ಸರ್ಕಾರಕ್ಕೆ ಸಂಬಂಧಪಟ್ಟ ವ್ಯಾಜ್ಯಗಳನ್ನು ಪರಿಣಾಮಕಾರಿಯಾಗಿ ವಾದಿಸಲು ವಿವಿಧ ಇಲಾಖೆಗಳಲ್ಲಿ ಸರ್ಕಾರವು ಹದಿನೇಳು ಕಾನೂನು ಕೋಶಗಳನ್ನು ರಚಿಸಿದೆ. ಕಾನೂನು ಕಾರ್ಯದರ್ಶಿಗಳು ಕಾನೂನು ಕೋಶಗಳ ಕಾರ್ಯವನ್ನು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಿ, ಒಂದು ವರದಿಯನ್ನು ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಬೇಕು. ಆದರೆ ಈ ಕೆಲಸ ವಾಸ್ತವವಾಗಿ ನಡೆಯುತ್ತಲೇ ಇಲ್ಲ. ಈಗ ಪರಿಸ್ಥಿತಿ ಹೇಗಿದೆಯೆಂದರೆ, ನ್ಯಾಯಾಲಯಗಳು ಬಂದು ಮುಖ್ಯ ಕಾರ್ಯದರ್ಶಿಗಳ ಕುರ್ಚಿ ಮತ್ತು ಪೀಠೋಪಕರಣಗಳನ್ನು ಜಪ್ತಿಮಾಡಿಕೊಂಡಾಗ ಮಾತ್ರ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆ. ಇಂಥ ಒಂದು ಪರಿಸ್ಥಿತಿ ಬದಲಾಗಬೇಕು.

### ಸರ್ಕಾರಿ ವಕೀಲರ ಆಯ್ಕೆ

ಸರ್ಕಾರಿ ವಕೀಲರ ಆಯ್ಕೆ ಪ್ರಕ್ರಿಯೆಯಲ್ಲಿ ಒಂದು ಉನ್ನತ ಮಟ್ಟದ ಆಯ್ಕೆ ಸಮಿತಿಯನ್ನು ರಚಿಸುವುದು ಅಗತ್ಯವೆಂದು ಸಮಿತಿಯು ಭಾವಿಸುತ್ತದೆ. ಈ ಉನ್ನತ ಮಟ್ಟದ ಸಮಿತಿಯಲ್ಲಿ ಅಡ್ವೋಕೇಟ್ ಜನರಲ್‌ರವರು ಅಧ್ಯಕ್ಷರಾಗಿರಬೇಕು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ನಾಮನಿರ್ದೇಶನ ಮಾಡಿದ ಜಿಲ್ಲಾ ನ್ಯಾಯಾಧೀಶರು ಸದಸ್ಯರಾಗಿದ್ದು ಮತ್ತು ಕಾನೂನು ಕಾರ್ಯದರ್ಶಿಗಳು ಸದಸ್ಯ ಕಾರ್ಯದರ್ಶಿಗಳಾಗಿರಬೇಕು. ಈ ಸಮಿತಿಯು ಅರ್ಜಿಗಳನ್ನು ಆಹ್ವಾನಿಸಿ, ಅಪ್ಪಟ ಮೆರಿಟ್ ಆಧಾರದ ಮೇಲೆ ಸರ್ಕಾರಿ ವಕೀಲರುಗಳನ್ನು ಮತ್ತು ಸರ್ಕಾರಿ ಪ್ಲೀಡರ್‌ಗಳನ್ನು ಆಯ್ಕೆ ಮಾಡಬೇಕು. ಹಾಗೂ ಈ ಸಮಿತಿಯ ನಿರ್ಣಯವೇ ಅಂತಿಮವಾಗಿರಬೇಕು. ಇದೇ ಸಮಿತಿ ಈಗಿರುವ ಸರ್ಕಾರಿ ವಕೀಲರು ಮತ್ತು ಸರ್ಕಾರಿ ಪ್ಲೀಡರುಗಳ ಕಾರ್ಯ ಸಾಧನೆಯ ಮೌಲ್ಯಮಾಪನ ಮಾಡಿ, ಅವಶ್ಯವೆಂದು ಕಂಡುಬಂದ ಕಡೆ ಅವರ ಸೇವೆಗಳನ್ನು ಅಂತ್ಯಗೊಳಿಸಬೇಕು. ಈಗ ಕೊಡುತ್ತಿರುವ ಸಂಭಾವನೆ ಜೊತೆಯಲ್ಲಿ ಸರ್ಕಾರಿ ವಕೀಲರು ಕೇಸ್‌ಗಳನ್ನು ಗೆದ್ದಾಗ, ಹತ್ತು ಸಾವಿರ ರೂಪಾಯಿಗಳವರೆಗೆ ವಿಶೇಷ ಶುಲ್ಕವನ್ನು ಕೊಡಬೇಕು. ಹಿಂದೆ ಇದ್ದಂತೆ, ಅಡ್ವೋಕೇಟ್ ಜನರಲ್ ಅವರ ಕಛೇರಿಯಲ್ಲಿರುವ ಆಡಳಿತಾಧಿಕಾರಿಯ ಹುದ್ದೆಯನ್ನು ಸಿವಿಲ್ ನ್ಯಾಯಾಧೀಶರೊಬ್ಬರನ್ನು ನೇಮಕ ಮಾಡಿ ಭರ್ತಿ ಮಾಡತಕ್ಕದ್ದು.

ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಬರುವುದಕ್ಕಾಗಿ ಪ್ರತಿಯೊಂದು ಇಲಾಖೆಯು ವಾಣಿಜ್ಯ ತೆರಿಗೆ ಇಲಾಖೆಯ ರೀತಿಯಲ್ಲಿಯೇ ಒಂದು ಕೋಶವನ್ನು ರಚಿಸಿಕೊಳ್ಳಬೇಕು.

## (13) ಕಾನೂನು ಇಲಾಖೆಯ ಗಣಕೀಕರಣ:

ಕಾನೂನು ಇಲಾಖೆಯವರು ಉಚ್ಚ ನ್ಯಾಯಾಲಯದ ಮಾದರಿಯಲ್ಲಿ ತಮ್ಮ ದಾಖಲೆಗಳನ್ನು ಮತ್ತು ವ್ಯವಸ್ಥೆಗಳನ್ನು ಗಣಕೀಕರಣ ಮಾಡಬೇಕು.

## (14) ಕರ್ನಾಟಕ ಭೂ ಕಬಳಿಕೆ (ನಿಷೇಧ) ಅಧಿನಿಯಮದ ಅನುಷ್ಠಾನಕ್ಕಾಗಿ ಮತ್ತು ಭೂ ಒತ್ತುವರಿ ಬಗ್ಗೆ ಶಿಕ್ಷೆ ವಿಧಿಸಲು ಮತ್ತು ನಿಷೇಧವನ್ನು ಮಾಡಲು ಒಂದು ಶಾಶ್ವತ ಆಡಳಿತಾತ್ಮಕ ವ್ಯವಸ್ಥೆಯನ್ನು ಮಾಡುವುದು.

ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವಂಥಹ ಈ ಅಧಿನಿಯಮವನ್ನು ಕರ್ನಾಟಕ ವಿಧಾನ ಮಂಡಲವು ಅನುಮೋದಿಸಿ, ಅದನ್ನು ರಾಷ್ಟ್ರಪತಿಯವರ ಅನುಮತಿಗಾಗಿ ಮೇ 2007ರಲ್ಲಿ ಕಳುಹಿಸಿಕೊಟ್ಟಿದೆ. ತುರ್ತಾಗಿ ರಾಷ್ಟ್ರಪತಿಯವರ ಅನುಮತಿ ಪಡೆದುಕೊಳ್ಳಲು ಭಾರತ ಸರ್ಕಾರದ ಮಟ್ಟದಲ್ಲಿ ಪ್ರಯತ್ನಗಳನ್ನು ಮಾಡಬೇಕು ಮತ್ತು ಇದೇ ಸಮಯದಲ್ಲಿ ನಿಯಮಾವಳಿಗಳನ್ನು ರಚಿಸಬೇಕು. ಅಷ್ಟೇ ಅಲ್ಲದೆ, ಭೂ ಒತ್ತುವರಿಯನ್ನು ತನಿಖೆ ಮಾಡಲು ಹಾಗೂ ಒತ್ತುವರಿದಾರರು ಮತ್ತು ದುಷ್ಪ್ರೇರಕರನ್ನು ಹಿಡಿದು ಮೊಕದ್ದಮೆಗಳನ್ನು ಹೂಡಲು ಒಂದು ಪರಿಣಾಮಕಾರಿಯಾದಂಥ ಆಡಳಿತ ವಿಭಾಗವು ಇರಬೇಕು. ನಮ್ಮ ಗಮನಕ್ಕೆ ಬಂದಿರುವುದೇನೆಂದರೆ, ಅಧಿಕಾರಿಗಳು, ಒತ್ತುವರಿದಾರರು ಮತ್ತು ಜನತೆಯ ಬಲಾಢ್ಯ ವರ್ಗಗಳು ಒಬ್ಬರಿಗೊಬ್ಬರು ಶಾಮಿಲಾಗುತ್ತಿರುವುದು ಜಾಸ್ತಿಯಾಗಿದ್ದು, ಅನೇಕ ಪ್ರಕರಣಗಳಲ್ಲಿ ಒತ್ತುವರಿದಾರರು ಮತ್ತು ಅವರ ದುಷ್ಪ್ರೇರಕರು ಯಾವ ಶಿಕ್ಷೆಯೂ ಇಲ್ಲದೆ ಪಾರಾಗಿ ಹೋಗುತ್ತಿದ್ದಾರೆ. ಎಷ್ಟೋ ಪ್ರಕರಣಗಳಲ್ಲಿ ಅಧಿಕಾರಿಗಳು ದಾಖಲೆಗಳನ್ನು ನಾಶಪಡಿಸಿರುತ್ತಾರೆ. ಇನ್ನೂ ಕೆಲವು ಪ್ರಕರಣಗಳಲ್ಲಿ ಸಾರ್ವಜನಿಕ ಸ್ಥಳಗಳು, ಕೆರೆ ಅಂಗಳಗಳು ಮತ್ತು ಸಾರ್ವಜನಿಕ ರಸ್ತೆಗಳನ್ನು ಸಹ ಪೂರ್ಣವಾಗಿ ಒತ್ತುವರಿ ಮಾಡಿಕೊಂಡಿರುತ್ತಾರೆ. ಅಧಿನಿಯಮವು ವಿಧಿಸುವ ಅತ್ಯಂತ ಕಠಿಣ ಶಿಕ್ಷೆಯು, ಇಂಥಹ ಅಪರಾಧಿಗಳಿಗೆ ವಿಧಿಸುವಂತೆ ಮಾಡುವುದಕ್ಕಾಗಿ ಈ ವಿಶೇಷ ನ್ಯಾಯಾಲಯದಲ್ಲಿ ಆಡಳಿತಾಧಿಕಾರಿಯಾಗಿ ಅಪರ ಮುಖ್ಯ ಕಾರ್ಯದರ್ಶಿಗಳ ದರ್ಜೆಯ ಕರ್ತವ್ಯ ನಿರತ ಅಧಿಕಾರಿಗಳನ್ನು ನೇಮಿಸಬೇಕು. ಇವರ ಅಡಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂದಾಯ, ಪೊಲೀಸ್ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು, ವಿಶೇಷ ಅಭಿಯೋಜಕರು ಮತ್ತು ಕಾನೂನು ಸಹಾಯಕರು ಇರತಕ್ಕದ್ದು. ಈ ಆಡಳಿತಾಧಿಕಾರಿಗಳಿಗೆ ಸರ್ಕಾರಿ ಇಲಾಖೆಗಳ, ಶಾಸನಬದ್ಧ ಸಂಸ್ಥೆಗಳ ಆಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ತನ್ನ ಮುಂದೆ ಹಾಜರಾಗಿ ದಾಖಲೆಗಳನ್ನು ಒದಗಿಸಲು ಸಮನ್ ಮಾಡುವ ಕಾನೂನು ಅಧಿಕಾರವನ್ನು ಕೊಟ್ಟಿರತಕ್ಕದ್ದು. ವಿಶೇಷ ನ್ಯಾಯಾಲಯಕ್ಕೆ ಮತ್ತು ಆಡಳಿತಾಧಿಕಾರಿಗೆ ಇಂತಹ ಒಂದು ಅಧಿಕಾರವನ್ನು ನೀಡದೇ ಹೋದರೆ, ತನಿಖೆ ಮಾಡುವುದಕ್ಕಾಗಲೀ, ಮೊಕದ್ದಮೆ ಹೂಡಿ ನಡೆಸುವುದಕ್ಕಾಗಲೀ ಮತ್ತು ಶಿಕ್ಷೆ ನೀಡುವುದಕ್ಕಾಗಲೀ ಅವರಿಗೆ ಸಾಧ್ಯವಾಗಲಿಕ್ಕಿಲ್ಲ

## (15) ಒತ್ತುವರಿದಾರರಿಂದ ಹಿಂತೆಗೆದುಕೊಂಡಿರುವಂತಹ ಜಮೀನುಗಳ ಬಳಕೆಗೆ ಒಂದು ಮಾಸ್ಟರ್ ಪ್ಲಾನ್

ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ತಜ್ಞರಿರುವಂತಹ ಮತ್ತು ವಿವಿಧ ಇಲಾಖೆಗಳ ಪ್ರತಿನಿಧಿಗಳಿರುವಂತಹ ಒಂದು ಸಮಿತಿಯು ಪುನ: ಸ್ವಾಧೀನಕ್ಕೆ ತೆಗೆದುಕೊಂಡ ಒತ್ತುವರಿಯಾದ ಪ್ರದೇಶದ ಸಂಖ್ಯೆ ಮತ್ತು ವಿಸ್ತಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಭವಿಷ್ಯದಲ್ಲಿ ಈ ಭೂಮಿಗಳ ಬಳಕೆಯ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರಿಸಬೇಕು.

* * * * *

## ವಿವರವಾದ ವರದಿ

ವಿವಿಧ ಇಲಾಖೆಗಳು ಮತ್ತು ಶಾಸನಬದ್ಧ ಸಂಸ್ಥೆಗಳಿಂದ ಒತ್ತುವರಿಯ ವಿಸ್ತೀರ್ಣವನ್ನು ಖಚಿತಪಡಿಸಿಕೊಂಡು, ಆ ವಿಷಯಗಳನ್ನು ಸಮಿತಿಯ ಸಭೆಗಳಲ್ಲಿ ಚರ್ಚಿಸಿ, ಈ ಕೆಳಕಂಡ ವಿವರಗಳನ್ನು ಮತ್ತು ಪ್ರಸ್ತಾವನೆಗಳನ್ನು ಜರೂರು ಕ್ರಮಕ್ಕಾಗಿ ವರದಿಯಲ್ಲಿ ಸೇರಿಸಲಾಗಿದೆ.

### 1. ಜಮೀನುಗಳ ಒತ್ತುವರಿಯ ಅಪೂರ್ಣ ಮಾಹಿತಿ ಒದಗಿಸಿರುವ ಬಗ್ಗೆ:

ಅನೇಕ ಪ್ರಕರಣಗಳಲ್ಲಿ ಇಲಾಖೆಯವರು ಒತ್ತುವರಿ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿಲ್ಲವೆಂಬುದು ಸಮಿತಿಯ ಗಮನಕ್ಕೆ ಬಂದಿದೆ. 2006ರ ಜೂನ್‌ನಲ್ಲಿ ಈ ಸಮಿತಿಯು ರಚನೆಯಾದ ಮೇಲೆ ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಮತ್ತು ಶಾಸನಬದ್ಧ ಸಂಸ್ಥೆಗಳಿಗೆ ತಮ್ಮ ಸ್ವಾಧೀನದಲ್ಲಿರುವಂತಹ ಭೂಮಿಗಳ ಒತ್ತುವರಿಯ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕೆಂದು ಹಲವಾರು ಬಾರಿ ಸೂಚಿಸಲಾಗಿದೆ. ಹೀಗಿದ್ದರೂ ವಿಷಾದದ ಸಂಗತಿಯೆಂದರೆ, ಯಾವ ಇಲಾಖೆಯವರು ಸರಿಯಾಗಿ ಒತ್ತುವರಿ ವಿವರಗಳನ್ನು ಒದಗಿಸಿರುವುದಿಲ್ಲ. ಅದಕ್ಕೆ ಕಾರಣವೇನೆಂದರೆ, ಯಾವ ಇಲಾಖೆಗಳು ಸಹ ಆಯಾಯ ಇಲಾಖೆಗಳ ಆಸ್ತಿವಹಿಯನ್ನೇ ಸರಿಯಾಗಿ ಇಟ್ಟುಕೊಂಡಿರುವುದಿಲ್ಲ. ಇಲಾಖೆಗಳಲ್ಲಿ ಸರಿಯಾದ ಆಸ್ತಿ ವಹಿಯ ವಿವರಗಳು ಮತ್ತು ಮಾಹಿತಿಗಳು ಇಲ್ಲದೆ ಇದ್ದುದರಿಂದ, ಎಷ್ಟು ಒತ್ತುವರಿಯಾಗಿದೆ ಎಂಬುದನ್ನು ಸಮೀಕ್ಷೆ ಮಾಡಿ ಖಚಿತವಾಗಿ ತಿಳಿಸಲು ಸಾಧ್ಯವಾಗಿರುವುದಿಲ್ಲ. ವಿವಿಧ ಇಲಾಖೆಗಳವರು ಹಲವಾರು ಸಂದರ್ಭಗಳಲ್ಲಿ, ಒತ್ತುವರಿಯಾಗಿರುವ ಸ್ಥಳಗಳ ಮತ್ತು ವಿಸ್ತೀರ್ಣದ ಮಾಹಿತಿಗಳನ್ನೇ ಒದಗಿಸಿರುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಕೆರೆಗಳ ಒತ್ತುವರಿ ಮಾಹಿತಿಯು ತುಂಬಾ ಅಪೂರ್ಣವಾಗಿರುತ್ತದೆ. ಹೀಗಾಗಿ ಕೆರೆಗಳ ಒತ್ತುವರಿಗೆ ಸಂಬಂಧಪಟ್ಟಂತೆ ಕೊಟ್ಟಿರುವ ಮಾಹಿತಿಯು ಆಯ್ದುಕೊಟ್ಟಿರುವುದೇ ಹೊರತು ಪರಿಪೂರ್ಣವಾದುದಲ್ಲವೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

* * * * *

## 2. ಭೂ ಕಬಳಿಕೆದಾರರ ಮತ್ತು ಭೂಕಬಳಿಕೆಗೆ ದುಷ್ಪ್ರೇರಣೆ ಮಾಡುವವರ ವಿರುದ್ಧ ಕ್ರಿಮಿನಲ್ ಪ್ರಾಸಿಕ್ಯೂಷನ್ ಹೂಡಬೇಕಾದ ಅಗತ್ಯ:

ಮೇಲ್ಕಂಡ ಪ್ರಸಂಗಗಳು ಸಮಿತಿಯ ಗಮನಕ್ಕೆ ಬಂದ ಅನೇಕಾನೇಕ ಭೂಕಬಳಿಕೆ ಪ್ರಕರಣಗಳ ಕೆಲವೇ ಕೆಲವು ಉದಾಹರಣೆಗಳು ಮಾತ್ರ. ಈ ಎಲ್ಲ ಪ್ರಸಂಗಗಳಲ್ಲೂ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಇತರರ ಸಕ್ರಿಯ ಸಹಕಾರ, ಉತ್ತೇಜನ ಮತ್ತು ದುಷ್ಪ್ರೇರಣೆ ಇಲ್ಲದೆ ಇಂಥಹ ಭೂಕಬಳಿಕೆ ಸಾಧ್ಯವಾಗುತ್ತಲೇ ಇರಲಿಲ್ಲ ಎಂಬುದು ಸ್ಪಷ್ಟವಾಗಿದೆ. ಬೆಂಗ್ಳೂರಿನಲ್ಲಿ ಭೂಮಿ ಬೆಲೆ ಮಹಾನಗರ ಪಾಲಿಕೆ ಪ್ರದೇಶದಿಂದ ಹೊರಗೂ ಎಕರೆಗೆ ಒಂದು ಕೋಟಿಗಿಂತ ಕಡಿಮೆ ಇಲ್ಲ. ಪಾಲಿಕೆ ಪ್ರದೇಶದ ಒಳಗಂತೂ ಭೂಮಿಯ ಬೆಲೆ ಚಿನ್ನದ ಬೆಲೆಯಾಗಿದೆ. ಆದ್ದರಿಂದ ಭೂಮಿಯ ದುರುಪಯೋಗ ಮತ್ತು ಒತ್ತುವರಿಯನ್ನು ತಡೆಗಟ್ಟಲು ಉತ್ತಮ ಆಳ್ವಿಕೆ ಪದ್ಧತಿಗಳು ಇರಬೇಕು.

ಈ ಸಮಿತಿಯು ಇಡೀ ಆಡಳಿತ ವ್ಯವಸ್ಥೆಯನ್ನೇ ಸುಧಾರಣೆ ಮಾಡುವ ಬಗ್ಗೆ ಹೇಳಲು ಉದ್ದೇಶಿಸುವುದಿಲ್ಲವಾದರೂ, ಭೂ ಕಬಳಿಕೆ ತಪ್ಪಿಸಲು ನಿಷೇಧಾತ್ಮಕ ಮತ್ತು ದಂಡನಾತ್ಮಕ ಕ್ರಮವನ್ನು ಖಂಡಿತಾ ಹೇಳಲು ಇಚ್ಛಿಸುತ್ತದೆ. **"ಬೇಲಿಯ ಕೆಲಸ ಬೆಳೆದ ಪೈರನ್ನು ರಕ್ಷಿಸುವುದು"**, ಪಾಲಕನಂತೆ, ಧರ್ಮದರ್ಶಿಯಂತೆ, ಕಾವಲುಗಾರನಂತೆ ಕಾಪಾಡುವುದು ಅದರ ಕರ್ತವ್ಯ. ಬೇಲಿಯೇ ಎದ್ದು ಹೊಲ ಮೇಯ್ದರೆ, ಪಾಲಕನೇ ತನ್ನ ರಕ್ಷಿತಳನ್ನು ಅತ್ಯಾಚಾರ ಮಾಡಿದರೆ, ಧರ್ಮದರ್ಶಿಯೇ ಫಲಾನುಭವಿಯ ಹಣ ಕದ್ದರೆ, ಕಾವಲುಗಾರನೇ ತನ್ನ ಒಡೆಯನನ್ನೇ ಲೂಟಿ ಮಾಡಿದರೆ ಗತಿ ಇನ್ನೇನು? ಈ ಕಾನೂನು ಬಾಹಿರ, ನೀತಿಗೆಟ್ಟ, ಅಧರ್ಮದ ಕಾರ್ಯಗಳನ್ನು ಶಿಕ್ಷಿಸದೇ ಬಿಟ್ಟರೆ, ಪ್ರಾಮಾಣಿಕ ಜನರಿಗೆ ಸರ್ಕಾರದಲ್ಲಿ ನಂಬಿಕೆ ಹೋಗುತ್ತದೆ. ಯಾವ ಒಂದು ಸಾಮಾಜಿಕ ಕರಾರಿನ ನೆಲೆಗಟ್ಟಿನ ಮೇಲೆ ಈ ರಾಜ್ಯವನ್ನು ಕಟ್ಟಲಾಗಿದೆಯೋ ಅದು ಮರಳಿನ ಅಡಿಪಾಯದ ಮೇಲೆ ಕಟ್ಟಿದ ಕೋಟೆ ಉರುಳಿದಂತೆ ಉರುಳಿ ಬೀಳುತ್ತದೆ.

ಆದ್ದರಿಂದ, ಅಧಿಕಾರಿಗಳು ಮತ್ತು ಅಧಿಕಾರೇತರ ಸಾರ್ವಜನಿಕ ನೌಕರರನ್ನು, ಅವರು ಭೂಕಬಳಿಕೆಯಲ್ಲಿ ನಿರತರಾಗಿರುವುದು ಕಂಡುಬಂದಲ್ಲೆಲ್ಲಾ, ಭಾರತ ದಂಡ ಸಂಹಿತೆ ಅಡಿಯಲ್ಲಿ ಹಿಡಿದು ಪ್ರಾಸಿಕ್ಯೂಟ್ ಮಾಡಬೇಕಾದದ್ದು ಅವಶ್ಯಕ. ಇತ್ತೀಚೆಗೆ ಈ ಸಮಿತಿಯ ಶಿಫಾರಸಿನ ಮೇಲೆ ಕರ್ನಾಟಕ ಭೂಕಬಳಿಕೆ (ನಿಷೇಧ) ಅಧಿನಿಯಮವನ್ನು ರಚಿಸಲಾಗಿದೆ. ಇದರಲ್ಲಿ ಭೂಕಬಳಿಕೆ ಮಾಡುವ ಅಥವಾ ಅದಕ್ಕೆ ದುಷ್ಪ್ರೇರಣೆ ನೀಡುವ ಸಾರ್ವಜನಿಕ ನೌಕರರ ಮೇಲೆ ಪ್ರಾಸಿಕ್ಯೂಷನ್ ಹೂಡಲು ಉಪಬಂಧಗಳಿವೆ. ಇದನ್ನು ಚುರುಕಾಗಿ ಮತ್ತು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಅದರಡಿ ನಿಯಮಗಳು ಮತ್ತು ಆಡಳಿತ ಯಂತ್ರ ಜಾರಿಗೆ ಬರುವವರೆಗೂ ಸುಳ್ಳು ದಸ್ತಾವೇಜು ಸೃಷ್ಟಿ, ಸುಳ್ಳು ಸಾಕ್ಷ್ಯ ಸೃಷ್ಟಿ ಮತ್ತುಇಂತಹ ಉಲ್ಲಂಘನೆಗಳನ್ನು ದುಷ್ಪ್ರೇರಿಸುವ ಬಗ್ಗೆ ಭಾರತ ದಂಡ ಸಂಹಿತೆಯಲ್ಲಿರುವ ಉಪಬಂಧಗಳನ್ನು ಅನ್ವಯಿಸಿ ಕಾನೂನು ಕ್ರಮ ಕೈಗೊಳ್ಳಬೇಕು.

ಜನವರಿ 2007 ರಂದು ವಿಧಾನಮಂಡಲಕ್ಕೆ ಸಲ್ಲಿಸಲಾದ ಮಧ್ಯಂತರ ವರದಿಯಲ್ಲಿ ಈ ಸಮಿತಿಯು ಬೊಟ್ಟುಮಾಡಿ ತೋರಿಸಿದಂತೆ **"ಕರ್ನಾಟಕ ಕಳ್ಳಬಟ್ಟಿದಾರರು, ಮಾದಕೌಷಧ ಅಪರಾಧಿಗಳು, ಜೂಜುಕೋರರು, ಗೂಂಡಾಗಳು, ಅನೈತಿಕ ವ್ಯವಹಾರಗಳ ಅಪರಾಧಿಗಳು ಮತ್ತು ಕೊಳಚೆ ಪ್ರದೇಶ ಕಬಳಿಸುವವರ ಅಪಾಯಕಾರಿ ಚಟುವಟಿಕೆ ನಿಷೇಧ ಅಧಿನಿಯಮದ"** ಅಡಿಯಲ್ಲಿ ಕೂಡ ಕ್ರಮಕೈಗೊಳ್ಳಬೇಕು. ಈ ಅಧಿನಿಯಮದಲ್ಲಿ **"ಕೊಳಚೆ ಪ್ರದೇಶ**

ಕಬಳಿಸುವವನು" ಎಂದರೆ ಯಾವುದೇ ಸರ್ಕಾರಿ, ಸ್ಥಳೀಯ ಸಂಸ್ಥೆಯ ಅಥವಾ ಖಾಸಗಿ ವ್ಯಕ್ತಿಯ ಭೂಮಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಥವಾ ಅದರ ಮೇಲೆ ಕಟ್ಟಡಗಳನ್ನು ಕಟ್ಟುವ ಮತ್ತು ಅಂಥಹ ಅಕ್ರಮ ಕೃತ್ಯಕ್ಕೆ ದುಷ್ಪ್ರೇರಿಸುವ ಯಾವನೇ ವ್ಯಕ್ತಿ ಎಂದು ಅರ್ಥ ವಿವರಣೆ ನೀಡಲಾಗಿದೆ.

ಈ ಅಧಿನಿಯಮವು ಯಾವನೇ ಭೂ ಕಬಳಿಕೆದಾರನಿಗೆ ಮತ್ತು ಸಾರ್ವಜನಿಕ ನೌಕರರೂ ಸೇರಿದಂತೆ ಹಾಗೆ ಭೂ ಕಬಳಿಸಲು ದುಷ್ಪ್ರೇರಿಸುವ ವ್ಯಕ್ತಿಗಳಿಗೂ ಅನ್ವಯಿಸುತ್ತದೆ ಮತ್ತು ಅವರನ್ನು ಒಂದು ವರ್ಷದ ಕಾಲ ಸೆರೆಹಿಡಿದಿಡಬಹುದು. ಈ ಅಧಿನಿಯಮವನ್ನು **'ಗೂಂಡಾ'** ಅಧಿನಿಯಮ ಎಂದು ಸಾಮಾನ್ಯವಾಗಿ ಕರೆಯುತ್ತಾರೆ. ಇಲ್ಲಿಯವರೆಗೆ ಪದೇಪದೇ ಅಪರಾಧವೆಸಗುವವರು ಮತ್ತು ಕಳ್ಳಬಟ್ಟಿದಾರರನ್ನು ಮಾತ್ರ ಇದರಡಿ ಬಂಧಿಸಲಾಗುತ್ತಿದೆ. ಒಂದು ವರ್ಷಗಳ ಕಾಲ ಬಂಧನದಲ್ಲಿರಿಸುವ ಕಟ್ಟುನಿಟ್ಟಾದ ಈ ಉಪಬಂಧವನ್ನು ಭೂಕಬಳಿಕೆದಾರರ ವಿರುದ್ಧ ಸಹ ಪ್ರಯೋಗಿಸಬಹುದಾಗಿದ್ದರೂ, **"ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ. ಹಕ್ಕು ಸ್ಥಾಪಿಸಿಕೊಂಡಿರುವ ಮತ್ತು ಅದಕ್ಕೆ ಶಾಮೀಲಾಗಿರುವ ನೌಕರರ ಮೇಲೆ ಕ್ರಮ ತೆಗೆದುಕೊಂಡಿಲ್ಲದಿರುವುದೇ, ಭೂ ಕಬಳಿಕೆ ದಂಧೆಗಳು ನಿರಂತರವಾಗಿ ನಡೆಯಲು ಕಾರಣವಾಗಿರುತ್ತದೆ".**

* * * * *

## 3. ಕರ್ನಾಟಕ ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವಿಚಿತ್ರ ಪ್ರಕರಣ – ಕಾಪಾಡುವ ದೊರೆಯನ್ನೇ ಕಾಯುವವರು ಯಾರು?

ಕರ್ನಾಟಕ ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಂಘವನ್ನು 1983ರಲ್ಲಿ ನ್ಯಾಯಾಂಗ ಇಲಾಖೆಯ ನೌಕರರಿಗೆ ಮನೆಗಳನ್ನು ಒದಗಿಸುವ ಉದ್ದೇಶದಿಂದ ಸ್ಥಾಪಿಸಲಾಯಿತು. ಸರ್ಕಾರವು 1992ರಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಅಲ್ಲಾಳಸಂದ್ರ, ಚಿಕ್ಕ ಬೊಮ್ಮಸಂದ್ರ ಹಾಗೂ ಜಕ್ಕೂರು ಪ್ಲಾಂಟೇಶನ್ ಗ್ರಾಮೀಣ ಪ್ರದೇಶಗಳಲ್ಲಿ 156 ಎಕರೆ 26 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ದಿನಾಂಕ 13.11.1992ರಂದು ಇವರ ಸ್ವಾಧೀನಕ್ಕೆ ನೀಡಿತು. ಇದಲ್ಲದೆ ಗೃಹ ನಿರ್ಮಾಣ ಸಂಘವು ಅದೇ ಗ್ರಾಮಗಳಲ್ಲಿ ಭೂ ಮಾಲೀಕರೊಡನೆ ಖಾಸಗಿ ಮಾತುಕತೆ ನಡೆಸಿ ಮಾರಾಟದ ಒಪ್ಪಂದದ ಮೇಲೆ ಸುಮಾರು 36 ಎಕರೆಗಳಷ್ಟು ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡಿತು. ಈ ರೀತಿ ಖಾಸಗಿ ಕೃಷಿ ಭೂಮಿಯನ್ನು ಸರ್ಕಾರದ ಪೂರ್ವಾನು ಮೋದನೆಯನ್ನು ಪಡೆಯದೆ ಗೃಹ ನಿರ್ಮಾಣದ ಉದ್ದೇಶಕ್ಕಾಗಿ ಪಡೆದುಕೊಳ್ಳುವುದು ಕರ್ನಾಟಕ ಭೂ ಸುಧಾರಣಾ ಅಧಿನಿಯಮದ 79ಬಿ ಕಲಂನ ಉಲ್ಲಂಘನೆಯಾಗುತ್ತದೆ ಎಂಬುದನ್ನು ನಾವು ಹೇಳಲೇಬೇಕು. ದಿನಾಂಕ 01.03.1974ರಿಂದ ಜಾರಿಗೆ ಬಂದಿರುವ ಕರ್ನಾಟಕ ಭೂ ಸುಧಾರಣಾ ಅಧಿನಿಯಮದ 79ಬಿ ಕಲಂ ಈ ಮುಂದಿನಂತೆ ಇದೆ.

**"79ಬಿ. ಕೆಲವು ವ್ಯಕ್ತಿಗಳು ವ್ಯವಸಾಯ ಭೂಮಿಯನ್ನು ಹೊಂದುವುದಕ್ಕೆ ನಿಷೇಧ.–** (1) ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ ಜಾರಿಗೆ ಬರುವಂತೆ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಾಗ ಹೊರತು:

(ಎ) ಸ್ವತ: ಭೂಮಿಯ ಸಾಗುವಳಿ ಮಾಡುವ ವ್ಯಕ್ತಿಯ ಹೊರತಾಗಿ ಇತರ ಯಾವ ವ್ಯಕ್ತಿಗೂ ಭೂಮಿಯನ್ನು ಹೊಂದಲು ಹಕ್ಕಿರತಕ್ಕದ್ದಲ್ಲ; ಮತ್ತು

(ಬಿ) (i) . . . . . . (ii) . . . . . (iii) . . . . .

(iv) ಸಹಕಾರಿ ಫಾರಂ ಅಲ್ಲದ ಒಂದು ಸಹಕಾರಿ ಸಂಘ ಹಾಗೆ ಜಮೀನು ಹೊಂದಿರುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ".

ಅಲ್ಲದೇ 80(1) (ಎ) (iv) ಕಲಂ ಪ್ರಕಾರ 79ಬಿ ಕಲಂ ಕಾರಣ ಹಕ್ಕಿಲ್ಲದಂತಹ ಸಹಕಾರ ಸಂಘಗಳಿಗೆ ಮಾಡಿದ ಯಾವ ಮಾರಾಟವೂ ಕಾನೂನು ಬಾಹಿರವಾಗಿರುತ್ತದೆ ಹಾಗೂ 83ನೇ ಕಲಂ ಪ್ರಕಾರ ಹಾಗೆ ಕಾನೂನು ಬಾಹಿರವಾಗಿ ಹೊಂದಿರುವ ಭೂಮಿಗಳನ್ನು ಉಪ ವಿಭಾಗಾಧಿಕಾರಿಗಳು ಕ್ಷಿಪ್ರ ವಿಚಾರಣೆಯನ್ನು ನಡೆಸಿದ ತರುವಾಯ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

ಆದ್ದರಿಂದ, ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಭೂ ಸುಧಾರಣಾ ಅಧಿನಿಯಮದ ಉಲ್ಲಂಘನೆಯನ್ನು ಮಾಡಿರುವುದು ಸ್ಪಷ್ಟ. ಹೀಗಾಗಿ ಗೃಹ ನಿರ್ಮಾಣ ಸಹಕಾರ ಸಂಘವು ಆ ರೀತಿ ಹೊಂದಿರುವ ಭೂಮಿಯನ್ನು ಅದರಲ್ಲಿ ರಚಿಸಿದ ಕಟ್ಟಡಗಳ ಸಹಿತವಾಗಿ ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು. ಗೃಹ ನಿರ್ಮಾಣ ಸಹಕಾರ ಸಂಘವು ದಿನಾಂಕ 30ನೇ ಮೇ 2007ರಂದು ಸಮಿತಿಗೆ ಒಂದು ಜಾಣ ಉತ್ತರವನ್ನು ನೀಡಿತು. ಸಂಘವು ಖಾಸಗಿ ಮಾತುಕತೆ ನಡೆಸಿ ಭೂಮಿಯನ್ನು ಕ್ರಯ ಪತ್ರ ಮಾಡಿಕೊಂಡು ಖರೀದಿಸಿಲ್ಲ. ಕೇವಲ ಮಾರಾಟದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ ಮತ್ತು ಗೃಹ ನಿರ್ಮಾಣ ಸಹಕಾರ ಸಂಘವು ಅದರ ಆಧಾರದ ಮೇಲೆ ಭೂಮಿಯನ್ನು ಸ್ವಾಧೀನ ಪಡೆದುಕೊಂಡಿದೆ ಎಂದು ತಿಳಿಸಿತು. ಇದು ಗೃಹ ನಿರ್ಮಾಣ ಸಹಕಾರ ಸಂಘದ ಅಪರಾಧವನ್ನು ಇನ್ನೂ ಹೆಚ್ಚು ಮಾಡುತ್ತದೆ. ಯಾವುದೇ ಹಕ್ಕು ಸ್ವಾಮ್ಯವಿಲ್ಲದೆ ಭೂಮಿಯನ್ನು ಸ್ವಾಧೀನಕ್ಕೆ ಪಡೆದಿರುವುದೇ ಅಲ್ಲದೆ ಕಾನೂನು ಉಲ್ಲಂಘಿಸಿ ನಿವೇಶನಗಳನ್ನು ಹಂಚಿ, ಹಂಚಿಕೆದಾರರು ಕಟ್ಟಡಗಳನ್ನು ಸಹ ನಿರ್ಮಿಸಿಕೊಂಡಿರುತ್ತಾರೆ. ಕೆಲವು ಪ್ರಕರಣಗಳಲ್ಲಿ ಗೃಹ ನಿರ್ಮಾಣ ಸಹಕಾರ ಸಂಘ ಮತ್ತು ಕೆಲವು ಭೂ ಮಾಲೀಕರು ನಗರ ಸಿವಿಲ್ ನ್ಯಾಯಾಧೀಶರ ಮುಂದೆ ಒಂದು **"ರಾಜಿ"** ಯನ್ನು ಮಾಡಿಕೊಂಡಿರುತ್ತಾರೆ. ಭೂ ಸುಧಾರಣಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಅದರಲ್ಲೂ ಒಂದು ನ್ಯಾಯಾಲಯದ ಮುಂದೆ ಇಂಥ **"ರಾಜಿ"** ಮಾಡಿಕೊಳ್ಳುವುದು ಆಶ್ಚರ್ಯಕರ ಸಂಗತಿಯಾಗಿರುತ್ತದೆ.

ಈ ಗೃಹ ನಿರ್ಮಾಣ ಸಹಕಾರ ಸಂಘವು ದಿನಾಂಕ 6.11.1992ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಡಾವಣೆಯ ನಕಾಶೆಯನ್ನುಅನುಮೋದನೆಗಾಗಿ ನೀಡಿತು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 28.11.1992ರ ತನ್ನ ಪತ್ರದ ಮೂಲಕ ಕೆಲವು ಷರತ್ತುಗಳಿಗೆ ಒಳಪಟ್ಟು ಬಡಾವಣೆಗೆ ಅನುಮೋದನೆ ನೀಡಲು ನಿರ್ಣಯಿಸಿತ್ತು. ಆದರೆ ಗೃಹ ನಿರ್ಮಾಣ ಸಹಕಾರ ಸಂಘವು ಮತ್ತೆಂದೂ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದ ಕಡೆ ತಲೆ ಹಾಕಲೇ ಇಲ್ಲ. ನಗರ ಮತ್ತು ಪಟ್ಟಣ ಯೋಜನೆ ಅಧಿನಿಯಮದ ಪ್ರಕಾರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಗೃಹ ನಿರ್ಮಾಣ ಸಹಕಾರ ಸಂಘಗಳ ಭೂಮಿಗಳಿಗೆ ಯೋಜನಾ ಪ್ರಾಧಿಕಾರವಾಗಿರುತ್ತದೆ. ಹೀಗಿದ್ದರೂ ತಮ್ಮ ಯೋಜನಾ ಪ್ರಾಧಿಕಾರವಲ್ಲದ ಯಲಹಂಕ ನಗರ ಸಭೆಗೆ ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ತನ್ನ ಬಡಾವಣೆ ನಕಾಶೆಯನ್ನು ಸಲ್ಲಿಸಿದೆ. ಆ ನಗರ ಸಭೆಯು ಮುಖ್ಯವಾಗಿ ಚದರ ಅಡಿಗೆ 9-00 ರೂಪಾಯಿಗಳಂತೆ ಶುಲ್ಕವನ್ನು ಸಂಗ್ರಹಿಸಲು ಒಪ್ಪಿಗೆಯನ್ನು ನೀಡಿತು. ಇದನ್ನೇ, ಅನುಮೋದನೆ ನೀಡಲು ಅಧಿಕಾರ ವ್ಯಾಪ್ತಿಯೇ ಇಲ್ಲದ ನಗರ ಸಭೆಯು ನೀಡಿದ **"ಅನುಮೋದನೆ"** ಎಂದು ಭಾವಿಸಲಾಗಿದೆ.

ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು 3399 ಸದಸ್ಯರನ್ನು ಮತ್ತು 1353 ಸಹ ಸದಸ್ಯರನ್ನು ದಾಖಲಿಸಿ ಕೊಂಡು 2268 ನಿವೇಶನಗಳನ್ನು ಹಂಚಿಕೆ ಮಾಡಿದೆ. ಎಷ್ಟೋ ಜನ ಕ್ರಮಬದ್ಧವಾದ ಪ್ರಾಥಮಿಕ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಿಯೇ ಇಲ್ಲ. ಬಹಳಷ್ಟು ನಿವೇಶನಗಳನ್ನು ಉಚ್ಚ ನ್ಯಾಯಾಲಯ/ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳು, ರಾಜಕಾರಣಿಗಳು, ಕಾಂಟ್ರಾಕ್ಟರ್‌ಗಳು, ಪೋಲೀಸ್ ಇಲಾಖೆ ಮತ್ತು ಸರ್ಕಾರದ ವಿವಿಧ ಇಲಾಖೆ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗಿದೆ.

ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ತಾನೇ ಒಪ್ಪಿಕೊಂಡಿರುವಂತೆ ತನ್ನ ಮೂಲ ಲೇಔಟ್ ನಕ್ಷೆಯಲ್ಲಿ ಶೇ. 65ರಷ್ಟು ಭಾಗವನ್ನು ನಿವೇಶನಗಳನ್ನಾಗಿ ಶೇ. 5ರಷ್ಟು ನಾಗರಿಕ ಸೌಲಭ್ಯಗಳಿಗಾಗಿ ಮತ್ತು ಉದ್ಯಾನವನಗಳಿಗಾಗಿ ಮತ್ತು ಉಳಿದ ಭಾಗವನ್ನು ರಸ್ತೆಗಾಗಿ ಹಂಚಿಕೆ ಮಾಡಿತ್ತು. ಪಟ್ಟಣ ಯೋಜನಾ ನೀತಿಗಳಿಗನುಸಾರ ಶೇ.52ರಷ್ಟನ್ನು ಮಾತ್ರ ನಿವೇಶನಗಳಿಗಾಗಿ ಹಂಚಿಕೆ ಮಾಡಬಹುದು. ಶೇ. 25ರಷ್ಟನ್ನು ನಾಗರೀಕ ಸೌಲಭ್ಯಗಳು ಮತ್ತು ಉದ್ಯಾನವನಗಳಿಗಾಗಿ ಮೀಸಲಿಡಬೇಕು ಮತ್ತು ಉಳಿದ ಶೇ.23ರಷ್ಟನ್ನು ರಸ್ತೆಗಳಿಗಾಗಿ ಮೀಸಲಿಡಬೇಕು. ಈ ಅಗತ್ಯತೆಗನುಸಾರವಾಗಿ ಸದರಿ ಗೃಹ ನಿರ್ಮಾಣ ಸಹಕಾರ ಸಂಘವು 404 ನಾಗರಿಕ ಸೌಲಭ್ಯ ನಿವೇಶನಗಳನ್ನು ಒದಗಿಸಬೇಕಿತ್ತು. ಇದರ ಪ್ರಕಾರ ಯಾವುದೇ ನಾಗರಿಕ ಸೌಲಭ್ಯ ನಿವೇಶನವನ್ನು ಮೀಸಲಿಟ್ಟಿಲ್ಲ.

ಸದರಿ ಗೃಹ ನಿರ್ಮಾಣ ಸಹಕಾರ ಸಂಘವು ಅನೇಕ ನಿಯಮಗಳನ್ನು ಉಲ್ಲಂಘಿಸಿದೆ ಎಂದು 2002ರ ಅಕ್ಟೋಬರ್‌ನಲ್ಲಿ ನ್ಯಾಯಾಂಗ ಇಲಾಖೆ ನೌಕರರ ಕ್ಷೇಮಾಭಿವೃದ್ಧಿ ಸಂಘವು ಉಚ್ಚ ನ್ಯಾಯಾಲಯಕ್ಕೆ ತಕರಾರು ಅರ್ಜಿಯನ್ನು ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ಮಧ್ಯಂತರ ಆದೇಶ ನೀಡಿ ನಾಗರಿಕ ಸೌಲಭ್ಯಗಳಿಗಾಗಿ, ಉದ್ಯಾನಗಳಿಗಾಗಿ ಮತ್ತು ಸಾರ್ವಜನಿಕ ಬಳಕೆಗಾಗಿ ಮೀಸಲಿಟ್ಟ ಯಾವ ನಿವೇಶನಗಳನ್ನೂ ಗೃಹ ನಿವೇಶನಗಳನ್ನಾಗಿ ಹಂಚಿಕೆಮಾಡಬಾರದೆಂದು ನಿರ್ದೇಶನ ನೀಡಿತ್ತು. (W.P. No. 40994/2002) ಸದರಿ ಗೃಹ ನಿರ್ಮಾಣ ಸಹಕಾರ ಸಂಘವು ಈ ನಿರ್ದೇಶನವನ್ನು ಉಲ್ಲಂಘಿಸಿ ಸಾರ್ವಜನಿಕ ಬಳಕೆಗೆ ಮೀಸಲಿಟ್ಟ ನಿವೇಶನಗಳನ್ನು ಹಂಚಿಕೆ ಮಾಡಿತು. ಇದನ್ನು ವಿರೋಧಿಸಿ ಕ್ಷೇಮಾಭಿವೃದ್ಧಿ ಸಂಘವು ನ್ಯಾಯಾಲಯ ನಿಂದನ ಅರ್ಜಿಯನ್ನು ಸಲ್ಲಿಸಿದ್ದು, ಕರ್ನಾಟಕ ಉಚ್ಚ ನ್ಯಾಯಾಲಯವು ಈ ಬಗ್ಗೆ ವಿಚಾರಣೆ ನಡೆಸುತ್ತಿದೆ.

2006ರ ಮಾರ್ಚಿನಲ್ಲಿ ಸದರಿ ಗೃಹ ನಿರ್ಮಾಣ ಸಹಕಾರ ಸಂಘದ ಕಾರ್ಯದರ್ಶಿ ಹಾಗೂ ವ್ಯವಸ್ಥಾಪಕರು ಗೃಹ ನಿರ್ಮಾಣ ಸಹಕಾರ ಸಂಘದ ಖೋಟಾ ದಾಖಲೆಗಳನ್ನು ಸೃಷ್ಟಿಸಿ ತಮ್ಮ ಅಳಿಯನಿಗೆ 27 ನಿವೇಶನಗಳನ್ನು ಹಂಚಿಕೆ ಮಾಡಿದರು, ಇದರ ವಿರುದ್ಧ ಸದರಿ ಗೃಹ ನಿರ್ಮಾಣ ಸಹಕಾರ ಸಂಘವು ಒಂದು ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿತು. ಅದರ ವಿಚಾರಣೆ ನಡೆಯುತ್ತಿದೆ. 2006ರ ಡಿಸೆಂಬರ್‌ನಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರು, ಈ ಸಂಘದಲ್ಲಿ ನಡೆದ ಅಕ್ರಮಗಳಿಗೆ ಸಂಬಂಧಿಸಿದಂತೆ ಮತ್ತು ಸದರಿ ಗೃಹ ನಿರ್ಮಾಣ ಸಹಕಾರ ಸಂಘದ ಪದಾಧಿಕಾರಿಗಳನ್ನು ಅನರ್ಹಗೊಳಿಸುವುದಕ್ಕಾಗಿ ವಿಚಾರಣೆ ಪ್ರಾರಂಭಿಸಿದರು. ಈ ಗೃಹ ನಿರ್ಮಾಣ ಸಹಕಾರ ಸಂಘವು ಮಾಡಿರುವ ಅನೇಕಾನೇಕ ಉಲ್ಲಂಘನೆಗಳನ್ನು ಸಂಕ್ಷಿಪ್ತವಾಗಿ ಈ ಮುಂದೆ ಕೊಡಲಾಗಿದೆ.

(1) ಕರ್ನಾಟಕ ಭೂ ಸುಧಾರಣೆ ಅಧಿನಿಯಮದ 79ಬಿ ಕಾಲಂಗನುಸಾರವಾಗಿ ಸರ್ಕಾರದ ಪೂರ್ವಾನುಮತಿಯಿಲ್ಲದೆ ಗೃಹ ನಿರ್ಮಾಣ ಸಹಕಾರ ಸಂಘವು ಕೃಷಿ ಭೂಮಿಯನ್ನು ಹೊಂದುವಂತಿಲ್ಲ. ಆದರೆ ಸದರಿ ಗೃಹ ನಿರ್ಮಾಣ ಸಹಕಾರ ಸಂಘವು ಮಾರಾಟ ಒಪ್ಪಂದದ ಆಧಾರದ ಮೇಲೆ ಭೂ ಹಿಡುವಳಿದಾರರಿಂದ ಸುಮಾರು 36 ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅವುಗಳನ್ನು ನಿವೇಶನಗಳನ್ನಾಗಿ ಮಾಡಿ ಹಂಚಿಕ ಮಾಡಿತು. **ಮಂಗಳಗೌರಿ–ವಿರುದ್ಧ–ಕೇಶವಮೂರ್ತಿ (2001) (4) ಕೆಎಲ್‌ಜೆ 520)** ಪ್ರಕರಣದಲ್ಲಿ, **ಸರ್ಕಾರದ ಪೂರ್ವಾನುಮೋದನೆಯಿಲ್ಲದೆ**

ಕೃಷಿ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ನಿವೇಶನಗಳಾಗಿ ಹಂಚಿಕೆ ಮಾಡುವುದು ಭೂಸುಧಾರಣಾ ಅಧಿನಿಯಮದ 79ಬಿ ಪ್ರಕರಣದ ಉಲ್ಲಂಘನೆ ಮತ್ತು ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕ ಪ್ರಕರಣವೆಂದು ಕರ್ನಾಟಕ ಉಚ್ಚ ನ್ಯಾಯಾಲಯವು ತೀರ್ಮಾನಿಸಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವಂತೆ ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಿದೆ. ಅಷ್ಟೇ ಅಲ್ಲದೆ, **ಗೃಹ ನಿರ್ಮಾಣ ಸಹಕಾರ ಸಂಘವು ಹಾಗೆ ಸ್ವಾಧೀನಪಡಿಸಿಕೊಂಡ ಮತ್ತು ಹಂಚಿಕೆ ಮಾಡಿದ ಜಮೀನನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನಿರ್ದೇಶಿಸಿದೆ.**

(2) ಒಟ್ಟು ಲೇ ಔಟ್ ಪ್ರದೇಶದ ಶೇ.25ರಷ್ಟು ಪ್ರದೇಶವನ್ನು ನಾಗರಿಕ ಸೌಲಭ್ಯ ನಿವೇಶನಗಳೆಂದು ಹಾಗೆ ನಾಗರಿಕ ಸೌಲಭ್ಯ ಒದಗಿಸುವುದಕ್ಕಾಗಿ ಗುತ್ತಿಗೆ ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಿಟ್ಟುಕೊಡಬೇಕು. ಬೆಂಗಳೂರು ಮೆಡಿಕಲ್ ಟ್ರಸ್ಟ್ ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಎಐಆರ್ 1991 ಎಸ್‌ಸಿ 1902) ದಿನಾಂಕ 19.07.1991ರಲ್ಲಿ ಭಾರತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶದಂತೆ ನಾಗರಿಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನಗಳನ್ನು ಯಾವುದೇ ಇತರ ಉದ್ದೇಶಕ್ಕೆ ಬಳಸುವಂತಿಲ್ಲ. ಆ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಿಟ್ಟುಕೊಟ್ಟಿರಲಿ ಅಥವಾ ಇಲ್ಲದಿರಲಿ ಅವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೇ ಸೇರುತ್ತವೆ. ಎ.ಎಸ್.ಎ. ವಿಶ್ವೇಶ್ವರಯ್ಯ ವಿರುದ್ಧ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ–2004 (3) ಕೆಎಲ್‌ಜೆ ಪುಟ 2613ರಲ್ಲಿ ಉಚ್ಚ ನ್ಯಾಯಾಲಯವು ಮಾಡಿದ ತೀರ್ಮಾನಕ್ಕನುಸಾರ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ 33ನೇ ಪ್ರಕರಣದ ಪ್ರಕಾರ ಬಡಾವಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನುಮೋದಿಸದೆ ಇರುವಾಗ, ಗೃಹ ನಿರ್ಮಾಣ ಸಹಕಾರ ಸಂಘವು ಅದನ್ನು ಲೆಕ್ಕಿಸದೆ ಮುಂದುವರಿದು, ನಿವೇಶನಗಳನ್ನು ಹಂಚಿದ್ದರೆ, ಮತ್ತು ಅವುಗಳಲ್ಲಿ ಕಟ್ಟಡಗಳನ್ನು ಕಟ್ಟಿದ್ದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆ ಕಟ್ಟಡಗಳನ್ನು ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಅದು ಅವುಗಳನ್ನು ತನಗೆ ಬೇಕಾದ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದು, ಸಾರ್ವಜನಿಕರಿಗೆ ಬಾಡಿಗೆಗೆ ಕೊಡಬಹುದು ಅಥವಾ ಮಾರಾಟ ಮಾಡಬಹುದು ಎಂದು ಆದೇಶಿಸಿದೆ.

(3) ನ್ಯಾಯಾಂಗ ಇಲಾಖೆ ನೌಕರರಲ್ಲದವರಿಗೆ ನಿವೇಶನಗಳನ್ನು ಹಂಚಲಾಗಿದೆ. ಹೀಗೆ ನಿವೇಶನ ಪಡೆಯಲು ಅರ್ಹರಲ್ಲದೆ ಇರುವವರಲ್ಲಿ ಬಹಳ ಗಮನಾರ್ಹವಾದ ವ್ಯಕ್ತಿಗಳೆಂದರೆ, ಉಚ್ಚ / ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರುಗಳು. ಇವರಲ್ಲಿ ಅನೇಕರಿಗೆ ಇದರ ಜೊತೆ ಲಗತ್ತಿಸಿರುವ ಪಟ್ಟಿಯಲ್ಲಿ ನೀಡಿರುವಂತೆ 84 ನಿವೇಶನಗಳನ್ನು ಹಂಚಲಾಗಿದೆ.**(ಅನುಬಂಧ– 3) ಐಎಲ್‌ಆರ್ 1995(1) ಕರಾ 3139 ಇದರಲ್ಲಿ ಉಚ್ಚ ನ್ಯಾಯಾಲಯವು ಅಭಿಪ್ರಾಯ ಪಟ್ಟಿರುವಂತೆ, ಉಚ್ಚ ನ್ಯಾಯಾಲಯದ ನ್ಯಾಯಧೀಶರುಗಳು ಗೃಹ ನಿರ್ಮಾಣ ಸಹಕಾರ ಸಂಘಗಳ ಸದಸ್ಯರಾಗುವಂತಿಲ್ಲ.** ಈ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಶ್ರೀ ಕೆ.ಎಸ್.ಭಕ್ತವತ್ಸಲಂ ಮತ್ತು ಎಂ.ಎಫ್.ಸಾಲ್ಡನಾ ಇವರು ನೀಡಿದ ಅಭಿಪ್ರಾಯ ಈ ಮುಂದಿನಂತಿದೆ.

ಪುಟ 3183 "ಬೈಲಾಗಳ 7ನೇ ಖಂಡವನ್ನು ಓದಿದಾಗ ನಮ್ಮ ಕಲ್ಪನೆಯನ್ನು ಎಷ್ಟು ಲಂಬಿಸಿದರೂ ನಮ್ಮ ಪ್ರಕಾರ ಅದು (ಕರ್ತವ್ಯ ನಿರತ, ವರ್ಗಾಯಿತ, ನಿವೃತ್ತ) ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ

ನ್ಯಾಯಮೂರ್ತಿಗಳನ್ನು ಒಳಗೊಳ್ಳುವುದಿಲ್ಲ. ಒಂದು ಕ್ಷಣ, ಕೆಲವೊಂದು ನ್ಯಾಯಾಧೀಶರು ಸಂಘದ ಸದಸ್ಯರಾಗಲು ಅವಕಾಶ ನೀಡಲಾಗಿದೆ ಎಂದಿಟ್ಟುಕೊಂಡರೂ, ಇದು ಸಂಘದ ಕಲಾಪಗಳನ್ನು ನಡೆಸುವಲ್ಲಿ ಆಗಿರುವ ಕ್ರಮದೋಷವಾಗಿರುತ್ತದೆ. ನಾವು ಈಗಾಗಲೇ ಹೇಳಿರುವಂತೆ, ಬೈಲಾಗಳಿಗೆ ತದ್ವಿರುದ್ಧವಾಗಿ ಹಂಚಿಕೆಯನ್ನು ಮಾಡಿದ್ದರೂ, ಒಂದು ಸಹಕಾರ ಸಂಘದ ವಿರುದ್ಧ ಯಾವುದೇ ರಿಟ್ ಹಾಕಲು ಅವಕಾಶವಿಲ್ಲದೇ ಇರುವುದರಿಂದ, ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲಾಗುವುದಿಲ್ಲ ಎನ್ನುವುದು ಸುಸ್ಥಾಪಿತ ಕಾನೂನಾಗಿದೆ."

**ನ್ಯಾಯಾಂಗ ನೌಕರರ** ಗೃಹ ನಿರ್ಮಾಣ ಸಹಕಾರ ಸಂಘವು ಇತರ ಗೃಹ ನಿರ್ಮಾಣ ಸಂಘಗಳಿಗೆ ಒಂದು ಅನುಸರಣೀಯ ಮಾದರಿಯಾಗಬೇಕಾಗಿತ್ತು. ಆದರೆ ಅದು ಕಾನೂನು, ಔಚಿತ್ಯ ಅಥವಾ ಸಾರ್ವಜನಿಕ ಹಿತಾಸಕ್ತಿ ಬಗ್ಗೆ ಎಳ್ಳಷ್ಟೂ ಭಯ ಅಥವಾ ಕಾಳಜಿ ಇಲ್ಲದೆ ತಾನೇ ಕಾನೂನು ಭಂಜಕರಲ್ಲಿ ಪ್ರಪ್ರಥಮ ಎನ್ನುವಂತೆ ನಡೆದುಕೊಂಡಿರುವುದು ಅತ್ಯಂತ ದುರದೃಷ್ಟಕರ. ಇದು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಪ್ರಭಾವಶಾಲಿ ವ್ಯಕ್ತಿಗಳನ್ನು ತನ್ನ ಸದಸ್ಯರುಗಳನ್ನಾಗಿ ಹಾಗೂ ಫಲಾನುಭವಿಗಳನ್ನಾಗಿ ಮಾಡಿಕೊಂಡರೆ, ತಾನು ಯಾವ ಕಾನೂನು ಬಾಹಿರ ಕೃತ್ಯವನ್ನು ಮಾಡಿದರೂ, ಅದು ಮಾಫಿಯಾಗುತ್ತದೆ ಎಂಬ ಬಾವನೆಯಿಂದ ಕಾನೂನು ಬಗ್ಗೆ ನಿರ್ಲಕ್ಷ ತೋರುವ ಕೆಲಸಗಳಲ್ಲಿ ಮನಬಂದಂತೆ ತೊಡಗಿದೆ.

ಇನ್ನೂ ಬಹಳ ಆತಂಕದ ವಿಷಯವೆಂದರೆ, ಯಾವುದೇ ಸರ್ಕಾರದ ನೌಕರರಾಗಿರದಂತಹ ಸಂವೈಧಾನಿಕ ಕಾರ್ಯಕರ್ತರಾಗಿ ಅನೇಕ ವಿಶೇಷಾಧಿಕಾರಗಳಿಂದ ಕಾನೂನಿನ ಅಡಿಯಲ್ಲಿ ಸೂಕ್ತವಾಗಿಯೇ ರಕ್ಷಿತವಾಗಿರುವ ಉಚ್ಚ ಮತ್ತು ಪರಮೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು ಈ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸದಸ್ಯರಾಗಿ ನಿವೇಶನಗಳನ್ನು ಪಡೆದುಕೊಂಡಿದ್ದಾರೆ. ಈ ಸಮಿತಿಯ ಅಧಿಕಾರಿಗಳ ಮುಂದೆ 30.5.2007 ರಂದು ಹಾಜರಾದಂಥ ನಿರ್ದೇಶಕ ಮಂಡಳಿಯವರು, ಸದಸ್ಯರಿಗೆ ಪ್ರತ್ಯೇಕ ಅರ್ಜಿ ನಮೂನೆಗಳ ಸೆಟ್ ಇದ್ದರೆ, ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರುಗಳಿಗೆ ಇನ್ನೊಂದು ಅರ್ಜಿ ನಮೂನೆಗಳ ಸೆಟ್ ಇದೆ ಎಂದು ಹೇಳಿರುತ್ತಾರೆ.

ಸದರಿ ಗೃಹ ನಿರ್ಮಾಣ ಸಹಕಾರ ಸಂಘದ ನೋಂದಾಯಿತ ಕಛೇರಿಯನ್ನು ಉಚ್ಚ ನ್ಯಾಯಾಲಯದ ಕಟ್ಟಡದಲ್ಲೇ ಹೊಂದಿದ್ದು, ನ್ಯಾಯಾಂಗ ಎಂಬ ಪದದ ಸೋಗಿನಲ್ಲಿ ಅವ್ಯವಹಾರಗಳು ನಡೆಯುತ್ತಿರುವುದು ಅತ್ಯಂತ ದುರದೃಷ್ಟಕರ.

ಸಮಾಜದಲ್ಲಿ ಸಾರ್ವಜನಿಕರ ನೈತಿಕತೆಯ ಮಟ್ಟ ಕುಸಿಯುತ್ತಿರುವಂಥಹ ಈ ಸಂದರ್ಭದಲ್ಲಿ ಸೂಕ್ತ ಪರಿಹಾರ, ಪರಿಶಮನ ಒದಗಿಸುವ ಮತ್ತು ನ್ಯಾಯ ದೊರಕಿಸಿಕೊಡುವ ಕಟ್ಟ ಕಡೆಯ ಭದ್ರಕೋಟೆ ಎಂದು ಜನತೆ ನ್ಯಾಯಾಂಗವನ್ನು ಪರಿಗಣಿಸುತ್ತಾರೆ. ಆದ್ದರಿಂದ, ನ್ಯಾಯಾಂಗವು ರಾಮಾಯಣದ ಸೀತೆಯಂತೆ, ಸೀಸರ್‌ನ ಹೆಂಡತಿಯಂತೆ, ವಿವೇಚನೆ ಮತ್ತು ಬದ್ಧತೆಗೆ ಎಳ್ಳಷ್ಟೂ ಸಂಶಯ ಬರದಂತೆ ಪರಿಶುದ್ಧವಾಗಿ, ಸಂಶಯಾತೀತವಾಗಿ ಕಾರ್ಯ ನಡೆಸಬೇಕಾಗಿದ್ದು, ನ್ಯಾಯಾಂಗದ ಅಮೂಲ್ಯ ಗೌರವದ ರಕ್ಷಣೆಗಾಗಿ ಹಾಗೂ ಜನತೆ ಅದರಲ್ಲಿ ಇಟ್ಟಿರುವ ನಂಬಿಕೆಯನ್ನು ರಕ್ಷಿಸುವ ಸಲುವಾಗಿ, ನ್ಯಾಯಾಂಗ ಬಡಾವಣೆಯ ಅವ್ಯವಹಾರಗಳ ಬಗ್ಗೆ ಕಠಿಣ ಕ್ರಮ ಜರುಗಿಸುವುದು ಅವಶ್ಯವೆಂದು ಸಮಿತಿಯು ಭಾವಿಸುತ್ತದೆ.

* * * * *

## 4. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿನ್ನಮಂಗಲ ಮನವಾರ್ತೆ ಕಾವಲ್, ಬೈಯಪ್ಪನಹಳ್ಳಿಯಲ್ಲಿ ಪೂರ್ವಂಕರ ಬಿಲ್ಡರ್ಸ್‌ರವರು ನೋಂದಣಿ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳ ಶಾಮೀಲಿನಿಂದ ಸಾರ್ವಜನಿಕ ರಸ್ತೆಗಳನ್ನು "ಗುಳುಂ" ಮಾಡಿರುವುದು:

ಬೆಂಗಳೂರು ದಕ್ಷಿಣ ತಾಲ್ಲೂಕು ಬಿನ್ನಮಂಗಲ ಮನವಾರ್ತೆ ಕಾವಲ್‌ನ ಸರ್ವೆ ನಂ. 4/1ರ 8.08 ಎಕರೆ/ಗುಂಟೆ ಪ್ರದೇಶವನ್ನು ಬಡಾವಣೆ ನಿರ್ಮಿಸುವ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಲಾಯಿತು. ಗ್ರಾಮ ಪಂಚಾಯಿತಿಯು ಬಡಾವಣೆ ನಕ್ಷೆಗೆ ಅನುಮೋದನೆ ನೀಡುವ ಸಕ್ಷಮ ಪ್ರಾಧಿಕಾರವಲ್ಲದಿದ್ದರೂ 1975ರಲ್ಲಿ ಅಂದಿನ ಬೈಯಪ್ಪನಹಳ್ಳಿ ಗ್ರಾಮ ಪಂಚಾಯಿತಿಯಿಂದ ಬಡಾವಣೆ ನಕ್ಷೆಗೆ ಅನುಮೋದನೆ ಪಡೆಯಲಾಗಿದೆ.

ಇದಾದ ತರುವಾಯ ಈ ಕೆಳಕಂಡ ನಾಲ್ಕು ಜನ ವ್ಯಕ್ತಿಗಳು ಒಟ್ಟು 47 ನಿವೇಶನಗಳನ್ನು ಮತ್ತು ರಸ್ತೆಗಳಿಗೆ ಸಂಬಂಧಪಟ್ಟ ನಾಲ್ಕು ಶುದ್ಧ ಕ್ರಯ ಪತ್ರಗಳನ್ನು ಒಟ್ಟು 51 ಕ್ರಯಪತ್ರಗಳನ್ನು , ಬರೆಸಿಕೊಂಡಿರುತ್ತಾರೆ. ಕೆಲವು ಕ್ರಯ ಪತ್ರಗಳನ್ನು ಇಬ್ಬರು ವ್ಯಕ್ತಿಗಳ ಹೆಸರಿಗೆ ಜಂಟಿಯಾಗಿ ಮತ್ತೆ ಕೆಲವನ್ನು ಒಬ್ಬ ವ್ಯಕ್ತಿಯ ಹೆಸರಿಗೆ ಬರೆಸಿಕೊಂಡಿರುತ್ತಾರೆ. ಅಂದರೆ ಯಾವ ಕ್ರಯ ಪತ್ರವೂ ಎಲ್ಲಾ ನಾಲ್ಕು ಜನರ ಹೆಸರಿನಲ್ಲಿ ಜಂಟಿಯಾಗಿರುವುದಿಲ್ಲ. ಕ್ರಯದಾರರ ಹೆಸರುಗಳು ಈ ಕೆಳಕಂಡಂತಿವೆ.

1. ಸುರೇಶ ಸಲಾರಿಯ
2. ಎಸ್.ಎಸ್.ಮಹಮದ್ ಸಮದ್
3. ರೋಹಿತ್ ಸಲಾರಿಯ
4. ಮಹಮದ್ ಸೈಫುಲ್ಲಾ

ಕ್ರಯದಾರರಾದ ನಾಲ್ಕು ಜನರು ಬೆಂಗಳೂರು ಮಹಾನಗರ ಪಾಲಿಕೆಗೆ ಕ್ರೋಡೀಕೃತ ಖಾತೆ ಮಾಡಿಕೊಡುವಂತೆ ದಿನಾಂಕ 23.5.2003 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿದ ಹತ್ತು ದಿವಸಗಳಲ್ಲೇ ಅಂದರೆ ದಿನಾಂಕ 3.6.2003ರಂದೇ ಒಟ್ಟು ವಿಸ್ತೀರ್ಣ 2,34,489 ಚದರ ಅಡಿಗೆ ಕ್ರೋಡೀಕೃತ ಖಾತೆಗೆ ಆದೇಶವಾಗಿರುತ್ತದೆ. ಅದರಲ್ಲಿ ರಸ್ತೆಗಳಿಗೆ ಸಂಬಂಧಪಟ್ಟ ನಾಲ್ಕು ಕ್ರಯಪತ್ರಗಳ ವಿಸ್ತೀರ್ಣ 39,910 ಚದರ ಅಡಿಯು ಸೇರಿರುತ್ತದೆ.

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾಗಿರುವ ಅಂಶವೇನೆಂದರೆ ಕ್ರೋಡೀಕೃತ ಖಾತೆ ಮಾಡಲು ಎಲ್ಲಾ ನಾಲ್ಕು ಕ್ರಯದಾರರು ಎಲ್ಲಾ ನಿವೇಶನಗಳಿಗೆ ಸಂಬಂಧಪಟ್ಟಂತೆ ಜಂಟಿ ಕ್ರಯದಾರರಾಗಿರಬೇಕು ಮತ್ತು ಅವರುಗಳು ರಕ್ತ ಸಂಬಂಧಿಗಳಾಗಿರಬೇಕು. ಆದರೆ ಮೇಲ್ಕಂಡ ನಾಲ್ಕು ಜನರು ರಕ್ತ ಸಂಬಂಧಿಗಳೂ ಅಲ್ಲ ಮತ್ತು ಎಲ್ಲಾ ನಾಲ್ಕು ಜನರು ಎಲ್ಲಾ ಕ್ರಯಪತ್ರಗಳಿಗೂ ಜಂಟಿ ಕ್ರಯದಾರರುಗಳಾಗಿರುವುದಿಲ್ಲ. **ಈ ಪ್ರಕರಣದಲ್ಲಿ ರಕ್ತ ಸಂಬಂಧಕ್ಕಿಂತ ಹಣವೇ ಮುಖ್ಯವಾಗಿರುತ್ತದೆ (Money is thicker than Blood).**

ಇಷ್ಟು ಮಾತ್ರವಲ್ಲದೆ, ಖಾತೆದಾರರುಗಳು ದಿನಾಂಕ 24.12.2003 ರಂದು ವಸತಿ ಸಮುಚ್ಚಯ ನಿರ್ಮಿಸುವುದಾಗಿ ಅರ್ಜಿ ಸಲ್ಲಿಸಿ, ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮತಿ ಪಡೆದಿರುತ್ತಾರೆ. ತರುವಾಯ ದಿನಾಂಕ 24.06.2004

ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಭೂ ಉಪಯೋಗ ಬದಲಾವಣೆ ಆದೇಶವನ್ನು ಖಾತೆದಾರರುಗಳು ಪಡೆದುಕೊಂಡಿರುತ್ತಾರೆ. ನಂತರ ದಿನಾಂಕ 24.05.2005 ರಂದು ಬೆಂಗಳೂರು ಮಹಾನಗರ ಪಾಲಿಕೆಯಿಂದ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಪರಿಷ್ಕೃತ ಯೋಜನೆಗೆ ಅನುಮತಿ ಪಡೆದುಕೊಂಡಿರುತ್ತಾರೆ.

ಈ ಮಧ್ಯೆ ಮೇಲ್ಕಂಡ ನಾಲ್ಕು ಜನ ಜಂಟಿ ಖಾತೆದಾರರ ಜೊತೆ ಮೆ: ಪೂರ್ವಂಕರ ಲಿಮಿಟೆಡ್‌ರವರು ಅಭಿವೃದ್ಧಿಗಾಗಿ ಒಪ್ಪಂದ ಮಾಡಿಕೊಂಡ ಹಿನ್ನೆಲೆಯಲ್ಲಿ ಮೆ: ಪೂರ್ವಂಕರ ಲಿಮಿಟೆಡ್‌ರವರು ಬಹುಮಹಡಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಮುಂದುವರೆದಿರುತ್ತಾರೆ. ನಂತರದಲ್ಲಿ ಮೆ: ಪೂರ್ವಂಕರ ಲಿಮಿಟೆಡ್‌ರವರಿಗೆ ಕ್ರಯವಾಗಿರುತ್ತದೆ.

ಈ ಪ್ರಕರಣದಲ್ಲಿ ಪ್ರಾರಂಭದಿಂದಲೇ ನಾನಾ ರೀತಿಯ ಅವ್ಯವಹಾರಗಳು ಮತ್ತು ಕಾನೂನುಬಾಹಿರ ಕ್ರಮಗಳು ನಡೆದಿರುತ್ತವೆ. **ರಸ್ತೆಗಳಿಗೆ ಸಂಬಂಧಪಟ್ಟ 4 ಕ್ರಯ ಪತ್ರಗಳನ್ನು ನೋಂದಣಿ ಮಾಡಿದ ಸಬ್‌ರಿಜಿಸ್ಟ್ರಾರ್‌ರವರು** ಮತ್ತು ಅವುಗಳನ್ನು ಸೇರಿಸಿ ರಕ್ತ ಸಂಬಂಧಿಕರಲ್ಲದಿದ್ದರೂ ಹಾಗೂ ಎಲ್ಲಾ ಕ್ರಯ ಪತ್ರಗಳು ಎಲ್ಲಾ 4 ಜನರ ಹೆಸರಿನಲ್ಲಿ ಜಂಟಿಯಾಗಿ ಕ್ರಯವಾಗದಿದ್ದರೂ, ಕ್ರೋಢೀಕೃತ ಖಾತೆಯನ್ನು ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಮಾಡಿ ಬಿಲ್ಡರ್ ಒಬ್ಬರಿಗೆ ಸಹಾಯ ಮಾಡಿರುವುದು ಎದ್ದು ಕಾಣುತ್ತಿರುವುದರಿಂದ ಸಂಬಂಧಿಸಿದವರ ಮೇಲೆ ಕಟ್ಟುನಿಟ್ಟಿನ ಕಾನೂನು ಕ್ರಮ ಜರುಗಿಸುವುದು.

* * * * *

## 5. ಬೈರಸಂದ್ರ ಕೆರೆಯಂಗಳವನ್ನೇ ಬ್ಯಾಂಕಿನಲ್ಲಿ ಒತ್ತೆಯಿಟ್ಟು ಸಾಲ ಪಡೆದಿರುವ ಬಗ್ಗೆ

ಬೆಂಗಳೂರು ನಗರ ಜಿಲ್ಲೆ ದಕ್ಷಿಣ ತಾಲ್ಲೂಕಿಗೆ ಸೇರಿದ ಉತ್ತರಹಳ್ಳಿ ಹೋಬಳಿ ಬೈರಸಂದ್ರ ಗ್ರಾಮದ ಸರ್ವೆ ನಂ. 56 ಕೆರೆಯಂಗಳವಾಗಿದ್ದು, ಇದರ ವಿಸ್ತೀರ್ಣ 15 ಎಕರೆ 11 ಗುಂಟೆಯಾಗಿರುತ್ತದೆ. ಸದರಿ ಕೆರೆಯನ್ನು ಸರ್ಕಾರದ **ಆದೇಶ ಸಂಖ್ಯೆ: PWD 82-IBM 85**, ದಿನಾಂಕ 11.02.1988 ರಂತೆ ಅರಣ್ಯ ಇಲಾಖೆಗೆ **ನೆಡುತೋಪು** (Tree Park) ಮಾಡುವ ಉದ್ದೇಶಕ್ಕೆ ವರ್ಗಾವಣೆ ಮಾಡಲಾಗಿದೆ. ಈ ಮಧ್ಯೆ ಮೆ: ಸಿಯಾರ ಪ್ರಾಪರ್ಟಿ ಡೆವಲಪರ್ಸ್ ಪ್ರೈ. ಲಿ.,ರವರು 1995 ರಲ್ಲಿ ಮೇಲ್ಕಂಡ ಸರ್ವೆ ನಂ. 56ರ 15 ಎಕರೆ 11 ಗುಂಟೆ ಪ್ರದೇಶವನ್ನು ಬೆಂಗಳೂರಿನ ಜಯನಗರದಲ್ಲಿರುವ ಇಂಡಿಯನ್ ಓವರ್‌ಸೀಸ್ ಬ್ಯಾಂಕಿಗೆ ಒತ್ತೆಯಿಟ್ಟು ಸಾಲ ಪಡೆದಿರುತ್ತಾರೆ. ಸದರಿ ಸಾಲವನ್ನು ಪಡೆದುಕೊಳ್ಳಲು ಮೇಲ್ಕಂಡ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ.ಸಿ.ಬೋಪಣ್ಣ ಮತ್ತು ಸದರಿ ಜಮೀನಿನ ಜಿ.ಪಿ.ಎ. ಹೋಲ್ಡರ್ ಶ್ರೀ ಹೆಚ್.ಸುಬ್ರಹ್ಮಣ್ಯರವರುಗಳು ಸಹಿ ಹಾಕಿರುತ್ತಾರೆ.

ಇಲ್ಲಿ ಇನ್ನೂ ಒಂದು ಸ್ವಾರಸ್ಯಕರ ಸಂಗತಿಯೇನೆಂದರೆ ದಿನಾಂಕ 13.04.1995 ರಂದು ಚನ್ನೈನ ಟಿ.ನಗರ ಶಾಖೆಗೆ ಸೇರಿದ ಸಿಟಿ ಯೂನಿಯನ್ ಬ್ಯಾಂಕ್ ನಿಯಮಿತದ ರೂ. 42,17,600–00ಗಳ ಚೆಕ್ ಒಂದು ಮೆ: ಸಿಯಾರ ಪ್ರಾಪರ್ಟಿ ಡೆವಲಪರ್ಸ್ ಪ್ರೈ.ಲಿ., ಹೆಸರಿನಲ್ಲಿದ್ದುದನ್ನು, ಬೆಂಗಳೂರು ಜಯನಗರ ಶಾಖೆಯ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಲ್ಲಿ ಹಾಜರುಪಡಿಸಿ, ಶ್ರೀ ಎಂ.ಸಿ.ಬೋಪಣ್ಣರವರಿಗೆ ಪಾವತಿಯಾಗಿರುವುದಾಗಿ ತಿಳಿದಿರುತ್ತದೆ.

ತರುವಾಯ ಸದರಿ ಚೆಕ್‌ನ್ನು ನಗದು ಪಾವತಿಗಾಗಿ ಚನ್ನೈನ ಸಿಟಿ ಯೂನಿಯನ್ ಬ್ಯಾಂಕ್‌ಗೆ ಕಳುಹಿಸಿಕೊಟ್ಟಿದ್ದು, ದಿನಾಂಕ 19.04.1995 ರಂದು ಅವರ ಖಾತೆಯಲ್ಲಿ ಅಗತ್ಯ ಹಣವಿಲ್ಲವೆಂಬ ಕಾರಣಕ್ಕಾಗಿ ಚೆಕ್ ತಿರಸ್ಕರಿಸಿ, ಹಿಂತಿರುಗಿಸಲ್ಪಟ್ಟಿದೆ. ಮತ್ತೊಂದು ಮಹತ್ವದ ಸಂಗತಿಯೇನೆಂದರೆ ಬೆಂಗಳೂರಿನ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನವರು ಚೆಕ್‌ನ್ನು ಚನ್ನೈ ಬ್ಯಾಂಕ್‌ಗೆ ಕಳುಹಿಸಿ, ಹಣವನ್ನು ಪಡೆಯದೆ ಅಥವಾ ಖಾತೆಯಲ್ಲಿ ಸಾಕಷ್ಟು ಹಣವಿದೆಯೇ ಅಥವಾ ಇಲ್ಲವೇ ಎಂಬುದನ್ನೂ ಸಹ ಖಾತರಿಪಡಿಸಿಕೊಳ್ಳದೆ ಮುಂಗಡವಾಗಿ ರೂ. 42,17,600–00ಗಳನ್ನು ಪಾವತಿ ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳಲು, ನೀಡಿರುವ ಹಣವನ್ನು ಸಾಲವಾಗಿ ಪರಿವರ್ತಿಸಿಕೊಳ್ಳಲು ಪ್ರತಿಯಾಗಿ ಬೆಲೆ ಬಾಳುವ ಆಸ್ತಿಯನ್ನು ಕೊಲೆಟರಲ್ ಸೆಕ್ಯೂರಿಟಿಯಾಗಿ ನೀಡಬೇಕೆಂದು ತಿಳಿಸಿರುವುದು ಕಂಡುಬಂದಿದೆ.

ಸಮಿತಿಗೆ ಬಂದಿರುವ ಮಾಹಿತಿಯಂತೆ ಶ್ರೀ ಎನ್.ಮನೋಹರ್ ಮತ್ತು ಇತರೆ ನಾಲ್ಕು ಜನರು, ಬೈರಸಂದ್ರ ಕೆರೆಯ 15 ಎಕರೆ 11 ಗುಂಟೆ ಪ್ರದೇಶವು ತಮ್ಮ ಪಿತ್ರಾರ್ಜಿತ ಆಸ್ತಿ ಎಂದು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದು, ಶ್ರೀ ಹೆಚ್.ಸುಬ್ರಹ್ಮಣ್ಯ ಎಂಬುವವರು ಅದರ ಜಿ.ಪಿ.ಎ. ಹೋಲ್ಡರ್ ಆಗಿ ಶ್ರೀ ಎಂ.ಸಿ.ಬೋಪಣ್ಣರವರ ಜೊತೆಗೂಡಿ ಕೆರೆಯಂಗಳವನ್ನು ಕೊಲೆಟರಲ್ ಸೆಕ್ಯೂರಿಟಿ ನೀಡಿ, ಬ್ಯಾಂಕ್‌ನಿಂದ ಚೆಕ್ ರೂಪದಲ್ಲಿ ಪಡೆದ ಹಣವನ್ನು ಸಾಲವಾಗಿ ಪರಿವರ್ತಿಸಿಕೊಂಡಿರುತ್ತಾರೆ.

ಜಿ.ಪಿ.ಎ. ಹೋಲ್ಡರ್ ಶ್ರೀ ಹೆಚ್.ಸುಬ್ರಹ್ಮಣ್ಯರವರು ಅದೇ ಬ್ಯಾಂಕ್‌ನಿಂದ ಈಗಾಗಲೇ ಕೊಲೆಟರಲ್ ಸೆಕ್ಯೂರಿಟಿ ನೀಡಿ, ಸಾಲ ಪಡೆದುಕೊಂಡಿದ್ದ ಕೆರೆಯಂಗಳ ಪ್ರದೇಶವನ್ನೇ ತೋರಿಸಿ ವೈಯಕ್ತಿಕ ಸಾಲವನ್ನು ಪಡೆದಿರುವುದಾಗಿ ತಿಳಿದಿರುತ್ತದೆ. ಬ್ಯಾಂಕಿನವರು ಪಡೆದ ಸಾಲವನ್ನು ಪಾವತಿಸಿಲ್ಲವೆಂದು ಜಿ.ಪಿ.ಎ. ಹೋಲ್ಡರ್ ಮತ್ತು ಜಮೀನುದಾರರಾದ ಶ್ರೀ ಹೆಚ್.ಸುಬ್ರಹ್ಮಣ್ಯ ರವರಿಗೆ ನೋಟೀಸ್ ನೀಡಿರುತ್ತಾರೆ. ಆಗ ಶ್ರೀ ಹೆಚ್.ಸುಬ್ರಹ್ಮಣ್ಯರವರು ವೈಯಕ್ತಿಕವಾಗಿ ಪಡೆದ ಸಾಲವನ್ನು ಪಾವತಿಸಿದ್ದು, ತಾನು ಕೊಲೆಟರಲ್ ಸೆಕ್ಯೂರಿಟಿಗಾಗಿ ಒತ್ತೆಯಿಟ್ಟಿದ್ದ ಭೂ ದಾಖಲೆಗಳನ್ನು ವಾಪಸ್ ಕೊಡುತ್ತಿಲ್ಲವೆಂದು, ಸದರಿ ದಾಖಲೆಗಳನ್ನು ಬೇರೆ ಸಾಲಕ್ಕೆ ದುರುಪಯೋಗ ಪಡಿಸಿಕೊಂಡಿರುವುದರಿಂದ ಅವುಗಳನ್ನು ಕೊಡಿಸಿಕೊಡಬೇಕೆಂದು ಬೆಂಗಳೂರಿನ ನಾಲ್ಕನೇ ಅಡಿಷನಲ್ ಮೆಟ್ರೋಪಾಲಿಟನ್ ಕೋರ್ಟಿನಲ್ಲಿ ಪಿ.ಸಿ.ಆರ್. ನಂ. 105/96 ರಂತೆ ಖಾಸಗಿ ಮೊಕದ್ದಮೆ ದಾಖಲು ಮಾಡಿರುತ್ತಾರೆ. ಸದರಿ ನ್ಯಾಯಾಲಯವು ಈ ವಿಷಯದ ಬಗ್ಗೆ ತನಿಖೆ ಮಾಡಿ, ವರದಿ ಮಾಡುವಂತೆ ಜಯನಗರ ಪೋಲೀಸ್ ಠಾಣೆಗೆ ಸೂಚಿಸಿರುತ್ತದೆ. ಈ ಹಂತದಲ್ಲಿ ಶ್ರೀ ಹೆಚ್.ಸುಬ್ರಹ್ಮಣ್ಯರವರು ಮತ್ತೊಂದು ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಬ್ಯಾಂಕಿನ ವಶದಲ್ಲಿರುವ ದೂರಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಬೇಕೆಂದು ವಿನಂತಿಸಿದ ಮೇಲೆ, ಪೋಲೀಸ್ ಇಲಾಖೆಯವರು ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಪುನ: ಇನ್ನೊಂದು ಅರ್ಜಿಯನ್ನು ಶ್ರೀ ಹೆಚ್.ಸುಬ್ರಹ್ಮಣ್ಯರವರು ನ್ಯಾಯಾಲಯಕ್ಕೆ ಸಲ್ಲಿಸಿ, ವಶಪಡಿಸಿಕೊಂಡಿರುವ ದಾಖಲೆಗಳನ್ನು ತನ್ನ ವಶಕ್ಕೆ ಕೊಡಿಸಿಕೊಡಬೇಕೆಂದು ವಿನಂತಿಸಿದ್ದರ ಮೇರೆಗೆ ನ್ಯಾಯಾಲಯವು ಸದರಿ ದಾಖಲೆಗಳನ್ನು ಶ್ರೀ ಹೆಚ್.ಸುಬ್ರಹ್ಮಣ್ಯರವರ ವಶಕ್ಕೆ ನೀಡಿರುತ್ತದೆ.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ರವರು 23ನೇ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ: ಸಿಆರ್‌ಆರ್‌ಪಿ/220/96 ಸಲ್ಲಿಸಿ, ಅಧೀನ ನ್ಯಾಯಾಲಯವು ಬ್ಯಾಂಕಿನ ಅಭಿಪ್ರಾಯವನ್ನೇ ಕೇಳದೆ ಬಹಳ ಪ್ರಾಮುಖ್ಯವಾದ ದಾಖಲೆಗಳನ್ನು ವಾಪಸ್ ಮಾಡಿರುವುದರ ಬಗ್ಗೆ ಪ್ರಶ್ನಿಸಿ, ಸದರಿ ದಾಖಲೆಗಳನ್ನೇ ಶ್ರೀ ಹೆಚ್.ಸುಬ್ರಹ್ಮಣ್ಯರವರೇ ಬ್ಯಾಂಕಿಗೆ ಸಾಲಕ್ಕಾಗಿ ಕೊಲೆಟರಲ್ ಸೆಕ್ಯೂರಿಟಿಗಾಗಿ ಕೊಟ್ಟಿರುವುದರಿಂದ ಬ್ಯಾಂಕಿಗೆ ವಾಪಸ್ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ. ಸದರಿ ವಿಷಯವನ್ನು ಪರಿಶೀಲಿಸಿದ ನ್ಯಾಯಾಲಯವು, ದಾಖಲೆಗಳನ್ನು ಬ್ಯಾಂಕಿನ ಸುಪರ್ದಿಗೆ ಕೊಡುವಂತೆ ಶ್ರೀ ಹೆಚ್.ಸುಬ್ರಹ್ಮಣ್ಯರವರಿಗೆ ಸೂಚಿಸಿತು. ಶ್ರೀ ಹೆಚ್.ಸುಬ್ರಹ್ಮಣ್ಯರವರು ಸದರಿ ದಾಖಲೆಗಳು ಆಟೋ ರಿಕ್ಷಾದಲ್ಲಿ ಪ್ರಯಾಣಿಸುವಾಗ ಕಳೆದು ಹೋಗಿರುವುದಾಗಿಯೂ, ಆ ಬಗ್ಗೆ ಜಯನಗರ ಪೋಲೀಸ್ ಠಾಣೆಯಲ್ಲಿ ದೂರನ್ನು (ನಂ. 109/96) ದಾಖಲಿಸಿರುವುದಾಗಿ ತಿಳಿಸಿರುತ್ತಾರೆ. ಅಲ್ಲಿಗೆ ಮೂಲ ದಾಖಲೆಯ ಪ್ರತಿಗಳು ಇಲ್ಲವಾಯಿತು.

ನಂತರ ಬ್ಯಾಂಕಿನವರು ತಮ್ಮಲ್ಲಿದ್ದ ಫೋಟೋ ಪ್ರತಿಗಳನ್ನು ಉಪಯೋಗಿಸಿಕೊಂಡು, ಪರಿವರ್ತಿಸಲಾದ ಸಾಲವನ್ನು ವಸೂಲು ಮಾಡಲಾಗದೆ Debt Recovery Tribunal ಮುಂದೆ ಪ್ರಕರಣ ದಾಖಲು ಮಾಡಿ, ಸದರಿ ಕೆರೆಯಂಗಳವನ್ನು Debt Recovery Tribunalರವರ ದಿನಾಂಕ 04.02.2005ರ ಆದೇಶದಂತೆ ಹರಾಜು ಮಾಡಲಾಯಿತು. ಹರಾಜಿನಲ್ಲಿ ಶ್ರೀ ಮುಸ್ತಾಕ್ ಅಹಮದ್ ಎಂಬುವವರು 6.70 ಕೋಟಿ ರೂಪಾಯಿಗಳಿಗೆ ಹರಾಜು ಕೂಗಿ, ಹರಾಜು ಮೊಬಲಗಿನ ಶೇ. 25 ರಷ್ಟನ್ನು ಪಾವತಿ ಮಾಡಿರುತ್ತಾರೆ.

ಈ ಮಧ್ಯೆ ರಿಸರ್ವ್ ಬ್ಯಾಂಕ್ ನೌಕರರ ವಸತಿದಾರರ ಕ್ಷೇಮಾಭಿವೃದ್ಧಿ ಸಂಘದವರು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 4293/2005ನ್ನು ಸಲ್ಲಿಸಿರುವ ಮೇರೆ, ಹರಾಜನ್ನು ಸ್ಥಿರೀಕರಣಗೊಳಿಸುವುದನ್ನು ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆಯು ಇನ್ನೂ ಮುಂದುವರೆದಿರುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆಯವರು ಕೆರೆಯಂಗಳವನ್ನು ನೆಡುತೋಪು ಮಾಡುವ ಉದ್ದೇಶಕ್ಕಾಗಿ ಅರಣ್ಯ ಇಲಾಖೆಗೆ ವಹಿಸಿದ್ದರೂ 2003 ರಲ್ಲಿ ಕೆರೆ ಅಭಿವೃದ್ಧಿಗಾಗಿ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಅನಾವಶ್ಯಕವಾಗಿ ವೆಚ್ಚ ಮಾಡಿರುತ್ತದೆ. ಅರಣ್ಯ ಇಲಾಖೆಯವರು **" ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರು"** ಎಂಬಂತೆ 2005ರಲ್ಲಿ, ತಿಲಕ್‌ನಗರ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿ, ಕೆರೆಯನ್ನು ಅಡವಿಟ್ಟುಕೊಂಡು ಸಾಲ ಕೊಟ್ಟವರ ಮೇಲೆ ಕ್ರಮಕೈಗೊಳ್ಳಬೇಕೆಂದು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುತ್ತಾರೆ. ಆದರೆ ಪೋಲೀಸ್ ಠಾಣೆಯವರು ಸಹ, ತನಿಖೆಯನ್ನು ಮಾಡಿ ಕಾನೂನು ರೀತ್ಯ ಕ್ರಮ ತೆಗೆದುಕೊಂಡಿರುವುದಿಲ್ಲ.

ಈ ಪ್ರಕರಣದಲ್ಲಿ, ಅತ್ಯಂತ ವ್ಯವಸ್ಥಿತವಾಗಿ ಸರ್ಕಾರದ ಆಸ್ತಿಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು, ಹಣಕಾಸಿನ ಸಂಸ್ಥೆಯೊಂದಿಗೆ ಅವ್ಯವಹಾರಗಳನ್ನು ಮಾಡಿರುವುದು ಸ್ಪಷ್ಟವಾಗಿರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯು ಸಂಬಂಧಿಸದ ಕಾಮಗಾರಿಗೆ ಅನಾವಶ್ಯಕವಾಗಿ ಸಾರ್ವಜನಿಕರ ಹಣವನ್ನು ಯಾವುದೇ ಒಂದು ಸ್ಪಷ್ಟ ಯೋಜನೆ ಇಲ್ಲದೆ ಅಪವ್ಯಯ ಮಾಡಿರುತ್ತದೆ. ಅರಣ್ಯ ಇಲಾಖೆಯು ಇದ್ದೂ ಇಲ್ಲದಂತೆ ಕೊನೆಗೆ ಏನೋ ಒಂದು ಕ್ರಮ ಜರುಗಿಸಬೇಕೆಂದು ದೂರು ನೀಡಿರುತ್ತದೆ.

ಆದುದರಿಂದ, ಈ ಒಂದು ಭಾರಿ ಅವ್ಯವಹಾರದಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವ, ಚೆಕ್ ಮೂಲಕ ನೀಡಿದ ಹಣವನ್ನು ಸಾಲವಾಗಿ ಪರಿವರ್ತಿಸಿರುವ ಹಣಕಾಸಿನ ಸಂಸ್ಥೆ, ಅನಾವಶ್ಯಕವಾಗಿ ಹಣ ಖರ್ಚು ಮಾಡಿರುವ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಮೂಕ ಪ್ರೇಕ್ಷಕರಂತಿರುವ ಅರಣ್ಯ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಸಮಿತಿಯು ಅಭಿಪ್ರಾಯಪಡುತ್ತದೆ.

* * * * *

### 6. ಬೆಂಗಳೂರು ಪೂರ್ವ ತಾಲ್ಲೂಕಿನ ಪಟ್ಟಂದೂರು ಅಗಹಾರದಲ್ಲಿರುವ 11 ಎಕರೆ 20 ಗುಂಟೆ ಸರ್ಕಾರಿ ಕೆರೆ ಅಂಗಳ ಜಮೀನನ್ನು ಖೋಟಾ ದಾಖಲೆ ಸೃಷ್ಟಿಸಿ ಕಬಳಿಸಿರುವುದು: (ರಿಟ್ ಅರ್ಜಿ ಸಂಖ್ಯೆ 39159/2002; ರಿಟ್ ಅರ್ಜಿ 4335/2006 ಮತ್ತು ಸಿಆರ್ ಪಿ ಸಂಖ್ಯೆ 62/2005, ದಿನಾಂಕ 08-03-2007):

ಪಟ್ಟಂದೂರು ಅಗ್ರಹಾರ ಗ್ರಾಮವು ಈ ಹಿಂದೆ ಒಂದು ಇನಾಂ ಗ್ರಾಮವಾಗಿತ್ತು. ಕೆಲವು ವರ್ಷಗಳಿಂದೀಚೆಗೆ ಇಲ್ಲಿ ಮಾಹಿತಿ ತಂತ್ರಜ್ಞಾನದ ಪಾರ್ಕ್ ಸ್ಥಾಪನೆಯಾಗಿದೆ. ಈಗ ಸಂಪೂರ್ಣವಾಗಿ ನಗರೀಕರಣಗೊಂಡಿದೆ. ಈ ಗ್ರಾಮದ ಸರ್ವೆ ನಂಬರ್ 54 ರಲ್ಲಿ 11 ಎಕರೆ 20 ಗುಂಟೆಗಳ ಅಳತೆಯ ಒಂದು ಕೆರೆ ಇದೆ. ಇದನ್ನು 1860 ರಿಂದಲೂ ಮೋಜಣಿ ಮತ್ತು ಕಂದಾಯ ವ್ಯವಸ್ಥೆ ಇಲಾಖೆಯ ರೆವಿನ್ಯೂ ದಾಖಲೆಗಳಲ್ಲಿ **"ಸರ್ಕಾರಿ ಕೆರೆ"** ಎಂದೇ ತೋರಿಸಲಾಗಿದೆ. 1959 ರಲ್ಲಿ ಸೇವಾ ಇನಾಮುಗಳನ್ನು ಒಂದು ಅಧಿನಿಯಮದ ಮೂಲಕ ರದ್ದುಪಡಿಸಲಾಯಿತು. ಹಾಗೂ ಅಂಥ ಎಲ್ಲಾ ಇನಾಮುಗಳು 01-02-1959 ರಿಂದ ಸರ್ಕಾರಕ್ಕೆ ನಿಹಿತವಾಗಿರುತ್ತದೆ. ಈ ಅಧಿನಿಯಮದಲ್ಲಿ, **"ಸಮುದಾಯ ಭೂಮಿಗಳು, ಬಂಜರು ಭೂಮಿಗಳು, ಗೋಮಾಳ ಭೂಮಿಗಳು, ಕಲ್ಲುಗಣಿಗಳು, ನದಿಗಳು, ತೊರೆಗಳು, ಕೆರೆಗಳು, ನೀರಾವರಿ ಕಾಮಗಾರಿಗಳನ್ನು"** ಹೊರತುಪಡಿಸಿ, ಉಳಿದ ಸ್ವತ್ತುಗಳ ಹಿಂದಿನ ಇನಾಮುದಾರರ ಅನುಭವದಾರಿಕೆಯ ಹಕ್ಕುಗಳ ನೊಂದಣಿಗಾಗಿ ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ, 1959 ರಿಂದ 1980 ರವರೆಗೂ ರೆವಿನ್ಯೂ ದಾಖಲೆಗಳಲ್ಲಿ ಈ ಭೂಮಿಯನ್ನು **"ಸರ್ಕಾರಿ ಕೆರೆ "**ಎಂದೇ ತೋರಿಸಲಾಗಿದೆ.

ಆದರೆ, ದಿನಾಂಕ 27-12-1980 ರಂದು, ಕೆ.ಬಿ.ಮುನಿವೆಂಕಟಪ್ಪ ಎಂಬವವರಿಗೆ ಅನುಭೋಗದ ಹಕ್ಕನ್ನು ಭೂ ಸುಧಾರಣಾ ನ್ಯಾಯಮಂಡಳಿಯು ನೀಡಿದೆ ಎಂದು ಅರ್ಥ ಬರುವ ಒಂದು ಖೋಟಾ ಹಾಗೂ ಮೋಸದ ಆದೇಶವನ್ನು ಸೃಷ್ಟಿಸಲಾಯಿತು. ತನಗೆ ಅದರ ಮೇಲೆ ಹಕ್ಕು ಸ್ವಾಮ್ಯವಿದೆ ಎಂಬುದನ್ನು ಘೋಷಿಸಬೇಕೆಂದು ಕೋರಿ ಈತ 1993 ರಲ್ಲಿ ದಾವೆಯನ್ನು ಹೂಡಿದರು. ಸಿವಿಲ್ ನ್ಯಾಯಾಲಯವು ದಿನಾಂಕ 24-01-1995 ರಂದು ಅವರ ಪರವಾಗಿ ಡಿಕ್ರಿ ನೀಡಿತು. "ಈ ಮೊಕದ್ದಮೆ ನಡೆಸಿದ ಸರ್ಕಾರಿ ವಕೀಲರು ಇದು ಅಪೀಲಿಗೆ ಅರ್ಹವಾದ ಮೊಕದ್ದಮೆ ಆಗಿಲ್ಲವೆಂದು ಅಭಿಪ್ರಾಯ ನೀಡಿದ್ದರು. ಸರ್ಕಾರಿ ಅಭಿಯೋಜನಾ ನಿರ್ದೇಶಕರು (ಸಿವಿಲ್) ಈ ವಿಚಿತ್ರ ಅಭಿಪ್ರಾಯಕ್ಕೆ ಸಹಮತಿ ನೀಡಿದರು." ಹೀಗಿದ್ದರೂ ಕೆಲವು ಕಂದಾಯ ಇಲಾಖೆಯ ಅಧಿಕಾರಿಗಳು ಡಿಕ್ರಿದಾರನ ಹೆಸರಿಗೆ ದಾಖಲೆಗಳ ಹಕ್ಕು ಬದಲಾವಣೆ ಮಾಡಲು ನಿರಾಕರಿಸಿ, ರೆವಿನ್ಯೂ ದಾಖಲೆಗಳಲ್ಲಿ ಈ ಭೂಮಿಯನ್ನು ಆರಂಭದಿಂದಲೂ ಕೆರೆಅಂಗಳವೆಂದು ತೋರಿಸಲಾಗಿರುವುದರಿಂದ ಇದು ಸರ್ಕಾರಿ ಕೆರೆ ಎಂದು ಬೊಟ್ಟು ಮಾಡಿ ತೋರಿಸಿದರು. ಹೀಗೆ ನಿರಾಕರಿಸಿದ ಮೇಲೆ, ಡಿಕ್ರಿದಾರನು 2001 ರಲ್ಲಿ ಒಂದು ಮೊಕದ್ದಮೆಯನ್ನು ದಾಖಲ್ಮಾಡಿದರು. ಸಿವಿಲ್ ನ್ಯಾಯಾಲಯದ ಆದೇಶ ಉಲ್ಲಂಘನೆಗಾಗಿ ವಿಭಾಗಾಧಿಕಾರಿ, ವಿಶೇಷ ಜಿಲ್ಲಾಧಿಕಾರಿ ಹಾಗೂ ತಹಶಿಲ್ದಾರರ ಬಂಧನಕ್ಕಾಗಿ ನ್ಯಾಯಾಲಯವು ಆದೇಶಿಸಿತು. ಸರ್ಕಾರವು, ಸಕಾಲದಲ್ಲಿ ಒಬ್ಬ ಸರ್ಕಾರಿ ವಕೀಲರನ್ನು ಒದಗಿಸದಿದ್ದರಿಂದ, ಈ ಆದೇಶದ ವಿರುದ್ಧ ತಹಶೀಲ್ದಾರರು ಒಬ್ಬ ಖಾಸಗಿ ವಕೀಲರನ್ನು ನೇಮಕಮಾಡಿಕೊಂಡು ತಮ್ಮ ಪ್ರತಿವಾದ ಸಮರ್ಥನೆ ಮಾಡಿಕೊಳ್ಳಬೇಕಾಯಿತು. ವಿಚಾರಣೆಯು ಮುಂದುವರೆದಂತೆ, ಈ ಅಧಿಕಾರಿಗಳ ಪರವಾಗಿ ಸರ್ಕಾರವು ವಕೀಲರನ್ನು ಒದಗಿಸಿ, ಉಚ್ಚನ್ಯಾಯಾಲಯದ ಮುಂದೆ ಪ್ರತಿವಾದ ಸಮರ್ಥನೆ ಮಾಡಿತು. ಅಷ್ಟೇ ಅಲ್ಲ ಸರ್ಕಾರವು ಉಚ್ಚನ್ಯಾಯಾಲಯದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿ, ಈ

ಪ್ರಕರಣಕ್ಕೆ ಆಧಾರವಾಗಿದ್ದ 27–12–1980ನೇ ದಿನಾಂಕದ ನ್ಯಾಯಮಂಡಳಿಯ ಆದೇಶವು ನಕಲಿ ದಾಖಲೆಗಳ ಸೃಷ್ಟಿ ಎಂದು ತಿಳಿಸಿ, ಪರಿಷ್ಕರಣ ಅರ್ಜಿಯನ್ನು ಸಲ್ಲಿಸುವಲ್ಲಿ ಆದ ವಿಳಂಬವನ್ನು ಮನ್ನಾ ಮಾಡುವಂತೆ ಕೋರಿಕೊಂಡಿತು.

ತನ್ನ ಮುಂದೆ ಇದ್ದ ವಿಷಯವು ವಿಳಂಬ ಮನ್ನಾ ಮಾಡುವುದು ಆಗಿದ್ದರೂ, ಉಚ್ಚ ನ್ಯಾಯಾಲಯವು ಮೊಕದ್ದಮೆಯನ್ನು ವಿವರವಾಗಿ ಪರಿಶೀಲಿಸಿ, ಮೋಜಣಿ ಇಲಾಖೆ ಹಾಗೂ ಕಂದಾಯ ಇಲಾಖೆಗಳ ಮೂಲ ದಾಖಲೆಗಳನ್ನು ಪರೀಕ್ಷಿಸಿತು.ಅರ್ಜಿ ಸ್ವೀಕರಿಸಲು ಭೂ ಸುಧಾರಣಾ ನ್ಯಾಯಮಂಡಲಿ ಮಾಡಿಕೊಂಡಿರುವ ನಮೂದುಗಳು ಖಂಡಿತ ಸುಳ್ಳು ಸೃಷ್ಟಿ ಎಂಬ ತೀರ್ಮಾನಕ್ಕೆ ಉಚ್ಚ ನ್ಯಾಯಾಲಯ ಬಂದಿತು. ಅಷ್ಟೇ ಅಲ್ಲ ಸಂಬಂಧ ಪಟ್ಟ ರಿಜಿಸ್ಟರಿನ ಕೊನೆಯ 70 ಪುಟಗಳನ್ನು ನೋಡಿದಾಗ ಅಧಿಕಾರಿಗಳು ಸದರಿ ಪುಸ್ತಕದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎಂಬುದು ಮೊದಲ ನೋಟಕ್ಕೇ ಎದ್ದುಕಾಣುತ್ತದೆ, ಅಲ್ಲದೆ ಈ ಯಾವ ನಮೂದುಗಳನ್ನೂ ವಾಡಿಕೆಯ ವ್ಯವಹಾರದ ಕಾಲದಲ್ಲಿ ಮಾಡಿರುವಂತೆ ಕಾಣುವುದಿಲ್ಲ ಎಂದು ಹೇಳಿರುತ್ತದೆ. ನ್ಯಾಯಾಲಯ ಮುಂದುವರಿದು, ಸದರಿ ಪ್ರಕರಣವು **"ಭಾರಿ ಅವ್ಯವಹಾರದ ಒಂದು ತುಣುಕು"** (Tip of the Iceberg) ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ನ್ಯಾಯಾಲಯವು 2007ರ ಮಾರ್ಚ್ 8ನೇ ದಿನಾಂಕದ ತನ್ನ ಆದೇಶದಲ್ಲಿ, ತೀರ್ಪಿನುದ್ದಕ್ಕೂ ಸರ್ಕಾರಿ ಅಧಿಕಾರಿಗಳು, ಸರ್ಕಾರಿ ವಕೀಲರುಗಳ ಮೇಲೆ ಮತ್ತು 1993 ರಲ್ಲಿ ಹೊರಡಿಸಿದ ಡಿಕ್ರಿ ವಿರುದ್ಧ ಕೂಡಲೇ ಅಪೀಲು ಸಲ್ಲಿಸದೇ ಇದ್ದ ಇಲಾಖೆಗಳ ಮೇಲೆ ಹಾಗೂ ಇವರುಗಳು ಏನೂ ತಪ್ಪು ಮಾಡಿಲ್ಲ ಎಂಬ ಖುಲಾಸೆ ಪತ್ರ ನೀಡಿದ ಲೋಕಾಯುಕ್ತದ

ಮೇಲೆ ಗದಾ ಪ್ರಹಾರವನ್ನು ಮಾಡಿದೆ. ಈ ಸಂಬಂಧದಲ್ಲಿ ಮಾನ್ಯ ನ್ಯಾಯಮೂರ್ತಿ ಎನ್. ಕುಮಾರ್‌ರವರು ಮಾಡಿರುವಂಥಹ ಟೀಕೆಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ :–

"33. ಸಲ್ಲಿಸಿರುವ ದಾಖಲೆಗಳನ್ನು ನೋಡಿದಾಗ ಪ್ರತಿಯೊಂದು ಹಂತದಲ್ಲೂ ಬೇಲಿಯೇ ಎದ್ದು ಹೊಲ ಮೇಯ್ದಂತೆ ಕಾಣುತ್ತದೆ. ಸಾರ್ವಜನಿಕ ಆಸ್ತಿಯನ್ನು ರಕ್ಷಿಸಬೇಕಾದವರೇ ಸರ್ಕಾರಕ್ಕೆ ಕೈ ಕೊಟ್ಟಿದ್ದಾರೆ. ಇವರು ವ್ಯಾಜ್ಯಗಳನ್ನು ನಡೆಸಿರುವಂಥಹ ರೀತಿ, ಸರ್ಕಾರಿ ಪ್ರತಿನಿಧಿಗಳು ಮತ್ತು ಅವರ ವಕೀಲರು ಸಾರ್ವಜನಿಕ ಹಿತಾಸಕ್ತಿಯನ್ನು ಕೈಬಿಟ್ಟಿರುವ ರೀತಿ ನಿಜಕ್ಕೂ ಆಘಾತಕಾರಿ. ಈ ವಿಷಯವನ್ನು ಲೋಕಾಯುಕ್ತರ ಗಮನಕ್ಕೆ ತಂದಾಗ ಅವರು ಸಾರ್ವಜನಿಕ ಹಿತಾಸಕ್ತಿಗೆ ಯಾವ ಧಕ್ಕೆಯೂ ಉಂಟಾಗಿಲ್ಲವೆಂದು ಈ ಅಧಿಕಾರಿಗಳಿಗೆ ಖುಲಾಸೆ ಚೀಟಿ ನೀಡಿದ್ದಾರೆ. ಇದಕ್ಕಿಂತ ದು:ಸ್ಥಿತಿ ಬೇಕೇ? ಇಂಥಹ ತಪ್ಪು ಸಲಹೆ ಮತ್ತು ವಿಶ್ವಾಸ ಭಂಗದಿಂದಾಗಿ ಸರ್ಕಾರ ತನಗೆ ಭೀಮಬಲ ಇದ್ದರೂ ಅಸಹಾಯಕವಾಗಿ ಕುಳಿತುಕೊಳ್ಳಬೇಕಾಗಿ ಬಂದಿದೆ.........

ಸರ್ಕಾರದ ಪರವಾಗಿ ಈ ಮೊಕದ್ದಮೆ ನಡೆಸಿದಂಥಹ ನುರಿತ ಸರ್ಕಾರಿ ವಕೀಲರು ಅಪೀಲು ಸಲ್ಲಿಸಬೇಕೆಂದು ಸರ್ಕಾರಕ್ಕೆ ಸೂಕ್ತ ಸಲಹೆ ನೀಡುವ ಬದಲು ಅಪೀಲು ಸಲ್ಲಿಸಲು ಇದು ಸೂಕ್ತ ಮೊಕದ್ದಮೆ ಅಲ್ಲವೇ ಅಲ್ಲ ಎಂಬ ಅಭಿಪ್ರಾಯ ನೀಡಿದ್ದಾರೆ. ಸಾರ್ವಜನಿಕ ಅಭಿಯೋಗಗಳ ನಿರ್ದೇಶಕರು (ಸಿವಿಲ್), ಇಂತಹ ಪ್ರಕರಣವನ್ನು ನ್ಯಾಯವಾಗಿ

ಪೂರ್ಣ ಮನಸ್ಸಿಟ್ಟು ಓದಿನೋಡಿ ತಮ್ಮ ಸ್ವತಂತ್ರ ನಿರ್ಧಾರವನ್ನು ನೀಡಬೇಕು. ಆದರೆ ಅವರು ಹಾಗೆ ತಮ್ಮ ಕರ್ತವ್ಯ ನಿರ್ವಹಿಸಲು ತಪ್ಪಿರುವುದೇ ಅಲ್ಲದೇ ಅಪೀಲು ಸಲ್ಲಿಸಬೇಕಾಗಿಲ್ಲ ಎಂಬ ಸರ್ಕಾರಿ ವಕೀಲರ ಅಭಿಪ್ರಾಯಕ್ಕೆ ತಮ್ಮ ಸಹಮತಿಯನ್ನು ನೀಡಿದ್ದಾರೆ ........ಇದೇ ವಿಷಯವನ್ನು ಕುರಿತು ಈ ನ್ಯಾಯಾಲಯದಲ್ಲಿ ರಿಟ್ ಅರ್ಜಿಯ ಮೂಲಕ ಈ ಪ್ರಕರಣವನ್ನು ನಡೆಸುತ್ತಿದ್ದ ನ್ಯಾಯವಾದಿಗಳು ತಮ್ಮ ಮನಸ್ಸನ್ನು ಅದಕ್ಕೆ ಸರಿಯಾಗಿ ನಿಯೋಜಿಸಿ ಕೆಲಸ ಮಾಡಿರುವಂತೆ ಕಾಣುವುದಿಲ್ಲ. ಹೀಗಾಗಿ, ಡಬ್ಲ್ಯೂಪಿ ನಂ.7908/79 ರ ವ್ಯವಹರಣೆಯಲ್ಲಿ ಈ ನ್ಯಾಯಾಲಯವು , ಸರ್ಕಾರಿ ಪ್ಲೀಡರವರು ನಂ. ಎಲ್‌ಆರ್‌ಎಫ್ 5063/79–80 ಈ ಪ್ರಕರಣದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಭೂ ನ್ಯಾಯಮಂಡಲಿಯ ದಾಖಲೆಗಳನ್ನು ಪರಿಶೀಲಿಸಿ ನೋಡಿ, ಭೂ ಮಂಜೂರಾತಿಯನ್ನು ಸರಿಯಾಗಿ ಮಾಡಲಾಗಿದೆ ಎಂದು ಒಪ್ಪಿಕೊಂಡಿರುತ್ತಾರೆ, ಎಂದು ದಾಖಲಿಸಿರುತ್ತದೆ. ....... ಇಷ್ಟಾದರೂ, ಒಂದು ಸಂತೋಷದ ಸಂಗತಿಯೇನೆಂದರೆ, ಆಡಳಿತದಲ್ಲಿ ಮತ್ತು ಜೀವನದಲ್ಲಿ ಒಂದು ನ್ಯಾಯಬದ್ಧತೆ ಇರುವ ಮತ್ತು ಸಾರ್ವಜನಿಕ ಒಳಿತನ್ನು ಕುರಿತು ಆಲೋಚಿಸುವ ಕೆಲವಾದರೂ ಅಧಿಕಾರಿಗಳು ಆಡಳಿತದ ರಂಗದಲ್ಲಿ ಇದ್ದಾರೆ. ಇಂಥ ಅಧಿಕಾರಿಗಳು ಸರಿಯಾದ ಸಮಯದಲ್ಲಿ ಈ ಷೆಡ್ಯೂಲ್ ಭೂಮಿಯು ಒಂದು ಸರ್ಕಾರಿ ಭೂಮಿ ಮತ್ತು ಇದು ಸರ್ಕಾರಿ ಕೆರೆ ಹಾಗೂ ಡಿಕ್ರಿದಾರರ ಹೆಸರಿಗೆ ಇದರ ಹಕ್ಕು ವರ್ಗಾವಣೆ ನಮೂದುಗಳನ್ನು ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಗಮನಿಸಿರುತ್ತಾರೆ. ಇವರು ಹಕ್ಕು ಬದಲಾವಣೆ ಮಾಡಿಸಿಕೊಳ್ಳುವ ಪ್ರಯತ್ನಕ್ಕೆ ತಡೆ ಒಡ್ಡಿದ್ದಾರೆ. ಸಿವಿಲ್ ನ್ಯಾಯಾಲಯದ ಡಿಕ್ರಿಗೆ ಅವಿಧೇಯತೆಯನ್ನು ತೋರಿಸಿದಕ್ಕಾಗಿ ಇವರುಗಳ ವಿರುದ್ಧ ದಸ್ತಗಿರಿ ವಾರಂಟು ಹೊರಡಿಸಿದ ಮೇಲೆ ಮಾತ್ರವೇ ಸರ್ಕಾರಕ್ಕೆ ತಾನು ಮಾಡಿರುವ ತಪ್ಪು ಮತ್ತು ತನ್ನ ಕಾನೂನು ಅಧಿಕಾರಿಗಳು ಮಾಡಿರುವ ವಿಶ್ವಾಸದ್ರೋಹ ಮನವರಿಕೆಯಾಗಿದೆ.

ಹಕ್ಕು ಮೂಲದ ಘೋಷಣೆಯ ಒಂದು ತೀರ್ಪಿನ ವಿರುದ್ಧ ಮತ್ತು ಡಿಕ್ರಿಯ ವಿರುದ್ಧ ಅಪೀಲು ಸಲ್ಲಿಸಬಹುದೇ ಹೊರತು ಪುನರೀಕ್ಷಣೆಯ ಅರ್ಜಿ ಸಲ್ಲಿಸುವಂತಿಲ್ಲ ಎಂಬುದು ಆಗತಾನೇ ಕಾನೂನು ವೃತ್ತಿಗೆ ಸೇರಿದವರಿಗೂ ಗೊತ್ತಿರುವ ವಿಷಯ. ಆದರೆ, ಸುಮಾರು ಹತ್ತು ವರ್ಷಗಳ ಕಾಲ ಸರ್ಕಾರಕ್ಕೆ ನೀಡಿರುವಂಥಹ ಕಾನೂನು ಸಲಹೆ ಇಂತಹದ್ದೇ ಆಗಿದೆ. "ಉಪ್ಪೇ ಸಪ್ಪೆ ಆದರೆ ಮಾಡೋದಿನ್ನೇನು! " ಸರ್ಕಾರದ ಆಸ್ತಿಯ ಮೇಲೆ ಖಾಸಗಿಯವರು ಹಕ್ಕುಗಳನ್ನು ಸಾಧಿಸಲು ನ್ಯಾಯಿಕ ಪ್ರಕ್ರಿಯೆಗಳನ್ನು ಬಳಸಿಕೊಳ್ಳಲಾಗಿದೆ. ನ್ಯಾಯಿಕ ಪ್ರಕ್ರಿಯೆಯ ದುರ್ಬಲತೆಗೆ ಇದಕ್ಕಿಂತ ಸ್ಪಷ್ಟ ನಿದರ್ಶನ ಬೇಕೇ?

ಕರ್ನಾಟಕವು ಭಾರತದ ಪ್ರಗತಿಪರ ರಾಜ್ಯಗಳಲ್ಲಿ ಒಂದು. ಬೆಂಗಳೂರು ಇಡೀ ವಿಶ್ವದ ಆಕರ್ಷಣೆಯ ಕೇಂದ್ರ .ಹೀಗಿರುವಾಗ, ಸರ್ಕಾರಕ್ಕೆ ಈ ತರಹದ ವೃತ್ತಿಪರ ಕಾನೂನು ಸಲಹೆ ದೊರೆಯುತ್ತಿರುವುದು ಎಂಥ ದುರ್ದೈವ! ಇನ್ನು ಬೆಂಗಳೂರಿನಲ್ಲಿ ಸ್ಥಿರಾಸ್ತಿ ಬೆಲೆ ಚಿನ್ನಕ್ಕೂ ಮಿಗಿಲಾಗಿದ್ದು, ಬೆಂಗಳೂರು ನಗರದಲ್ಲಿ ದಿನೇ ದಿನೇ ವರ್ಧಿಸುತ್ತಿರುವ ವ್ಯವಹಾರ ಆಗುವುದರಲ್ಲಿ ಆಶ್ಚರ್ಯವೇನಿಲ್ಲ. ಈಗ ಬಹುರಾಷ್ಟ್ರೀಯ ಕಂಪನಿಗಳು ಬೆಂಗಳೂರಿನಲ್ಲಿ ಪಾದವೂರಲು ಒಂದರೊಡನೊಂದು ಸ್ಪರ್ಧೆ ನಡೆಸುತ್ತಿವೆ. ಸಾಮಾಜಿಕ ಜೀವನದ ಎಲ್ಲಾ ರಂಗಗಳ ಮೇಲೂ ಉದಾರೀಕರಣ, ಜಾಗತೀಕರಣ ಮತ್ತು ಖಾಸಗೀಕರಣದ ಪರಿಣಾಮ ಉಂಟಾಗಿದೆ. ಇಂಥಹದರಲ್ಲಿ ತನಗೆ ದೊರೆಯುತ್ತಿರುವಂಥಹ ಈ ರೀತಿಯ ಕಾನೂನು ನೆರವನ್ನು ಇಟ್ಟುಕೊಂಡು, ಕಾನೂನು ಕ್ಷೇತ್ರದ ಸವಾಲುಗಳನ್ನು ಎದುರಿಸುವುದು ಮತ್ತು ತನ್ನ ಜನತೆ ಹಾಗೂ ಅವರ ಆಸ್ತಿಪಾಸ್ತಿಗಳನ್ನು ರಕ್ಷಿಸುವುದು ಸರ್ಕಾರಕ್ಕೆ ಸಾಧ್ಯವಾಗುತ್ತದೆಯೇ? ರಾಜ್ಯದಲ್ಲಿ ಕಾನೂನು ಪ್ರತಿಭೆಗೆ ಏನೂ ಕೊರತೆ

ಇಲ್ಲ. ಸಮಸ್ಯೆಯೇನೆಂದರೆ, ಸದರಿ ಪ್ರತಿಭೆಯನ್ನು ಬಳಸಿಕೊಳ್ಳುವಂಥ ಮನಸ್ಸು ಸರ್ಕಾರಕ್ಕೆ ಇದೆಯೇ? ಸರ್ಕಾರಕ್ಕೆ ಪ್ರಾಮಾಣಿಕವಾಗಿ ಸಾರ್ವಜನಿಕರನ್ನು ಮತ್ತು ಅವರ ಆಸ್ತಿಪಾಸ್ತಿಗಳನ್ನು ರಕ್ಷಿಸುವ ಮನಸ್ಸಿದ್ದರೆ, ನ್ಯಾಯಾಲಯದಲ್ಲಿ ತಮ್ಮ ಪರವಾಗಿ ವಾದಿಸುವುದಕ್ಕೆ ಆಯ್ಕೆ ಮಾಡಿಕೊಳ್ಳುವಂಥ ನ್ಯಾಯಾವಾದಿಗಳ ಗುಣಮಟ್ಟವೂ ಸೇರಿದಂತೆ, ಮೊದಲು ತನ್ನ ಕಂದಾಯ ಮತ್ತು ಕಾನೂನು ಇಲಾಖೆಯನ್ನು ಅಡಿಯಿಂದ ಮುಡಿಯವರೆಗೆ ಶುದ್ಧಿ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. "

ಉಚ್ಚ ನ್ಯಾಯಾಲಯವು ಈ ಆದೇಶದ ಪ್ರತಿಯನ್ನು ಸರ್ಕಾರಿ ಜಮೀನು ಒತ್ತುವರಿ ಕುರಿತ ವಿಧಾನಮಂಡಲದ ಸಮಿತಿಯ ಅಧ್ಯಕ್ಷರಿಗೆ ಕಳುಹಿಸಿಕೊಡಲು ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕಿನ ಭೂ ಸುಧಾರಣಾ ನ್ಯಾಯಮಂಡಲಿ ಇಟ್ಟುಕೊಂಡಿರುವ ಲೆಡ್ಜರ್ ಪುಸ್ತಕದಲ್ಲಿ ಅದರಲ್ಲೂ, ನ್ಯಾಯಾಲಯಕ್ಕೆ ಕಂಡುಬಂದಂತೆ, ಮೇಲ್ಬರಹಗಳು, ಹೊಡೆದುಹಾಕಿರುವುದು ಮತ್ತು ಹಸ್ತಕ್ಷೇಪಗಳನ್ನು ಮಾಡಿರುವ ಬಗ್ಗೆ ಅದರಲ್ಲಿಯೂ ಬಹಳವಾಗಿ ಕೊನೆಯ 70 ಪುಟಗಳಲ್ಲಿ ನಮೂದಾಗಿ ಕಂಡುಬಂದಿರುವ ಸಂಬಂಧದಲ್ಲಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಮಿತಿಗೆ ಸೂಚಿಸಿರುತ್ತದೆ.

* * * * *

## 7. ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಡ ಮನವಾರ್ತೆಕಾವಲ್ ಹಳ್ಳಿಯ 180 ಎಕರೆ ಸರ್ಕಾರಿ ಪಡ ಭೂಮಿಯನ್ನು ಕಬಳಿಸಿರುವುದು:-

1941ರ ಪೂರ್ವದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಡ ಮನವಾರ್ತೆ ಕಾವಲ್ (ಚೂಡನಹಳ್ಳಿ) ಗ್ರಾಮದ 310 ಎಕರೆ 18 ಗುಂಟೆ ವಿಸ್ತೀರ್ಣದ ಸರ್ವೆ ನಂ.137ರ ಭೂಮಿಯನ್ನು ಗ್ರಾಮಸ್ಥರಾದ ದೊಡ್ಡಹನುಮಯ್ಯ ಮತ್ತು ಇತರರು ಸಾಗುವಳಿ ಮಾಡುತ್ತಿದ್ದರು. ದಿನಾಂಕ 09-08-1941 ರಲ್ಲಿ ಕಂದಾಯ ಬಾಕಿಗಾಗಿ ಸರ್ಕಾರಕ್ಕೆ ವಹಿಸಿಕೊಂಡು ಭೂ ದಾಖಲೆಗಳಲ್ಲಿ ಇದನ್ನು **"ಸರ್ಕಾರಿ ಪಡ"** ಎಂದು ನಮೂದು ಮಾಡಿಕೊಂಡು ಬರಲಾಯಿತು.

1942 ರಲ್ಲಿ " ಹೆಚ್ಚು ಧಾನ್ಯ ಬೆಳೆಯಿರಿ "ಆಂದೋಲನದ ಅಡಿಯಲ್ಲಿ ಹನ್ನೊಂದು ಜನರಿಗೆ ತಲಾ 6 ಎಕರೆಗಳಂತೆ ಒಟ್ಟು, 66 ಎಕರೆಗಳ (ಹಂಗಾಮಿ) ಸಾಗುವಳಿಗೆ ಸರ್ಕಾರ ಅವಕಾಶ ಮಾಡಿಕೊಟ್ಟಿತ್ತು. ಈ ಹನ್ನೊಂದು ಜನರ ಹೆಸರು ಹೀಗಿದೆ:

| | | | |
|---|---|---|---|
| ವೆಂಕಟ ಭೋವಿ, | ಮುನಿಸ್ವಾಮಿ, | ಯಂಕಟ ಭೋವಿ, | ಕುಂಟ ಭೋವಿ, |
| ತಿಮ್ಮ ಭೋವಿ, | ಗುರುಸ್ವಾಮಿ ಭೋವಿ, | ಗುರುವ ಭೋವಿ, | ಚಿನ್ನಲಗ, |
| ಚಿನ್ನಕರಿಯ, | ವೆಂಕಟ ಮತ್ತು | ಹವಳ ಭೋವಿ | |

ತರುವಾಯ 1953-54 ರಲ್ಲಿ ಇದೇ 66 ಎಕರೆಗಳನ್ನು ಮೇಲ್ಕಂಡ ವ್ಯಕ್ತಿಗಳ ಹೆಸರಿಗೆ ತಲಾ 6 ಎಕರೆಗಳಂತೆ, ಮುಫತ್ತಾಗಿ ಕೊಟ್ಟು ಖಾಯಂ ಮಾಡಿರುವಂತೆ ಕಂಡುಬರುತ್ತದೆ.

ಹೀಗಿದ್ದರೂ, ತದನಂತರ ಪಹಣಿ ಪತ್ರಗಳಲ್ಲಿ ತಿದ್ದುಪಡಿ ಮಾಡಿ, ಹನ್ನೊಂದು ವ್ಯಕ್ತಿಗಳ ಬದಲಾಗಿ ಹದಿನೆಂಟು ವ್ಯಕ್ತಿಗಳಿಗೆ ತಲಾ **6** ಎಕರೆಗಳ ಬದಲಾಗಿ **16** ಎಕರೆಗಳನ್ನು ಮಂಜೂರು ಮಾಡಿರುವಂತೆ ಹಸ್ತಕ್ಷೇಪ ಮಾಡಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಅಂದರೆ ಮೂಲ **66** ಎಕರೆಗಳ ಬದಲಾಗಿ, ಒಟ್ಟು **288** ಎಕರೆಗಳನ್ನು ತೋರಿಸಿ, ಭೂಮಿ ಕಬಳಿಸಲಾಗಿದೆ. ಇವರು ಸೃಷ್ಟಿ ಮಾಡಿ ತೋರಿಸಿರುವ ಹೆಚ್ಚುವರಿ ಏಳು ಜನರ ಹೆಸರು ಹೀಗಿದೆ.

| | | | |
|---|---|---|---|
| ಕಬ್ಬಾಳ ಭೋವಿ, | ಈರ ಭೋವಿ, | ಚಿಕ್ಕಮಲ್ಲ, | ಖೂಟ ಭೋವಿ, |
| ಕುಳ್ಳ ಭೋವಿ, | ರಂಗ , | ಲಕ್ಷ್ಮಯ್ಯ | |

ಮೂಲ ಮಂಜೂರಾತಿಯನ್ನೇ ಈ ವ್ಯಕ್ತಿಗಳಿಗೆ ಮಾಡಲಾಗಿದೆಯೇ ಎಂಬುದು ಸಂಶಯಾಸ್ಪದ. ಏಕೆಂದರೆ 1942 ನೇ ಇಸವಿಯ ಸಂಬಂಧಪಟ್ಟ ಭೂಮಿ ರಿಜಿಸ್ಟರ್‌ನಲ್ಲಿ ಶ್ರೀ ವೆಂಕಟಾಭೋವಿ ಮತ್ತು ಇತರ 10 ಜನರು ಎಂದು ಒಟ್ಟಾಗಿ ತೋರಿಸಿ ತಲಾ 6 ಎಕರೆ ಭೂಮಿ ನೀಡಲಾಗಿದೆ ಎಂದು ಬರೆಯಲಾಗಿದೆ. ಆದರೆ ಸರಿಯಾದ ಕ್ರಮವೆಂದರೆ ಒಬ್ಬೊಬ್ಬ ವ್ಯಕ್ತಿ ಹೆಸರನ್ನು ಪ್ರತ್ಯೇಕ ಬರೆದು ಅವರಿಗೆ ನೀಡಿದ ಮಂಜೂರಾತಿಯನ್ನು ತಿಳಿಸಬೇಕು.

ವಿಚಿತ್ರವೆಂದರೆ, 1969 ರಲ್ಲಿ ಅಂದಿನ ತಹಶೀಲ್ದಾರ್ ತನ್ನ ಓ.ಎಂ.ಸಂಖ್ಯೆ:ಎಲ್‌ಎನ್‌ಡಿ 143/63–64, ದಿನಾಂಕ: 26–4–1969 ರಲ್ಲಿ ಜಿಲ್ಲಾಧಿಕಾರಿಗಳಿಗೆ ಈ ರೀತಿ ಸಲಹೆ ನೀಡಿದ್ದಾರೆ.

> **" ಈ ಹಿನ್ನೆಲೆಯಲ್ಲಿ 1942ನೇ ಸಾಲಿನಲ್ಲಿ ಮಾಡಲಾದ ಜಿಎಂಎಫ್ ಗ್ರ್ಯಾಂಟ್‌ನ್ನು ಮೇಲ್ಕಂಡ 18 ಜನರುಗಳ ಪರವಾಗಿ ಈಗಾಗಲೇ ವರದಿ ಮಾಡಿರುವಂತೆ ಎಕರೆಗೆ 100 ರೂ.ಗಳ ನಾಮ ಮಾತ್ರದ ಬೆಲೆ ಮೇಲೆ ಖಾಯಂಗೊಳಿಸಲು ಶಿಫಾರಸ್ಸು ಮಾಡಬಹುದು."**

ಆದರೆ, ಈ ಶಿಫಾರಸ್ಸಿನ ಅನ್ವಯ ಕ್ರಮಕೈಗೊಳ್ಳಲಿಲ್ಲ. ಹನ್ನೊಂದು ಮೂಲ ಹಂಚಿಕೆದಾರರಿಗೆ ತಲಾ 6 ಎಕರೆಗಳಂತೆ, 66 ಎಕರೆಗಳ ಮಂಜೂರಾತಿ ಮಾತ್ರ ಉಳಿಯಿತು.

ದಿನಾಂಕ 03.02.1968 ಮತ್ತು 08.01.1969ರಲ್ಲಿ ಖೋಡೆ ಕುಟುಂಬಕ್ಕೆ ಸೇರಿದ ಈ ಕೆಳಕಂಡ ವ್ಯಕ್ತಿಗಳು ಭೋವಿ (ಅನುಸೂಚಿತ ಜಾತಿ) ಸಮುದಾಯಕ್ಕೆ ಸೇರಿದ ಇದೇ ಹದಿನೆಂಟು ಜನರುಗಳಿಂದ ತಲಾ 10 ಎಕರೆಗಳಂತೆ 180 ಎಕರೆಗಳನ್ನು **"ಖರೀದಿ ಮಾಡಿದ್ದಾರೆ ":**

| | | | |
|---|---|---|---|
| ಕೆ.ಎಲ್. ಶ್ರೀಹರಿ, | ಕೆ.ಎಚ್.ಗುರುನಾಥ್, | ಕೆ.ಎಚ್.ಶ್ರೀನಿವಾಸ್, | ಕೆ.ಎಚ್.ರಾಧೇಶ್, |
| ಕೆ.ಎಂ.ಮಧುಸೂದನ್, | ಕೆ.ಪಿ.ವಾಸುದೇವ, | ಕೆ.ಪಿ.ಗಣೇಶನ್, | ಕೆ.ಎಲ್.ನಾರಾಯಣ ಸಾ |
| ಕೆ.ಎನ್.ಈಶ್ವರ ಸಾ, | ಕೆ.ಎಲ್.ಅನಂತಪದ್ಮನಾಭ ಸಾ | | |

(ಎಲ್ಲರ ವಾಸದ ವಿಳಾಸವನ್ನು ನಂ.9, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು– 560009 ಎಂದು ಕೊಡಲಾಗಿದೆ)

2001 ನೇ ಇಸವಿಯಲ್ಲಿ ನರಸಿಂಹಯ್ಯ ಎಂಬುವವರ ನೇತೃತ್ವದಲ್ಲಿ ಕೆಲವು ವ್ಯಕ್ತಿಗಳು ಉಚ್ಚ ನ್ಯಾಯಾಲಯದ ಮುಂದೆ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ನಂ.8636/ 2001 ಅನ್ನು ಹೂಡಿದರು. ಉಚ್ಚ ನ್ಯಾಯಾಲಯವು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗೆ ಭೂ ಕಂದಾಯ ಅಧಿನಿಯಮದ 136 (3) ಪ್ರಕರಣದ ಅಡಿಯಲ್ಲಿ ವ್ಯವಹರಣೆಯನ್ನು ಪ್ರಾರಂಭಿಸಿ, ನಾಲ್ಕು ವಾರಗಳ ಒಳಗೆ ಅವಶ್ಯವೆನಿಸುವಂಥ ಪರಿಹಾರ ಕ್ರಮಗಳನ್ನು ತೆಗೆದು ಕೊಳ್ಳಬೇಕೆಂದು ನಿರ್ದೇಶಿಸಿ, 12–6–2001 ರಂದು ಆದೇಶ ಹೊರಡಿಸಿದೆ.

ನ್ಯಾಯಾಲಯದ ಆದೇಶದ 28 ತಿಂಗಳ ನಂತರ ಅಂದಿನ ವಿಶೇಷ ಜಿಲ್ಲಾಧಿಕಾರಿಯವರು ದಿನಾಂಕ 10.10.2003ರಂದು ಕಡತ ಸಂಖ್ಯೆ ಆರ್‌ಆರ್‌ಟಿ(2) ಸಿಆರ್ 59/2000–01ಕ್ಕೆ ಸಂಬಂಧಿಸಿದಂತೆ ಆದೇಶಿಸಿ, 18 ಜನರಿಗೆ ತಲಾ 16 ಎಕರೆ ಭೂಮಿ ನೀಡಲಾಗಿದೆಯೆಂದು ಪಹಣಿಯಲ್ಲಿ ನಮೂದಾಗಿರುವುದು ಹಸ್ತಕ್ಷೇಪ ಎಂದು ಪರಿಗಣಿಸಿ, ಸದರಿ ನಮೂದುಗಳನ್ನು ರದ್ದು ಮಾಡಲು ಆದೇಶಿಸಿದರು.

ವಿಶೇಷ ಜಿಲ್ಲಾಧಿಕಾರಿಯವರ ಈ ಆದೇಶದ ವಿರುದ್ಧ , ಕೆ.ಎಲ್. ಶ್ರೀ ಹರಿ ಖೋಡೆ ಮತ್ತು ಅವರ ಕುಟುಂಬದ ಇತರ ಒಂಭತ್ತು ಮಂದಿ ರಿಟ್ ಅರ್ಜಿ.17777 ರಿಂದ 17780/2000ವರೆಗೆ (ಕೆ.ಎಲ್.ಆರ್.ಆರ್.ಎಸ್.) ರಿಟ್ ಅರ್ಜಿಗಳನ್ನು ಸಲ್ಲಿಸಿದರು. ಉಚ್ಚ ನ್ಯಾಯಾಲಯ ತನ್ನ ದಿನಾಂಕ 29-6-2004 ರ ಆದೇಶದ ಮೂಲಕ ಈ ವಿಷಯವನ್ನು ಹೊಸದಾಗಿ ವಿಚಾರಣೆಗೆ ಕಳುಹಿಸಿಕೊಟ್ಟಿತು. ವಿಶೇಷ ಜಿಲ್ಲಾಧಿಕಾರಿಯು ತನ್ನ ಆದೇಶ ಸಂಖ್ಯೆ ಆರ್.ಆರ್.ಟಿ.ಸಿ.ಆರ್.59/2000-01, ದಿನಾಂಕ 15-07-2005 ರ ಮೂಲಕ 18 ಜನಕ್ಕೆ 16 ಎಕರೆ ಭೂಮಿಯನ್ನು ಮಂಜೂರು ಮಾಡಿದ ನಮೂದುಗಳು ನಕಲಿ ಎಂದು ಮತ್ತು ಖೋಡೆಯವರು 18 ಜನರಿಂದ ತಲಾ 10 ಎಕರೆ ಭೂಮಿ ಖರೀದಿಸಿರುವುದಕ್ಕೆ ಯಾವ ಕಾನೂನಿನ ಸಿಂಧುತ್ವವೂ ಇಲ್ಲ ಹಾಗೂ ಆ 180 ಎಕರೆಗಳನ್ನು ಮತ್ತೆಸರ್ಕಾರಕ್ಕೆ ಬಿಟ್ಟುಕೊಡಬೇಕೆಂದು ತೀರ್ಪು ನೀಡಿದರು. ಖೋಡೆಯವರು ರಿಟ್ ಅರ್ಜಿಸಂಖ್ಯೆ 22819/2005 (ಕೆಎಲ್ಆರ್.ಆರ್ಎಸ್.) ಅನ್ನು ಉಚ್ಚ ನ್ಯಾಯಾಲಯದ ಮುಂದೆ ಮತ್ತೆ ಸಲ್ಲಿಸಿದ್ದಾರೆ. ಇದು ದಿನಾಂಕ 30-09-2005 ರಿಂದ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

2006ರ ಏಪ್ರಿಲ್ ಮಾಹೆಯಿಂದ ಮುನಿಯಪ್ಪ ತಂದೆ ಈರಚನ್ನಪ್ಪ ಓಬಿ ಚೂಡಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಉದಯಪುರ ಪೋಸ್ಟ್, ಬೆಂಗಳೂರು ದಕ್ಷಿಣ ತಾಲ್ಲೂಕು ಎಂಬುವವರು ಖೋಡೆ ಕುಟುಂಬದವರು, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಸರ್ಕಾರಿ ನ್ಯಾಯವಾದಿಗಳನ್ನು ಶಾಮೀಲು ಮಾಡಿಕೊಂಡು ಭೂ ಕಬಳಿಸಿದ್ದರ ವಿರುದ್ಧ ಉತ್ತಮ ಅಂಕಿಅಂಶವುಳ್ಳ ಅರ್ಜಿಗಳನ್ನು ಸರ್ಕಾರಕ್ಕೆ ಈ ಮುಂದಿನಂತೆ ನೀಡಿದ್ದಾರೆ.

| | |
|---|---|
| ಮುಖ್ಯಮಂತ್ರಿಗಳಿಗೆ ಅರ್ಜಿ (ಪ್ರತಿ ಕಂದಾಯ ಮಂತ್ರಿಗಳಿಗೆ) | ದಿನಾಂಕ 25-4-2006 |
| ಮುಖ್ಯಮಂತ್ರಿಗಳಿಗೆ ಅರ್ಜಿ (ಪ್ರತಿ ಕಂದಾಯ ಮಂತ್ರಿಗಳು, ಕಾನೂನು ಮಂತ್ರಿಗಳು / ಅಡ್ವೋಕೇಟ್ ಜನರಲ್ ಅವರಿಗೆ) | ದಿನಾಂಕ 10-5-2006 |
| ಮುಖ್ಯಮಂತ್ರಿಗಳಿಗೆ ಅರ್ಜಿ | ದಿನಾಂಕ 22-7-2006 |
| ಭೂಕಬಳಿಕೆ ಕುರಿತು ಜಂಟಿ ಸದನ ಸಮಿತಿ ಅಧ್ಯಕ್ಷರಿಗೆ ಅರ್ಜಿ | ದಿನಾಂಕ 28-8-2006 |

ಫಿರ್ಯಾದಿ ಮುನಿಯಪ್ಪನವರು 28-8-2006ರ ತಮ್ಮ ಕೊನೆಯ ಅರ್ಜಿಯಲ್ಲಿ ಮಿಕ್ಕ ವಿಷಯಗಳೊಂದಿಗೆ ಏನು ಹೇಳಿದ್ದಾರೆಂದರೆ 22819/2005ರ ರಿಟ್ ಅರ್ಜಿ 16ನೇ ಕೋರ್ಟ್‌ಹಾಲ್ ಮುಂದೆ 4 ಸಲ ವಿಚಾರಣೆಗೆ ಬಂದಾಗಲೂ ಸರ್ಕಾರಿ ಪ್ಲೀಡರ್ ಅವರು .... **"ಬಾಯಿಯನ್ನೇ ಬಿಡಲಿಲ್ಲ. ಸರ್ಕಾರದ ಪರವಾಗಿ ಏನೂ ವಾದ ಮಾಡಲಿಲ್ಲ. ಬೆಂಚು ಮೇಲೆ ಗೊಂಬೆ ಕುಳಿತಂತೆ ಕುಳಿತು ಪಿಳ ಪಿಳ ಕಣ್ಣು ಬಿಡುತ್ತಿದ್ದರು. ಭೂಕಬಳಿಕೆದಾರರಿಗೆ ಸಹಾಯ ಮಾಡಿಕೊಡುವುದಕ್ಕೋಸ್ಕರ ಸರ್ಕಾರಿ ವಕೀಲರು ಹೀಗೆ ಮಾಡುತ್ತಿದ್ದರು. ಮಹಾಸ್ವಾಮಿ, ಇದನ್ನೆಲ್ಲಾ ನಾನು ನನ್ನ ಸ್ವಂತ ಪ್ರಯೋಜನಕ್ಕಾಗಿ ಹೇಳುತ್ತಿಲ್ಲ. ಬೆಂಗಳೂರಿನಿಂದ 15 ಕಿಮಿ.ದೂರದಲ್ಲಷ್ಟೇ ಇರುವ ಈ ಅಮೂಲ್ಯ ಭೂಮಿಯನ್ನು ಕಂದಾಯ ಅಧಿಕಾರಿಗಳೊಂದಿಗೆ ಷಾಮಿಲಾಗಿ ಭೂಕಬಳಿಕೆದಾರರು ಕಬಳಿಸಿಕೊಳ್ಳುತ್ತಿರುವಾಗ ನೋಡ್ಕೊಂಡು ಸುಮ್ಮನೆ ಕೂರುವುದು ಸರಿಯಲ್ಲ. ಇದೇ ಭೂಮಿಯನ್ನು ಸರ್ಕಾರ ಇನ್ನಾವುದಾದರು ಸಾರ್ವಜನಿಕ ಚಟುವಟಿಕೆಗೆ ಬಳಸಿಕೊಳ್ಳಬಹುದು" ಎಂದು ಹೇಳಿದ್ದಾರೆ."**

ದಿನಾಂಕ 30–9–2005 ರಂದು ವಿಶೇಷ ಜಿಲ್ಲಾಧಿಕಾರಿಯವರ 15–7–2005ರ ಆದೇಶದ ವಿರುದ್ಧ ಖೋಡೆಯವರು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ ಡಬ್ಲ್ಯೂಪಿ 22819/2005 (ಕೆಎಲ್‌ಆರ್‌ಆರ್‌ಎಸ್) ಕಳೆದ 18 ತಿಂಗಳುಗಳಿಂದ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿದೆ. ಈ ಪ್ರಕರಣದಲ್ಲಿ ಹಾಜರಾಗುತ್ತಿರುವ ವಕೀಲರನ್ನು ಕರೆಸಿ ಸರ್ಕಾರವು ವಿವರಣೆ ಕೇಳಬೇಕು. **"ಎಷ್ಟೇ ಕೈಹಿಡಿತದ ಅಂದಾಜು ಮಾಡಿದರೂ ಎಕರೆಗೆ ಒಂದು ಕೋಟಿಯಂತೆ ಲೆಕ್ಕಾಚಾರ ಮಾಡಿದಾಗ ಕಂದಾಯ ಇಲಾಖೆ ಅಧಿಕಾರಿಗಳ ನಕಲಿ ದಾಖಲೆಗಳ ಆಧಾರದಲ್ಲಿ ಖೋಡೆಯವರು ಅಕ್ರಮವಾಗಿ ಅನುಭೋಗಿಸುತ್ತಿರುವ 180 ಎಕರೆಗಳ ಬೆಲೆ ರೂ.180 ಕೋಟಿಗಳಾಗುತ್ತವೆ."**

ಈ ರೀತಿ ಭೂ ಕಬಳಿಕೆಗೆ ಅನುವು ಮಾಡಿಕೊಟ್ಟ ಸಂಬಂಧಪಟ್ಟ ಅಧಿಕಾರಿಗಳಿಂದ ಸರ್ಕಾರವು ವಿವರಣೆ ಕೇಳಿ ವಿಶ್ವಾಸದ್ರೋಹ, ಸುಳ್ಳು ದಾಖಲೆ ಸೃಷ್ಟಿ ಇತ್ಯಾದಿ ಆಪಾದನೆ ಮೇಲೆ ಭಾರತ ದಂಡ ಸಂಹಿತೆ ಹಾಗೂ ಇತ್ತೀಚೆಗೆ ಜಾರಿಗೆ ತಂದ ಕಾನೂನಿನ ಮೇರೆಗೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಹೂಡಬೇಕಾದ ಅಗತ್ಯವಿದೆ. ಅಂದರೆ ವಂಚನೆ ದಿನಾಂಕದಿಂದ ಆ ಅವಧಿಯಲ್ಲಿ ಇದ್ದ ಗ್ರಾಮ ಲೆಕ್ಕಿಗರು, ಕಂದಾಯ ನಿರೀಕ್ಷಕರು, ತಹಶೀಲ್ದಾರ್‌ರು, ಉಪ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು/ವಿಶೇಷ ಜಿಲ್ಲಾಧಿಕಾರಿಗಳು **"ಭೂ ಕಂದಾಯ ಅಧಿನಿಯಮ** ಮತ್ತು **ಕೆಲವೊಂದು ಭೂಮಿ ಪರಭಾರೆ ನಿಷೇಧ ಅಧಿನಿಯಮ"** ಮುಂತಾದುವುಗಳ ಉಲ್ಲಂಘನೆ ಆಗಿರುವುದನ್ನು ಗಮನಿಸದೆಯೇ ಕ್ರಯ ಪತ್ರ ನೋಂದಾಯಿಸಿಕೊಂಡ ಸಬ್ ರಿಜಿಸ್ಟ್ರಾರ್ ಮತ್ತು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ಗಳ ಮೇಲೆಯು ಕಾನೂನಿನ ಕ್ರಮ ಜರುಗಿಸುವುದು.

* * * * *

**8. ಚೌಬೀನಾ ಸುಬ್ಬರಾವ್ ಧರ್ಮಾದಾಯ ಸಂಸ್ಥೆ ಪ್ರಕರಣ: ದಾನಿಯೊಬ್ಬರು ಉಯಿಲು ದಾನ ನೀಡಿದ 15 ಕೋಟಿ ಬೆಲೆ ಬಾಳುವಂತಹ 9770 ಚದರ ಅಡಿ ಭೂಮಿ ಮತ್ತು ಕಟ್ಟಡವನ್ನು ಬೆಂಗಳೂರು ಮಹಾನಗರಪಾಲಿಕೆ ಅಧಿಕಾರಿಗಳ ನೆರವಿನಿಂದ ಖಾಸಗಿ ವ್ಯಕ್ತಿಗಳು ಕಬಳಿಸುತ್ತಿರುವ ಬಗ್ಗೆ:**

ಚೌಬೀನಾ ಸುಬ್ಬರಾವ್ ಎಂಬ ದಾನಿಯೊಬ್ಬರು ಯಾವ ವಾರಸುದಾರರೂ ಇಲ್ಲದ ಕಾರಣ ದಿನಾಂಕ 4–11–1912 ರಲ್ಲಿ ಒಂದು ಉಯಿಲು ಬರೆದು 1913 ರಲ್ಲಿ ನಿಧನರಾದರು. ಅವರ ನೋಂದಾಯಿತ ವಿಲ್ ಪ್ರಕಾರ 908 ಚದರ ಮೀಟರ್ ನಷ್ಟು ಆಸ್ತಿಯು (9770 ಚದರ ಅಡಿ), ಚಾಮರಾಜಪೇಟೆ 3ನೇ ಮೇನ್, 3ನೇ ಕ್ರಾಸ್ ನಲ್ಲಿರುವ ಕಟ್ಟಡದ ಸಮೇತ ಆಸ್ತಿಯನ್ನು ತನ್ನ ಧರ್ಮಪತ್ನಿ ಕಾಲವಾದ ನಂತರ ಮುಜರಾಯಿ ಇಲಾಖೆಗೆ ಸೇರ ಬೇಕು ಎಂದು ಉಯಿಲು ದಾನ ಮಾಡಿರುತ್ತಾರೆ. ಆತನ ಪತ್ನಿ 1932 ರಲ್ಲಿ ನಿಧನರಾದರು ಮತ್ತು ಅಂದಿನಿಂದ 10 ಅಂಗಡಿ ಮಳಿಗೆಗಳು ಹಾಗೂ ಭೂಮಿ ಮುಜರಾಯಿ ಇಲಾಖೆಯ ವಶಕ್ಕೆ ಬಂತು. ಉಯಿಲು ಪ್ರಕಾರ ಬರುವ ಆದಾಯದಿಂದ ಇಲಾಖೆಯು ಕೆಲವೊಂದು ನಿರ್ದಿಷ್ಟ ದೇವಾಲಯಗಳ ಪೂಜಾ ಕಾರ್ಯಗಳನ್ನು ನಡೆಸಬೇಕೆಂದು ತಿಳಿಸಲಾಗಿದೆ.

ಈ ಸ್ವತ್ತು ಚಾಮರಾಜಪೇಟೆ ಮಧ್ಯ ಭಾಗದಲ್ಲಿದ್ದು ಎಷ್ಟೇ ಕೈಹಿಡಿತದ ಅಂದಾಜು ಮಾಡಿದರೂ ಚದರಡಿಗೆ ರೂ.15,000 ದ ಲೆಕ್ಕಚಾರದಲ್ಲಿ ರೂ.15 ಕೋಟಿ ಬೆಲೆ ಬಾಳುವಂತಹುದು. ಉಯಿಲಿನಂತೆ 1932 ರಿಂದ ಮುಜರಾಯಿ ಇಲಾಖೆಯ ವಶದಲ್ಲಿರುತ್ತದೆ. 1972ರಲ್ಲಿ ಮೋಜಣಿ ಇಲಾಖೆ ನಿರ್ದೇಶಕರು ನಡೆಸಿದ ನಗರ ಮೋಜಣಿ ಪ್ರಕಾರ ನಗರ ಮಾಪನ ಸಂಖ್ಯೆ 1456 ನ್ನು ಹೊಂದಿರುವ 908.3 ಚದರ ಮೀಟರ್ ಅಳತೆಯ ಸ್ವತ್ತು ಚೌಬೀನಾ ಸುಬ್ಬರಾವ್ ದತ್ತಿ – ಮುಜರಾಯಿ ಇಲಾಖೆ ಸ್ವತ್ತು– ಎಂದು ಆಸ್ತಿ ಪ್ರಕಟಣೆ ಪತ್ರದಲ್ಲಿ ದಿನಾಂಕ 25–7–1972 ನಮೂದಾಗಿರುತ್ತದೆ.

ಹೀಗಿದ್ದರೂ, ಬೆಂಗಳೂರು ಮಹಾನಗರಪಾಲಿಕೆಯ ಗುಮಾಸ್ತನಾದ ಚಾಮರಾಜಪೇಟೆ ನಿವಾಸಿ ಶ್ರೀ ಟಿ.ಜಿ.ರಾಮಚಂದ್ರ ಎಂಬಾತ ಇನ್ನೊಬ್ಬ ವ್ಯಕ್ತಿಯೊಂದಿಗೆ 75 ಲಕ್ಷ ರೂಪಾಯಿಗೆ **90' x 108'** ವಿಸ್ತೀರ್ಣದ ಮತ್ತು ನಾಲ್ಕು ಕಟ್ಟಡಗಳನ್ನುಳ್ಳ ಇಡೀ ಆಸ್ತಿಯ ಖರೀದಿಗಾಗಿ ಒಂದು ಖರೀದಿ ಒಪ್ಪಂದ ಮಾಡಿಕೊಂಡಿರುತ್ತಾರೆ. ಇದರಲ್ಲಿ 25,000 ರೂಪಾಯಿಗಳನ್ನು ಮುಂಗಡವಾಗಿ ನೀಡುವುದು, ಶೇಕಡ 50 ರಷ್ಟನ್ನು "ಮೊಕದ್ದಮೆ ಏನಾದರೂ ಇದ್ದರೆ" ಅದು ವಿಲೆ ಆದ ನಂತರ ಕೊಡುವುದು ಮತ್ತು ಉಳಿದ ಶೇಕಡ 50 ರಷ್ಟನ್ನು ಖಾತೆಯು **"ಮಾರಾಟದಾರರ ಹೆಸರಿಗೆ" ವರ್ಗಾವಣೆ ಆದ ಮೇಲೆ ಮತ್ತು ಮಾರಾಟ ನೋಂದಣಿ ಆದ ಮೇಲೆ ಕೊಡುವುದು ಎಂದು ಕ್ರಯದ ಕರಾರು ಒಪ್ಪಂದವಾಗಿರುತ್ತದೆ."** ಇದರಿಂದ ಸ್ಪಷ್ಟವಾಗುವುದೇನಂದರೆ, ಆಸ್ತಿಗೂ ತಮಗೂ ಏನೇನೂ ಸಂಬಂಧವಿಲ್ಲದಂತಹ **"ಮಾರಾಟಗಾರರಾದ" ಶ್ರೀ ಸಿ.ಆರ್.ಶಾಮಣ್ಣ ಮತ್ತು ಶ್ರೀ ಎಸ್.ವೆಂಕಟೇಶ್** ಇವರ ಹೆಸರಿಗೆ ಖಾತೆ ವರ್ಗಾವಣೆ ಆಗುವಂತೆ ನೋಡಿಕೊಳ್ಳುವ ಪಾತ್ರ ಬೆಂಗಳೂರು ಮಹಾನಗರಪಾಲಿಕೆ ಗುಮಾಸ್ತನಾದ **ಟಿ.ಜಿ..ರಾಮಚಂದ್ರ**ನದು ಎಂದು ತಿಳಿಯುತ್ತದೆ.

ಇನ್ನೊಂದು ಸ್ವಾರಸ್ಯಕರ ವಿಷಯವೆನೆಂದರೆ, ಶ್ರೀ ಚೌಬೀನಾ ಸುಬ್ಬರಾವ್‌ರವರು ದಿನಾಂಕ 08–11–1912 ರಲ್ಲಿ (ಅಂದರೆ ನೊಂದಣಿ ಆದ ಮೂಲ ಉಯಿಲಿನ ದಿನಾಂಕದಿಂದ 4 ದಿನಗಳು ಕಳೆದ ಮೇಲೆ) ಬರೆದಿದ್ದಾರೆ ಎಂದು

ಹೇಳುವಂತಹ ನೊಂದಣಿ ಆಗದೇ ಇರುವ ಮತ್ತೊಂದು ಉಯಿಲು 2003 ರಲ್ಲಿ " **ಅಂದರೆ 91 ವರ್ಷಗಳ ತರುವಾಯ** "ಸಹಾಯಕ ಕಂದಾಯಾಧಿಕಾರಿಯವರಾದ ಶ್ರೀನಿವಾಸಲು ಎಂಬುವವರ ಮುಂದೆ ಪ್ರತ್ಯಕ್ಷವಾಯಿತು. ಇದರ ಆಧಾರದ ಮೇಲೆ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಯವರು ಖಾತೆಯನ್ನು ಸಂಖ್ಯೆ: ಡಿಎ(ಸಿ)46 ಪಿಆರ್5/03-04 ರಲ್ಲಿ ಶ್ರೀ ಸಿ.ಆರ್.ಶಾಮಣ್ಣ ಮತ್ತು ಶ್ರೀ ಎಸ್.ವೆಂಕಟೇಶ್ ಎಂಬುವವರ ಹೆಸರಿಗೆ ದಾಖಲಿಸಿದರು.

ಈ ಖಾತೆ ಬದಲಾವಣೆಗೆ ತಕರಾರು ಎತ್ತಿ ಮುಜರಾಯಿ ಇಲಾಖೆಯು ಒಂದು ಪುನರೀಕ್ಷಣಾ ಅರ್ಜಿಯನ್ನು ಬೆಂಗಳೂರು ಮಹಾನಗರಪಾಲಿಕೆಯ ಪಶ್ಚಿಮ ವಲಯದ ಜಂಟಿ ಆಯುಕ್ತರ ಮುಂದೆ ಅರ್ಜಿ ಸಂಖ್ಯೆ 10/2005-06 ರಲ್ಲಿ ದಾಖಲು ಮಾಡಿತು. ಜಂಟಿ ಆಯುಕ್ತರು ಸಾರಾಸಗಟಾಗಿ ಮತ್ತು ಏಕಪಕ್ಷೀಯವಾಗಿ ಈ ಮುಂದಿನ ಮುಖ್ಯ ಸಂಗತಿಗಳನ್ನು ಉಪೇಕ್ಷಿಸಿದರು. ಮುಜರಾಯಿ ಇಲಾಖೆಯ ವಾದವನ್ನು ಸರಿಯಾಗಿ ಆಲಿಸದೆ ತನ್ನ ಮುಂದೆ ಇರಿಸಲಾದ ದಸ್ತಾವೇಜುಗಳ ಬಗ್ಗೆ ಪರಿಪೂರ್ಣವಾಗಿ ಪರಿಶೀಲನೆ ಮಾಡದೆ, ಉದ್ದೇಶಪೂರ್ವಕವಾಗಿ ಭೂ ಕಬಳಿಕೆದಾರರಿಗೆ ನೆರವು ನೀಡಿರುತ್ತಾರೆ.

❖ ಭೂ ಕಬಳಿಕೆದಾರರಾದ ಸಿ.ಆರ್.ಶಾಮಣ್ಣ ಮತ್ತು ಎಸ್.ವೆಂಕಟೇಶ್‌ರವರುಗಳು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಯವರ ಮುಂದೆ ಆಸ್ತಿಗೆ ತಾವು ಹಕ್ಕುಳ್ಳ ಮಾಲೀಕರು ಎಂದು ಘೋಷಿಸಬೇಕೆಂದು ಹಾಕಿಕೊಂಡ ಅರ್ಜಿಯನ್ನು ಸದರಿ ವಿಶೇಷ ಜಿಲ್ಲಾಧಿಕಾರಿಯವರು ವಜಾ ಮಾಡಿ **10-5-2006** ರಂದು ಒಂದು ಸವಿವರ ಆದೇಶ ನೀಡಿರುತ್ತಾರೆ. **"ಅದರಲ್ಲಿ ಅವರು ಬೆಂಗಳೂರು ಮಹಾನಗರಪಾಲಿಕೆಯಿಂದ ಪ್ರಶ್ನಿತ ಸ್ವತ್ತಿನ "ಹಕ್ಕು ವರ್ಗಾವಣೆ ಯನ್ನು" ತನ್ನ ಹೆಸರಿಗೆ ಪಡೆಯಲು, ಆಸ್ತಿ ನಿರ್ವಹಿಸಿಕೊಂಡು ಬರಲು, ಲೇಟ್ ಚೌಬೀನಾ ಸುಬ್ಬರಾವ್ ಅವರು ಬರೆದ ಉಯಿಲಿನಲ್ಲಿ ವಿವರವಾಗಿ ಹೇಳಿರುವ ಕೆಲವಾರು ಸೇವೆಗಳನ್ನು ನಡೆಸಲು ಮುಜರಾಯಿ ಇಲಾಖೆ ಹಕ್ಕು ಹೊಂದಿರುತ್ತದೆ....".** ಎಂದು ತೀರ್ಪು ನೀಡಿರುತ್ತಾರೆ. ಅಂದಿನ ಜಂಟಿ ಆಯುಕ್ತರು ದಿನಾಂಕ 06-07-2006ರ ತಮ್ಮ ಆದೇಶದ ಪ್ಯಾರ 28 ರಲ್ಲಿ (ಅಂದರೆ ವಿಶೇಷ ಜಿಲ್ಲಾಧಿಕಾರಿಯವರ ಆದೇಶ ಬಂದ ಸುಮಾರು ಎರಡು ತಿಂಗಳ ತರುವಾಯ) ಈ ಆದೇಶ ನೋಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆದರೆ ಈ ಮುಂದಿನ ಹಾಸ್ಯಾಸ್ಪದ ಹಾಗೂ ನ್ಯಾಯಬಾಹಿರ ಆಧಾರಗಳ ಮೇಲೆ ವಿಶೇಷ ಜಿಲ್ಲಾಧಿಕಾರಿಯ ಆದೇಶಗಳನ್ನು ಕಡೆಗಣಿಸುತ್ತಾರೆ.

" ಪ್ಯಾರಾ 28. ಈ ಪ್ರಕರಣವನ್ನು ಕುರಿತು ಆದೇಶ ನೀಡುವ ಹಂತದ ಹೊತ್ತಿಗೆ ಅರ್ಜಿದಾರರು ಎಂ.ಎ. ನಂ. 7/04-05 ರಲ್ಲಿ, ವಿಶೇಷ ಜಿಲ್ಲಾಧಿಕಾರಿಗಳು ದಿನಾಂಕ 10-05-2005 ರಂದು ಹೊರಡಿಸಿದ ಆದೇಶದ ಒಂದು ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಈ ಆದೇಶದಲ್ಲಿ ಸದರಿ ಸ್ವತ್ತುಗಳು ಮುಜರಾಯಿ ಇಲಾಖೆಗೆ ಸೇರಿದವು ಎಂದು ತೀರ್ಮಾನಿಸಲಾಗಿದೆ. ಇದರಿಂದ ಈ ವಿವಾದವು ಸಹಾಯಕ ಕಂದಾಯಾಧಿಕಾರಿ (ಚಾಮರಾಜಪೇಟೆ) ಯವರು ಪ್ರಶ್ನಿತ ಆದೇಶಗಳನ್ನು ಹೊರಡಿಸಿದ ತರುವಾಯದ್ದು ಎಂದು ಕಂಡುಬರುತ್ತದೆ ಇದನ್ನು ಮತ್ತು

*ಇಬ್ಬರು ಪಕ್ಷಕಾರರು ಹಾಜರುಪಡಿಸಿದ ಇತರ ದಾಖಲೆಯನ್ನೂ ಓದಿ ನೋಡಿದಾಗ ಈ ಆದೇಶವು ಅರ್ಜಿದಾರರಿಗೆ ಯಾವ ರೀತಿಯಲ್ಲೂ ಸಹಾಯ ಮಾಡುತ್ತಿಲ್ಲವೆಂಬ ಸ್ಪಷ್ಟ ಅಭಿಪ್ರಾಯಕ್ಕೆ ನಾನು ಬಂದಿರುತ್ತೇನೆ. ವಿಶೇಷ ಜಿಲ್ಲಾಧಿಕಾರಿಗಳು ಹೊರಡಿಸಿದ ಆದೇಶಗಳು ಸಂಬಂಧಪಟ್ಟ ಕಂದಾಯ ಅಧಿಕಾರಿಗಳು ಹೊರಡಿಸಿದ ಆದೇಶಗಳ ತರುವಾಯ ನೀಡಿದ್ದ ವಾಗಿವೆ. ನಾನು ಮಾಡಿರುವ ಚರ್ಚೆಗಳು ಮತ್ತು ನಾನು ಬಂದಿರುವ ತೀರ್ಮಾನಗಳೇನಿದ್ದರೂ ನನ್ನ ಮುಂದೆ ವಿವಾದದಲ್ಲಿರುವ ಪ್ರಶ್ನೆಯನ್ನು ಬಗೆಹರಿಸುವ ಉದ್ದೇಶಕ್ಕಾಗಿ ಮಾತ್ರ ವಾಗಿರುತ್ತದೆ. "*

❖ ಭೂ ಕಬಳಿಕೆದಾರರಿಗೆ ಖಾತೆ ಬದಲಾಯಿಸಿಕೊಡುವುದರಲ್ಲಿ ಬೆಂಗಳೂರು ಮಹಾ ನಗರಪಾಲಿಕೆ ನೌಕರ ಟಿ.ಜಿ.ರಾಮಚಂದ್ರ ಷಾಮಿಲಾಗಿದ್ದಾರೆ ಎಂಬ ಅಂಶವನ್ನು ಮುಜರಾಯಿ ಇಲಾಖೆಯವರು ಜಂಟಿ ಕಮೀಷನರವರ ಗಮನಕ್ಕೆ ತಂದಿದ್ದಾರೆ. ಈ ಅಂಶವನ್ನು ಜಂಟಿ ಕಮೀಷನರ್, ತನ್ನ ಆದೇಶದ 16ನೇ ಪ್ಯಾರಾದಲ್ಲಿ ದಾಖಲು ಮಾಡಿದ್ದಾರೆ. ಆದರೆ, ಮುಂದಿನ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ. *"ಹಾರಿಕೆ ಹೇಳಿಕೆಗಳಿಂದ ಏನೂ ಸಹಾಯ ವಾಗುವುದಿಲ್ಲ. ನಂಬಲರ್ಹ ರುಜುವಾತುಗಳನ್ನು ಕೇವಲ ಅನಿಸಿಕೆಗಳು ಮತ್ತು ಊಹೆಗಳಿಂದ ತೊಡೆದುಹಾಕಲು ಬರುವುದಿಲ್ಲ."* ವಿಷಯ ಏನೆಂದರೆ, ಸದರಿ ಗುಮಾಸ್ತ ಶ್ರೀ ಟಿ.ಜಿ.ರಾಮಚಂದ್ರ, ಜಂಟಿ ಆಯುಕ್ತರ ಅಡಿಯಲ್ಲಿ ಕೆಲಸ ಮಾಡುತ್ತಿದ್ದು, ಈತ 75 ಲಕ್ಷ ರೂಪಾಯಿಗಳಿಗೆ (ಅದಕ್ಕಿಂತ ಕಡಿಮೆ ಅಲ್ಲ) ಅದೇ ಸ್ವತ್ತನ್ನು ಕೊಂಡುಕೊಳ್ಳುವ ಪಕ್ಷಕಾರನಾಗಿದ್ದರು. ಸದರಿ ಕ್ರಯದ ಒಪ್ಪಂದ ಪತ್ರವನ್ನು 50 ರೂಪಾಯಿ ಸ್ಟ್ಯಾಂಪ್ ಶುಲ್ಕ ಸಂದಾಯ ಮಾಡಿ, ದಿನಾಂಕ 06-09-2003 ರಂದು ನೊಂದಾಯಿಸಲಾಗಿದೆ. ಕರ್ನಾಟಕ ಆಡಳಿತ ಸೇವೆಯಲ್ಲಿರುವ ಹಿರಿಯ ಜಂಟಿ ಆಯುಕ್ತರಲ್ಲದಿದ್ದರೂ, ಸ್ವಲ್ಪ ವ್ಯವಹಾರ ಜ್ಞಾನವುಳ್ಳ ಯಾರೇ ವ್ಯಕ್ತಿಯಾಗಿದ್ದರೂ ಅವರು ತನ್ನ ಮೂಗಿನ ಕೆಳಗೆ ಇಂಥ ಹೀನ ವ್ಯವಹಾರ ಮಾಡುತ್ತಿದ್ದ ಗುಮಾಸ್ತರ ಪಾತ್ರ ಏನು ಎಂಬುದನ್ನು ವಿಚಾರಣೆ ನಡೆಸದೇ ಬಿಡುತ್ತಿರಲಿಲ್ಲ.

❖ ಮುಜರಾಯಿ ಇಲಾಖೆಯವರು, ಮಾನ್ಯ ಸಹಾಯಕ ಕಂದಾಯ ಅಧಿಕಾರಿಗಳು ಎರಡನೇ ಉಯಿಲಿನ ಆಧಾರದ ಮೇಲೆ ಖಾತೆಯನ್ನು ಸರ್ಕಾರಿ ಇಲಾಖೆಯಿಂದ ಇಬ್ಬರು ಭೂಗಳ್ಳರಿಗೆ ವರ್ಗಾವಣೆ ಮಾಡಿದ್ದರೋ (ಮತ್ತು ಯಾವುದರ ಆಧಾರದ ಮೇಲೆ ಜಂಟಿ ಆಯುಕ್ತರು ಅದನ್ನು ಎತ್ತಿ ಹಿಡಿದರೋ), ಆ ಎರಡನೇ ಉಯಿಲು ನಕಲಿ ಉಯಿಲು ಇದು ದಿನಾಂಕ 08-11-1912 ನೇ ದಿನಾಂಕದ್ದು, ಸುಮಾರು 91 ವರ್ಷಗಳು ಕುಂಭಕರ್ಣ ನಿದ್ದೆಯಲ್ಲಿದ್ದು, ಇದ್ದಕ್ಕಿದ್ದ ಹಾಗೆ 2003ನೇ ವರ್ಷದಲ್ಲಿ ಸಹಾಯಕ ಕಂದಾಯ ಅಧಿಕಾರಿಗಳ ಮುಂದೆ ಪ್ರತ್ಯಕ್ಷವಾಗಿದೆ ಎಂಬ ಅಂಶವನ್ನು ಜಂಟಿ ಆಯುಕ್ತರ ಮುಂದೆ ಮನವಿ ಮಾಡಿಕೊಂಡಿದ್ದಾರೆ. ಮಹಾನಗರ ಪಾಲಿಕೆ ಅಧಿಕಾರಿಗಳು ಹೋಗಲಿ, ಯಾರೇ ಸಾಮಾನ್ಯ ತಿಳುವಳಿಕೆ ಮನುಷ್ಯರಾದರೂ, 15 ಕೋಟಿ ರೂಪಾಯಿಗಳು ಬೆಲೆಬಾಳುವಂತಹ ಒಂದು ಸ್ವತ್ತಿನ ಮೇಲೆ ಅಧಿಕಾರವನ್ನು ಒದಗಿಸುವಂಥಹ ಒಂದು ಅಮೂಲ್ಯ ದಾಖಲೆಯನ್ನು ಅದರ ಫಲಾನುಭವಿಗಳು ಈ ಮುಂಚೆಯೇ ಏಕೆ ಹಾಜರುಪಡಿಸಿಲ್ಲ? 9 ದಶಕಗಳ ತರುವಾಯ 4 ಪೀಳಿಗೆಗಳು ಮುಗಿದ ಮೇಲೆ ಈಗ ಯಾಕೆ ಅದು ಪ್ರತ್ಯಕ್ಷವಾಗುತ್ತಿದೆ ಎಂಬ ಬಗ್ಗೆ ಮೊಟ್ಟ ಮೊದಲು ಅನುಮಾನ ಪಡುತ್ತಿದ್ದರು. ಆದರೆ, ಅದೇನು ಅಮಾಯಕತನ ಕಾಡಿತ್ತೋ ಏನೋ? 29 ಪ್ಯಾರಗಳುಳ್ಳ 15 ಪುಟಗಳ ಜಂಟಿ ಆಯುಕ್ತರ

ಸವಿವರ ಆದೇಶದಲ್ಲಿ, ಈ ಎರಡನೆಯ ನೋಂದಣಿಯಾಗದ ಉಯಿಲನ್ನು 91 ವರ್ಷಗಳ ತರುವಾಯ ಹಾಜರು ಪಡಿಸಿರುವ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುವ ಅಥವಾ ಚಕಾರವನ್ನು ಎತ್ತಿರುವ ಒಂದೇ ಒಂದು ವಾಕ್ಯ ಕೂಡ ಇಲ್ಲ.

❖ ಮುಜರಾಯಿ ಇಲಾಖೆಯವರು ಜಂಟಿ ಆಯುಕ್ತರ ಮುಂದೆ ಮೋಜಣಿ ಇಲಾಖೆಯವರು ಪ್ರಮಾಣಿಕರಿಸಿದ ನಗರ ಮೋಜಣಿ ದಾಖಲೆಗಳನ್ನೂ ಹಾಜರುಪಡಿಸಿದ್ದಾರೆ. ತಮ್ಮ ಆದೇಶದ 23 ಮತ್ತು 24ನೇ ಪ್ಯಾರಾಗಳಲ್ಲಿ ಅವರು ಅದನ್ನು ಚರ್ಚಿಸಿದ್ದಾರೆ. ಮೋಜಣಿ ಇಲಾಖೆಯ 338ನೇ ನಂಬರಿನ ಪ್ಲೇನ್ ಟೇಬಲ್ ಶೀಟ್ ನಲ್ಲಿ ಮತ್ತು ದಿನಾಂಕ 25–05–1977ನೇ ದಿನಾಂಕದ ಸ್ವತ್ತು ನೋಂದಣಿ ಕಾರ್ಡು ಬಿ–1 ನಂಬರ್ 1 ರಲ್ಲಿ 908.3 ಚದರ ಮೀಟರ್ ವಿಸ್ತೀರ್ಣದ 3ನೇ ಮೇನ್ ರಸ್ತೆ ಮತ್ತು ಮೂರನೇ ಅಡ್ಡ ರಸ್ತೆ ನಡುವೆ ಇರುವ ನಗರ ಮೋಜಣಿ ಸಂಖ್ಯೆ 1456 ನೇ ಸ್ವತ್ತು **ಚೌಬೀನಾ ಸುಬ್ಬರಾವ್ ಚಾರಿಟೀಸ್ ಮತ್ತು ಮುಜರಾಯಿ ಇಲಾಖೆ ಹೆಸರಿನಲ್ಲಿದೆ.** ಜಂಟಿ ಆಯುಕ್ತರು ತಮ್ಮ 26ನೇ ಪ್ಯಾರಾದಲ್ಲಿ ಕೆಲವೊಂದು ಷರಾ ಬರೆದಿದ್ದಾರೆ. ಮೋಜಣಿ ದಾಖಲೆಗಳಲ್ಲಿ ಕೇವಲ ಒಂದೇ ಒಂದು ಮುನಿಸಿಪಲ್ ಸಂಖ್ಯೆ 37 ಇದೆ. ಆದರೆ ಮುಜರಾಯಿ ಇಲಾಖೆ ಹಾಜರುಪಡಿಸಿದ ಖಾತಾ ಉತಾರಗಳಲ್ಲಿ ಇನ್ನೂ ಅನೇಕ ಮುನಿಸಿಪಲ್ ನಂಬರುಗಳಿವೆ. ಆದ್ದರಿಂದ ಮೋಜಣಿ ದಾಖಲೆಗಳನ್ನು ನಂಬುವಂತಿಲ್ಲ! ಎಂಬ **"ನಿರ್ಧಾರಕ್ಕೆ"**ಬರುತ್ತಾರೆ. ಮಹಾನಗರ ಪಾಲಿಕೆಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಮೋಜಣಿ ಇಲಾಖೆಯ ದಾಖಲೆಗಳನ್ನು ತಿರಸ್ಕರಿಸುವ ಮುನ್ನ ಸ್ವತ್ತು ಇರುವ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕಾದ್ದು ಅವರ ಬದ್ಧ ಕರ್ತವ್ಯ. ಏಕೆಂದರೆ ಮೋಜಣಿ ದಾಖಲೆಗಳಲ್ಲಿ ಚಕ್ಕುಬಂದಿಯನ್ನು ಮತ್ತು ಸ್ವತ್ತಿನ ನಾಲ್ಕೂ ಪಕ್ಕಗಳ ಉದ್ದಗಲವನ್ನು ಸ್ಪಷ್ಟವಾಗಿ ಕೊಟ್ಟಿದೆ.

ಸರ್ಕಾರದ ಕಾರ್ಯದರ್ಶಿಗಳು ಈ ಸಮಿತಿಯ ಮುಂದೆ ವಾದ ಮಾಡುತ್ತಾ, ಜಂಟಿ ಆಯುಕ್ತರ ಆದೇಶ ನ್ಯಾಯಿಕ ಸ್ವರೂಪದ್ದು. ಆದಕಾರಣ, ಅಂಥ ಸದೃಶ ನ್ಯಾಯಿಕ ಆದೇಶವನ್ನು ಹೊರಡಿಸುವ ಒಬ್ಬ ಅಧಿಕಾರಿಯ ವಿರುದ್ಧ ಶಿಸ್ತು ಅಥವಾ ಕ್ರಿಮಿನಲ್ ವ್ಯವಹರಣೆಯನ್ನು ಪ್ರಾರಂಭಿಸಲು ಆಗುವುದಿಲ್ಲವೆಂದು ಹೇಳಿರುವುದು ಸರಿ ಇರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ದೆಹಲಿ ಉಚ್ಚ ನ್ಯಾಯಾಲಯವು ದಿನಾಂಕ 23–01–2006 ರಂದು (127/2006 DLT 789) ಶ್ರೀ ನಾರಾಯಣ ದಿವಾಕರ ವಿರುದ್ಧ ಸಿ.ಬಿ.ಐ. ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಗಮನಿಸಲಾಗಿದೆ. ಈ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿ, ಅವರು ಅದನ್ನು ಸ್ಥಿರೀಕರಿಸಿದ್ದಾರೆ. **(ಅನುಬಂಧ–4)** ನ್ಯಾಯಾಲಯದ ಆದೇಶದಂತೆ ಸದೃಶ ನ್ಯಾಯಿಕ ಅಧಿಕಾರಗಳನ್ನು ತಪ್ಪಾಗಿ ಬಳಸುವ ಅಧಿಕಾರಿಗಳ ವಿರುದ್ಧ, ಇಲಾಖಾ ಶಿಸ್ತು ಕ್ರಮಗಳಲ್ಲದೇ, ಕ್ರಿಮಿನಲ್ ಸ್ವರೂಪದ ಕ್ರಮಗಳನ್ನು ಸಹಾ ಕೈಗೊಳ್ಳಲು ಅವಕಾಶವಿರುತ್ತದೆ.

ಸರ್ಕಾರದ ಹಿರಿಯ ಕಾರ್ಯದರ್ಶಿಗಳು ಕಾನೂನಿನಡಿಯಲ್ಲಿ ದೊರಕಿದ ಅಧಿಕಾರಗಳನ್ನು ತಪ್ಪಾಗಿ ಬಳಸುವ ಅಧಿಕಾರಿಗಳ ಕಾನೂನು ಸ್ಥಾನಮಾನಗಳನ್ನು ಕುರಿತು ಸಾಕಷ್ಟು ಅರಿವನ್ನು ಹೊಂದಿರದೇ ನ್ಯಾಯಿಕ ಸದೃಶ ಅಧಿಕಾರಗಳನ್ನು ಚಲಾಯಿಸುವ ವ್ಯಕ್ತಿಗಳಿಗೆ ಉನ್ಮುಕ್ತಿ ಇದೆ ಎಂಬ ಸುಳ್ಳು ಕಾರಣದ ಮೇಲೆ.ತಪ್ಪು ಮಾಡಿದ ಅಧಿಕಾರಿಗಳನ್ನು ರಕ್ಷಿಸುವುದು ಬಹಳ ಆಶ್ಚರ್ಯಕರ ವಿಷಯ. ಯಾವ ಸಾರ್ವಜನಿಕ ನೌಕರರೇ ಆಗಲಿ ಯಾವುದೇ ಕ್ರಮವನ್ನು ಒಂದು ಶಾಸನಬದ್ಧ

ಉಪಬಂಧದ ಅಡಿಯಲ್ಲಿ ತೆಗೆದುಕೊಂಡಾಗ, ಅಧಿಕಾರಿಗಳು ಮಾಡುವ ಎಲ್ಲಾ ಕೆಲಸಗಳನ್ನು ನ್ಯಾಯಿಕ ಸದೃಶ ಅಧಿಕಾರಗಳ ಚಲಾವಣೆ ಮಾಡಿದ್ದು ಎಂದು ತಪ್ಪಾಗಿ ವ್ಯಾಖ್ಯಾನಿಸಬಹುದು. ಈ ಪ್ರಕರಣದಲ್ಲಿರುವಂತೆ, ಕಾನೂನಿನ ಅಧಿಕಾರಗಳನ್ನು ಚಲಾಯಿಸುವ ಸೋಗು ಹಾಕಿದಾಗ, ಉನ್ಮುಕ್ತಿ (Immunity) ಕುರಿತ ಹಕ್ಕು ಕೋರಿಕೆ ಸಮಂಜಸವಲ್ಲ.

ಮುಜರಾಯಿ ಸ್ವತ್ತುಗಳನ್ನು ಕುರಿತು ಸಂಬಂಧಪಟ್ಟ ಕಾನೂನಿನ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಯಾಗಿರುವಂತಹ ವಿಶೇಷ ಜಿಲ್ಲಾಧಿಕಾರಿಗಳ ಆದೇಶಗಳನ್ನು ಕಡೆಗಣಿಸಿರುವುದು, ಈ ಪ್ರಕರಣದಲ್ಲಿ ತನ್ನ ಆಫೀಸಿನ ಗುಮಾಸ್ತರ ಪಾತ್ರವನ್ನು ಕುರಿತ ಆರೋಪಕ್ಕೆ ಕಿವುಡಾಗಿರುವುದು, ಸರ್ಕಾರಿ ಇಲಾಖೆಗೆ ನೀಡಿದ ದಾನದ ಸ್ವತ್ತಿನ ಖಾತೆಯನ್ನು ಬದಲಾಯಿಸಲು ಕಾರಣವಾದ ಒಂದು ಉಯಿಲು 91 ವರ್ಷಗಳ ತರುವಾಯ ಪ್ರತ್ಯಕ್ಷವಾಗಿದೆ ಎಂಬ ಸಂಗತಿ ಬಗ್ಗೆ ಚಕಾರವನ್ನೇ ಎತ್ತದಿರುವುದು, ಈ ಸ್ವತ್ತು ಮುಜರಾಯಿ ಇಲಾಖೆಗೆ ಸೇರಿದ್ದು ಎಂಬ ಬಗ್ಗೆ ಮೋಜಣಿ ಇಲಾಖೆಯ ವಿಚಾರಣೆ ವರದಿ ಕುರಿತು ಕಣ್ಣೇ ಹಾಯಿಸಿಲ್ಲ. ಇದನ್ನು ಭೂ ಕಬಳಿಕೆದಾರರಿಗೆ ದುಷ್ಪ್ರೇರಣೆ ಮಾಡುತ್ತಾ, ಸಾರ್ವಜನಿಕ ದಾನಗಳ ಬಗ್ಗೆ ಮೋಸ ಮಾಡಿದಂಥ ಒಂದು ಸುಳ್ಳು ನ್ಯಾಯಿಕ ಆದೇಶ ಎಂದು ಹೇಳಬಹುದು. ಇನ್ನೂ ತೀಕ್ಷ್ಣವಾಗಿ ಹೇಳಬೇಕಾದರೆ, ಒಬ್ಬ ಧರ್ಮ ಶ್ರದ್ಧೆಯುಳ್ಳ ದೈವಭಕ್ತ ವ್ಯಕ್ತಿ ದತ್ತಿಯಾಗಿ ನೀಡಿದ ಆಸ್ತಿಯನ್ನು ಆತನ ಆತ್ಮ ಶಾಂತವಾಗಿರಲು ಬಿಡದೆ ಕದಿಯುವುದಕ್ಕೆ ಪ್ರಯತ್ನಿಸುವ ಭೂ ಕಬಳಿಕೆದಾರರಿಗೆ ಸಹಾಯ ಮಾಡಲು ನಡೆಸಿದ ಅಧಿಕಾರ ಚಲಾವಣೆಯ ಸೋಗಿನ ಉದ್ದೇಶಪೂರ್ವಕ ಪ್ರಯತ್ನ ಎಂದು ಹೇಳಬಹುದು.

ಭೂಕಬಳಿಕೆಯ ಈ ದುಷ್ಟಗಾಥೆಯಲ್ಲಿ ಮುಜರಾಯಿ ಇಲಾಖೆಯ ಪಾತ್ರವನ್ನು ತಿಳಿಸದೇ ಹೋದರೆ ಸಂಪೂರ್ಣವಾಗುವುದಿಲ್ಲ. ಈ ಇಲಾಖೆಗೆ ಚೌಬೀನಾ ಸುಬ್ಬರಾವ್ ಅವರಂಥ ದಾನಿಗಳಾದ ನಾಗರೀಕರು ಕೊಟ್ಟಂಥಹ ಧಾರ್ಮಿಕ ದತ್ತಿಗಳನ್ನು ಮತ್ತು ದೇವಸ್ಥಾನಗಳ ಆಸ್ತಿಪಾಸ್ತಿಗಳನ್ನು ನಿರ್ವಹಿಸಿಕೊಂಡುಬರುವ ಮತ್ತು ರಕ್ಷಿಸುವ ಕೆಲಸವನ್ನು ವಹಿಸಿಕೊಡಲಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶದಲ್ಲಿರುವ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರತಿಯೊಬ್ಬರಿಗೂ ಮೇಲ್ವಿಚಾರಣೆ ಮಾಡಲು ಕೇವಲ 5–6 ಸಂಸ್ಥೆಗಳಿರುತ್ತವೆ. ಅವರು ಮನಸ್ಸು ಮಾಡಿದರೆ ಒಂದು ತಿಂಗಳಲ್ಲೇ ಈ ಮೇಲ್ವಿಚಾರಣೆಯನ್ನು ಮಾಡಿ ಪೂರ್ಣಗೊಳಿಬಹುದು ಆದರೆ, ಇಲಾಖೆಯ ಅಧಿಕಾರಿಗಳು ಮತ್ತು ಅವರ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆ. 2003 ರಿಂದ ಎರಡು ವರ್ಷಗಳ ಕಾಲದಲ್ಲಿ ಅಥವಾ ಅದಕ್ಕೂ ಮುಂಚಿನಿಂದ ಭೂಕಬಳಿಕೆದಾರರು ಬಹು ಅಮೂಲ್ಯವಾದ ದತ್ತಿ ಸ್ವತ್ತಿನ ಖಾತೆಯನ್ನು ಬದಲಾಯಿಸಿಕೊಳ್ಳುತ್ತಾ ಇದ್ದಾಗ, ಇಲಾಖೆಯ ಅಧಿಕಾರಿಗಳಿಗೆ ಈ ಪ್ರಯತ್ನಗಳು ತಿಳಿದೇ ಇರಲ್ಲಿಲ್ಲ ಎಂಬುದನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಒಬ್ಬ ಮಹಾನ್ ದಾನಿಯು ಉಯಿಲು ದಾನವಾಗಿ ಕೊಟ್ಟಂಥ ಅಮೂಲ್ಯವಾದ ಗೌರವಾರ್ಹವಾದ ಪವಿತ್ರ ಧಾರ್ಮಿಕ ದತ್ತಿಯನ್ನು ರಕ್ಷಿಸದೇ ನೀತಿಗೆಟ್ಟ ಜನರು ಆ ಸ್ವತ್ತನ್ನು ಕಬಳಿಸಲು ಇವರು ಅವಕಾಶ ಮಾಡಿಕೊಟ್ಟಿದ್ದಾರೆ. ಹಿರಿಯ ಅಧಿಕಾರಿಗಳಲ್ಲಿ ಒಬ್ಬರಾದರೂ ತನ್ನ ವ್ಯಾಪ್ತಿಯಲ್ಲಿರುವ 5–6 ಸ್ವತ್ತುಗಳನ್ನು ಸರಿಯಾಗಿ ಭೇಟಿ ಮಾಡಿದರೆ, ತನ್ನ ವ್ಯಾಪ್ತಿಯಲ್ಲಿರುವ ಎಲ್ಲಾ ಬಹು ಮುಖ್ಯ ಸ್ವತ್ತುಗಳನ್ನು ಆತ ಪರಿಶೀಲಿಸುತ್ತಿದ್ದ ಮತ್ತು ಭೂಗಳ್ಳರ ಕರಾಳ ಕೃತ್ಯಗಳನ್ನು ಕಂಡುಹಿಡಿದು ಮೊಳಕೆಯಲ್ಲೇ ಅದನ್ನು ಚಿವುಟಿ ಹಾಕುತ್ತಿದ್ದರು. ದೇವರಿದ್ದಾನೆ ಅವನ ಆಸ್ತಿಯನ್ನು ಅವನೇ ಕಾಪಾಡಿಕೊಳ್ಳುತ್ತಾನೆ. ನಾವ್ಯಾರೂ ನಮ್ಮ ಸುಖ, ಸಮೃದ್ಧಿಯ ಚಾರ್ವಾಕ ಜೀವನವನ್ನು ಕೈ ಬಿಟ್ಟು ನಮ್ಮ ಸವಿ ನಿದ್ದೆಗೆ ಭಂಗ ತಂದುಕೊಳ್ಳಬಾರದು ಎಂದು ಮುಜರಾಯಿ ಅಧಿಕಾರಿಗಳು ಭಾವಿಸಿದಂತಿದೆ.

* * * * *

## 9. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆಗೆ (ನಿಮ್ಹಾನ್ಸ್) ಸೇರಿದಂಥಹ 3 ಎಕರೆ 26 ಗುಂಟೆ ಜಮೀನನ್ನು ಮಹಾನಗರ ಪಾಲಿಕೆ ಅಧಿಕಾರಿಗಳ ನೆರವಿನಿಂದ ಒಬ್ಬ ಬಿಲ್ಡರ್ ಕಬಳಿಸಿರುವುದು

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಬೈರಸಂದ್ರ ಗ್ರಾಮದಲ್ಲಿರುವ 46 ಎಕರೆ 14 ಗುಂಟೆ ಜಮೀನನ್ನು (ಈಗ ಇದು ಬೆಂಗಳೂರು ಹೊಸೂರು ರಸ್ತೆಗೆ ತಾಗಿಕೊಂಡಿದ್ದು, ನಗರ ಪ್ರದೇಶದೊಳಗೇ ಇದೆ) 1944 ರಲ್ಲಿ ಆಗಿನ ಮೈಸೂರು ಮಹಾರಾಜರ ಸರ್ಕಾರವು, ಎಸ್.ಡಿ.ಎಸ್.ಕ್ಷಯರೋಗ ಆಸ್ಪತ್ರೆಯ ಉದ್ದೇಶಕ್ಕಾಗಿ ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂ 1688–90, ದಿನಾಂಕ 28–10–1944 ರ ಮೂಲಕ ಸ್ವಾಧೀನಪಡಿಸಿಕೊಂಡಿತ್ತು. ಆ ತರುವಾಯ 1981 ರಲ್ಲಿ, ಸರ್ಕಾರವು ಈ ಭೂಮಿಯಿಂದ 14 ಎಕರೆ ಭೂಮಿಯನ್ನು, ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ರಾಷ್ಟ್ರೀಯ ಸಂಸ್ಥೆ ನಿಮ್ಹಾನ್ಸ್‌ಗೆ ಅದನ್ನು ಸ್ಥಾಪಿಸುವ ಹಾಗೂ ವಿಸ್ತರಿಸುವ ಸಲುವಾಗಿ ವರ್ಗಾಯಿಸಿತು. ಸಹಾಯಕ ಇಂಜಿನಿಯರ್, ಕಟ್ಟಡ ವಿಭಾಗ, ಬೆಂಗಳೂರು ಇವರು, ಕಾರ್ಯ ನಿರ್ವಾಹಕ ಇಂಜಿನಿಯರ್, ನಿಮ್ಹಾನ್ಸ್ ಇವರಿಗೆ ದಿನಾಂಕ 09–10–1987 ರಂದು ಈ ಭೂಮಿಯನ್ನು ಹಸ್ತಾಂತರಿಸಿದರು. ಇದು ಸರ್ವೆ ನಂ.2/1, 2/2, 2/3, 2/4 ಹಾಗೂ 2/5 ರಲ್ಲಿರುವ ಒಟ್ಟು 6 ಎಕರೆ 25 ಗುಂಟೆ ಜಮೀನನ್ನು ಒಳಗೊಂಡಿದೆ.

ನಿಮ್ಹಾನ್ಸ್ ಸಂಸ್ಥೆಯು ಈ ಸ್ವತ್ತಿನ **"ಕಬ್ಜೆದಾರ"** ಎಂದು ರೆವಿನ್ಯೂ ದಾಖಲೆಗಳಲ್ಲಿ ಹಕ್ಕು ಬದಲಾವಣೆ ನಮೂದುಗಳನ್ನು ಮಾಡಲಾಯಿತು. ಸಬ್ ರಿಜಿಸ್ಟ್ರಾರ್, ಕೇಂದ್ರ ದಾಖಲೆಗಳು ಇವರು 1981–82 ನೇ ವರ್ಷಕ್ಕಾಗಿ ನೀಡಿದ ಋಣಭಾರ ಪ್ರಮಾಣ ಪತ್ರವು, ಈ ಸ್ವತ್ತು ನಿಮ್ಹಾನ್ಸ್ ಹೆಸರಿನಲ್ಲಿದೆ ಎಂಬುದನ್ನು ತೋರಿಸುತ್ತದೆ. **1944 ರಲ್ಲಿ ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಮೊದಲು,** ಆ ಭೂಮಿಗಳ ಮೂಲ ಮಾಲೀಕರಾಗಿದ್ದವರ ವಾರಸುದಾರರು ತಾವೆಂದು ಹೇಳಿಕೊಂಡು, ಶ್ರೀಮತಿ. ಲಕ್ಷ್ಮಮ್ಮ ಹಾಗೂ ಶ್ರೀಮತಿ ರಾಮಕ್ಕ ಎಂಬವರು, ಕರ್ನಾಟಕ ಭೂ ಕಂದಾಯ ಅಧಿನಿಯಮದ 136(2)ನೇ ಪ್ರಕರಣದ ಅಡಿಯಲ್ಲಿ ನಿಮಾನ್ಸ್ ಹೆಸರಿನಲ್ಲಿರುವ ಹಕ್ಕುಬದಲಾವಣೆಯನ್ನು ರದ್ದುಪಡಿಸುವಂತೆ ಉಪ ವಿಭಾಗಾಧಿಕಾರಿ, ಬೆಂಗಳೂರು ಇವರಿಗೆ ಮನವಿ ಸಲ್ಲಿಸುವವರೆಗೆ, ಆ ಭೂಮಿಗಳ ಮಾಲೀಕತ್ವದ ಪ್ರಶ್ನೆ ನಿರ್ವಿವಾದಿತವಾಗಿಯೇ ಇತ್ತು. ಉಪ ವಿಭಾಗಾಧಿಕಾರಿಯವರು ಈ ಬಗ್ಗೆ ವಿಚಾರಣೆ ನಡೆಸಿದ ತರುವಾಯ ಅರ್ಜಿಯನ್ನು ವಜಾ ಮಾಡಿ, (ಅವರ ಆದೇಶ ಸಂಖ್ಯೆ:ಆರ್‌ಎ(ಎಸ್) 01/2003–04 ದಿನಾಂಕ 12–5–2003 ನೋಡಿ) ಈ ಸ್ವತ್ತು ನಿಮ್ಹಾನ್ಸ್‌ಗೆ ಸೇರಿರುವುದು ಸ್ಪಷ್ಟವಾಗಿರುವುದರಿಂದ ಅರ್ಜಿದಾರರಿಗೆ ಈ ಜಮೀನುಗಳ ಮೇಲೆ ಯಾವುದೇ ಹಕ್ಕು ಇಲ್ಲವೆಂದು ತಿಳಿಸಿದರು.

1944 ರಲ್ಲಿ ಭೂಮಿ ಸ್ವಾಧೀನವಾಗಿದ್ದು ಆಗ ಅದನ್ನು ಯಾರೂ ಪ್ರಶ್ನಿಸಲಿಲ್ಲ ಹಾಗೂ ಹಿಂದಿನ ಭೂಮಾಲಿಕರು ಆ ಬಗ್ಗೆ ಪರಿಹಾರವನ್ನು ಸ್ವೀಕರಿಸಿದ್ದಾರೆ.ಹೀಗಿದ್ದರೂ ಸದರಿ ಶ್ರೀಮತಿ ರಾಮಕ್ಕ ಮತ್ತು ಇತರರು, ಸರ್ವೆ ನಂಬರ್ 2/2, 2/3, 2/4 ಮತ್ತು 2/5 ರಲ್ಲಿರುವ 9004.225 ಚದರ ಮೀಟರ್ ಅಳತೆಯ ಭೂಮಿಯ ಸಂಬಂಧದಲ್ಲಿ ತಮ್ಮ ಹೆಸರಿಗೆ ಖಾತಾ ಬದಲಿಸಬೇಕೆಂದು ದಿನಾಂಕ 22–12–1989 ರಂದು ಬೆಂಗಳೂರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿದರು. ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ಯಾವುದೇ ವಿಚಾರಣೆಯನ್ನಾಗಲಿ ಅಥವಾ ಸ್ಥಳ ಪರಿಶೀಲನೆಯನ್ನಾಗಲಿ

ನಡೆಸದೆ ನಿಮ್ಹಾನ್ಸ್‌ನ ಆಕ್ಷೇಪಣೆಗಳನ್ನೂ ಕೇಳದೇ ಅಥವಾ ಸಿಟಿ ಸರ್ವೆ ದಾಖಲೆಗಳನ್ನು ಪರಿಶೀಲಿಸದೇ ದಿನಾಂಕ 3–9–1990 ರಂದು ರಾಮಕ್ಕ ಮತ್ತು ಇತರರ ಹೆಸರಿಗೆ ಖಾತಾ ಬದಲಾವಣೆ ಮಾಡಿದರು.

ಅಂದಿನಿಂದಲೂ ನಿಮ್ಹಾನ್ಸ್ ಸಂಸ್ಥೆಯವರು ತಮ್ಮ ಹಕ್ಕಿನ ಬಗ್ಗೆ ಪ್ರಸ್ತಾಪಿಸಿಕೊಂಡೇ ಬರುತ್ತಿರುತ್ತಾರೆ. ದಿನಾಂಕ 06–01–1994 ರಂದು ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು ಹಾಗೂ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರೂ ಆದ ಶ್ರೀ ವೈ.ಎನ್.ನಂಜಪ್ಪ ಅವರು, ಸರ್ಕಾರವು ಭೂಮಿಯನ್ನು ಸ್ವಾಧೀನ ಪಡಿಸಿಕೊಂಡ ಬಗ್ಗೆ 1944 ರಲ್ಲಿಯ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿ, ನಿಮಾನ್ಸ್ ಸಂಸ್ಥೆಯು ಆ ಭೂಮಿಯ ಕಾನೂನುಬದ್ಧ ಮಾಲೀಕ ಸಂಸ್ಥೆಯಾಗಿರುವುದರಿಂದ ಶ್ರೀಮತಿ ರಾಮಕ್ಕ ಮತ್ತು ಇತರರ ಹೆಸರಿನಲ್ಲಿ ಖಾತಾ ಮಾಡಿರುವುದು ಸರಿಯಿಲ್ಲವೆಂದು ತಿಳಿಸಿ, ಬೆಂಗಳೂರು ಮಹಾನಗರ ಪಾಲಿಕೆಯ ಮುಂದೆ ಅರ್ಜಿ ಸಲ್ಲಿಸಿದರು. **"ಈ ವಿಷಯದಲ್ಲಿ ವಿಚಾರಣೆ ನಡೆಸಿದ ತರುವಾಯ, ಬೆಂಗಳೂರು ಮಹಾನಗರ ಪಾಲಿಕೆಯ ಡೆಪ್ಯೂಟಿ ಕಮೀಷನರ್‌ರವರು ಖಾಸಗಿ ವ್ಯಕ್ತಿಗಳ ಹೆಸರಿಗೆ ಮಾಡಿಸಿರುವ ಖಾತಾ ವರ್ಗಾವಣೆ ರದ್ದು ಮಾಡಿದರು. (ಅವರ ಆದೇಶ ಸಂಖ್ಯೆ:ಡಿಸಿ.(ಎಸ್) ಬಿಎಲ್. 1752/93, ದಿನಾಂಕ 17–10–1994 ನೋಡಿ.)"**

ಇಷ್ಟಾದರೂ, ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಯು, ದಿನಾಂಕ 07–06–1997 ರಂದು ರಾಮಕ್ಕ ಹಾಗೂ ಇತರರ ಹೆಸರಿಗೆ, ಅವರು ಸಿವಿಲ್ ನ್ಯಾಯಾಲಯದ ಆದೇಶವನ್ನು ತಂದಿರುತ್ತಾರೆಂದು ಆಧಾರ ತೋರಿಸಿ ಪುನ: ಖಾತಾ ವರ್ಗಾಯಿಸಿದರು. ಆದರೆ ನಗರ ಸಿವಿಲ್ ನ್ಯಾಯಾಲಯದ ಮುಂದೆ ರಾಮಕ್ಕ ಹಾಗೂ ಇತರರು ಸಲ್ಲಿಸಿದ ಮೂಲ ದಾವೆ ಸಂಖ್ಯೆ 2456/86 ರ ಮೊಕದ್ದಮೆಯಲ್ಲಿ ನ್ಯಾಯಾಲಯವು ಹೇಳಿರುವುದು ಇಷ್ಟೇ. "ರಾಮಕ್ಕ ಹಾಗೂ ಇತರರ ಸ್ವತ್ತನ್ನು ಶಾಂತಿಯುತವಾಗಿ ಸ್ವಾಧೀನದಲ್ಲಿ ಹೊಂದಿರಲು ಹಾಗೂ ಅನುಭವಿಸಲು ಯಾರೂ ಅಡ್ಡಿಪಡಿಸತಕ್ಕದ್ದಲ್ಲ". ಆದರೆ ರಾಮಕ್ಕ ಹಾಗೂ ಇತರರ ಹೆಸರಿಗೆ ಖಾತಾ ಬದಲಾಯಿಸಿಕೊಡಲೂ ಹೇಳಿಲ್ಲ. ಅಲ್ಲದೆ ಸದರಿ ಹಕ್ಕಿನ ಘೋಷಣೆಗಾಗಿ ಹಾಕಿಕೊಂಡ ದಾವೆಯಲ್ಲಿ ಅರ್ಜಿದಾರರು ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಂದು ಪಕ್ಷವನ್ನಾಗಿಯೂ ಮಾಡಿಲ್ಲ. ಹೀಗಿರುವಾಗ ರಾಮಕ್ಕ ಮತ್ತಿತರರ ಹೆಸರಿಗೆ ಖಾತಾ ಬದಲಾಯಿಸಿಕೊಡಬೇಕಾದ ಅಗತ್ಯವೇ ಇರಲಿಲ್ಲ.

ಇದಾದ ತರುವಾಯ, ದಿನಾಂಕ 03–03–1997 ರಂದು, ರಾಮಕ್ಕ ಮತ್ತು ಇತರರು, ಸರ್ವೆ ನಂಬರ್ 2/2, 2/3, 2/4 ಮತ್ತು 2/5 ರಲ್ಲಿರುವ 1 ಎಕರೆ 17 ಗುಂಟೆ ಹೆಚ್ಚಿನ ಜಮೀನಿನ ಖಾತಾವನ್ನು ಸಹ ತಮ್ಮ ಹೆಸರಿಗೆ ಬದಲಾಯಿಸಿಕೊಡಬೇಕೆಂದು ಬೆಂಗಳೂರು ಮಹಾನಗರ ಪಾಲಿಕೆಯ ಮುಂದೆ ಇನ್ನೊಂದು ಅರ್ಜಿಯನ್ನು ದಾಖಲು ಮಾಡಿದರು. ಬೆಂಗಳೂರು ಮಹಾನಗರ ಪಾಲಿಕೆಯು, ದಿನಾಂಕ 07–06–1997 ರಂದು ಅರ್ಜಿಯಲ್ಲಿ ಕೇಳಿರುವಂತೆ ಖಾತಾ ನೀಡಿತು ಮತ್ತು ಆ ಸ್ವತ್ತಿಗೆ 49/1 ಎಂಬ ನಂಬರು ನೀಡಿತು. ಪುನ: ಅವರು ಬೆಂಗಳೂರು ಮಹಾನಗರ ಪಾಲಿಕೆಗೆ ಇನ್ನೂ ಒಂದು ಅರ್ಜಿಯನ್ನು ಸಲ್ಲಿಸಿ, ಸ್ವತ್ತು ಸಂಖ್ಯೆ 49 ಹಾಗೂ 49/1, ಇವುಗಳನ್ನು ಸೇರಿಸಿ, ಒಂದೇ ಘಟಕವಾಗಿ ಮಾಡಬೇಕೆಂದು ಮನವಿ ಸಲ್ಲಿಸಿದರು. ಬೆಂಗಳೂರು ಮಹಾನಗರ ಪಾಲಿಕೆಯು ಮತ್ತೆ ಅವರ ಪರವಾಗಿ

ಆದೇಶ ಮಾಡಿತು. ಒಟ್ಟು ಸೇರಿಸಲಾದ ಸಂಖ್ಯೆ 49 ರ ಅಳತೆ 1,58,994 ಚದರ ಅಡಿ ಆಗಿದ್ದು, ಇದು 3 ಎಕರೆ 26 ಗುಂಟೆಗೆ ಸಮನಾಗಿದೆ. ಇದರ ಬೆಲೆ ಪ್ರತಿ ಚದರ ಅಡಿಗೆ 8,000 ರೂಪಾಯಿಗಳಂತೆ ಅಂದಾಜು 127 ಕೋಟಿ ರೂಪಾಯಿಗಳಾಗುತ್ತದೆ.

ಬೆಂಗಳೂರು ಮಹಾನಗರ ಪಾಲಿಕೆಯು, ಪುನ: ಬಿಲ್ಡರ್ ಕೆ.ವಿ. ಶಿವಕುಮಾರ್ ಅವರ ಹೆಸರಿಗೆ, 27–3–2000 ರಂದು ಅವರು ಹಾಜರುಪಡಿಸಿದ ಕೆಲವೊಂದು ಪತ್ರಗಳ ಆಧಾರದ ಮೇಲೆ ಖಾತಾವನ್ನು ಬದಲಾಯಿಸಿತು.

ಬೆಂಗಳೂರು ಮಹಾನಗರ ಪಾಲಿಕೆಯವರು ಆ ಭೂಮಿಯ ಮಾಲೀಕತ್ವ ಕುರಿತು ಸ್ಥಳ ಪರಿಶೀಲನೆ ನಡೆಸಲಿಲ್ಲ ಅಥವಾ ಆ ಬಗ್ಗೆ ನಿಮಾನ್ಸ್ ಅಥವಾ ಎಸ್.ಡಿ.ಎಸ್. ಸ್ಯಾನಿಟೋರಿಯಂ ಅವರನ್ನು ವಿಚಾರಣೆ ಮಾಡಲಿಲ್ಲ. ಕರ್ತವ್ಯ ನಿಷ್ಠೆ ಇರುವ ಯಾವನೇ ವ್ಯಕ್ತಿ ಈ ಕೆಲಸ ತಪ್ಪದೇ ಮಾಡುತ್ತಿದ್ದ. ಇದರಿಂದ ಭೂ ಕಬಳಿಕೆದಾರರಿಗೆ ಸಹಾಯ ಮಾಡಬೇಕೆಂಬ ಗೌಪ್ಯ ತರಾತುರಿ ಅವರಿಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ಸಂಗತಿಗಳು, ಸರ್ಕಾರಕ್ಕೆ ಸೇರಿದ ಸ್ವತ್ತುಗಳ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆಯವರು ಮಾಡಬಾರದ್ದನ್ನೆಲ್ಲಾ ಮಾಡುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯವರು ಖಾತಾ ಬದಲಾವಣೆಗಾಗಿ ನಿಗದಿಪಡಿಸಿರುವ ತಪಶೀಲು ಪಟ್ಟಿಯಲ್ಲಿನ 20ನೇ ಬಾಬಿನ ಪ್ರಕಾರ ಸ್ಥಳ ಪರಿಶೀಲನೆ ಮಾಡಬೇಕಾಗಿತ್ತು ಮತ್ತು ಅಕ್ಕಪಕ್ಕದ ಸ್ವತ್ತಿನ ಮಾಲೀಕರ ಆಕ್ಷೇಪಣೆಗಳನ್ನು ಪಡೆದುಕೊಂಡು ದಾಖಲಿಸಬೇಕಾಗಿತ್ತು. ಸಹಾಯಕ ಕಂದಾಯ ಅಧಿಕಾರಿಯು ಈ ಮೂಲಭೂತ ಕರ್ತವ್ಯವನ್ನು ಮಾಡಿದ್ದರೆ, ಆತನು ನಿಮ್ಹಾನ್ಸ್ ಹಾಗೂ ಎಸ್ ಡಿಎಸ್ ಕ್ಷಯ ರೋಗ ಆಸ್ಪತ್ರೆಯ ಮತ್ತು ರಾಜೀವಗಾಂಧಿ ಎದೆರೋಗಗಳ ಸಂಸ್ಥೆಯ ಆಕ್ಷೇಪಣೆಗಳನ್ನು ಕೇಳುತ್ತಿದ್ದ ಹಾಗೂ ಖಾತಾ ಬದಲಾಯಿಸುತ್ತಿರಲಿಲ್ಲ. ಹೀಗೆ ತನ್ನ ಕರ್ತವ್ಯ ನಿರ್ವಹಣೆಯನ್ನು ಮಾಡಲು ಅವರು ತಪ್ಪಿದ್ದಾರೆ.

ಅದೇ ಬೆಂಗಳೂರು ಮಹಾನಗರ ಪಾಲಿಕೆಯ ಡೆಪ್ಯೂಟಿ ಕಮೀಷನರ್‌ರವರ ಗಮನಕ್ಕೆ ಈ ವಿಷಯನ್ನು ತಂದಾಗ ಎಸ್.ಡಿ.ಎಸ್. ಕ್ಷಯರೋಗ ಆಸ್ಪತ್ರೆಗಾಗಿ ಈಗಾಗಲೇ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯನ್ನು ದಿನಾಂಕ 17–10–1994ರಂದು ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತಾ ಬದಲಾವಣೆ ಮಾಡಿದ್ದನ್ನು ಅವರು ರದ್ದುಪಡಿಸಿದ್ದಾರೆ. ಬೆಂಗಳೂರು ಮಹಾ ನಗರ ಪಾಲಿಕೆಯ ಉಪ ಆಯುಕ್ತರ ಆದೇಶವನ್ನು ರದ್ದುಪಡಿಸಿ, ರಾಮಕ್ಕ ಮತ್ತು ಇತರರು, ಖಾತಾ ಬದಲಿಸುವಂತೆ ನ್ಯಾಯಾಲಯದ ಆದೇಶವನ್ನು ಹಾಜರುಪಡಿಸಿದ್ದಾರೆಂಬ ಸುಳ್ಳು ಕ್ಲೇಮಿನ ಆಧಾರದ ಮೇಲೆ ಅವರ ಹೆಸರಿಗೆ ಖಾತಾ ಬದಲಾಯಿಸಿರುವುದು ಕಾನೂನು ಬಾಹಿರ, ಅನುಚಿತ ಹಾಗೂ ಪಿತೂರಿ ಕೃತ್ಯವಾಗಿದೆ. **ಬೆಂಗಳೂರು ಮಹಾನಗರ ಪಾಲಿಕೆಗೆ ಈ ಅರ್ಥದ ಯಾವುದೇ ನಿರ್ದೇಶನವೂ ಇರಲಿಲ್ಲ ಅಥವಾ ಆ ಸಿವಿಲ್ ವ್ಯಾಜ್ಯದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಂದು ಪಕ್ಷಕಾರರನ್ನಾಗಿಯೂ ಮಾಡಿರಲಿಲ್ಲ.** ಆದ್ದರಿಂದ ಆ ಹಂತದಲ್ಲಿ ಈ ಮುಂಚೆ ಡೆಪ್ಯೂಟಿ ಕಮೀಷನರ್‌ರವರು ನೀಡಿದ್ದ ಆದೇಶಗಳನ್ನು ಕಡೆಗಣಿಸಿ ಸಹಾಯಕ ಕಂದಾಯ ಅಧಿಕಾರಿಯು ಸ್ವಪ್ರೇರಣೆಯಿಂದ ಖಾತಾವನ್ನು ಶ್ರೀಮತಿ ರಾಮಕ್ಕ ಮತ್ತು ಇತರರಿಗೆ ಬದಲಾಯಿಸಬಾರದಿತ್ತು.

ಸಮಿತಿ ಮುಂದೆ ಹಾಜರಾದ ಬೆಂಗಳೂರು ಮಹಾನಗರ ಪಾಲಿಕೆಯ ಹಿರಿಯ ಅಧಿಕಾರಿಗಳೆಲ್ಲಾ ಈ ವಿಷಯದಲ್ಲಿ ಮತ್ತೆ ಮತ್ತೆ ಹಾಡಿದ್ದು ಒಂದೇ ರಾಗ. ನಿಮ್ಹಾನ್ಸ್‌ನವರು ಈ ಭೂಮಿ ತಮಗೆ ಸೇರಿದ್ದೆಂದು ತೋರಿಸುವ ನ್ಯಾಯಾಲಯ ಆದೇಶವುಳ್ಳ **"ಒಂದು ತುಣುಕು ಕಾಗದವನ್ನೂ ಸಾಕ್ಷ್ಯವಾಗಿ"** ತೋರಿಸಲಿಲ್ಲ ಎನ್ನುವುದು. ಇದೇ ಬೆಂಗಳೂರು ಮಹಾನಗರ ಪಾಲಿಕೆಯ ಹಿರಿಯ ಅಧಿಕಾರಿಗಳು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಈ ಮಾತನ್ನೂ ಹೇಳುತ್ತಾರೆ: ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿಯ ಅಂದಿನ ಅಧ್ಯಕ್ಷರು ಭೂಮಿ ಸ್ವಾಧೀನಪಡಿಸಿಕೊಂಡಿರುವ ಸರ್ಕಾರಿ ಅಧಿಸೂಚನೆಯ ಪ್ರತಿಯನ್ನು ಲಗತ್ತಿಸಿ ಬರೆದಿರುವಂತಹ ಒಂದು ಪತ್ರವು ಇಂದಿಗೂ ಅವರ ಕಡತದಲ್ಲಿದೆ. "ಅದರ ಆಧಾರದ ಮೇಲೆ ಡೆಪ್ಯೂಟಿ ಕಮೀಷನರ್‌ರವರು ಖಾಸಗಿ ವ್ಯಕ್ತಿಗಳ ಹೆಸರಿಗೆ ಬದಲಾಯಿಸಿದ್ದ ಖಾತಾ ಬದಲಾವಣೆಯನ್ನು ರದ್ದುಪಡಿಸಿದ್ದಾರೆ. **' ಒಂದು ತುಣುಕು ಕಾಗದವೂ '** ಸಾಕ್ಷ್ಯವಾಗಿ ಇಲ್ಲದೆ ಹೋಗಿದ್ದರೆ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಆಯುಕ್ತರು ಖಾತಾ ರದ್ದುಪಡಿಸಲು ಕ್ರಮ ಜರುಗಿಸುತ್ತಿರಲಿಲ್ಲ. ಈ ಕಟುಸತ್ಯವನ್ನು ಕಡೆಗಣಿಸಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತಾ ಬದಲಾಯಿಸಿದ್ದು, ಸತ್ಯ ಮರೆಮಾಚಿ ಸುಳ್ಳನ್ನು ಎತ್ತಿಹಿಡಿಯುವ ಕಾರ್ಯವಾಗಿರುತ್ತದೆ. ಅಷ್ಟೇ ಅಲ್ಲ ಇದರ ಉದ್ದೇಶ ಬಿಲ್ಡರ್ ಕೆ.ವಿ.ಶಿವಕುಮಾರ್ ಅವರ ಭೂಕಬಳಿಕೆಗೆ ಉದ್ದೇಶಪೂರ್ವಕವಾಗಿ ಕುಮ್ಮಕ್ಕು ನೀಡುವುದೇ ಆಗಿದೆ." ಬಿಲ್ಡರ್ ಶ್ರೀ ಕೆ.ವಿ.ಶಿವಕುಮಾರ್ ರವರಿಗೆ, ಶ್ರೀಮತಿ ರಾಮಕ್ಕ ಮತ್ತು ಇತರರು ಎಲ್ಲಾ ಪ್ರದೇಶವನ್ನು ಮಾರಾಟ ಮಾಡದಿದ್ದರೂ, ಒಟ್ಟು 3 ಎಕರೆ 26 ಗುಂಟೆ ಪೂರ್ಣ ಪ್ರದೇಶವನ್ನು ಶ್ರೀ ಕೆ.ವಿ.ಶಿವಕುಮಾರ್‌ರವರ ಹೆಸರಿಗೆ ಖಾತಾ ಮಾಡಿ, ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವಾಗ ಹಕ್ಕಿಗೆ ಸಂಬಂಧಿಸಿದ ದಾಖಲೆಗಳನ್ನು ಸಹಾ ಪರಿಶೀಲಿಸದಿರುವುದು ತುಂಬಾ ಆಶ್ಚರ್ಯಕರ ಮತ್ತು ಅಘಾತಕಾರಿ ವಿಷಯವಾಗಿರುತ್ತದೆ.

ಇಂಥಹ ಸ್ವತ್ತನ್ನು ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಬಿಲ್ಡರ್ ಭೂಕಬಳಿಕೆದಾರನೊಬ್ಬ ಕಾನೂನು ಬಾಹಿರವಾಗಿ ಸ್ವಾಧೀನ ಹೊಂದಲು ಸಹಾಯ ಮಾಡುತ್ತಿದ್ದಾರೆ.

* * * * *

**10. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಛೇರಿಯಿಂದ 12 ಕಿ.ಮೀ. ಒಳಗೆ ಇರುವ ತುರಹಳ್ಳಿ ಕಿರು ಅರಣ್ಯ ಪ್ರದೇಶದಲ್ಲಿ, ಭೂಕಬಳಿಕೆದಾರರಿಂದ ಭೂ ಕಬಳಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಇದಕ್ಕೆ ಉತ್ತೇಜನ.**

ಆಗಿನ ಮೈಸೂರು ಮಹಾರಾಜರ ಸರ್ಕಾರವು, ತುರಹಳ್ಳಿ ಮತ್ತು ಉತ್ತರಹಳ್ಳಿ ಮನೆವಾರ್ತೆ ಕಾವಲ್ ಗ್ರಾಮಗಳಲ್ಲಿರುವ, 597 ಎಕರೆ 19 ಗುಂಟೆ ಗೋಮಾಳ ಭೂಮಿಯನ್ನು ಅಧಿಸೂಚನೆ ಸಂಖ್ಯೆ ಜಿ.1746 ಎಫ್.ಟಿ. 65–34–2, ದಿನಾಂಕ 24–8–1934 ರ ಮೂಲಕ ತುರಹಳ್ಳಿ ಕಿರು ಅರಣ್ಯ ಪ್ರದೇಶ ಎಂದು ಅಧಿಸೂಚಿಸಿತ್ತು. ವಿವರ ಈ ಮುಂದಿನಂತಿದೆ.

| ಕ್ರಮ ಸಂಖ್ಯೆ | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ಬ್ಲಾಕಿನ ಹೆಸರು |
|---|---|---|---|---|
| 1 | ತುರಹಳ್ಳಿ | 41 | 94 ಎ. 8 ಗುಂಟೆ | ತುರಹಳ್ಳಿ ಕಿರು ಅರಣ್ಯ ಪ್ರದೇಶ |
| 2 | ತುರಹಳ್ಳಿ | 42 | 159 ಎ.13 ಗುಂಟೆ | ತುರಹಳ್ಳಿ ಕಿರು ಅರಣ್ಯ ಪ್ರದೇಶ |
| 3 | ಉತ್ತರಹಳ್ಳಿ ಮನವಾರ್ತೆಕಾವಲ್ | 5 | 343 ಎ 38ಗುಂಟೆ | ತುರಹಳ್ಳಿ ಕಿರು ಅರಣ್ಯ ಪ್ರದೇಶ |
| | **ಒಟ್ಟು ಪ್ರದೇಶ** | | **597 ಎಕರೆ 19 ಗುಂಟೆಗಳು** | |

**ತುರಹಳ್ಳಿ ಕಿರು ಅರಣ್ಯ ಪ್ರದೇಶದಲ್ಲಿ ಭೂ ಕಬಳಿಕೆಗೆ ದುಷ್ಪ್ರೇರಿಸುವಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳ ಪಾತ್ರ**

ಶ್ರೀ ಆರ್.ದಿನೇಶ್ ಕುಮಾರ್ ಬಿನ್ ರೂಪ್‌ಚಂದ್‌ಜಿರವರು ದಿನಾಂಕ 09–12–2004ರಂದು ಉತ್ತರಹಳ್ಳಿ ಮನವರ್ತೆ ಕಾವಲ್ ನಲ್ಲಿರುವ ಸರ್ವೆ ನಂ. 5ರಲ್ಲಿನ 343 ಎಕರೆ 38 ಗುಂಟೆ ಗೋಮಾಳ ಭೂಮಿಯನ್ನು ಪ್ರತಿ ಎಕರೆಗೆ 30.00 ಲಕ್ಷ ರೂಪಾಯಿಗಳ ದರದಲ್ಲಿ ಮಾರಾಟ ಮಾಡುವುದಾಗಿ ಈ ಕೆಳಕಾಣಿಸಿದ ವ್ಯಕ್ತಿಗಳೊಂದಿಗೆ ಒಪ್ಪಂದ ಪತ್ರವನ್ನು ಮಾಡಿಕೊಂಡಿರುತ್ತಾರೆ (ಪ್ರತಿ ಎಕರೆಗೆ 30.00 ಲಕ್ಷ ರೂಪಾಯಿಗಳಂತೆ 343.38 ಎಕರೆಗಳಿಗೆ 103 ಕೋಟಿ ರೂಪಾಯಿಗಳಾಗುತ್ತದೆ. ಆದರೆ ಮಾರುಕಟ್ಟೆ ಮೌಲ್ಯವು ಪ್ರತಿ ಚದರ ಅಡಿಗೆ ಕನಿಷ್ಠ 1,000–00 ರೂಪಾಯಿಗಳಾದರೂ ಒಟ್ಟು 1,500–00 ಕೋಟಿಗಳಷ್ಟಾಗುತ್ತದೆ). ಈ ಸಂಬಂಧದಲ್ಲಿ ಮೂರನೇ ವ್ಯಕ್ತಿಯೊಬ್ಬರು ಇನ್ನೂ ಹೆಚ್ಚು ಅಭಿವೃದ್ಧಿಪಡಿಸಬೇಕೆಂದು ಸಹ ಒಪ್ಪಂದ ಪತ್ರದಲ್ಲಿ ಕರಾರು ಮಾಡಿಕೊಂಡಿರುತ್ತಾರೆ.

(1) ಶ್ರೀ ಬಿ.ಚಂದ್ರಶೇಖರ್ ಬಿನ್ ದಿವಂಗತ.ಬಸವಾಚಾರ್, ಹನುಮಂತನಗರ,ಬೆಂಗಳೂರು.

(2) ಶ್ರೀ ನರಸಿಂಹಮೂರ್ತಿ ಬಿನ್ ದಿವಂಗತ ಸೀತಾರಾಮಯ್ಯ, ಜಯನಗರ, ಬೆಂಗಳೂರು.

(3) ಶ್ರೀ ಕೆ.ವೇದಾಚಲಮ್ ಬಿನ್ ಎ.ಕೋದಂಡಪಾಣಿ, ಸಂಪಂಗಿರಾಮನಗರ, ಬೆಂಗಳೂರು.

(4) ಶ್ರೀ ವಿ.ಮೋಹನ್ ಕುಮಾರ್ ಬಿನ್ ದಿವಂಗತ ವೆಂಕಟಪ್ಪ, ದೇವರೇಕೆರೆ, ಬೆಂಗಳೂರು.

(5) ಶ್ರೀ ಎ.ಟಿ.ಕೃಷ್ಣಮೂರ್ತಿ ಬಿನ್ ತಮ್ಮಯ್ಯ, ದೇವರೇಕೆರೆ, ಬೆಂಗಳೂರು.

ಮೇಲ್ಕಂಡ ಜಮೀನಿನ ಬಗ್ಗೆ ಮತ್ತೆ ಮಾತುಕತೆಗಳನ್ನು ನಡೆಸಿ, ಶ್ರೀ ಆರ್.ದಿನೇಶ್ ಕುಮಾರ್‌ರವರು ನಾಮನಿರ್ದೇಶಿಸುವ ಇತರೆ ವ್ಯಕ್ತಿಗಳಿಗೆ ಭೂಮಿಯನ್ನು ಮಾರಾಟ ಮಾಡುವುದಕ್ಕಾಗಿ (1), (2), (4), (5) ಹಾಗೂ ಇನ್ನೊಬ್ಬ ಸ್ಥಿರಾಸ್ಥಿ ವ್ಯವಹಾರಗಾರರಾದ ಶ್ರೀ ಕೆ.ರಾಜಾನರೇಂದ್ರ, ಸಹಕಾರನಗರ, ಬೆಂಗಳೂರು(ತಂದೆ ದಿವಂಗತ ಬಾಲರಂಗಪ್ಪ, ಹೈದರಾಬಾದ್ ನಿವಾಸಿ) ಇವರ ನಡುವೆ ಅಭಿವೃದ್ಧಿಪಡಿಸಿ, ಮಾರಾಟ ಮಾಡುವ ಸಲುವಾಗಿ 9.17 ಕೋಟಿ ರೂಪಾಯಿಗಳ ಪ್ರತಿಫಲ ಹಣಕ್ಕಾಗಿ ಮತ್ತೊಂದು ಒಪ್ಪಂದ ಪತ್ರ ಮಾಡಿಕೊಳ್ಳಲಾಯಿತು.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಯವರ ದಿನಾಂಕ 5–12–2006ರ ವರದಿಯ ಪ್ರಕಾರ, ಕೆಂಗೇರಿಯ ಸಬ್ ರಿಜಿಸ್ಟ್ರಾರು, 28–7–2006 ರಿಂದ 17–8–2006 ರ ಅವಧಿಯಲ್ಲಿ ತುರಹಳ್ಳಿ ಕಿರು ಅರಣ್ಯ ಪ್ರದೇಶದ ಭೂಮಿಗಳನ್ನು ಒಳಗೊಂಡ, 43 ದಾಖಲೆಗಳನ್ನು ನೋಂದಣಿ ಮಾಡಿದ್ದರು. ಕಂದಾಯ ಹಾಗೂ ನೋಂದಣಿ ಇಲಾಖೆಯ ಅಧಿಕಾರಿಗಳು ಮಾಡಿದ ಅನೇಕ ಅಕ್ರಮಗಳನ್ನು ಗಮನಿಸಿ, ಕೆಂಗೇರಿಯ ಸಬ್ ರಿಜಿಸ್ಟ್ರಾರ್, ಕಂದಾಯ ಪರಿವೀಕ್ಷಕ ಮತ್ತು ಸರ್ವೇಯರ್‌ಗಳನ್ನು ಅಮಾನತಿನಲ್ಲಿಡಲಾಯಿತು ಮತ್ತು ನಿಯಮಗಳ ಉಲ್ಲಂಘನೆಗಾಗಿ ವಿಶೇಷ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಸಹಾಯಕ ನಿರ್ದೇಶಕರು, ಭೂ ದಾಖಲೆಗಳು ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಕೋರಲಾಗಿದೆ. ಆದರೆ ಸದರಿ ಸಬ್ ರಿಜಿಸ್ಟ್ರಾರ್ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾವೆ ಹೂಡಿದ್ದು ಅವರ ಅಮಾನತ್ತು ಆದೇಶವನ್ನು ರದ್ದುಪಡಿಸಲಾಯಿತು.

## ತುರಹಳ್ಳಿ ಕಿರು ಅರಣ್ಯ ಪ್ರದೇಶದ- ನಕಲಿ " ಸಾಗುವಳಿದಾರರು " ಹಾಗೂ ಭೂ ಕಬಳಿಕೆದಾರರು ಸಲ್ಲಿಸಿದ್ದ ಖೋಟಾ ಅರ್ಜಿಯ ಮೇಲೆ ಉಚ್ಚ ನ್ಯಾಯಾಲಯದ ಆದೇಶಗಳ ಪರಿಣಾಮಗಳು

ಉತ್ತರಹಳ್ಳಿ ಮನವರ್ತೆಕಾವಲ್‌ನ ಸರ್ವೆ ನಂಬರ್ 5ರಲ್ಲಿ, ಅನಧಿಕೃತ ಸಾಗುವಳಿದಾರರೆಂದು ಹೇಳಿಕೊಂಡ ತೊಂಬತ್ತನಾಲ್ಕು ಜನರು, 2000 ರಲ್ಲಿ ಸರ್ಕಾರದ ವಿರುದ್ಧ ಎಂದರೆ, ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಕರು, ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ವಲಯ (ರೇಂಜ್) ಅರಣ್ಯ ಅಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಅಕ್ರಮ ಸಾಗುವಳಿ ಸಕ್ರಮೀಕರಣ ಸಮಿತಿ, ಇವರ ವಿರುದ್ಧ ರಿಟ್ ಅರ್ಜಿ ಸಂಖ್ಯೆ: 31316 ರಿಂದ 31409/2000 (ಕೆ.ಎಲ್.ಆರ್.) ಸಲ್ಲಿಸಿ ಅರ್ಜಿಯಲ್ಲಿ ಸದರಿ ಭೂಮಿಗಳ ತಮ್ಮ ಸ್ವಾಧೀನವನ್ನು ಕಸಿದುಕೊಳ್ಳಬಾರದಂತೆ ಪ್ರತಿವಾದಿಗಳಿಗೆ ನಿರ್ದೇಶಿಸಬೇಕೆಂದು ಮತ್ತು ತಮ್ಮಲ್ಲಿ ಪ್ರತಿಯೊಬ್ಬರಿಗೂ 4 ಎಕರೆ ಜಮೀನನ್ನು ಮಂಜೂರು ಮಾಡಲು ನಿರ್ದೇಶಿಸಬೇಕೆಂದು ಪ್ರಾರ್ಥಿಸಿದ್ದರು. (ತಲಾ 4 ಎಕರೆಗಳಂತೆ ಲೆಕ್ಕ ಹಾಕಿದರೆ

ಅದು 376 ಎಕರೆಗಳಷ್ಟಾಗುತ್ತದೆ, ಆದರೆ ಸರ್ವೆ ನಂಬರ್ 5 ರಲ್ಲಿರುವ ಒಟ್ಟು ಭೂಮಿ 343 ಎಕರೆ 38 ಗುಂಟೆಗಳು ಮಾತ್ರ) ಒಮ್ಮೆ ದಾಖಲೆಗಳನ್ನು ಕಣ್ಣಾಡಿಸಿ ನೋಡಿದ್ದರೂ ಅಥವಾ ಮೇಲಿನ ಸಣ್ಣ ಲೆಕ್ಕಾಚಾರ ಹಾಕಿ ನೋಡಿದ್ದರೂ, ನ್ಯಾಯಾಲಯಕ್ಕೆ ಇಲ್ಲಿನ ಗೋಲ್ ಮಾಲ್ ಮನವರಿಕೆಯಾಗುತ್ತಿತ್ತು.

ಆದರೂ ದಿನಾಂಕ 21-12-2001 ರಂದು, ನ್ಯಾಯಾಲಯವು, ಸರ್ವೆ ನಂ. 5 ರಲ್ಲಿ ತುರಹಳ್ಳಿ ಕಿರು ಅರಣ್ಯವೆಂದು ತೋರಿಸಿ ಕಂದಾಯ ದಾಖಲೆಗಳಲ್ಲಿ ಅಂಗೀಕರಿಸಲಾದ ಹಕ್ಕು ಬದಲಾವಣೆ ನಮೂದನ್ನು, ಅರಣ್ಯ ಇಲಾಖೆಯು ದಾಖಲೆಗಳನ್ನು ಹಾಜರುಪಡಿಸಿ ಸದರಿ ನಮೂದನ್ನು **"ರುಜುವಾತು"** ಪಡಿಸುವವರೆಗೆ, ಕಾನೂನು ಬದ್ಧ ಹಾಗೂ ಸಿಂಧುವೆಂದು ಪರಿಗಣಿಸತಕ್ಕದ್ದಲ್ಲವೆಂದು ತೀರ್ಮಾನಿಸಿ ಆದೇಶ ನೀಡಿತು. ಅಲ್ಲದೆ ಸದರಿ ಜಮೀನು ಬೆಂಗಳೂರು ನಗರ ಪಾಲಿಕೆ ಪ್ರದೇಶದಿಂದ 18 ಕಿ.ಮೀ. ವ್ಯಾಪ್ತಿಯೊಳಗೆ ಇದೆಯೇ ಎಂಬುದು **" ವಿವಾದಿತ ಪ್ರಶ್ನೆ "** ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ, ಅಕ್ರಮ ಸಾಗುವಳಿ ಸಕ್ರಮೀಕರಣ ಸಮಿತಿಯು ಈ ಎಲ್ಲ ಅಂಶಗಳನ್ನು ಪರಿಶೀಲಿಸಿ 6 ತಿಂಗಳೊಳಗೆ ಅಂತಿಮ ಆದೇಶ ನೀಡುವಂತೆ ನಿರ್ದೇಶಿಸಿತು.

ಬೆಂಗಳೂರು ಮತ್ತು ಇತರ ನಗರಗಳು ತ್ವರಿತಗತಿಯಲ್ಲಿ ನಗರೀಕರಣವಾಗುತ್ತಿರುವ ಕಾರಣ ಹಾಗೂ ಕೃಷಿ ಜಮೀನುಗಳ ದುರುಪಯೋಗವೂ ಹೆಚ್ಚುತ್ತಿರುವ ಕಾರಣ ರಾಜ್ಯವು ಭೂ ಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ, ಬೆಂಗಳೂರು ಮಹಾನಗರ ಪಾಲಿಕೆಯ ಪರಿಮಿತಿಗಳಿಂದ 18 ಕಿ.ಮೀ. ವ್ಯಾಪ್ತಿಯೊಳಗೆ ಬರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವುದನ್ನು ಪ್ರತಿಬಂಧಿಸುವುದಕ್ಕಾಗಿ 1991 ರಲ್ಲಿ 94ಎ ಪ್ರಕರಣವನ್ನು ಸೇರಿಸಿತು. ಇದನ್ನೆ ಬೇರೆ ರೀತಿ ಹೇಳುವುದಾದರೆ, ಬೆಂಗಳೂರಿನಿಂದ 18 ಕಿ.ಮೀ. ವ್ಯಾಪ್ತಿ ಒಳಗೆ 2001 ರಲ್ಲಿ ಅರ್ಹ ವ್ಯಕ್ತಿಯೇ ವಾಸ್ತವಿಕವಾಗಿ ಅನಧಿಕೃತ ಸಾಗುವಳಿ ಮಾಡುತ್ತಿದ್ದರೂ ಅದನ್ನು ಸಕ್ರಮಗೊಳಿಸಲು ಸಾಧ್ಯವಿರಲಿಲ್ಲ. ಇನ್ನು ಅರಣ್ಯ ಜಮೀನುಗಳ ಸಂಬಂಧದಲ್ಲಿ, ಭಾರತ ಸರ್ಕಾರದ ಅನುಮೋದನೆ ಇಲ್ಲದೇ ರಾಜ್ಯ ಸರ್ಕಾರವು ಅಂಥ ಯಾವುದೇ ಮಂಜೂರಾತಿಯನ್ನು ಮಾಡಬಾರದೆಂದು ಅರಣ್ಯಗಳ ಸಂರಕ್ಷಣಾ ಅಧಿನಿಯಮ, 1980 ಸ್ಪಷ್ಟವಾಗಿ ನಿಷೇಧಿಸುತ್ತಿರುವುದರಿಂದ ಅಕ್ರಮ ಸಾಗುವಳಿ ಸಕ್ರಮಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದನ್ನು **"ಗೋದವರ್ಮನ್ ತಿರುಮಲ್ ಪಾದ್ - ವಿರುದ್ಧ - ಭಾರತ ಸರ್ಕಾರ ಪ್ರಕರಣದಲ್ಲಿ - ರಿಟ್ ಅರ್ಜಿ ಸಂಖ್ಯೆ 202 (ಸಿವಿಲ್)/1995, ದಿನಾಂಕ 12-12-1996ರ ಅದೇಶದಲ್ಲಿ"** ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟಪಡಿಸಿದೆ. ಈ ಅಧಿನಿಯಮದಲ್ಲಿ **" ಅರಣ್ಯ"** ಎಂಬ ಹೆಸರನ್ನು ಕಾನೂನಿನ ಪರಿಭಾಷೆಯಲ್ಲಷ್ಟೇ ಅಲ್ಲ ನಿಘಂಟಿನ ಅರ್ಥಗಳಲ್ಲಿ ಸಹ ಯಾವುದೇ ದಾಖಲೆಯಲ್ಲಿ ನಮೂದಿಸಲಾಗಿದ್ದರೆ, ಆ ಭೂಮಿಯನ್ನು ಅರಣ್ಯ ಪ್ರದೇಶವೆಂದು ಪರಿಗಣಿಸಬೇಕು ಮತ್ತು ಭಾರತ ಸರ್ಕಾರದ ಅನುಮತಿ ಇಲ್ಲದೇ ಅದನ್ನು ಯಾವ ರಾಜ್ಯ ಸರ್ಕಾರವೂ ಮಂಜೂರು ಮಾಡತಕ್ಕದ್ದಲ್ಲ. ಈ ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನ ಈ ರೀತಿ ಇದೆ.

**"ಕಂಡಿಕೆ 4. ಅರಣ್ಯ ಸಂರಕ್ಷಣಾ ಅಧಿನಿಯಮ 1980 ನ್ನು, ಪರಿಸರವನ್ನೇ ಅಸಮತೋಲನ ಗೊಳಿಸುವಂಥಹ ಪರಿಣಾಮ ಬೀರುವ ಅರಣ್ಯ ನಾಶವನ್ನು ತಡೆಯುವ ದೃಷ್ಟಿಯಿಂದ ಅಧಿನಿಯಮಿಸಲಾಯಿತು;**

ಆದ್ದರಿಂದ ಅರಣ್ಯಗಳ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಅಧಿನಿಯಮದಲ್ಲಿ ಕಲ್ಪಿಸಲಾದ ಉಪಬಂಧಗಳು, ಅರಣ್ಯದ ಮಾಲೀಕರು ಯಾರೇ ಆಗಲಿ ಅಥವಾ ಅದರ ವರ್ಗೀಕರಣ ಏನೇ ಇರಲಿ ಎಲ್ಲಾ ಅರಣ್ಯಗಳಿಗೂ ಅನ್ವಯವಾಗಲೇಬೇಕು. "ಅರಣ್ಯ" ಎಂಬ ಪದವನ್ನು ನಿಘಂಟಿನ ಅರ್ಥಕ್ಕನುಸಾರ ತಿಳಿದುಕೊಳ್ಳಬೇಕು. ಅರಣ್ಯ ಸಂರಕ್ಷಣಾ ಅಧಿನಿಯಮದ 2(1) ಪ್ರಕರಣದ ಉದ್ದೇಶಕ್ಕಾಗಿ ಮೀಸಲು ಅರಣ್ಯ, ರಕ್ಷಿತ ಅರಣ್ಯ ಅಥವಾ ಇತರ ಯಾವುದೇ ಹೆಸರಿನಿಂದ ಕರೆಯುವ ಅರಣ್ಯವಾಗಿರಲಿ, ಈ ವಿವರಣೆಯು ಶಾಸನಾತ್ಮಕವಾಗಿ ಮಾನ್ಯವಾದ ಎಲ್ಲಾ ಅರಣ್ಯಗಳನ್ನು ಒಳಗೊಳ್ಳುತ್ತದೆ. 2ನೇ ಪ್ರಕರಣದಲ್ಲಿರುವ " ಅರಣ್ಯ ಭೂಮಿ" ಎಂಬ ಪದಾವಳಿಯೂ ನಿಘಂಟಿನಲ್ಲಿ "ಅರಣ್ಯ" ಎಂಬ ಪದಕ್ಕೆ ಕೊಟ್ಟಿರುವ ಅರ್ಥ ವ್ಯಾಪ್ತಿಯಲ್ಲಿ ಬರುವ ಪ್ರದೇಶವನ್ನಷ್ಟೇ ಅಲ್ಲ ಮಾಲೀಕತ್ವ ಯಾರದ್ದೇ ಇರಲಿ ಸರ್ಕಾರದ ದಾಖಲೆಗಳಲ್ಲಿ ಅರಣ್ಯವೆಂದು ದಾಖಲಿಸಿರುವ ಯಾವುದೇ ಪ್ರದೇಶವನ್ನೂ ಒಳಗೊಳ್ಳುತ್ತದೆ. ಆದ್ದರಿಂದ, ಅಧಿನಿಯಮದ 2ನೇ ಪ್ರಕರಣದ ಉದ್ದೇಶಕ್ಕಾಗಿ ಅರ್ಥ ಮಾಡಿಕೊಳ್ಳಬೇಕಾದ ರೀತಿ ಇದು.ಅರಣ್ಯಗಳ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಅರಣ್ಯ ಸಂರಕ್ಷಣಾ ಅಧಿನಿಯಮ, 1980 ರಲ್ಲಿ ಅಧಿನಿಯಮಿಸಲಾದ ಉಪಬಂಧಗಳು, ಅರಣ್ಯದ ಮಾಲಿಕತ್ವ ಅಥವಾ ವರ್ಗೀಕರಣ ಏನೇ ಇದ್ದರೂ ಹಾಗೆ ಅರ್ಥ ಮಾಡಿಕೊಂಡ ಎಲ್ಲ ಅರಣ್ಯಗಳಿಗೆ ಸ್ಪಷ್ಟವಾಗಿ ಅನ್ವಯವಾಗಲೇ ಬೇಕು"

ಕಂದಾಯ ಇಲಾಖೆಯ ಗೇಣಿ ಪಹಣಿ (ಆರ್‌ಟಿಸಿ) ನಮೂನೆಯಲ್ಲಿ ನಮೂದಾಗಿರುವುದಕ್ಕೆ ಪೂರ್ವಭಾವನೆಯ ಮಹತ್ವವಿರುತ್ತದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 133ನೇ ಕಲಂ ಈ ರೀತಿ ಹೇಳುತ್ತದೆ:-

"133. ದಾಖಲೆಗಳಲ್ಲಿಯ ನಮೂದುಗಳ ಬಗ್ಗೆ ಪೂರ್ವಭಾವನೆ:- ಹಕ್ಕು ದಾಖಲೆಯಲ್ಲಿಯ (ಪಹಣಿಯ) ಒಂದು ನಮೂದನ್ನು ಮತ್ತು ಹಕ್ಕು ಬದಲಾವಣೆ ರಿಜಿಸ್ಟರ್ ನಲ್ಲಿಯ ಅಥವಾ ಪಟ್ಟಾ ಪುಸ್ತಕದಲ್ಲಿಯ ಪ್ರಮಾಣಿತ ನಮೂದನೆಯನ್ನು ಅದಕ್ಕೆ ವಿರುದ್ಧವಾದುದು ರುಜುವಾತು ಆಗುವವರೆಗೂ ಅಥವಾ ಅದರ ಬದಲಿಗೆಹೊಸ ನಮೂದನ್ನು ಕಾನೂನುಬದ್ಧವಾಗಿ ಪ್ರತಿಯೋಜಿಸುವವರೆಗೂ ನಿಜವಾದುದೆಂದು ಪೂರ್ವಭಾವನೆ ಮಾಡತಕ್ಕದ್ದು."

ಇದನ್ನೇ ಈ ರೀತಿಯಾಗಿ ಹೇಳಬಹುದು. ಈ ಪೂರ್ವಭಾವನೆಯು ಸುಳ್ಳೆಂದು ಪ್ರತಿವಾದಿಸಲು ಅವಕಾಶವಿರುವ ಖಂಡನಾರ್ಹ ಪೂರ್ವಭಾವನೆಯಾಗಿರುವುದರಿಂದ, ಇದು ಸುಳ್ಳೆಂಬ ಪ್ರತಿವಾದವನ್ನು ಯಾವ ವ್ಯಕ್ತಿ ಹಾಗೆಂದು ಹಕ್ಕಿನಿಂದ ಹೇಳುತ್ತಾನೋ ಆತ ಮಾಡಬೇಕು. ಆದ್ದರಿಂದ, ಪಹಣಿ ನಮೂದು ಮತ್ತು ಹಕ್ಕು ಬದಲಾವಣೆ ನಮೂದು ಆ ಭೂಮಿಯ ಅರಣ್ಯ ಭೂಮಿ ಎಂದು ಈಗಾಗಲೇ ತಿಳಿಸಿದ್ದು ಅದರ ಆಧಾರದ ಮೇಲೆ 1934 ರಲ್ಲಿ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುವಾಗ ಕಂದಾಯ ದಾಖಲೆಗಳಲ್ಲಿ ಅರಣ್ಯ ಭೂಮಿ ಎಂದು ನಮೂದಾಗಿರುವುದು ತಪ್ಪು ಎಂದು " ಅನಧಿಕೃತ ಸಾಗುವಳಿದಾರರೆಂದು " ಹೇಳಿಕೊಳ್ಳುವ 94 ಅರ್ಜಿದಾರರು, ರುಜುವಾತುಪಡಿಸಬೇಕಾಗಿತ್ತೇ ಹೊರತು ನಮೂದು ಸರಿಯಾಗಿದೆ ಎಂದು ಅರಣ್ಯ ಇಲಾಖೆಯು ರುಜುವಾತುಪಡಿಸಬೇಕಾದ ಪ್ರಮೇಯವಿಲ್ಲ.

ಬೆಂಗಳೂರಿನ 18 ಕಿ.ಮೀ. ವ್ಯಾಪ್ತಿಯೊಳಗೆ ಇರುವ ಸರ್ಕಾರಿ ಭೂಮಿಯ ಅಕ್ರಮ ಸಾಗುವಳಿಯನ್ನು ಸಂಪೂರ್ಣ ನಿಷೇಧಿಸುವುದು (ರಾಜ್ಯ ಸರ್ಕಾರವು ಮಂಜೂರು ಮಾಡಲು ಸಾಧ್ಯವೇ ಇಲ್ಲದ ಅರಣ್ಯ ಭೂಮಿಯ ಸಕ್ರಮೀಕರಣವಂತೂ

ದೂರದ ಮಾತು) ಕಷ್ಟವಾದುದೇನಲ್ಲ ಹಾಗೂ ಜಟಿಲವಾದ "ವಿವಾದಿತ ಸಂಗತಿ"ಯೂ ಅಲ್ಲ. ನ್ಯಾಯಾಲಯವು, ಪ್ರತಿವಾದಿ (1), ಮುಖ್ಯ ಕಾರ್ಯದರ್ಶಿಯವರನ್ನಾಗಲಿ ಅಥವಾ ಇತರ ಯಾವೊಬ್ಬ ಪ್ರತಿವಾದಿಯನ್ನು, ಸರ್ವೆ ನಂ. 5 ಬೆಂಗಳೂರು ಮಹಾನಗರ ಪಾಲಿಕೆಯಿಂದ ಎಷ್ಟು ದೂರದಲ್ಲಿದೆ ಎಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವಂತೆ ಸುಲಭವಾಗಿ ಕೇಳಬಹುದಾಗಿತ್ತು. ಅಕ್ರಮ ಸಾಗುವಳಿ ಸಕ್ರಮೀಕರಣ ಸಮಿತಿಯು ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಆರು ತಿಂಗಳೊಳಗೆ ಅಂತಿಮ ಆದೇಶ ನೀಡಬೇಕೆಂದು ದಿನಾಂಕ 21.12.2001ರಂದು ನ್ಯಾಯಾಲಯವು ಆದೇಶಿಸಿದ್ದರೂ, ಸಮಿತಿಯು ಯಾವುದೇ ನಿರ್ಣಯ ಕೈಗೊಳ್ಳದೇ ದಿನಾಂಕ 26.3.2003ರಂದು ಆ ಬಗ್ಗೆ ವರದಿಯನ್ನು ನೀಡುವಂತೆ ಉಪ ವಿಭಾಗಾಧಿಕಾರಿಗಳಿಗೆ ಸೂಚಿಸಿತು. ಈ ಸಮಗ್ರ ಹಗರಣವು ಮಾಧ್ಯಮಗಳ ಮೂಲಕ ಬಹಿರಂಗವಾದ ಮೇಲೆ ಜಮೀನುಗಳು ಬೆಂಗಳೂರು ಮಹಾನಗರ ಪಾಲಿಕೆಯ ಪರಿಮಿತಿಗಳಿಂದ 18 ಕಿ.ಮಿ. ಒಳಗೆ ಬರುವುದರಿಂದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಸಮಿತಿಯು ದಿನಾಂಕ 02–02–2007 ರಂದು ತೀರ್ಮಾನ ನೀಡಿತು. ಉಚ್ಚ ನ್ಯಾಯಾಲಯವು ಈ ಅರ್ಜಿಗಳನ್ನು ವಿಲೇ ಮಾಡಬೇಕೆಂದು ತಿಳಿಸಿದ ಕೂಡಲೇ ಅವುಗಳನ್ನು ತಿರಸ್ಕರಿಸುವುದಕ್ಕೆ ಸಮಿತಿಗೆ ಇದ್ದ ಅಡ್ಡಿ ಆತಂಕಗಳಾದರೂ ಏನು? ಆ ಸರ್ವೆ ನಂಬರಿನ ಭೂಮಿಗಳು 18 ಕಿ.ಮಿ. ಒಳಗೇ ಇದೆ ಎಂಬುದು 2001ರ ಡಿಸೆಂಬರಿನಲ್ಲಿಯೇ ಸಮಿತಿಗೆ ತಿಳಿದಿತ್ತು. 18 ಕಿ.ಮಿ.ಗಳ ಈ ನಿಯಮವು ಸಕ್ರಮೀಕರಣಗೊಳಿಸಲು ಮುಖ್ಯವಾಗಿರುತ್ತದೆ. ಸಮಿತಿ ಮತ್ತು ಸಮಿತಿಯ ಅಧ್ಯಕ್ಷರಿಗೆ ತುರಹಳ್ಳಿ ಕಿರು ಅರಣ್ಯ ಪ್ರದೇಶ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯ ನಡುವಿನ ಅಂತರ ಎಷ್ಟೆಂಬುದು ತಿಳಿದಿದ್ದರೂ, ಉಪ ವಿಭಾಗಾಧಿಕಾರಿಗಳಿಂದ ವರದಿಯನ್ನು ಕೇಳುತ್ತಾ, ಐದು ವರ್ಷಗಳ ಕಾಲಹರಣ ಮಾಡಿತು. ಅಲ್ಲದೇ ಸಮಿತಿಯ ಕಾರ್ಯದರ್ಶಿಗಳಾದ ತಹಶೀಲ್ದಾರರವರು ಉಪ ವಿಭಾಗಾಧಿಕಾರಿಗಳಿಗೆ ವರದಿಯನ್ನು ನೀಡುವಂತೆ ಕೈಗೊಂಡ ಸಮಿತಿಯ ನಿರ್ಣಯವನ್ನು ಕಳುಹಿಸಲೇ ಇಲ್ಲ. ಇದರಿಂದ ಭೂಕಬಳಿಕೆಗಾರರ ಕೈಗಳ ಉದ್ದ ಮತ್ತು ಬಲ ಎಷ್ಟು ಎಂಬುದು ತಿಳಿಯುತ್ತದೆ.

ಅಪೀಲಿನಲ್ಲಿಯೂ ವಿಭಾಗೀಯ ಪೀಠವು, ಏಕಪೀಠ ನ್ಯಾಯಮೂರ್ತಿಗಳ ಆದೇಶವನ್ನೇ ಎತ್ತಿ ಹಿಡಿಯಿತು. ಸರ್ವೋಚ್ಚ ನ್ಯಾಯಾಲಯವು **"ಗೋದವರ್ಮನ್"** ಪ್ರಕರಣದಲ್ಲಿ ನೀಡಿದ್ದ ನಿರ್ದೇಶನಗಳನ್ನಾಗಲಿ ಅಥವಾ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ 133ನೇ ಪ್ರಕರಣದ ಪೂರ್ವಭಾವನೆ ವಿಷಯವನ್ನಾಗಲಿ ಅಥವಾ 18 ಕಿ.ಮಿ. ವ್ಯಾಪ್ತಿಯೊಳಗೆ ಸಕ್ರಮಗೊಳಿಸುವುದನ್ನು ನಿಷೇಧಿಸಿರುವುದನ್ನಾಗಲಿ ಪರಿಗಣಿಸಿರುವುದಿಲ್ಲ. **ಕಾರ್ಯಾಂಗದವರು ಕಾನೂನು ಆಡಳಿತ ಪಾಲನೆಯಲ್ಲಿ ವಿಫಲವಾದಾಗಲೆಲ್ಲಾ, ಆಪದ್ಬಾಂಧವರಂತೆ ಕಾನೂನು ಎತ್ತಿಹಿಡಿಯಲು ನ್ಯಾಯಾಂಗ ಕಾರ್ಯೋತ್ಸಾಹ ತೋರುವುದು (Judicial activism) ಅತ್ಯಂತ ಹಾರ್ದಿಕ ಹಾಗೂ ಅಪೇಕ್ಷಣೀಯ. ಆದರೆ ಇಲ್ಲಿ ಭೂಗಳ್ಳರು ವಾದ–ಪ್ರತಿವಾದ ಮಂಡನೆಯ (adversarial) ಕಾನೂನು ವ್ಯವಸ್ಥೆಯಲ್ಲಿ ಇರುವ ಎಲ್ಲಾ ನ್ಯೂನತೆಗಳ ಲಾಭವನ್ನು ಯಾವ ಅಡೆತಡೆಯೂ ಇಲ್ಲದೆ ಬಳಸಿಕೊಂಡು ಸರ್ಕಾರದ ಕಾರ್ಯನೀತಿ, ಸರ್ವೋಚ್ಚ ನ್ಯಾಯಾಲಯ ನಿರೂಪಿಸಿದ ಕಾನೂನುಗಳಿಗೆ ವಿರುದ್ಧವಾಗಿ ಅವರು ಆಡಿದ್ದೇ ಆಟವಾಗಲು ಅವಕಾಶ ಮಾಡಿಕೊಡಲಾಗಿದೆ. ಹೀಗೇ ಬಿಟ್ಟಿದ್ದರೆ ಭೂಗಳ್ಳರು ತಮ್ಮ ಭೂಕಬಳಿಕೆಯ ಹುನ್ನಾರವನ್ನು ಸಾಧಿಸಿಕೊಂಡೇ ಬಿಡುತ್ತಿದ್ದರು!**

**ತುರಹಳ್ಳಿ ಕಿರು ಅರಣ್ಯ – ಅರಣ್ಯ ಕಾಯಿದೆ 1980 ಮತ್ತು ಗೋದವರ್ಮನ್ ತಿರುಮಲಪಾಡ್ ವಿರುದ್ಧ ಭಾರತ ಒಕ್ಕೂಟ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೊಳಿಸದೆ ವಿಫಲವಾಗಿರುವ ಅರಣ್ಯ ಇಲಾಖೆಯ ಪಾತ್ರ**

**ಕರ್ನಾಟಕ ಅರಣ್ಯ ಅಧಿನಿಯಮ, 1963:**

**ಪ್ರಕರಣ 64 ಎ.–** ಅರಣ್ಯ ಇಲಾಖೆಯ ನಿಯಂತ್ರಣದಲ್ಲಿರುವ ಯಾವುದೇ ಅರಣ್ಯ ಭೂಮಿ ಅಥವಾ ಇತರ ಭೂಮಿಯನ್ನು ಅನಧಿಕೃತವಾಗಿ ಅನುಭೋಗಿಸುತ್ತಿರುವ ಯಾವೊಬ್ಬ ವ್ಯಕ್ತಿಯನ್ನು ಸಹಾಯಕ ಅರಣ್ಯಗಳ ಸಂರಕ್ಷಣಾಧಿಕಾರಿಯ ಹುದ್ದೆಗೆ ಕಡಿಮೆಯಲ್ಲದ ಅರಣ್ಯ ಅಧಿಕಾರಿಯು ಕ್ಷಿಪ್ರವಾಗಿ ಹೊರಹಾಕಬಹುದು ಮತ್ತು ಅನಧಿಕೃತ ಅನುಭೋಗದಾರ ಆ ಭೂಮಿಯ ಮೇಲೆ ಬೆಳೆದಿರುವ ಬೆಳೆ, ಮರಗಳು, ಕಟ್ಟಿರುವ ಕಟ್ಟಡಗಳನ್ನು ತೆಗೆದುಹಾಕದಿದ್ದರೆ, ಅದನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

ಅಧಿನಿಯಮದ, **ಪ್ರಕರಣ 74–** ಒಂದು ತಿಂಗಳು ಅಥವಾ ಅದಕ್ಕೂ ಹೆಚ್ಚು ಕಾಲ ಕಾರಾವಾಸ ಶಿಕ್ಷೆಗೆ ಗುರಿಪಡಿಸಬಹುದಾದ ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಅಪರಾಧಕ್ಕಾಗಿ ಸಂಬಂಧಪಟ್ಟವನೆಂದು ಸಮಂಜಸವಾಗಿ ಶಂಕಿಸಲಾದ ಯಾವೊಬ್ಬ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಲು ಅರಣ್ಯ ಮತ್ತು ಪೊಲೀಸ್ ಅಧಿಕಾರಿಗಳಿಗೆ ಅಧಿಕಾರ ನೀಡುತ್ತದೆ.

ಕೆಳಕಂಡಂತೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸುವುದನ್ನು ಬಿಟ್ಟರೆ, ಅರಣ್ಯ ಇಲಾಖೆಯು, ತನಿಖೆ, ಅಭಿಯೋಜನೆ ಮತ್ತು ನ್ಯಾಯಾಲಯದಲ್ಲಿ ಅಧಿವಿಚಾರಣೆ ನಡೆಸಿ, ಈ ಪ್ರಕರಣಕ್ಕೆ ಸೂಕ್ತ ಪರಿಸಮಾಪ್ತಿ ಒದಗಿಸಲು ಮುಂದಿನ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

| ಕ್ರ. ಸಂ. | ಪ್ರ.ವ.ವ.ಸಂಖ್ಯೆ ಮತ್ತು ದಿನಾಂಕ | ಸರ್ವೆ ನಂಬರ್ | ಪ್ರ.ವ.ವರದಿಯಲ್ಲಿ ತೋರಿಸಲಾದ ವ್ಯಕ್ತಿಗಳು |
|---|---|---|---|
| 1 | 5/02–03/ 14–11–02 | 5 | ಮುನಿಕೃಷ್ಣ ಮತ್ತು ಇತರ 8 ಜನರು |
| 2 | 6/02–03/16–11–02 | 5 | ಮೈಕಾಳಪ್ಪ ಮತ್ತು ಇತರ 9 ಜನರು |
| 3 | 23/02–03/4–12–02 | 5 | ಗೌರಮ್ಮ ಕೋಂ/ ಲಕ್ಷ್ಮಯ್ಯನವರು |
| 4 | 24/02–03/4–12–02 | 42 | ಗಿರಿಯಮ್ಮ |
| 5 | 50/02–03/14–3–03 | 41 | ಶ್ರೀಮತಿ.ಜಿ.ಆರ್. ಲಕ್ಷ್ಮಿ ಬಿನ್ ಮನಮೋಹನ ಅತ್ತಾವರ |
| 6 | 14–3–03 ರ 51/02–03 | 42 | ದಾಮೋದರ ಶಕುಂತಲ |
| 7 | 8–3–06 ರ 8/05–06 | 42 | ಶಂಕರ್ ಮತ್ತು ಇನ್ನಿಬ್ಬರು |

| | | | |
|---|---|---|---|
| 8 | 8–3–06 ರ 18/06–07 | 42 | ನಾಗರಾಜ ಮತ್ತು ಇತರ 5 ಮಂದಿ |
| 9 | 10–8–06ರ 94/06–07 | 42 | ಬೈರಪ್ಪ ಮತ್ತು ಇನ್ನಿಬ್ಬರು |
| 10 | 8–8–06 ರ 96/06–07 | 5 | ವಜ್ರಪ್ಪ |
| 11 | 29–9–06 ರ 156/06–07 | 42 | ರೋಟರಿ ಕ್ಲಬ್ |

ಪ್ರತ್ಯೇಕ ಭೂ ಕಬಳಿಕೆದಾರರನ್ನು ಹೊರತುಪಡಿಸಿ, ತುರಹಳ್ಳಿ ಕಿರು ಅರಣ್ಯದ ಸರ್ವೆ ನಂ. 5 ರಲ್ಲಿ 42 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ದಿನಾಂಕ **07-11-2007** ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು **" ಅಧಿಸೂಚಿಸಿದೆ "** ಮತ್ತು ದಿನಾಂಕ **09-09-2003**ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ ಹಾಗೂ ದಿನಾಂಕ 31–01–2004ರಂದು ಐತೀರ್ಪನ್ನು (ಅವಾರ್ಡ್) ನೀಡಿದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಐತೀರ್ಪನ್ನು ನೀಡುವುದಕ್ಕೆ ಮೊದಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ರಚನೆಯ ಕಾಮಗಾರಿಯನ್ನು ಪ್ರಾರಂಭಿಸಿದೆ. ಅಧಿಕೃತ ಕಾಮಗಾರಿ ಆದೇಶವನ್ನು ಶ್ರೀ ವಿ.ಕೆ.ಗೋಪಾಲ್ ಅವರಿಗೆ 2.93 ಕೋಟಿ ರೂಪಾಯಿಗಳಿಗೆ ದಿನಾಂಕ 28–11–2003 ರಂದು ಹೊರಡಿಸಲಾಗಿದೆ. ಆದರೆ 2003ರ ಐ.ಎಸ್.ಆರ್.ಓ.ನ ಉಪಗ್ರಹ ನಕಾಶೆಯನ್ನು ಗಮನಿಸಿದಾಗ ವಾಸ್ತವವಾಗಿ ಕಾಮಗಾರಿಯನ್ನು ಸಾಕಷ್ಟು ಮೊದಲೇ ಪ್ರಾರಂಭಿಸಿರುವುದನ್ನು ಗುರುತಿಸಬಹುದಾಗಿದ್ದು, ಅದರಲ್ಲಿ ರಸ್ತೆಗಳನ್ನು ನಿರ್ಮಿಸಿ ಹಾಗೂ ಭೂಮಿಯನ್ನು ಸಮತಟ್ಟು ಮಾಡಿ ಬಡಾವಣೆಯನ್ನು ನಿರ್ಮಿಸಿರುವುದನ್ನು ತೋರಿಸುತ್ತದೆ. **"ಸರ್ವೆ ನಂ. 5ರಲ್ಲಿ ಅರಣ್ಯ ಇಲಾಖೆಯ 42 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ 07-11-2002ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಧಿಸೂಚನೆಯನ್ನು ಹೊರಡಿಸಿದಾಗ ಮತ್ತು ದಿನಾಂಕ 09-09-2003 ರಂದು ಅಂತಿಮ ಆದೇಶವನ್ನು ಹೊರಡಿಸಿದಾಗ ಹಾಗೂ 2003ರಲ್ಲಿಯೇ ಬಡಾವಣೆಯ ನಿರ್ಮಾಣ ಮಾಡುವಾಗ ಅರಣ್ಯ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದರು?"** ಕೇವಲ ಭಕ್ತಿಯಿಂದ ಗೋಧವರ್ಮನ್ ಪ್ರಕರಣದ ಜಪವನ್ನು ಮಾಡುತ್ತಾ, ಅದೇ ಭಜನೆಯನ್ನು ಸದಾ ಮಾಡುತ್ತಿದ್ದರೆ, ಭೂ ಕಬಳಿಕೆದಾರರು ಅರಣ್ಯ ಭೂಮಿಯನ್ನು ಕಬಳಿಸದೆ ಬಿಟ್ಟು ಓಡುವರೇ? ರಾಜಾರೋಷವಾಗಿ 2002ರಿಂದ ಭೂ ಕಬಳಿಕೆದಾರರು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಮಿ ನುಂಗಿ ಹಾಕುತ್ತಿದ್ದರೂ ಅರಣ್ಯ ಇಲಾಖೆ ತನಗೆ ಇರುವ ಅಧಿಕಾರ ಚಲಾಯಿಸಿ ತಡೆಗಟ್ಟುವ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಅದೇ ರೀತಿಯಲ್ಲಿ ಗೋಧವರ್ಮನ್ ತೀರ್ಪಿನ ಬೆಂಬಲ ತಮಗಿರುವಾಗ ಅರಣ್ಯ ಇಲಾಖಾ ಅಧಿಕಾರಿಗಳು ಧೈರ್ಯವಾಗಿ ಅರಣ್ಯ ಭೂ ಕಬಳಿಕೆದಾರರ ಕ್ರಿಮಿನಲ್ ಕೃತ್ಯದ ವಿರುದ್ಧ ಕಾನೂನು ಸಮರವನ್ನು ನಡೆಸಿ ಅವರು ಕಟ್ಟಿರುವ ಕಟ್ಟಡಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳಬೇಕಿತ್ತು. ಬೆಂಗಳೂರು ನಗರ ಅರಣ್ಯ ವಿಭಾಗದ ಅಧಿಕಾರಿಗಳು ಈ ಕೆಲಸವನ್ನು ಮಾಡುವಲ್ಲಿ ವಿಫಲರಾಗಿದ್ದಾರೆ.

ಸಮಿತಿಯು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಈ ಕುರಿತು ವಿಚಾರಿಸಿ ತುರಹಳ್ಳಿ ಕಿರು ಅರಣ್ಯದಲ್ಲಿ ಹಾಗೂ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ (ಈ ಮುಂದೆ ವಿವರಿಸಲಾಗಿದೆ) ಭೂ ಕಬಳಿಕೆದಾರರ ವಿರುದ್ಧ **" ಏನು ಕ್ರಮ ತೆಗೊಂಡಿದ್ದೀರಿ"** ಎಂದು ವಿಚಾರಿಸಿದಾಗ ಅರಣ್ಯ ಇಲಾಖೆಯು " ಕ್ರಮವನ್ನು ಕೈಗೊಳ್ಳಲಾಗಿದೆ " ಎಂಬ ಉತ್ತರ ಹೇಳಿದರು. ಅರಣ್ಯ ಇಲಾಖೆಯು **"ಕೈಗೊಂಡ ಕ್ರಮ"** ಎಂದರೆ ಕೇವಲ ಎಫ್.ಐ.ಆರ್.ಗಳನ್ನು ದಾಖಲಿಸಿರುವುದು.

ಎಫ್.ಐ.ಆರ್. ಗಳನ್ನು ದಾಖಲಿಸಿ ಬಿಟ್ಟರೆ ತಮ್ಮ ಕೆಲಸ ಮುಗಿಯಿತು, ಮಾಡಬೇಕಾದ್ದನ್ನೆಲ್ಲಾ ಮಾಡಿ ಮುಗಿಸಿದ ಹಾಗೆ, ಅರಣ್ಯಗಳ ಸಂರಕ್ಷಣೆ ಮತ್ತು ಕಾಪಾಡುವ ತಮ್ಮ ಎಲ್ಲ ಜವಾಬ್ದಾರಿ ಪೂರ್ಣಗೊಂಡ ಹಾಗೆ ಎಂದು ಅರಣ್ಯ ಇಲಾಖೆ ಭಾವಿಸಿದಂತಿದೆ. ಇದರಿಂದಾಗಿ, ಅರಣ್ಯ ಅಧಿನಿಯಮ, 1963 ಮತ್ತು 1980 ಇವುಗಳ ಅಡಿಯಲ್ಲಿ ಅವರುಗಳಿಗೆ ಇಷ್ಟೆಲ್ಲಾ ಅಧಿಕಾರಗಳನ್ನು ನೀಡಿರುವುದು ಸುಮ್ಮನೆ ಹೊಳೇಲಿ ಹುಣಸೆ ಹಣ್ಣು ತೊಳೆದ ಹಾಗೆ ಆಯಿತು. 2006ರ ಜುಲೈನಲ್ಲಿ ಸಮಿತಿಯು ಈ ಬಗ್ಗೆ ಒತ್ತಿ ಒತ್ತಿ ಹೇಳಿದ ಮೇಲೆ ಮಾತ್ರವೇ ಇಲಾಖೆಯು ಎಚ್ಚೆತ್ತುಕೊಂಡು ಕೆಲವು ಪ್ರಕರಣಗಳನ್ನು ಮಾತ್ರ ದಾಖಲಿಸಿದೆ ಎಫ್.ಐ.ಆರ್.ಯನ್ನು ದಾಟಿ ಮುಂದುವರೆಯಲು ಪ್ರಯತ್ನವನ್ನು ಮಾಡಿದೆ. ಕೆಲವೊಂದು ಪ್ರಕರಣದಲ್ಲಿ ಪ್ರ.ವ.ವ. ದಾಖಲಿಸುವುದನ್ನು ಬಿಟ್ಟರೆ ನೀವೇನೂ ಮಾಡಿಲ್ಲವಲ್ಲ ಏಕೆ ಎಂದು ಸಮಿತಿಯು ನಿರ್ದಿಷ್ಟವಾಗಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕೇಳಿದಾಗ ಮೇಲಿಂದ ಹಾಗೆ ಸೂಚನೆ ಬಂದಿದೆ ಎಂದು ಬಲು ಅಸ್ಪಷ್ಟವಾಗಿ ಇಂಗಿತ ಸೂಚಿಸಿದ್ದು ಬಿಟ್ಟರೆ ಇನ್ನಾವ ಉತ್ತರವು ಅವರಲ್ಲಿರಲಿಲ್ಲ.

94 ವ್ಯಕ್ತಿಗಳು ತುರಹಳ್ಳಿಯ ಅರಣ್ಯ ಭೂಮಿಯಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆಂಬ ಬಗ್ಗೆ ಯಾವ ದಾಖಲೆಗಳೂ ಇಲ್ಲ. ನ್ಯಾಯಾಲಯದ ಮುಂದೆ ತಾವುಗಳು ಅರಣ್ಯ ಭೂಮಿಯ ಅನಧಿಕೃತ ಸಾಗುವಳಿದಾರರೆಂದು ಪ್ರಮಾಣಪತ್ರಗಳನ್ನು ಸಲ್ಲಿಸಲು ಕಟ್ಟಡದಾರರು ಮತ್ತು ಭೂ ಕಬಳಿಕೆದಾರರಿಂದ ಎತ್ತಿ ಕಟ್ಟಲಾದ ಈ 94 ಜನರನ್ನು ಅರಣ್ಯ ಅಧಿನಿಯಮದ ನಿರ್ಲಕ್ಷ ಮತ್ತು ನಿಷ್ಕ್ರಿಯೆಯಲ್ಲಿ ತೊಡಗಿರುವುದು ಸ್ಪಷ್ಟವಾಗಿರುತ್ತದೆ.

* * * * *

## 11. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಬೆಂಗಳೂರು ಅರಣ್ಯ ವಿಭಾಗ ಇವುಗಳಲ್ಲಿ ಭೂ ಕಬಳಿಕೆ ಮತ್ತು ಉದ್ಯಾನವನ್ನು ರಕ್ಷಿಸುವಲ್ಲಿ ಹಾಗೂ ಒತ್ತುವರಿ ಮಾಡಿದವರನ್ನು ತೆರವುಗೊಳಿಸುವಲ್ಲಿ ಅರಣ್ಯ ಇಲಾಖೆಯ ವೈಫಲ್ಯ:

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಒಟ್ಟು ವಿಸ್ತೀರ್ಣ 26,681 ಎಕರೆಗಳು (102 ಚದರ ಕಿ.ಮೀ.ಗಳು) ಈ ಭೂಮಿ ಬೆಂಗಳೂರು ನಗರ ಜಿಲ್ಲೆ (18198 ಎಕರೆಗಳು) ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ (8484 ಎಕರೆ ಗಳು) ಗಳಲ್ಲಿ ಬರುತ್ತದೆ. ಈ ಉದ್ಯಾನವನವನ್ನು ರಾಷ್ಟ್ರೀಯ ವನ್ಯಜೀವಿ ಅಧಿನಿಯಮ 1972ರ 35ನೇ ಪ್ರಕರಣದ ಅಡಿಯಲ್ಲಿ 1974ರಲ್ಲಿ ಸ್ಥಾಪಿಸಲಾಯಿತು. ಈ ಉದ್ಯಾನವನದ ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕಾಗಿಯೇ ಭಾರತ ಅರಣ್ಯ ಸೇವೆಯ ಒಬ್ಬ ಉಪ ಅರಣ್ಯ ಸಂರಕ್ಷಕರು ಇದ್ದಾರೆ. ಇವರ ಅಡಿಯಲ್ಲಿ ಈ ಮುಂದಿನ ಸಿಬ್ಬಂದಿ ಇರುತ್ತಾರೆ: –

| ಪ್ರವರ್ಗ | ಮಂಜೂರಾದದು | ಕರ್ತವ್ಯದ ಮೇಲೆ | ಷರಾ |
|---|---|---|---|
| ಕಾವಲುಗಾರರು | 70 | 70 | 122 ರೂ. ಗಳ ದಿನಗೂಲಿ ಮೇಲೆ (ತಿಂಗಳಿಗೆ 3600–00 ರೂ.ಗಳು) |
| ಗಾರ್ಡ್‌ಗಳು | 16 | 13 | ಖಾಯಂ. ತಿಂಗಳಿಗೆ 6,000–00 ರೂ. ಸಂಬಳ |
| ಫಾರೆಸ್ಟರ್ | 3 | 3 | ಖಾಯಂ. ತಿಂಗಳಿಗೆ 8,000–00 ರೂ. (ಕನಿಷ್ಠ ಪಿ. ಯು.ಸಿ.) |
| ಆರ್.ಎಫ್.ಓ. | 3 | 3 | ಖಾಯಂ. ಸಂಬಳ ತಿಂಗಳಿಗೆ 11,000–00 ರೂ. ( ಕನಿಷ್ಠ ಪದವೀಧರ ) |
| ಎ.ಸಿ.ಎಫ್. | 1 | 1 | ಐ.ಎಫ್.ಎಸ್.ಗೆಜೆಟೆಡ್, ಸಂಬಳ ರೂ.18,000 ತಿಂಗಳಿಗೆ |
| ಡಿ.ಸಿ.ಎಫ್. | 1 | 1 | ಐ.ಎಫ್.ಎಸ್.,ಎ.ಸಿ.ಎಫ್.ನಿಂದ ಬಡ್ತಿ ಮೇಲೆ ಸಂಬಳ ತಿಂಗಳಿಗೆ ರೂ. 21,000 |
| ಒಟ್ಟು | **94** | **91** | |

ಆದ್ದರಿಂದ ಒಬ್ಬ ಕಾವಲುಗಾರ ಕಾವಲು ಕಾಯಬೇಕಾದ ಪ್ರದೇಶ ಸುಮಾರು 1.5 ಚದರ ಕಿ.ಮೀ.ಗಳು, ಒಬ್ಬ ಗಾರ್ಡ್ ಕಾಯಬೇಕಾದುದು 8 ಚದರ.ಕಿ.ಮೀ. ತಮ್ಮ ಸಿಬ್ಬಂದಿಯ ಕಾರ್ಯವನ್ನು ಮೇಲ್ವಿಚಾರಣೆ ಮಾಡಲು ಎ.ಸಿ.ಎಫ್. ಮತ್ತು ಡಿ.ಸಿ.ಎಫ್.ಗಳಿಗೆ ವಾಹನಗಳಿವೆ.

ಸಮಿತಿಯು ತಾವು ಸ್ವೀಕರಿಸಿದ ವಿವಿಧ ದೂರುಗಳನ್ನು ಕುರಿತು ಚರ್ಚೆ ನಡೆಸಲು ಅನೇಕ ಸಲ ಅರಣ್ಯ ಇಲಾಖೆಯವರನ್ನು ಕರೆದಿದೆ. ಈ ಸಭೆಗಳನ್ನು ಬೆಂಗಳೂರು, ಆನೇಕಲ್ ಮತ್ತು ಯಲಹಂಕದಲ್ಲಿ 2006ರ ಜುಲೈನಿಂದ ನಡೆಸಲಾಗಿದೆ ಮತ್ತು ಅರಣ್ಯ ಭೂಮಿಗಳ ಒತ್ತುವರಿ ಕುರಿತು ಚರ್ಚೆ ನಡೆಸಲಾಗಿದೆ. ವಿಶೇಷವಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಒತ್ತುವರಿ ನಡೆದ ಬಗ್ಗೆ ಅನೇಕ ದೂರುಗಳಿವೆ. ರಾಷ್ಟ್ರೀಯ ಉದ್ಯಾನವನದ ಸ್ಥಾನ ವಿಶೇಷವಾದುದು ಇದನ್ನು ಅರಣ್ಯ ಇಲಾಖೆಯವರು ಹೆಚ್ಚಿನ ಮತ್ತು ಕಟ್ಟುನಿಟ್ಟಿನ ನಿಯಂತ್ರಣದ ಮೂಲಕ ಕಾಯಬೇಕು. 1934 ರ ಮಾರ್ಚ್ 17ರಂದು ಅಂದಿನ ಮೈಸೂರು ಮಹಾರಾಜರ ಸರ್ಕಾರವು ಅಧಿಸೂಚನೆ ಸಂಖ್ಯೆ: ಜಿ 6416–ಎಫ್ ಟಿ.27–33–35, ಹೊರಡಿಸಿ ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಭೂತನಹಳ್ಳಿ ಗ್ರಾಮದ ಸರ್ವೆ ನಂ. 67, 68, 69 ಮತ್ತು 70 ರಲ್ಲಿನ 539 ಎಕರೆ 27 ಗುಂಟೆಗಳ ಸರ್ಕಾರಿ ಭೂಮಿಗಳನ್ನು ಮೈಸೂರು ಅರಣ್ಯ ಅಧಿನಿಯಮ (1900ರ 11) ಇದರ 35 ನೇ ಪ್ರಕರಣದ ಅಡಿಯಲ್ಲಿ ಕಿರು ಅರಣ್ಯ ಎಂದು ಘೋಷಿಸಿದೆ.

2006ರ ಆಗಸ್ಟ್‌ನಲ್ಲಿ ಇಲಾಖೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ನಡೆದ ಒತ್ತುವರಿಯ ಪಟ್ಟಿಯನ್ನು ನೀಡಿದೆ. ಅದರ ಪ್ರಕಾರ 542 ಜನರು ಉದ್ಯಾನದ 306.72 ಎಕರೆಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಎಲ್ಲಾ ಪ್ರಕರಣಗಳಲ್ಲಿ 2002ರ ಅಕ್ಟೋಬರ್, ನವೆಂಬರ್‌ನಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸುವುದನ್ನು ಬಿಟ್ಟರೆ, ಮತ್ತು 2004ರ ಫೆಬ್ರವರಿಯಲ್ಲಿ ನೋಟಿಸುಗಳನ್ನು ನೀಡಿರುವುದನ್ನು ಬಿಟ್ಟರೆ, ಇಲಾಖೆಯು ಅವರ ವಿರುದ್ಧ ಪ್ರಾಸಿಕ್ಯೂಷನ್ ಮಾಡುವುದಕ್ಕಾಗಲಿ ಅಥವಾ ಒತ್ತುವರಿದಾರರನ್ನು ತೆರವು ಮಾಡಿಸುವುದಕ್ಕಾಗಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. 2006ರ ಅಗಸ್ಟ್‌ನಲ್ಲಿ ಸಮಿತಿಯು ತನ್ನ ಅಹವಾಲು ಕೇಳಿಕೆಯನ್ನು ಪ್ರಾರಂಭಿಸಿದ ಮೇಲೆ ಇಲಾಖೆಯು ನಿದ್ದೆಯಿಂದ ಎದ್ದು ಕೆಲವೊಂದು ಪ್ರಕರಣಗಳಲ್ಲಿ 2006ರ ನವೆಂಬರ್, ಡಿಸೆಂಬರ್ ಮತ್ತು 2007ರ ಜನವರಿಯಲ್ಲಿ ತೆರವು ಮಾಡಿಸುವ ಆದೇಶವನ್ನು ಹೊರಡಿಸಿದೆ. 1963ರ ಕರ್ನಾಟಕ ಅರಣ್ಯ ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಿರುವಂತೆ ಒತ್ತುವರಿದಾರನನ್ನು ವಿಚಾರಣೆಗೆ ಮತ್ತು ಶಿಕ್ಷೆಗೆ ಒಳಪಡಿಸುವ ಯಾವ ಕ್ರಮವನ್ನೂ ಈ ಇಲಾಖೆ ತೆಗೆದುಕೊಂಡಿರುವುದಿಲ್ಲ. ಸುಮಾರು 325 ಒತ್ತುವರಿ ಪ್ರಕರಣದಲ್ಲಿ ಇಲಾಖೆ **"ಕ್ರಮ ಕೈಗೊಳ್ಳಲಾಗುತ್ತದೆ "** ಎಂದು ಮಾತ್ರ ಹೇಳಿದೆ. ಹಿಂದಿನ ತುರಹಳ್ಳಿ ಅರಣ್ಯದ ಭಾಗದಲ್ಲಿ ನಾವು ಗಮನಿಸಿದಂತೆ, ಆ ತರಹದ ಒತ್ತುವರಿ ನಡೆದಾಗ, ಅವುಗಳಲ್ಲಿ ಕೇಸು ದಾಖಲು ಮಾಡಲು ಮತ್ತು ಕೇವಲ ಅನುಮಾನ ಬಂದರೆ ಸಾಕು ವಾರೆಂಟ್ ಇಲ್ಲದೆ ದಸ್ತಗಿರಿ ಮಾಡಲು ಅರಣ್ಯ ಇಲಾಖೆಗೆ ಕರ್ನಾಟಕ ಅರಣ್ಯ ಅಧಿನಿಯಮ 1963 ಅಗಾಧ ಅಧಿಕಾರಗಳನ್ನು ಕೊಟ್ಟಿರುತ್ತದೆ.

ರಾಷ್ಟ್ರೀಯ ಉದ್ಯಾನದ ಜೊತೆಗೆ ನಗರ ಜಿಲ್ಲೆಯ ಅರಣ್ಯಗಳಿಗಾಗಿಯೇ ಒಬ್ಬ ಪ್ರತ್ಯೇಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಇರುತ್ತಾರೆ. ಇವರ ವ್ಯಾಪ್ತಿಯಲ್ಲಿ 8,476 ಎಕರೆಗಳಷ್ಟು ಅರಣ್ಯ ಬರುತ್ತವೆ. ಇವುಗಳಲ್ಲಿ 316 ಜನರುಗಳು 1,082 ಎಕರೆಗಳಷ್ಟು ಅರಣ್ಯ ಭೂಮಿಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂಬುದನ್ನು ಇಲಾಖೆಯವರು ಒಪ್ಪಿಕೊಂಡಿರುತ್ತಾರೆ. 128 ಪ್ರಕರಣಗಳನ್ನು ಮಾತ್ರ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಲಾಗಿದೆ. ಮತ್ತು ಕರ್ನಾಟಕ ಅರಣ್ಯ ಅಧಿನಿಯಮದ 64 ಎ ಅಡಿಯಲ್ಲಿ 87 ಪ್ರಕರಣಗಳಲ್ಲಿ ಅಂತಿಮ ಆದೇಶ ನೀಡಬೇಕಾಗಿದೆ.

ಇವುಗಳಡಿ 399 ಎಕರೆಗಳು ಬರುತ್ತವೆ. ಯಾವ ಪ್ರಕರಣದಲ್ಲೂ ಒತ್ತುವರಿಯನ್ನು ತೆರವು ಮಾಡಿಸಿರುವುದಿಲ್ಲ. ಇದಲ್ಲದೆ, 441 ಜನರು ಅರಣ್ಯ ಇಲಾಖೆಯ ನಿಯಂತ್ರಣದ ಅಡಿಯಲ್ಲಿರುವ 3,379 ಎಕರೆಗಳ ಕೆರೆ ಭೂಮಿಯಲ್ಲಿ ಒಟ್ಟು 312 ಎಕರೆಗಳಷ್ಟು ಕೆರೆ ಅಂಗಳಗಳನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಈ ಸಂಬಂಧದಲ್ಲಿ, ದಿನಾಂಕ 14-2-2007 ರಂದು ಸಮಿತಿಗೆ ಸಲ್ಲಿಸಿದ ವರದಿ ಪ್ರಕಾರ ಎಲ್ಲಾ ಪ್ರಕರಣಗಳಲ್ಲೂ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಲಾಗಿದೆ. ಇದರಲ್ಲಿ 40 ಪ್ರಕರಣಗಳಲ್ಲಿ ಮಾತ್ರ ತೆರವು ಮಾಡಬೇಕೆಂಬ ಆದೇಶವನ್ನು ಹೊರಡಿಸಲಾಗಿದೆ. ಆದರೆ ಎಲ್ಲೂ ವಾಸ್ತವವಾಗಿ ತೆರವು ಮಾಡಿಸುವ ಕೆಲಸ ಆಗಿಲ್ಲ.

ಬೆಂಗಳೂರು ನಗರ ಜಿಲ್ಲೆಯ ಒತ್ತುವರಿ ಸಮಸ್ಯೆಯನ್ನು ಕುರಿತು ಪುನರವಲೋಕನ ಮಾಡಿದಾಗ ಬನ್ನೇರುಘಟ್ಟದ ಎಲ್ಲಾ 542 ಒತ್ತುವರಿ ಪ್ರಕರಣಗಳಲ್ಲಿ ಕರ್ನಾಟಕ ಅರಣ್ಯ ಅಧಿನಿಯಮ 1963ರ ಅಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ಜೂನ್ 2002ರಲ್ಲಿ ಒತ್ತುವರಿ ತೆಗೆದುಹಾಕಬೇಕೆಂದು ಸರ್ವೋಚ್ಚ ನ್ಯಾಯಾಲಯ ನಿರ್ದೇಶಿಸಿದನ್ನು ಅನುಸರಿಸಿ, ಭಾರತ ಸರ್ಕಾರವು ಅರಣ್ಯ ಇಲಾಖೆಗೆ ನಿರ್ದೇಶನವನ್ನು ನೀಡಿದ್ದರ ಮೇಲೆ ಅಕ್ಟೋಬರ್ 2002ರಲ್ಲಿ ಮಾತ್ರವೇ ದಾಖಲಿಸಿರುತ್ತಾರೆ. ಒತ್ತುವರಿಯನ್ನು ತೆರವು ಮಾಡಲು ಇಲಾಖೆ ಏನು ಕ್ರಮತೆಗೆದುಕೊಂಡಿದೆ ಎಂದು ಅರಣ್ಯ ಇಲಾಖೆಗೆ ಸಮಿತಿಯು ಪದೇ ಪದೇ ಕೇಳಲಾರಂಭಿಸಿದ ಮೇಲೆ ಆಗಸ್ಟ್ 2006 ರಂದು ಕರ್ನಾಟಕ ಅರಣ್ಯ ಅಧಿನಿಯಮದ 64 ನೇ ಪ್ರಕರಣದಡಿಯಲ್ಲಿ ನೋಟಿಸುಗಳನ್ನು ಜಾರಿ ಮಾಡಲಾಯಿತು. ಒಟ್ಟು 542 ಒತ್ತುವರಿ ಪ್ರಕರಣದಲ್ಲಿ, 214 ಪ್ರಕರಣಗಳಲ್ಲಿ ಮಾತ್ರ ಪ್ರಥಮ ವರ್ತಮಾನ ವರದಿಯನ್ನು ನೋಂದಾಯಿಸಲಾಗಿದೆ. 22 ಪ್ರಕರಣಗಳಲ್ಲಿ ಮಾತ್ರ ದೋಷಾರೋಪಣಾ ಪಟ್ಟಿಗಳನ್ನು ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಲಾಗಿದೆ. ಅಕ್ಟೋಬರ್-ನವೆಂಬರ್ 2002 ರಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ತರುವಾಯ, ದಸ್ತಗಿರಿ ಮಾಡುವುದಕ್ಕಾಗಲೀ ಮತ್ತು ಒತ್ತುವರಿಗಳನ್ನು ಕ್ಷಿಪ್ರವಾಗಿ ತೆರವು ಮಾಡುವುದಕ್ಕಾಗಲಿ ಇಲಾಖೆ ಯಾವುದೇ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಇದಕ್ಕೂ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಇಲಾಖೆಯು ಒತ್ತುವರಿಯನ್ನು ತೆರವು ಮಾಡಿಸಲು ಸಕಾಲದಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತು ಈ ಎಲ್ಲಾ ವರ್ಷಗಳಲ್ಲಿ ಬೇಜವಾಬ್ದಾರಿಯಿಂದ ಕಾಲ ಕಳೆದಿದೆ.

ಇದಕ್ಕೆ ಮೀಸಲಾದ ಒಬ್ಬ ಉಪ ಅರಣ್ಯ ಸಂರಕ್ಷಣಾ ಅಧಿಕಾರಿಯ ನೇತೃತ್ವದಲ್ಲಿ ಕೆಲಸ ಮಾಡುತ್ತಿರುವ ಬೆಂಗಳೂರು ನಗರ ಅರಣ್ಯ ಇಲಾಖೆಯ ವಿದ್ಯಮಾನಗಳು ಇನ್ನೂ ಕೆಟ್ಟದಾಗಿವೆ. ಇಲ್ಲಿನ 316 ಒತ್ತುವರಿ ಪ್ರಕರಣಗಳು ಸರಿ ಸುಮಾರು 10 ವರ್ಷಗಳನ್ನು ಮೀರಿ ಇವೆ. ಆಗಸ್ಟ್ 2006ರಲ್ಲಿ ಒತ್ತುವರಿ ವಿರುದ್ಧ ಕ್ರಮ ಏಕೆ ಕೈಗೊಂಡಿಲ್ಲ ಎಂದು ಸಮಿತಿಯು ಇಲಾಖಾ ಅಧಿಕಾರಿಗಳನ್ನು ಕೇಳಲು ಪ್ರಾರಂಭಿಸಿದಾಗ, ಪ್ರಥಮ ವರ್ತಮಾನ ವರದಿಗಳನ್ನು ದಾಖಲಿಸಲು ಪ್ರಾರಂಭಿಸಿತು.

ಆದಾಗ್ಯೂ ಕೇವಲ 87 ಪ್ರಕರಣಗಳಲ್ಲಿ ಮಾತ್ರ ತೆರವು ಮಾಡಬೇಕೆಂದು ಆದೇಶಗಳನ್ನು ಹೊರಡಿಸಲಾಗಿದೆ. ಆದರೆ ದಿನಾಂಕ 14-02-2007ರವರೆಗೆ ಇದ್ದಂತೆ ಯಾವುದೇ ಪ್ರಕರಣದಲ್ಲಿ ವಾಸ್ತವವಾಗಿ ಒತ್ತುವರಿಯನ್ನು ತೆರವು ಗೊಳಿಸಿರುವುದಿಲ್ಲ. ಅದೇ ರೀತಿಯಲ್ಲಿ ಅರಣ್ಯ ಇಲಾಖೆಯ ನಿಯಂತ್ರಣದಲ್ಲಿರುವ 441 ಕೆರೆಯಂಗಳ ಒತ್ತುವರಿ ಪ್ರಕರಣಗಳ ಪೈಕಿ ದಿನಾಂಕ 14-02-2007ರಂದು ಕೇವಲ 40 ಪ್ರಕರಣಗಳಲ್ಲಿ ಒತ್ತುವರಿದಾರರ ವಿರುದ್ಧ ನೋಟಿಸನ್ನು

ಹೊರಡಿಸಲಾಗಿದೆ ಮತ್ತು ಯಾವುದೇ ಪ್ರಕರಣದಲ್ಲೂ ಅಂತಿಮ ಆದೇಶವನ್ನು ಹೊರಡಿಸಿರುವುದಿಲ್ಲ ಹಾಗೂ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ. ದಾಖಲೆಗಳಲ್ಲಿ ಕಂಡುಬರುವಂತೆ ಇಲಾಖೆಯ ಕಾರ್ಯತಂತ್ರವನ್ನು ಈ ರೀತಿಯಲ್ಲಿ ಅರ್ಥೈಸಬಹುದಾಗಿದೆ ದಾಖಲೆಗೋಸ್ಕರ ಎಫ್. ಐ.ಆರ್. ನ್ನು ಫೈಲು ಮಾಡಿದರೆ ಎಲ್ಲಾ ಕೆಲಸ ಮಾಡಿ ಮುಗಿಸಿದಂತೆ. ಮುಂದೆ ಒತ್ತುವರಿಯನ್ನು ತೆರವು ಮಾಡಿಸಬೇಕಾಗಿಲ್ಲ ಅಥವಾ ಒತ್ತುವರಿದಾರರನ್ನು ದಸ್ತಗಿರಿ ಮಾಡಬೇಕಾಗಿಲ್ಲ ಮತ್ತು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕಾಗಿಲ್ಲ ಅಪವಾದ ಏನೂ ಬಂದರೂ ಅದನ್ನು ರಾಜಕೀಯ ದೊರೆಗಳ ತಲೆಗೆ ಕಟ್ಟುವುದು. ಸಮಿತಿಗೆ ನೀಡಿದ ಅವರ ವರದಿಯಲ್ಲಿ ಎಲ್ಲ ಪುಟದಲ್ಲೂ **"ತೆಗೆದುಕೊಂಡ ಕ್ರಮ"** ಎಂಬ ಕಲಮಿನ ಅಡಿಯಲ್ಲಿ **"ಪ್ರಕ್ರಿಯೆಯಲ್ಲಿದೆ"** ಎಂದು ನಮೂದಿಸಿದ್ದಾರೆ.ಏನು ಪ್ರಕ್ರಿಯೆಯಲ್ಲಿದೆ? ಇವರ ನಿಷ್ಕ್ರೀಯತೆ ಪ್ರಕ್ರಿಯೆಯಲ್ಲಿದೆ.

* * * * *

## 12. ಬೆಂಗಳೂರು ನಗರ ಅರಣ್ಯ ವಿಭಾಗದ ನಿಯಂತ್ರಣದಲ್ಲಿಯ ಕೆರೆಗಳ ಒತ್ತುವರಿ:

ಬೆಂಗಳೂರು ನಗರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯ ದಿನಾಂಕ 14-2-2007ರ ವರದಿಯ ಪ್ರಕಾರ ಅವರ ವ್ಯಾಪ್ತಿಯಲ್ಲಿ ಸುಮಾರು 48 ಕೆರೆಗಳು ಇದ್ದು ಒಟ್ಟು 3379 ಎಕರೆ ಪ್ರದೇಶ ಕೆರೆಯಂಗಳದಲ್ಲಿದೆ. ಇದರ ಪೈಕಿ ಸುಮಾರು 313 ಎಕರೆಗಳನ್ನು 441 ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುತ್ತಾರೆ. ಒತ್ತುವರಿ ಮಾಡಿಕೊಂಡವರ ಹೆಸರು ಮತ್ತು ವಿಳಾಸಗಳನ್ನು ಕಣ್ಣಾಡಿಸಿ ನೋಡಿದರೆ ಒತ್ತುವರಿ ಮಾಡಿಕೊಂಡವರಾರೂ ಕೆರೆಯಂಗಳದ ಅಕ್ಕಪಕ್ಕದ ರೈತರಲ್ಲ. ಕೆರೆ ಅಂಗಳದಲ್ಲಿ ವಸತಿ ಹಾಗೂ ವಾಣಿಜ್ಯ ನಿವೇಶನಗಳನ್ನು ಆಕ್ರಮಿಸಿ ಕೊಂಡಿರುವ ಇವರೆಲ್ಲಾ ನಗರದ ವಿವಿಧ ಭಾಗದ ನಿವಾಸಿಗಳಾಗಿದ್ದಾರೆ. ಈ ಕೆರೆಯಂಗಳದಲ್ಲಿ "ಬಡಾವಣೆಯನ್ನು" ನಿರ್ಮಿಸಿದವರು ಪ್ರಭಾವಿ ಹಾಗೂ ಗಣ್ಯ ವ್ಯಕ್ತಿಗಳಾಗಿದ್ದು ಅವರು ಅವುಗಳನ್ನು ನಗರ ನಿವಾಸಿಗಳಿಗೆ ಮಾರಾಟ ಮಾಡಿರುವ ಸಂಭವವಿದೆ. ಅರಣ್ಯ ಇಲಾಖೆಯ ಒಟ್ಟು ಒತ್ತುವರಿ ಪ್ರದೇಶ 312 ಎಕರೆ 33 ಗುಂಟೆ ಎಂದು, ವರದಿ ನೀಡುವಾಗ ಪ್ರತಿಯೊಬ್ಬ ವ್ಯಕ್ತಿಯು ಎಷ್ಟೆಷ್ಟು ಒತ್ತುವರಿ ಮಾಡಿದ್ದಾರೆ ಎಂಬ ವಿವರ ನೀಡಿರುವುದಿಲ್ಲ.

ಒಟ್ಟಾರೆ ಹೇಳುವುದಾದರೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಹಾಗೂ ಬೆಂಗಳೂರು ನಗರ ಅರಣ್ಯ ವಿಭಾಗದ ನಿಯಂತ್ರಣದಲ್ಲಿರುವ ಅರಣ್ಯ ಪ್ರದೇಶ ಮತ್ತು ಕೆರೆಯಂಗಳದ ಒತ್ತುವರಿಯು ಈ ಕೆಳಕಂಡಂತೆ ಅಗಾಧ ಪ್ರಮಾಣದಲ್ಲಿ ಆಗಿದೆ:

| | ಒಟ್ಟು ಪ್ರದೇಶ | ಒತ್ತುವರಿ ಮಾಡಿದವರ ಒಟ್ಟು ಸಂಖ್ಯೆ | ಎಕರೆಗಳಲ್ಲಿ ಪ್ರದೇಶ |
|---|---|---|---|
| ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 18,198 | 542 | 307 |
| ಬೆಂಗಳೂರು ನಗರ ಅರಣ್ಯ ಪ್ರದೇಶ | 8,476 | 316 | 1,083 |

ಇವುಗಳು ಎಲ್ಲೋ ಕೆಲವು ಉದಾಹರಣೆಗಳು. ಒತ್ತುವರಿ ಮಾಡಿದ ಈ ಬಹುತೇಕ ಪ್ರದೇಶಗಳಲ್ಲಿ ಈ ವ್ಯಕ್ತಿಗಳು ಕಟ್ಟಡಗಳನ್ನು ಸಹ ನಿರ್ಮಿಸಿರುತ್ತಾರೆ. ಕಳೆದ ಹಲವಾರು ವರ್ಷಗಳಿಂದ ಈ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದಾಗ ಅರಣ್ಯ ಅಧಿಕಾರಿಗಳು ಹೇಗೆ ಸುಮ್ಮನೆ ಇದ್ದರು ಹಾಗೂ ಸ್ಥಳೀಯ ಸಂಸ್ಥೆಗಳು ಅರಣ್ಯ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲು ಅನುಮತಿಯನ್ನು ಹೇಗೆ ನೀಡಿದವು ಎಂಬುದು ನಿಗೂಢವಾಗಿದೆ.

ಶ್ರೀ ಜೈರಾಮ ಹೆಗಡೆರವರ ಒತ್ತುವರಿ ಪ್ರಕರಣವು ಸ್ವಾರಸ್ಯಕರವಾಗಿದೆ. ಅವರು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಸುಮಾರು 25 ಎಕರೆ 19 ಗುಂಟೆ ಪ್ರದೇಶವನ್ನು ಒತ್ತುವರಿ ಮಾಡಿರುವುದರ ಬಗ್ಗೆ ಅರಣ್ಯ ಇಲಾಖೆಯು ದಿನಾಂಕ 08.11.2002ರಂದು ನೋಟಿಸನ್ನು ನೀಡಿದ ತರುವಾಯ ಅರಣ್ಯ ಇಲಾಖೆಯು ತನ್ನ ಅಪರಿಮಿತವಾದ ಅಧಿಕಾರವನ್ನು ಬಳಸಿಕೊಂಡು ಅವರನ್ನು ಬಂಧಿಸುವುದಕ್ಕಾಗಲಿ ಅಥವಾ ಅವರನ್ನು ಕ್ಷಿಪ್ರವಾಗಿ ಹೊರಹಾಕುವುದಕ್ಕಾಗಲಿ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಇಂಥ ಎಲ್ಲಾ ಪ್ರಕರಣಗಳಲ್ಲಿ ನೋಟೀಸನ್ನು ನೀಡುವುದು ಏನಿದ್ದರೂ ಕ್ರಮ ಕೈಗೊಂಡಿದ್ದೇವೆ ಎಂದು ತೋರಿಸುವುದಕ್ಕೆ ಮತ್ತು ಲಂಚ ಸ್ವೀಕರಿಸುವುದಕ್ಕೆ ಒಂದು ನೆಪ ಅಷ್ಟೇ ಅಥವಾ

ಒತ್ತುವರಿದಾರರು ಸುಳ್ಳು ಕ್ಲೇಮುಗಳನ್ನು ಮಾಡಿ ಸಿವಿಲ್ ನ್ಯಾಯಾಲಯಕ್ಕೆ ಮೊರೆ ಹೋಗಲು ಹಾಗೂ ಕಾನೂನು ಬಾಹಿರ ಸ್ವಾಧೀನದಲ್ಲಿ ಮುಂದುವರಿಯಲು ಅನುವು ಮಾಡಿಕೊಡುವ ಒಂದು ತಂತ್ರ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಈ ಪ್ರಕರಣದಲ್ಲಿಯೂ ಸಹ ಅರಣ್ಯ ಇಲಾಖೆಯ 8 ತಿಂಗಳುಗಳವರೆಗೆ ಹಾಯಾಗಿ ಕುಳಿತ್ತಿತ್ತು ದಿನಾಂಕ 19–07–2003 ರಂದು ಒತ್ತುವರಿದಾರನು ಸಿವಿಲ್ ನ್ಯಾಯಾಲಯದ, ಮುಂದೆ ಹಕ್ಕು ಸ್ವಾಮ್ಯದ ದಾವೆಯನ್ನು ಹೂಡಿದ್ದಾರೆ. ಸಾಕ್ಷ್ಯ ವಿಚಾರಣೆಯು ದಿನಾಂಕ 15–07–2005 ರಂದು (ಅಂದರೆ 2 ವರ್ಷಗಳು ಕಳೆದ ತರುವಾಯ) ಪ್ರಾರಂಭವಾಯಿತು ಮತ್ತು ಅಂತಿಮ ಆದೇಶ ಓ.ಎಸ್ 570/2003ನ್ನು ದಿನಾಂಕ 21–3–2006 ರಂದು ಹೊರಡಿಸಿದೆ. ಭೂಮಿಯನ್ನು 1994 ರಲ್ಲಿ ವಿವಿಧ ವ್ಯಕ್ತಿಗಳಿಂದ ಕ್ರಯಪತ್ರದ ನೋಂದಣಿ ಮೂಲಕ ತಾನು ಖರೀದಿಸಿದ್ದೇನೆಂಬುದು ಮತ್ತು ಅಂದಿನಿಂದ ಪ್ರಾರಂಭಿಸಿ 2002ರ ವರೆಗೆ ಅರಣ್ಯ ಇಲಾಖೆಯಿಂದ ಯಾವುದೇ ಅಡಚಣೆಯಿಲ್ಲದೆ ತಾನು ಸದರಿ ಸ್ವತ್ತನ್ನು ಅನುಭವಿಸುತ್ತಿರುವೆನೆಂಬುದು ಒತ್ತುವರಿದಾರರ ವಾದ.

ಸಿವಿಲ್ ನ್ಯಾಯಾಲಯವು 6ನೇ ಕಂಡಿಕೆಯಲ್ಲಿ ಅರಣ್ಯ ಇಲಾಖೆ (ಪ್ರತಿವಾದಿ) ವಿರುದ್ಧ ಖಾರವಾಗಿ ಷರವನ್ನು ಈ ಮುಂದಿನಂತೆ ಬರೆದಿದೆ.

"6. ವಾದಿಯು ತನ್ನ ವಾದದ ರುಜುವಾತಿಗಾಗಿ ವಾದಿ ಸಂಖ್ಯೆ: 1ನ್ನು ಸಾಕ್ಷಿಯಾಗಿ ವಿಚಾರಣೆ ನಡೆಸಿದ್ದಾರೆ. ಮತ್ತು 48 ದಾಖಲೆಗಳನ್ನು ತಮ್ಮ ಪರ ಗುರುತುಮಾಡಿಸಿದ್ದಾರೆ ಹಾಗೂ ತಮ್ಮ ಸಾಕ್ಷ್ಯ ವಿಚಾರಣೆ ಮುಗಿಸಿದ್ದಾರೆ. **ಪ್ರತಿವಾದಿಯವರು ಪಿ.ಡಬ್ಲ್ಯೂ 1 ನ್ನು ಪಾಟಿ ಸವಾಲು ಮಾಡಲಿಲ್ಲ ಅಥವಾ ತಮ್ಮ ಸಾಕ್ಷಿಯನ್ನು ಮಂಡಿಸಲಿಲ್ಲ."** ಮುಂದುವರೆಯುತ್ತಾ, ಆದೇಶದ 14 ಮತ್ತು 15ನೇ ಕಂಡಿಕೆಗಳಲ್ಲಿ ಈ ರೀತಿಯಾಗಿ ಹೇಳಲಾಗಿದೆ: ಅದು ಮೀಸಲು ಅರಣ್ಯ ಭೂಮಿಯೆಂದು ರುಜುವಾತುಪಡಿಸುವ ಜವಾಬ್ದಾರಿಯು ಪ್ರತಿವಾದಿಯ ಮೇಲೆ ಇದೆ. ಆದರೆ ಅವರು ಬೇಜವಾಬ್ದಾರಿಯಿಂದ ತಮ್ಮ ಹೊಣೆಯನ್ನು ನಿರ್ವಹಿಸಿರುವುದಿಲ್ಲ.

**ವಾದಾಂಶ 2:** ಈ ವಿಷಯದ ರುಜುವಾತಿನ ಭಾರವು ಪ್ರತಿವಾದಿಯ ಮೇಲೆ ಇದೆ. **ಪ್ರತಿವಾದಿಗಳು ಮೊಕದ್ದಮೆಯನ್ನು ಬಹಳ ನಿರ್ಲಕ್ಷದಿಂದ ನಡೆಸಿರುತ್ತಾರೆ. ಪ್ರತಿವಾದ ಪತ್ರ ಸಲ್ಲಿಸುವುದನ್ನು ಬಿಟ್ಟರೆ ಕಾನೂನು ವ್ಯವಹರಣೆಯಲ್ಲಿ ಅವರು ಯಾವುದೇ ರೀತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವುದಿಲ್ಲ. ಕನಿಷ್ಠ ಪಕ್ಷ ಅವರು ಇತರ ಸ್ವತ್ತಿನೊಡನೆ ಸರ್ವೆ ನಂ.156 ಮತ್ತು 171 ಉಳ್ಳ 388 ಎಕರೆ ಜಮೀನು ಮೀಸಲು ಅರಣ್ಯ ಭೂಮಿಯೆಂದು ಅಧಿಸೂಚಿಸುವ ಹಾಗೂ "ಸುದ್ದೇಹಳ್ಳ ಕೆರೆ" ಎಂದು ಘೋಷಿಸುವ ಅಧಿಸೂಚನೆಯ ಪ್ರತಿಯನ್ನಾದರೂ ಮಂಡಿಸಬಹುದಾಗಿತ್ತು. ಆದರೆ ಅವರು ಅದನ್ನೂ ಮಂಡಿಸಿರುವುದಿಲ್ಲ."**

ಆದರೆ ಸರ್ಕಾರದ ಪುಣ್ಯ! ಅರಣ್ಯ ಇಲಾಖೆಯ ದಾವೆಯಲ್ಲಿ ಒಳಗೊಂಡಿರುವ ಭೂಮಿಯು ಅರಣ್ಯ ಭೂಮಿ ಎಂದು ಘೋಷಿಸುವ ಅಧಿಸೂಚನೆಯನ್ನು ಮಂಡಿಸದಿದ್ದರೂ ಸಿವಿಲ್ ನ್ಯಾಯಾಧೀಶರು ಅನುಗ್ರಹ ತೋರಿ, ವಲಯ ಅರಣ್ಯ ಅಧಿಕಾರಿಯು ಸಲ್ಲಿಸಿದ ಅಫಿದಾವಿತ್ತನ್ನು ಆಧರಿಸಿ ಈ ಪ್ರಕರಣದಲ್ಲಿ ವಾದಿಗಳು ತಮಗೆ ಭೂಮಿಯನ್ನು

ಮಾರಾಟ ಮಾಡಿದ ಮೂಲ ಮಾರಾಟಗಾರರು ಈ ಭೂಮಿಯ ಹಕ್ಕು ಸ್ವಾಮ್ಯವನ್ನು ಹೊಂದಿದ್ದರು ಎಂಬ ಬಗ್ಗೆ ರುಜುವಾತುಪಡಿಸಿರುವುದಿಲ್ಲ ಎಂದು ತೀರ್ಪು ನೀಡಿರುತ್ತಾರೆ.

ಇದು ಬೆಂಗಳೂರು ನಗರ ಜಿಲ್ಲೆಯ ಅರಣ್ಯ ಭೂಮಿಗಳ ದುರ್ಗತಿ. ಮೊದಲನೆಯದಾಗಿ, ಕರ್ನಾಟಕ ಅರಣ್ಯ ಅಧಿನಿಯಮ, 1963ರಲ್ಲಿ ತಮಗೆ ಸಾಕಷ್ಟು ಅಧಿಕಾರ ಇದ್ದರೂ ಅರಣ್ಯ ಇಲಾಖೆಗೆ ರಾಷ್ಟ್ರೀಯ ಉದ್ಯಾನವನದ ಪ್ರದೇಶದ ಒತ್ತುವರಿದಾರರನ್ನು ದಸ್ತಗಿರಿ ಮಾಡಿ ಹೊರಹಾಕಲು ಸಂಕಲ್ಪಶಕ್ತಿಯೂ ಇಲ್ಲ. ಅಲ್ಲದೆ ಸಲ್ಲದ ಅಸಹಾಯಕತೆ ಅವರನ್ನು ಕಾಡುತ್ತಿದೆ. ಎರಡನೆಯದಾಗಿ ಒತ್ತುವರಿದಾರರು, ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದರೆ ಅರಣ್ಯ ಇಲಾಖೆಯವರು ಈ ಭೂಮಿ ಅರಣ್ಯ ಭೂಮಿ ಎಂದು ಹೇಳುವ ಸರ್ಕಾರಿ ಅಧಿಸೂಚನೆಗಳ ಪ್ರತಿಯನ್ನು ದಾಖಲು ಮಾಡುವುದಿಲ್ಲ. ಅಂದ ಮೇಲೆ ಕಾನೂನು ಅಧಿಕಾರಿಗಳು, ಅರಣ್ಯ ಇಲಾಖೆ ಮತ್ತು ಒತ್ತುವರಿದಾರರು ತ್ರಿಮೂರ್ತಿಗಳಾಗಿ ಒಂದು ಅಪವಿತ್ರ ಮೈತ್ರಿ ಮಾಡಿಕೊಂಡಿದ್ದಾರೆ ಎಂದೇ ಅರ್ಥವಾಗುತ್ತದೆ. ತುರಹಳ್ಳಿ ಕಿರು ಅರಣ್ಯ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪ್ರಕರಣಗಳನ್ನು ನೋಡಿದಾಗ ಇದು ಸ್ಪಷ್ಟವಾಗುತ್ತದೆ. ಅರಣ್ಯ ಇಲಾಖೆಯನ್ನು ಕಾಡುತ್ತಿರುವ ರೂಢಮೂಲ ರೋಗಕ್ಕೆ ಇವು ಕೇವಲ ಎರಡು ಉದಾಹರಣೆಗಳು ಅಷ್ಟೇ.

ಆದ್ದರಿಂದ ಸಮಿತಿಯು ವಲಯ ಅರಣ್ಯಾಧಿಕಾರಿಯಿಂದ ಹಿಡಿದು ಉಪ ಅರಣ್ಯ ಸಂರಕ್ಷಣಾಧಿಕಾರಿವರೆಗೆ ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಮತ್ತು ಅವರ ವರಿಷ್ಠಾಧಿಕಾರಿಗಳ ವಿರುದ್ಧ ಅಪರಾಧಿಕ ನಿರ್ಲಕ್ಷ್ಯದ ಅಪರಾಧದ ಮೇಲೆ ಕ್ರಮಕೈಗೊಳ್ಳಬೇಕೆಂದು ಶಿಫಾರಸು ಮಾಡುತ್ತದೆ. ಅರಣ್ಯ ಸಂರಕ್ಷಣೆಗೆ ಅವರನ್ನು ನೇಮಿಸಿ ಅಧಿಕಾರ ನೀಡಿರುವಾಗ ಇನ್ನು ಮುಂದಾದರೂ ಇಲಾಖೆಯವರು ಎಚ್ಚೆತ್ತು ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡುವ ಪಾಠ ಕಲಿಯುವಂತಾಗಬೇಕು.

ಕೆರೆ ಅಂಗಳದ ಗಡಿ ಗುರುತಿಸಿ, ನಿಖರವಾದ ಒತ್ತುವರಿ ವಿಸ್ತೀರ್ಣ ಮತ್ತು ಒತ್ತುವರಿದಾರರ ಸಂಖ್ಯೆ ಪತ್ತೆ ಹಚ್ಚಲು ಇನ್ನೂ ಸಹ ಸ್ಪಷ್ಟವಾಗಿ ಸಾಧ್ಯವಾಗಿಲ್ಲದಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳನ್ನು ಕ್ರಮಸಂಖ್ಯೆವಾರು ಒಂದು ಅತ್ಯಾಧುನಿಕ ಮೋಜಣಿ ವ್ಯವಸ್ಥೆಯಿಂದ ಸರ್ವೆ ಮಾಡಿಸಿ, ಒತ್ತುವರಿ ವಿಸ್ತೀರ್ಣ ಮತ್ತು ಒತ್ತುವರಿದಾರರ ಸಂಖ್ಯೆಯನ್ನು ನಿಖರವಾಗಿ ತಿಳಿಸಲು ಕ್ರಮತೆಗೆದುಕೊಳ್ಳುವುದು.

* * * * *

## 13. ಆಸ್ತಿ ಹಕ್ಕಿನ ದಾಖಲಾತಿ ಬಗ್ಗೆ ಒಂದು ವಿಶ್ವಸಾರ್ಹ ಪದ್ಧತಿ ಅಭಿವೃದ್ಧಿಪಡಿಸುವುದು ಮತ್ತು ಇತರ ಅನೇಕ ದೇಶಗಳಲ್ಲಿ ಜಾರಿಯಲ್ಲಿರುವ "ಟಾರೆನ್ಸ್ ಪದ್ಧತಿ" ಮಾದರಿಯಲ್ಲಿ ಆದಷ್ಟು ಅದನ್ನು ನಿರ್ವಹಿಸಿಕೊಂಡು ಬರುವುದು:

ಭೂ ಮಾಲೀಕನು ಕೊಡಲು ಸಾಧ್ಯವಿರುವುದಕ್ಕಿಂತಲೂ ಹೆಚ್ಚು ಹಣವನ್ನು ಮೋಜಣಿಗಾಗಿ ಖರ್ಚು ಮಾಡುವುದು ನಿಜಕ್ಕೂ ಶೋಷಣೆಯೇ ಸರಿ. ಆದರೆ ನಾನು ಮಾಡಿದ ಮೋಜಣಿಯಿಂದ ಸ್ವತ್ತಿನ ಚೆಕ್ಕುಬಂದಿ ಮತ್ತು ಮೂಲ ಹಕ್ಕಿನ ಬಗ್ಗೆ ವ್ಯಾಜ್ಯಗಳಿಗಾಗಿ ಆತನು ಯಾವ ಖರ್ಚನ್ನು ತನ್ನ ಜೀವಮಾನದಲ್ಲಿ ಮಾಡಬೇಕಾಗಿ ಬರದೇ ಹೋದಲ್ಲಿ ಮೋಜಣಿಗಾದ ವೆಚ್ಚ ಸಾರ್ಥಕವಾಯಿತ್ತೆಂದು ಭಾವಿಸುತ್ತೇನೆ.

**– ಎಫ್.ಜಿ.ಎಚ್.ಆಂಡರ್ಸನ್–1931** (ಹಿಂದಿನ ಬಾಂಬೆ ಕರ್ನಾಟಕ ಪ್ರದೇಶದ ಆಂಡರ್‌ಸನ್ ಮ್ಯಾನ್ಯುಯಲ್‌ಗೆ ಖ್ಯಾತನಾದವನು)

ಖಾತೆ ವರ್ಗಾವಣೆ, ಅನಧಿಕೃತ ಕಟ್ಟಡಗಳ ನಿರ್ಮಾಣ ಸರ್ಕಾರಿ ಭೂಮಿಗಳ ಮತ್ತು ಸ್ವತ್ತಿನ ಸ್ವಾಧೀನ ಪಡೆದುಕೊಳ್ಳದೇ ಇರುವುದು ಮುಂತಾದವುಗಳಲ್ಲಿ ಆಗಿರುವ ಅಕ್ರಮಗಳನ್ನು ಕುರಿತು ಚರ್ಚೆ ನಡೆಸುವ ಕಾಲಕ್ಕೆ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮುಜರಾಯಿ ಇಲಾಖೆ ಮುಂತಾದವುಗಳ ಆಯುಕ್ತರು ಇತ್ಯಾದಿ ಹಿರಿಯ ಅಧಿಕಾರಿಗಳು ಬೆಂಗಳೂರು ನಗರ ಜಿಲ್ಲೆಯಲ್ಲಿ ಭೂಮಿ ಮತ್ತು ಆಸ್ತಿ ಮೂಲ ಹಕ್ಕಿನ ಬಗ್ಗೆ ವಿಶ್ವಸಾರ್ಹ ದಾಖಲೆ ವ್ಯವಸ್ಥೆ ಇಲ್ಲ ಎಂಬ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಒಂದಿಷ್ಟು ದುಡ್ಡಿಗೆ ಪಹಣಿ (ಖಖಿಲ) ಗಳನ್ನು ಮಾಮೂಲಾಗಿ, ನಿರ್ಲಕ್ಷ್ಯದಿಂದ ಬರೆದು ಕೊಡುತ್ತಿರುವುದು, ಇದರಿಂದ ಮುಗಿಯದ ವಿವಾದಗಳು ಸೃಷ್ಟಿಯಾಗುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಬೆಂಗಳೂರು ನಗರ ಜಿಲ್ಲೆಯಲ್ಲಿ ಜಾರಿಗೆ ತರಲು ಒಂದು ವಿಶ್ವಾಸಾರ್ಹ ಪದ್ಧತಿಯನ್ನು ಈ ಸಮಿತಿ ಶಿಫಾರಸು ಮಾಡಿದರೆ ಈಗಿರುವ ಭೂ ಹಕ್ಕು ದಾಖಲೆಗಳ ಪದ್ಧತಿಯಲ್ಲಿನ ಅನಿಶ್ಚಿತತೆ ಮತ್ತು ದುರ್ವ್ಯವಹಾರಗಳನ್ನು ಬುಡ ಸಮೇತ ನಿರ್ಮೂಲ ಮಾಡಲಾಗದಿದ್ದರೂ ಅವನ್ನು ಕಡಿಮೆ ಮಾಡಲು ಬಹಳ ಸಹಕಾರಿಯಾಗುತ್ತದೆ ಎಂದು ಎಲ್ಲಾ ಹಿರಿಯ ಅಧಿಕಾರಿಗಳು ನಿವೇದಿಸಿಕೊಂಡಿದ್ದಾರೆ. ಆದ್ದರಿಂದ ಈಗಿರುವ ಭೂಮಿ ಹಕ್ಕು ದಾಖಲೆ ವ್ಯವಸ್ಥೆಗೆ ಸಂಬಂಧಪಟ್ಟ ಮೂಲ ಸಮಸ್ಯೆ ಕುರಿತು ಈ ಸಮಿತಿ ಚಿಂತನೆ ನಡೆಸಿದೆ.

ಈ ವರದಿಯ ಹಿಂದಿನ ಭಾಗಗಳಲ್ಲಿ ಚರ್ಚಿಸಿರುವ ಪ್ರಸಂಗಗಳನ್ನು ನೋಡಿದಾಗ ದಸ್ತಾವೇಜುಗಳ ನೋಂದಣಿಯ ಈಗಿನ ಪದ್ಧತಿಯನ್ನು ಬಹಳ ಸುಲಭವಾಗಿ ತಪ್ಪಾಗಿ ಬಳಸಿಕೊಳ್ಳಬಹುದು ಎಂಬುದು ಅರಿವಾಗುತ್ತದೆ. **ಟಾರೆನ್ಸ್ ಪದ್ಧತಿ** ಅಡಿಯಲ್ಲಿ ಅನುಸರಿಸುವ **ಮೂಲಹಕ್ಕು ನೋಂದಣಿ ಪದ್ಧತಿಯ** ಬದಲಾಗಿ ನಾವು **ಕ್ರಯಪತ್ರದ ನೋಂದಣಿ** ಪದ್ಧತಿ ಅನುಸರಿಸುತ್ತಿರುವುದೇ ಇದಕ್ಕೆ ಕಾರಣ. ಸರ್ ರಾಬರ್ಟ್ ರಿಚರ್ಡ್ ಟಾರೆನ್ಸ್ (1814–1884) ಒಬ್ಬ ಐರಿಷ್ ಸದ್ಗೃಹಸ್ಥ. ಈತ ಆಸ್ಟ್ರೇಲಿಯಕ್ಕೆ ಹೋಗಿ 1850 ರ ದಶಕದಲ್ಲಿ ದಕ್ಷಿಣ ಆಸ್ಟ್ರೇಲಿಯದಲ್ಲಿ ಭೂ ಹಕ್ಕು ನೋಂದಣಿ ವ್ಯವಸ್ಥೆಯನ್ನು ಸ್ಥಾಪಿಸಿದನು.ಟಾರೆನ್ಸ್ ಪದ್ಧತಿಯಲ್ಲಿ ಕ್ರಯಪತ್ರದ ನೋಂದಣಿ ಮಾಡದೆ ಸ್ವತ್ತಿನ ಹಕ್ಕು ನೋಂದಣಿ ಮಾಡಲಾಗುತ್ತದೆ. ಹೀಗಾಗಿ, ಭೂಮಿ ಮತ್ತು ಸ್ವತ್ತುಗಳ ಮೂಲ ಹಕ್ಕುಗಳು ಕ್ರಯಪತ್ರ ಬರೆದು ಒಬ್ಬರಿಂದೊಬ್ಬರಿಗೆ ಹಸ್ತಾಂತರವಾಗುವುದಿಲ್ಲ

ಬದಲಾಗಿ ಸಾರ್ವಜನಿಕ ರಿಜಿಸ್ಟರ್‌ನಲ್ಲಿ ವ್ಯವಹಾರದ ನೋಂದಣಿ ಮಾಡಿಸುವ ಮೂಲಕ ಆಗುತ್ತದೆ. ಒಮ್ಮೆ ನೊಂದಣಿ ಆಯಿತೆಂದರೆ, ಖರೀದಿದಾರ ಮೋಸ ಮಾಡಿದ ತಪ್ಪಿತಸ್ಥನಾಗಿದ್ದ ಹೊರತು, ಆತನ ಹಕ್ಕು ಮೂಲವನ್ನು ಯಾರೂ ವಿವಾದಿಸುವುದಕ್ಕಾಗುವುದಿಲ್ಲ. ನೋಂದಾಯಿತ ಭೂಮಿಯಲ್ಲಿ ಹಿತಾಸಕ್ತಿಯುಳ್ಳ ಅಮಾಯಕ ಖರೀದಿದಾರರಿಗೆ ಭೂಮಿ ಬಗ್ಗೆ ಅವರ ಹಕ್ಕು ಖಾತರಿಯಾಗಿ ದೊರೆಯುತ್ತದೆ. ಟಾರೆನ್ಸ್ ಪದ್ಧತಿಯನ್ನು ಕಾರ್ಯಾಚರಣೆಗೆ ತರಬೇಕಾದರೆ ಸ್ವತ್ತಿನ ಹಕ್ಕು ಮೂಲದ ಬಗ್ಗೆ ಬಹಳ ವಿಷದವಾಗಿ ವಿಚಾರಣೆ ನಡೆಸಬೇಕಾಗುತ್ತದೆ. ಒಮ್ಮೆ ಈ ಕೆಲಸ ಆಯಿತೆಂದರೆ ಮೂಲ ಹಕ್ಕಿನ ಮಾಲಿಕತ್ವದಲ್ಲಿ ಆದ ಮುಂದಿನ ಎಲ್ಲಾ ಬದಲಾವಣೆಗಳನ್ನು ಅದರಲ್ಲಿ ಅಳವಡಿಸಿಕೊಳ್ಳುವುದು ಸುಲಭವಾಗುತ್ತದೆ. ಅನೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬೇರೆ ಬೇರೆ ಮಟ್ಟದಲ್ಲಿ ಟಾರೆನ್ಸ್ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಮಲೇಷಿಯಾ ಮತ್ತು ಕಿನ್ಯಾದಂತಹ ಕೆಲವೊಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲೂ ಅದನ್ನು ಅನುಸರಿಸಲಾಗುತ್ತಿದೆ.

ಈ ಸಮಿತಿಯ ಅಧ್ಯಕ್ಷರು, ಮುಖ್ಯ ಕಾರ್ಯದರ್ಶಿಗಳು, ಕಂದಾಯ, ನಗರಾಭಿವೃದ್ಧಿ, ಮೋಜಣಿ ಇಲಾಖೆಗಳ ಹಿರಿಯ ಅಧಿಕಾರಿಗಳು, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳು, ಪೌರಾಡಳಿತ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (BMRDA) ಅಧ್ಯಕ್ಷರು ಮುಂತಾದವರೊಂದಿಗೆ ಸಭೆ ನಡೆಸಿ, ಸದರಿ ಸಭೆಯಲ್ಲಿ BMRDA ಮತ್ತು ನಗರ ಯೋಜನಾ ಇಲಾಖೆಯವರು ಆನೆಕಲ್, ಹೊಸಕೋಟೆ, ನೆಲಮಂಗಲ, ಕನಕಪುರ ಮತ್ತು ಯಲಹಂಕದ ಈ ಐದು ಪಟ್ಟಣಗಳಲ್ಲಿ ನಗರ ಸ್ವತ್ತುಗಳ ಸವಿವರ ಮೋಜಣಿಯನ್ನು ಟೋಟಲ್ ಸ್ಟೇಷನ್ ಉಪಕರಣ ಮತ್ತು ಭೌಗೋಳಿಕ ನಿಯಂತ್ರಣ ಬಿಂದುಗಳನ್ನು ಬಳಸುವ ಆಧುನಿಕ ವಿಧಾನದಲ್ಲಿ ಮಾಡಿರುತ್ತಾರೆ ಎಂದು ವಿವರಿಸಿದರು. ಸವಿವರ ಸಮೀಕ್ಷಾ ನಕ್ಷೆಗಳು 1:200ರ ಸ್ಕೇಲ್‌ನಲ್ಲಿ ಇರುತ್ತವೆ. ಡಿಜಿಟಲ್ ನಕ್ಷೆಯಾದ ಕಾರಣ 1:1 ಅಳತೆಗೂ ತರಬಹುದು. ಇಡಿ ಸಮೀಕ್ಷಾ ಕಾರ್ಯವನ್ನು ಅಖಿಲಭಾರತ ಟೆಂಡರ್ ಕರೆದು ಎರಡು ಖಾಸಗಿ ಕಂಪನಿಗಳಿಗೆ ಹೊರಗುತ್ತಿಗೆ ನೀಡಲಾಗಿತ್ತು. ಐದು ತಿಂಗಳ ಅವಧಿಯಲ್ಲೇ ಈ ಸಮೀಕ್ಷೆ ಪೂರ್ಣಗೊಂಡಿತ್ತು. ಆದ ವೆಚ್ಚ ರೂ.1.2 ಕೋಟಿಗಳು, ಎಂದು ವಿವರಿಸಿದ್ದಾರೆ.

ಆದ್ದರಿಂದ ಬೆಂಗಳೂರು ಜಿಲ್ಲೆಯ ಎಲ್ಲ ನಗರ ಆಸ್ತಿಗಳ ನಿಖರವಾದ ಸಮಿಕ್ಷೆಯನ್ನು (5 ಮಿ.ಮೀ.ನಷ್ಟು ನಿಖರವಾಗಿ) ಮಾಡಲು ಸಾಧ್ಯವಿದೆ. ಇದರಲ್ಲಿ ಜಿಲ್ಲೆಯ ಎಲ್ಲಾ ನಗರ ಪ್ರದೇಶಗಳ 2000 ಚದರ ಕಿಲೋ ಮೀಟರ್ ಪ್ರದೇಶವನ್ನು ಸಮೀಕ್ಷಿಸಬಹುದು ಮತ್ತು ಸಮೀಕ್ಷಾ ವಿಚಾರಣೆಯೂ ಸೇರಿದಂತೆ 50 ಕೋಟಿ ರೂಪಾಯಿಗಳ ವೆಚ್ಚ ತಗಲುತ್ತದೆ. ಟೋಟಲ್ ಸ್ಟೇಷನ್ ಬಳಸಿ ಸಮಿಕ್ಷೆ ನಡೆಸುವ ಇಪ್ಪತ್ತು ನುರಿತ ಕಂಪನಿಗಳು ಭಾರತದಲ್ಲಿವೆ. ಅವುಗಳಲ್ಲಿ ಹತ್ತು ಕಂಪನಿಗಳು 500 ಟೋಟಲ್ ಸ್ಟೇಷನ್‌ಗಳನ್ನು ಬಳಸಿ ಕಾರ್ಯ ನಡೆಸಿದರೂ ಸಾಕು ಮುದ್ರಿತ ಸ್ವತ್ತು ನಕಾಶೆಗಳುಳ್ಳ ಸವಿವರ ಸಮಿಕ್ಷೆಯನ್ನು ಆರು ತಿಂಗಳೊಳಗೆ ಮುಗಿಸಬಹುದು. ಆದ್ದರಿಂದ ಇದು ತಾಂತ್ರಿಕವಾಗಿ ಮಾಡಿ ಮುಗಿಸಬಹುದಾದ ಕಾರ್ಯವಾಗಿದೆ.

ಸಾಂಪ್ರದಾಯಿಕ ಮೋಜಣಿ ಇಲಾಖೆಯವರು ಅಡ್ಡಕೋಲು, ಸರಪಳಿ, ಥಿಯೋಡೊಲೈಟ್ ಬಳಸಿ ಸಿಬ್ಬಂದಿ ಸಾಲದೇ ಬಂದದ್ದರಿಂದ ಘೋರ ತಪ್ಪುಗಳನ್ನು ಮಾಡುತ್ತಾ ನಿರ್ವಹಿಸುವ ಸಾಂಪ್ರದಾಯಿಕ ಮೋಜಣಿಯ ಬದಲಾಗಿ

ಅದಕ್ಕಿಂತ ಕರಾರುವಾಕ್ಕದ ಮೋಜಣಿ (ಸರ್ವೆ) ಮಾಡುವ ಅಂಶ ಇದಾಯಿತು. ಇದಕ್ಕೂ ಮುಖ್ಯವಾದ ಅಂಶವೆಂದರೆ ಸ್ವತ್ತಿನ ಹಕ್ಕು ಮೂಲದ ಬಗ್ಗೆ ಆಮೂಲಾಗ್ರ ವಿಚಾರಣೆ. ಕರ್ನಾಟಕ ಭೂಕಂದಾಯ ನಿಯಮದ XIIನೇ ಅಧ್ಯಾಯದಲ್ಲಿ ನಗರ ಸಮೀಕ್ಷೆಗಾಗಿ ಸವಿವರ ವಿಚಾರಣೆ ಮಾಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ನೋಂದಣಿ ಇಲಾಖೆಯವರು ನೋಟೀಸು ನೀಡುವುದು, ಆಕ್ಷೇಪಣೆ ಆಲಿಸುವುದು, ಹಕ್ಕು ದಾಖಲೆ ಇತ್ಯಾದಿಗಳ ಬಗ್ಗೆ ಖಚಿತಪಡಿಸಿಕೊಳ್ಳುವುದು ಮುಂತಾದ ಕಾರ್ಯ ವಿಧಾನಗಳನ್ನು ಅನುಸರಿಸಿ, ನಗರದ ಭೂಮಿಗಳು ಮತ್ತು ಕಟ್ಟಡಗಳ ಸಮೀಕ್ಷೆಯನ್ನು ನಡೆಸುತ್ತಾರೆ. ಕೊನೆಯದಾಗಿ **" ಸ್ವತ್ತಿನ ಕಾರ್ಡ್"**ಗಳನ್ನು ಬರೆದುಕೊಡುತ್ತಾರೆ. ಬೆಂಗಳೂರು ನಗರದಲ್ಲಿ ಇದನ್ನು 1975ರಲ್ಲಿ ಪೂರ್ಣಗೊಳಿಸಲಾಗಿದೆ. ಆದರೆ ಅದಾದ ಮೇಲೆ ಈವರೆಗೆ ಸರಿಪಡಿಸಿಕೊಂಡು ಬಂದಿಲ್ಲ. ಹೀಗಿದ್ದರೂ ಬೆಳಗಾಂನಲ್ಲಿ ನಗರ ಪಾಲಿಕ ಪ್ರದೇಶಕ್ಕೆ 14 ಹಳ್ಳಿಗಳನ್ನು ಸೇರಿಸಿದಾಗ ಲಭ್ಯ ಟೋಟಲ್ ಸ್ಟೇಷನ್‌ಗಳು ಮತ್ತು ಮೋಜಣಿ ಇಲಾಖೆ ಸಿಬ್ಬಂದಿಯವರನ್ನು ಬಳಸಿಕೊಂಡು ನಗರ ಸಮೀಕ್ಷೆ ನಡೆಸಲಾಯಿತು ಮತ್ತು ಸ್ವತ್ತು ದಾಖಲೆ ಕಾರ್ಡ್(PRC)ಗಳನ್ನು ತಯಾರಿಸಲಾಯಿತು. ಈ ಸ್ವತ್ತು ದಾಖಲೆ ಕಾರ್ಡುಗಳನ್ನು ಆಸ್ತಿ ಮಾಲೀಕರು ತಮ್ಮ ಆಸ್ತಿ ಹಕ್ಕು ದಾಖಲೆಯಾಗಿ ಈಗಲೂ ಬಳಸುತ್ತಿದ್ದಾರೆ.

ಈ ಬಗ್ಗೆ ಮೋಜಣಿ ಇಲಾಖೆಯವರೊಡನೆ ಚರ್ಚೆ ನಡೆಸಿದಾಗ ಆರು ತಿಂಗಳ ಅವಧಿಯಲ್ಲಿ ನಗರ ಸಮೀಕ್ಷಾ ವಿಚಾರಣೆ ಪೂರ್ಣಗೊಳಿಸಲು 150 ಮಂದಿ ತಜ್ಞ ಮೋಜಣಿದಾರರು ಬೇಕಾಗುತ್ತದೆ ಎಂದು ಅಂದಾಜು ಮಾಡಿರುತ್ತಾರೆ. ಚುನಾವಣೆ ಅಥವಾ ಜನಗಣತಿ ಕಾರ್ಯಚರಣೆ ಮಾಡುವ ರೀತಿಯಲ್ಲಿಯೇ ಇದನ್ನೊಂದು ವಿಶೇಷ ಕಾರ್ಯಚರಣೆಯಾಗಿ ತೆಗೆದುಕೊಂಡು ಈ ಕೆಲಸ ಪೂರೈಸಬಹುದಾಗಿದೆ. ಆರು ತಿಂಗಳಿಗೆ ಈ ಉದ್ದೇಶಕ್ಕಾಗಿ ಸುಮಾರು 500 ಟೋಟಲ್ ಸ್ಟೇಷನ್‌ಗಳು ಅಗತ್ಯವಿವೆ. ಸಮೀಕ್ಷಾ ನಕಾಶೆಗಳು ದೊರೆತಾಗಲೆಲ್ಲಾ ಹೊರಗುತ್ತಿಗೆ ಕಂಪನಿಗಳಿಂದ ಟೋಟಲ್ ಸ್ಟೇಷನ್ ಸಮೀಕ್ಷೆಯನ್ನು ಮತ್ತು ಮೋಜಣಿ ಇಲಾಖೆಯವರಿಂದ ನಗರ ಸಮಿಕ್ಷೆಯನ್ನು ಜೊತೆಜೊತೆಯಲ್ಲೇ ಮಾಡಿಕೊಂಡು ಹೋಗಬಹುದು. ಟೋಟಲ್ ಸ್ಟೇಷನ್ ಬಳಸಿ ನಿಖರವಾದ ಸಮೀಕ್ಷೆ ಮಾಡುವ ಇಡೀ ಕೆಲಸವನ್ನು ಮತ್ತು ಬೆಂಗಳೂರು ಜಿಲ್ಲೆಯ ಎಲ್ಲ ನಗರ ಪ್ರದೇಶಗಳಲ್ಲಿ ನಗರ ಸಮೀಕ್ಷಾ ವಿಚಾರಣೆಯನ್ನು 8 ತಿಂಗಳೊಳಗೆ 50 ಕೋಟಿಗಳನ್ನು ಮೀರದ ವೆಚ್ಚದಲ್ಲಿ ಮಾಡಿ ಮುಗಿಸಬಹುದು.

ನಗರ ಸಮೀಕ್ಷಾ ವಿಚಾರಣೆ ಮಾಡಿದಾಕ್ಷಣ ಹಕ್ಕು ದಾಖಲೆಗಳು ನಿರುಪಾಧಿಕ ಮತ್ತು ವಿವಾದಾತೀತ ಆಗುವುದಿಲ್ಲ. ಭಾರತದ ಸಂವಿಧಾನದ ಅಡಿಯಲ್ಲಿ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳ ಅಸಲು ಮತ್ತು ಅಪೀಲು ಅಧಿಕಾರ ವ್ಯಾಪ್ತಿ ಪ್ರಕಾರ, ಆಸ್ತಿ ವಿವಾದವೂ ಸೇರಿದಂತೆ ಯಾವುದೇ ವಿವಾದವನ್ನು, ಹಕ್ಕು ಮೂಲವು ಎಷ್ಟೇ ಶುದ್ಧವಾಗಿದ್ದರೂ, ಸಂವಿಧಾನ ಪೀಠದ ಹಂತದವರೆಗೂ ಅಂಗೀಕರಿಸಬಹುದು. ಅಲ್ಲಿ ನಿರ್ಣಯವಾದ ಮೇಲೂ ಅದೇ ಅಂತಿಮವಾಗಬೇಕೆಂದೇನೂ ಇಲ್ಲ. ಏಕೆಂದರೆ ಬಹುಮುಖ್ಯವಾದ ವಿಷಯಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪನ್ನೇ ವಿಪರ್ಯಯಗೊಳಿಸಬಹುದು. ಆದ್ದರಿಂದ ಟೋಟಲ್ ಸ್ಟೇಷನ್‌ಗಳ ಮೂಲಕ ನಿಖರವಾದ ಸಮೀಕ್ಷೆ ಮಾಡಿಸಬೇಕೆಂಬ, ಹಾಗೆಯೇ ಸ್ವತ್ತುಗಳ ಹಕ್ಕು ಮೂಲದ ಬಗ್ಗೆ ನಗರ ಸಮೀಕ್ಷಾ ವಿಚಾರಣೆ ಮಾಡಿಸಬೇಕೆಂಬ ನಮ್ಮ ಪ್ರಸ್ತಾವದಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಹೀಗಿದೆ:

ಗ್ರಾಮಲೆಕ್ಕಿಗ ನೀಡುವ ಪಹಣಿಯಾಗಲಿ, ಉಪನೋಂದಣಾಧಿಕಾರಿ ನೀಡುವ ನೋಂದಾಯಿತ ಕ್ರಯಪತ್ರವಾಗಲಿ ಅವನ್ನು ಅನೇಕ ಬಾರಿ ಬಹಳ ತಪ್ಪಾಗಿ ಬರೆದಿರಬಹುದಾದ ಕಾರಣ ಮತ್ತು ಇನ್ನಾವುದೇ ಲಾಭದ ಉದ್ದೇಶದಿಂದ ಬರೆದಿರಬಹುದಾದ ಕಾರಣ ಎಷ್ಟೋ ಬಾರಿ ಅವುಗಳನ್ನು ಬರೆದಿರುವ ಕಾಗದಕ್ಕಿರುವ ಮೌಲ್ಯವೂ ಅವಕ್ಕಿರುವುದಿಲ್ಲ. ಇವುಗಳ ಆಧಾರದ ಮೇಲೆ ಖಾತೆ ಬದಲಾವಣೆ ಮಾಡುವುದು, ದಸ್ತಾವೇಜು ನೋಂದಣಿ ಮಾಡುವುದು ಮುಂತಾದ ನೂರೆಂಟು ಆಟ ಆಡಿ ಅನಾಹುತವನ್ನೇ ಮಾಡುತ್ತಾರಾದರೂ ಪಹಣಿಯಾಗಲಿ, ಕ್ರಯಪತ್ರವಾಗಲಿ ವಿಶ್ವಾಸಾರ್ಹ ದಾಖಲೆಗಳಲ್ಲ. ಅವುಗಳ ಬದಲಿಗೆ ಸದರಿ ಸಮೀಕ್ಷೆ ಕಾಲಕ್ಕೆ ನೀಡುವ ಸ್ವತ್ತು ದಾಖಲೆ ಕಾರ್ಡು ಅತ್ಯಂತ ವಿಶ್ವಾಸಾರ್ಹ ದಾಖಲೆಯಾಗಬಲ್ಲದು. ನಿಖರ ಸಮೀಕ್ಷೆಯ ವಿಸ್ತೃತ ಕಾರ್ಯಾಚರಣೆ, ಆಧುನಿಕ ವಿಧಾನಗಳನ್ನು ಬಳಸಿ ಭೂಮಿ ಮತ್ತು ಸ್ವತ್ತು ದಾಖಲೆಗಳನ್ನು ಮುದ್ರಿಸುವುದು, ಸಾರ್ವಜನಿಕರಿಗೆ ಸೂಕ್ತ ನೋಟಿಸು ನೀಡಿ ಸವಿವರ ನಗರ ಸಮೀಕ್ಷಾ ವಿಚಾರಣೆ ಮಾಡುವುದು, ಈ ಎಲ್ಲಾ ಕಾರ್ಯಗಳಿಂದ ತಯಾರಾಗುವ ಸ್ವತ್ತು ಹಕ್ಕಿನ ದಾಖಲೆಯು ಈಗ ನೀಡಿ ನೋಂದಾಯಿಸುತ್ತಿರುವ ತರಹದ ದಾಖಲೆಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾದದ್ದಾಗಿರುತ್ತದೆ. ಇದೇ ನಿರುಪಾಧಿಕ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಮೇಲೆ ಹೇಳಿದಂತೆ ಉಚ್ಚನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ಅಸಲು ಮತ್ತು ಅಪೀಲು ಅಧಿಕಾರದ ವ್ಯಾಪ್ತಿಯಲ್ಲಿ ಪ್ರತಿಯೊಂದು ಆಸ್ತಿಯ ಹಕ್ಕಿನ ವಿಚಾರವೂ ನ್ಯಾಯಾಲಯದಿಂದ ವಿಚಾರಣಾ ಯೋಗ್ಯವಾದದ್ದಾಗಿರುತ್ತದೆ. ಬಹು ಗಮನಾರ್ಹ ವಿಷಯವೆಂದರೆ ಪ್ರಸ್ತಾವಿತ ವ್ಯವಸ್ಥೆಯು ಈಗಿರುವ ಅನಿಶ್ಚಿತ ಸ್ವರೂಪದ ಕಾಗದ ಪತ್ರ ವ್ಯವಸ್ಥೆಗಿಂತಲೂ ಹೆಚ್ಚು ವಿಶ್ವಾಸಾರ್ಹತೆ ಹೊಂದಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಲ್ಲಿ ಸುಮಾರು 9.00 ಲಕ್ಷ ಮನೆಗಳಿವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರದೇಶದಲ್ಲಿ ಇನ್ನೂ ಹೆಚ್ಚಿವೆ. ಬೆಂಗಳೂರು ಜಿಲ್ಲೆಯ ನಗರ ಭೂಮಿಯ ವ್ಯಾಪ್ತಿಯ 2000 ಚದರ ಕಿ.ಮೀ.ನಲ್ಲಿ ಇನ್ನೂ ಬಹಳಷ್ಟು ಇವೆ. ಒಬ್ಬೊಬ್ಬ ನಾಗರೀಕನೂ ಸ್ವತ್ತಿನ ಹಕ್ಕಿನ ಬಗ್ಗೆ ಅತ್ಯಂತ ವಿಶ್ವಾಸಾರ್ಹ ದಾಖಲೆ ಪಡೆಯಲು 500–00 ರೂಪಾಯಿಗಳನ್ನು ಕೊಟ್ಟರೂ ಸಾಕು ಈ ಕಾರ್ಯಚರಣೆಯ ವೆಚ್ಚವನ್ನು ಸುಲಭವಾಗಿ ಭರಿಸಬಹುದು. 50.00 ಕೋಟಿ ರೂಪಾಯಿಗಳ ವೆಚ್ಚದ ಹೆಚ್ಚು ವಿಶ್ವಸಾರ್ಹ ಅಳತೆ ಕಾರ್ಯ ಮತ್ತು ನಗರ ಮೋಜಣಿ ಕಾರ್ಯವು ಅದರಿಂದ ದೊರಕುವ ಪ್ರಯೋಜನಕ್ಕೆ ಹೋಲಿಸಿದರೆ ಏನೇನೂ ದೊಡ್ಡ ಖರ್ಚಲ್ಲ. ಏಕೆಂದರೆ ಆಗುವ ಖರ್ಚನ್ನು ಆಸ್ತಿ ದಾಖಲೆ ಕಾರ್ಡ್‌ಗೆ ಬೆಲೆ ವಿಧಿಸುವ ಮೂಲಕ ವಸೂಲಿಮಾಡಬಹುದು ಮತ್ತು ಸಾರ್ವಜನಿಕರೂ ಬಹಳ ಸಂತೋಷದಿಂದಲೇ ಆ ದುಡ್ಡನ್ನು ಕೊಡುತ್ತಾರೆ. ಆಗಬೇಕಾದದ್ದೇನೆಂದರೆ ಸೂಕ್ತ ಸಿಬ್ಬಂದಿಯನ್ನು ಆರಿಸಿ ಮತ್ತು ಅವರ ಮೇಲೆ ಕಟ್ಟುನಿಟ್ಟಾದ ನಿಗಾವಹಿಸಿ ನಗರ ಸಮೀಕ್ಷಾ ವಿಚಾರಣೆಯನ್ನು ಕಳಂಕರಹಿತವಾಗಿ ನಿರ್ವಹಿಸುವಂತೆ ಮೇಲ್ವಿಚಾರಣೆ ಮಾಡುವುದು. ಒತ್ತುವರಿ ಪ್ರದೇಶಗಳ ವಿಸ್ತೀರ್ಣವನ್ನು ನಿಖರವಾಗಿ ಅಳತೆ ಮಾಡದಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಅದರಲ್ಲಿಯು ಕೆರೆ ಅಂಗಳಗಳ ಮತ್ತು "ಬಿ" ಖರಾಬು ಒತ್ತುವರಿ ವಿಸ್ತೀರ್ಣಗಳನ್ನು ಗುರುತಿಸಿ, ಒತ್ತುವರಿದಾರರನ್ನು ಖರಾರುವಕ್ಕಾಗಿ ಪತ್ತೆಹಚ್ಚಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಒಂದು ಅತ್ಯಾಧುನಿಕ ವ್ಯವಸ್ಥೆಯೊಂದಿಗೆ ಒತ್ತುವರಿ ವಿಸ್ತೀರ್ಣವನ್ನು ಅಳತೆ ಮಾಡಿಸುವುದು ಸೂಕ್ತವಾಗಿರುತ್ತದೆ.

ಮಾನ್ಯ ಹಣಕಾಸು ಮಂತ್ರಿಗಳು ತಮ್ಮ ಇತ್ತೀಚಿನ ಬಜೆಟ್ ಭಾಷಣದ ಪ್ಯಾರಾ 97ರಲ್ಲಿ ಹಕ್ಕುಮೂಲ ವಿಮೆ ನಿಗಮವನ್ನು ರಚಿಸುವುದಾಗಿ ಮತ್ತು ಇದು ತಪ್ಪು ಸ್ವತ್ತು ದಾಖಲೆಗಳ ವಿರುದ್ಧ ವಿಮೆ ನೀಡುತ್ತದೆಂದೂ ಹೇಳಿದ್ದಾರೆ. ಇತರೆ ದೇಶಗಳಲ್ಲಿರುವಂತಹ ಇಂತಹ ವ್ಯವಸ್ಥೆಗೆ ನಮ್ಮ ಸ್ವಾಗತವಿದೆ. ಆದರೆ ಇದರ ಜೊತೆ ಜೊತೆಗೆ ಭೂ ಆಸ್ತಿಯನ್ನು ಅಳೆಯುವ ಬಹಳ ವಿಶ್ವಾಸಾರ್ಹ ಪದ್ಧತಿಯನ್ನು ಬಳಸಬೇಕು ಮತ್ತು ಸ್ವತ್ತುಗಳ ಹಕ್ಕು ವಿಚಾರಣೆಯ ಸವಿವರ ನಗರ ಸಮೀಕ್ಷೆ ಆಗಬೇಕು. ಈಗ ಎಲ್ಲರೂ ಗತ್ಯಂತರವಿಲ್ಲದೆ ಅನುಭವಿಸುತ್ತಿರುವ ಅತ್ಯಂತ ನಂಬಲರ್ಹವಲ್ಲದ ಹಕ್ಕು ದಾಖಲೆ ಪದ್ಧತಿಗೆ ಬದಲಾಗಿ ಜನರು ವಿಶ್ವಾಸಾರ್ಹ ಹಕ್ಕು ದಾಖಲೆ ಪಡೆದುಕೊಳ್ಳುವ ಒಂದು ಖಾತರಿ ವಿಮಾ ಪದ್ಧತಿಯನ್ನು ದೊರಕಿಸಿಕೊಡಬೇಕಾಗುತ್ತದೆ.

* * * * *

## 14. ಕಾನೂನು ಇಲಾಖೆಯವರು, ಸರ್ಕಾರಿ ಮತ್ತು ಶಾಸನಬದ್ಧ ಸಂಸ್ಥೆಗಳ ನ್ಯಾಯವಾದಿಗಳು ಮೊಕದ್ದಮೆಗಳಲ್ಲಿ ಪ್ರತಿವಾದವನ್ನು ಪರಿಣಾಮಕಾರಿಯಾಗಿ ಮಾಡುವ ಬಗ್ಗೆ:

ಒಂದು ಕಡೆ ಭೂ ಕಬಳಿಕೆದಾರರು ನಕಲಿ ದಾಖಲೆಗಳ ಆಧಾರದ ಮೇಲೆ ಸರ್ಕಾರದ ವಿರುದ್ಧ ಧೈರ್ಯವಾಗಿ ದಾವೆಗಳನ್ನು ಹೂಡುತ್ತಿದ್ದರೆ, ಸರ್ಕಾರಿ ಇಲಾಖೆಗಳು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ ಮುಂತಾದ ಶಾಸನಬದ್ಧ ಸಂಸ್ಥೆಗಳು ದಕ್ಷತೆಯಿಂದ ಈ ಪ್ರಕರಣಗಳನ್ನು ಪ್ರತಿವಾದಿಸುತ್ತಿಲ್ಲ ಎಂಬುದನ್ನು ಸಮಿತಿ ಗಮನಿಸಿರುತ್ತದೆ. ಎಷ್ಟೋ ಸಂದರ್ಭದಲ್ಲಿ 10 ವರ್ಷಗಳಿಗೂ ಹೆಚ್ಚು ಕಾಲ ತಾತ್ಕಾಲಿಕ ಪ್ರತಿಬಂಧಕಾಜ್ಞೆ ಮುಂದುವರಿಯಲು ಅವಕಾಶ ನೀಡಿರುವುದುಂಟು. ಸಂಬಂಧಪಟ್ಟ ಇಲಾಖೆಯವರು ಸಕಾಲದಲ್ಲಿ ಮಾಹಿತಿ ಒದಗಿಸಿಲ್ಲ ಎಂಬ ನೆವ ಹೇಳಿಕೊಂಡು ಸರ್ಕಾರಿ ವಕೀಲರು ದಾವೆಗಳನ್ನು ಪ್ರತಿವಾದಿಸುವ ಗೋಜಿಗೇ ಹೋಗುತ್ತಿಲ್ಲ. ಎಲ್ಲ ಮಾಹಿತಿಗಳನ್ನು ಕೊಟ್ಟ ಸಂದರ್ಭಗಳಲ್ಲೂ ಸರ್ಕಾರಿ ವಕೀಲರು ದಾವೆ ಪ್ರತಿವಾದಿಸಲು ಯಾವ ಆಸಕ್ತಿ ಅಥವಾ ಉತ್ಸಾಹವನ್ನು ತೋರುವುದಿಲ್ಲ. ಇನ್ನೂ ಸ್ಪಷ್ಟವಾಗಿ ಹೇಳುವುದೆಂದರೆ ಹಲವಾರು ಸರ್ಕಾರಿ ವಕೀಲರು ಖಾಸಗಿ ಪಕ್ಷಕಾರರ ಪರವಹಿಸಿ, ಶಾಮೀಲಾಗಿರುವ ಸಂದರ್ಭಗಳು ಇರುತ್ತವೆ.

* * * * *

## 15. ಸರ್ಕಾರದ ದಾವೆಗಳನ್ನು ಪತಿವಾದಿಸುವಲ್ಲಿ ಕಾನೂನು ಕೋಶಗಳು ಮತ್ತು ಕಾನೂನು ವಿಭಾಗಗಳ ಅತೃಪ್ತಿಕರ ಕಾರ್ಯ ನಿರ್ವಹಣೆ:

ಸರ್ಕಾರವನ್ನೊಳಗೊಂಡ ಬಹುಮುಖ್ಯ ಪ್ರಕರಣಗಳು ನ್ಯಾಯಾಲಯದ ಮುಂದೆ ಬಂದಾಗ ನ್ಯಾಯಾಲಯಗಳು ಮತ್ತು ನ್ಯಾಯ ಮಂಡಳಿಗಳ ಮುಂದೆ ಸರ್ಕಾರಿ ದಾವೆಗಳನ್ನು ಚೆನ್ನಾಗಿ ನಡೆಸಿಕೊಂಡು ಬರುವುದಕ್ಕಾಗಿ 1990 ರಲ್ಲಿ ವಿವಿಧ ಇಲಾಖೆಗಳಲ್ಲಿ ಸರ್ಕಾರವು 7 ಕಾನೂನು ಕೋಶಗಳನ್ನು ರಚಿಸಿದೆ. ದಿನಾಂಕ 01–01–1996 ರಂದು ಸರ್ಕಾರ ಈ ಕಾನೂನು ಕೋಶಗಳನ್ನು ಪುನ: ಸಂಘಟಿಸಿ 17 ಇಲಾಖೆಗೆ ಕಾನೂನು ಕೋಶಗಳನ್ನು ರಚಿಸಿಕೊಟ್ಟಿತು ಮತ್ತು ಪ್ರತಿಯೊಂದು ಕೋಶಕ್ಕೂ ಒಬ್ಬ ಶಾಖಾಧಿಕಾರಿ, ಇಬ್ಬರು ಶೀಘ್ರಲಿಪಿಗಾರರು, ಒಬ್ಬ ಕಿರಿಯ ಸಹಾಯಕ ಮತ್ತು ಇಬ್ಬರು ದಲಾಯತರನ್ನು ಒದಗಿಸಿ ಎಲ್ಲರಿಗೂ ಸೇರಿ ಒಂದು ಮಿನಿವ್ಯಾನ್ ಒದಗಿಸಿಕೊಟ್ಟಿತು. ಸರ್ಕಾರಿ ಆದೇಶದ ಪ್ರಕಾರ ಕಾನೂನು ಕೋಶಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಹೀಗಿವೆ.

1) ಅಧಿಕಾರ ಪತ್ರ ನೀಡುವುದು.
2) ಕಾನೂನು ಅಧಿಕಾರಿಗಳ ಸಂಭಾವನೆ ಕುರಿತ ಸರ್ಕಾರದ ಆದೇಶ ಹೊರಡಿಸುವುದು.
3) ಕಂಡಿಕೆವಾರು ಷರಾಗಳನ್ನು ಪರಿಶೀಲಿಸಿ ನೋಡಿ ಅನುಮೋದಿಸುವುದು.
4) ಆಕ್ಷೇಪಣಾ ಹೇಳಿಕೆಗಳ ಕರಡನ್ನು / ಪ್ರತಿವಾದ ಪತ್ರಗಳ ಕರಡನ್ನು ಪರಿಶೀಲಿಸಿನೋಡುವುದು ಮತ್ತು ಕಾನೂನು ಇಲಾಖೆಯ ಅನುಮೋದನೆ ತರುವಾಯ ಅದು ಕಾನೂನು ಅಧಿಕಾರಿಗಳಿಗೆ ತಲುಪುವಂತೆ ನೋಡಿಕೊಳ್ಳುವುದು.
5) **ಬಾಕಿ ಇರುವ ವ್ಯಾಜ್ಯಗಳ ವಿವಿಧ ಹಂತಗಳನ್ನು ಮೇಲ್ವಿಚಾರಣೆ (Monitor) ಮಾಡುವುದು ಮತ್ತು ಕಾನೂನು ಅಧಿಕಾರಿಗೆ ಅಗತ್ಯ ಮಾಹಿತಿ ಹಾಗೂ ದಸ್ತಾವೇಜುಗಳನ್ನು ಒದಗಿಸುವುದು.**
6) ಕಾನೂನು ಅಧಿಕಾರಿಯಿಂದ ತೀರ್ಪುಗಳ ಪ್ರತಿಯನ್ನು ಪಡೆದುಕೊಂಡು ಆ ಬಗ್ಗೆ ಅಪೀಲು ಹಾಕಬೇಕೇ ಬೇಡವೇ ಎಂಬ ಬಗ್ಗೆ ತನ್ನ ಶಿಫಾರಸ್ಸಿನೊಂದಿಗೆ ಅದನ್ನು ಕಾನೂನು ಇಲಾಖೆಗೆ ಕಳುಹಿಸುವುದು, ಅಪೀಲು ಹಾಕಬೇಕೇ ಬೇಡವೇ ಎಂಬ ಬಗ್ಗೆ ನಿರ್ಧಾರವನ್ನು ಕಾನೂನು ಇಲಾಖೆಯವರು ತೆಗೆದು ಕೊಳ್ಳುವಂಥಹದು ಮುಂದುವರಿಯುತ್ತದೆ.
7) ದಾವೆಗಳನ್ನು ಹೂಡುವುದು.
8) ಸಿ.ಪಿ.ಸಿ.ಯ 80ನೇ ಕಲಂ ಮೇರೆಗಿನ ನೋಟಿಸಿಗೆ ಉತ್ತರ ನೀಡುವುದು.
9) ಕಾನೂನು ಇಲಾಖೆಯವರು ಪುನರ್ ಪರಿಶೀಲಿಸಿದ ತರುವಾಯ ಹಿಂತಿರುಗಿಬಂದ ಕಡತಗಳ ಮೇಲೆ ಅನುಪಾಲನಾ ಕ್ರಮಗಳನ್ನು ತೆಗೆದುಕೊಳ್ಳುವುದು.

ಸರ್ಕಾರವು, ಕರ್ನಾಟಕ ಸರ್ಕಾರ (ವ್ಯವಹಾರ ನಡವಳಿಕೆ) ನಿಯಮಾವಳಿ 1977 ಕ್ಕೆ ಹೊಸ ಪ್ರಕರಣ 65 ಎ ಅನ್ನು ಸೇರಿಸಿ ಒಂದು ತಿದ್ದುಪಡಿ ಸಹ ತಂದಿತು. (ಅಧಿಸೂಚನೆ ಸಂಖ್ಯೆ ಡಿಸಿಎ 20 ಎಆರ್ ಬಿ 96, ದಿನಾಂಕ 23–8–2000 ಕೆಡಿಜಿ Ex 29–8–2000 ನೋಡಿ) ಇದರಲ್ಲಿ ಈ ರೀತಿ ಹೇಳಲಾಗಿದೆ.

"65ಎ. ಬಾಕಿ ಇರುವ ಸರ್ಕಾರಿ ವ್ಯಾಜ್ಯಗಳನ್ನು ಕಡೆಪಕ್ಷ ತಿಂಗಳಿಗೊಮ್ಮೆಯಾದರೂ ಪರಿಶೀಲನೆ ಮತ್ತು ಮೇಲ್ವಿಚಾರಣೆ ಮಾಡುವುದು ಕಾನೂನು ಇಲಾಖೆಯ ಕರ್ತವ್ಯವಾಗಿರತಕ್ಕದ್ದು. ಈ ಉದ್ದೇಶಕ್ಕಾಗಿ ಕಾನೂನು ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು, ಕಾನೂನು ಕೋಶಗಳ ಮುಖ್ಯಸ್ಥರು ಮತ್ತು ಅಡ್ವೋಕೇಟ್ ಜನರಲ್ ಅವರ ಕಚೇರಿಯ ಕಾನೂನು ಅಧಿಕಾರಿಗಳ ಒಂದು ಮಾಸಿಕ ಸಭೆಯನ್ನು ನಡೆಸತಕ್ಕದ್ದು. ಕಾನೂನು ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರು ಇಂತಹ ಪರಿಶೀಲನೆಯ ಮತ್ತು ಮೇಲ್ವಿಚಾರಣೆಯ ಫಲಿತಾಂಶವನ್ನು ಈ ಬಗ್ಗೆ ಆ ಇಲಾಖೆ ನಿರ್ದಿಷ್ಟಪಡಿಸಿರುವ ನಮೂನೆಯಲ್ಲಿ ಮುಖ್ಯ ಕಾರ್ಯದರ್ಶಿಗಳಿಗೆ ವರದಿ ಸಲ್ಲಿಸತಕ್ಕದ್ದು."

ಈ ಸಮಿತಿಯು ಕಾನೂನು ಇಲಾಖಾ ಕಾರ್ಯದರ್ಶಿಗಳು ಮತ್ತು ಕಾನೂನು ಕೋಶಗಳ ಮುಖ್ಯಸ್ಥರ ಒಂದು ಸಭೆಯನ್ನು ದಿನಾಂಕ 21-2-2007 ರಂದು ಕರೆದು ನ್ಯಾಯಾಲಯಗಳ ಮುಂದೆ ಇರುವ ಸರ್ಕಾರಿ ದಾವೆಗಳನ್ನು ಪ್ರತಿವಾದಿಸುವಾಗ ಆಗುತ್ತಿರುವ ನ್ಯೂನತೆಗಳನ್ನು ಕುರಿತು ಚರ್ಚಿಸಿತು. ಆಶ್ಚರ್ಯ ಮತ್ತು ಗಾಬರಿ ಹುಟ್ಟಿಸುವ ಸಂಗತಿ ಎಂದರೆ ಕಾನೂನು ಕೋಶಗಳ ಮುಖ್ಯಸ್ಥರಿಗೆ ಅಂಥಹದೊಂದು ಸರ್ಕಾರಿ ಆದೇಶ ಇದೇ ಎಂಬುದೇ ಗೊತ್ತಿರಲಿಲ್ಲ. ಕೇವಲ ತಮಗೆ ಕಳುಹಿಸಿಕೊಟ್ಟ ಪ್ರಕರಣಗಳ ಬಗ್ಗೆ ಕಾನೂನು ಅಭಿಪ್ರಾಯ ನೀಡುವುದಷ್ಟೇ ತಮ್ಮ ಜವಾಬ್ದಾರಿ. ಬಾಕಿ ಉಳಿದ ದಾವೆಗಳ ವಸ್ತುಸ್ಥಿತಿ ಮೇಲ್ವಿಚಾರಣೆ ಮಾಡುವುದಲ್ಲ ಎಂದು ಪ್ರತಿಯೊಬ್ಬರೂ ಸಮರ್ಥಿಸಿಕೊಂಡರು. ಈ ಸರ್ಕಾರಿ ಆದೇಶದ ಕಡೆಗೆ ಅವರ ಗಮನ ಸೆಳೆದು ಅದೂ ನಿಮ್ಮ ಜವಾಬ್ದಾರಿಯೇ ಎಂದು ಹೇಳಿದಾಗ ಅವರೂ ಯಾವ ಉತ್ತರವನ್ನೂ ನೀಡಲಿಲ್ಲ.ಇದರ ಜೊತೆಗೆ ಕಾನೂನು ಕಾರ್ಯದರ್ಶಿಗಳಿಗೂ ಈ ಸರ್ಕಾರಿ ಆದೇಶದ ಬಗ್ಗೆ ಗೊತ್ತಿರಲಿಲ್ಲ. (ಅದರ ಒಂದು ಪ್ರತಿ ಬೇಕು ಎಂದು ಸಮಿತಿಯು ಕಾನೂನು ಇಲಾಖೆಯನ್ನು ಕೇಳಿದಾಗ ಅದು ಅವರ ಬಳಿ ದೊರೆಯಲಿಲ್ಲ. ಕಡೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ತರಿಸಿಕೊಳ್ಳಲಾಯಿತು) ಅಷ್ಟೇ ಅಲ್ಲ ಕಾನೂನು ಕಾರ್ಯದರ್ಶಿಯವರು ಕಾನೂನು ಕೋಶಗಳ ಮುಖ್ಯಸ್ಥರ ಮತ್ತು ಅಡ್ವೋಕೇಟ್ ಜನರಲ್ ಕಚೇರಿಯ ಕಾನೂನು ಅಧಿಕಾರಿಗಳ ಸಭೆಯನ್ನು ಕಡೆಪಕ್ಷ ತಿಂಗಳಿಗೊಮ್ಮೆ ಕರೆದು ಬಾಕಿ ಇರುವ ವ್ಯಾಜ್ಯಗಳ ಪುನರವಲೋಕನ ಮಾಡಿ ಅಂಥಹ ಪುನರವಲೋಕನದ ಫಲಿತಾಂಶದ ಬಗ್ಗೆ ವರದಿಯನ್ನು ಮುಖ್ಯ ಕಾರ್ಯದಶಿಗಳಿಗೆ ಕಳುಹಿಸಕೊಡಬೇಕು ಎಂದು ಹೇಳುವ ವ್ಯವಹಾರ ನಡವಳಿಕೆ ನಿಯಮಾವಳಿಯ 65ಎ ನಿಯಮದ ಬಗ್ಗೆಯೂ ಅವರಿಗೆ ತಿಳಿದಿರಲಿಲ್ಲ.

ಸರ್ಕಾರ ಹೀಗೆ ಕಟ್ಟಪ್ಪಣೆ ಮಾಡಿದಂತಹ ಪುನರವಲೋಕನ ಸಭೆಯನ್ನು ಕಾನೂನು ಕಾರ್ಯದರ್ಶಿಗಳು ಪ್ರತಿ ತಿಂಗಳು ಕಾನೂನು ಕೋಶಗಳ ಮುಖ್ಯಸ್ಥರು ಮತ್ತು ಕಾನೂನು ಅಧಿಕಾರಿಗಳೊಂದಿಗೆ ತಪ್ಪದೇ ನಡೆಸುತ್ತಾ ಬಂದಿದ್ದರೆ ಸರ್ಕಾರಿ ವ್ಯಾಜ್ಯಗಳನ್ನು ನ್ಯಾಯಾಲಯದವರು ಸ್ಟ್ರಿಕ್ಟರ್ ಹೊರಡಿಸುವ ರೀತಿಯಲ್ಲಿ ಅತ್ಯಂತ ನಿರಾಸಕ್ತಿಯಿಂದ ಬಹಳ ನಿಂದಾತ್ಮಕವಾಗಿ ನಡೆಸಿಕೊಂಡು ಬರುತ್ತಿರುವುದನ್ನು ತಪ್ಪಿಸಬಹುದಾಗಿತ್ತು ಅಲ್ಲದೆ ಅಮೂಲ್ಯವಾದ ಸರ್ಕಾರಿ ಸ್ವತ್ತು ನೀತಿಗೆಟ್ಟ ಭೂಗಳ್ಳರ ಪಾಲಾಗುವುದು ನಿಲ್ಲುತ್ತಿತ್ತು.

ಆದ್ದರಿಂದ ಆಯಾ ಇಲಾಖೆಯು ಕಾರ್ಯದರ್ಶಿಗಳು ತಿಂಗಳಿಗೊಮ್ಮೆ ಬಾಕಿ ಇರುವ ದಾವೆಗಳ ಪುನರವಲೋಕನವನ್ನು ತಮ್ಮ ಕಾನೂನು ಕೋಶದ ಮುಖ್ಯಸ್ಥರು ಮತ್ತು ಸಂಬಂಧಪಟ್ಟ ಕಾನೂನು ಅಧಿಕಾರಿಗಳ ಜೊತೆ ಮಾಡಬೇಕೆಂದು ಕಡ್ಡಾಯಪಡಿಸಬೇಕು. ಹಾಗೆಯೇ ಕಾನೂನು ಕಾರ್ಯದರ್ಶಿಯವರು ಕಾನೂನು ಕೋಶಗಳ ಮುಖ್ಯಸ್ಥರು ಹಾಗೂ ಕಾನೂನು ಅಧಿಕಾರಿಗಳೊಂದಿಗೆ ಬಹು ಮುಖ್ಯವಾದ ಬಾಕಿ ಪ್ರಕರಣಗಳನ್ನು ತಿಂಗಳಿಗೊಮ್ಮೆ ಮೇಲ್ವಿಚಾರಣೆ ಮಾಡಿ ಪುನರಾವಲೋಕನ ಮಾಡುವಂತೆ ಕಡ್ಡಾಯಪಡಿಸಬೇಕು ಕಾನೂನು ಕೋಶಗಳನ್ನು ಮತ್ತಷ್ಟು ಬಲಪಡಿಸಿ ಆಯಾಯ ಕೋಶಗಳ ಮುಖ್ಯಸ್ಥರಿಗೆ ಶೀಘ್ರಲಿಪಿಗಾರರು, ಫ್ಯಾಕ್ಸ್ ಮುಂತಾದ ಅಗತ್ಯ ಸೌಕರ್ಯಗಳನ್ನು ಆಯಾ ಇಲಾಖೆಯ ಕಾರ್ಯದರ್ಶಿಗಳು ಒದಗಿಸುವಂತೆ ನೋಡಿಕೊಳ್ಳಬೇಕು.

* * * * *

## 16. ನ್ಯಾಯಾಲಯಗಳಲ್ಲಿ ಸರ್ಕಾರಿ ಪ್ರಕರಣಗಳನ್ನು ಯಶಸ್ವಿಯಾಗಿ ಪ್ರತಿವಾದಿಸುವುದು:

ನ್ಯಾಯಾಲಯಗಳಲ್ಲಿ ಸರ್ಕಾರದ ಪ್ರತಿ ರಕ್ಷಣೆಯನ್ನು ಅದರ ವಕೀಲರು ಬೇಕಾಬಿಟ್ಟಿಯಾಗಿ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಮತ್ತು ಸಮಿತಿಯು ಇದನ್ನು ಅನೇಕ ಸಲ ಗಮನಿಸಿದೆ. ಪಟ್ಟಂದೂರು ಅಗ್ರಹಾರ ಪ್ರಕರಣದಲ್ಲಿ **(ರಿಟ್ ಅರ್ಜಿ ಸಂಖ್ಯೆ: 2002ರ 39159 ಇತ್ಯಾದಿ, ದಿನಾಂಕ 08-03-2003)** ಸರ್ಕಾರಿ ವಕೀಲರು, ಪ್ರಾಸಿಕ್ಯೂಷನ್ ನಿರ್ದೇಶಕರು, ಕಾನೂನು ಇಲಾಖೆ ಮುಂತಾದವರುಗಳ ಮೇಲೆ ಅವರ ಕರ್ತವ್ಯ ಚ್ಯುತಿಗಳ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ಕಟುವಾದ ಟೀಕೆಗಳನ್ನು ಮಾಡಿದ್ದಾರೆ ಮತ್ತು ಸರ್ಕಾರಕ್ಕೆ ವಿಶ್ವಾಸ ದ್ರೋಹ ಮಾಡಿರುವುದಕ್ಕೆ ಅವರಿಗೆ ಛೀಮಾರಿಯನ್ನು ಸಹ ಹಾಕಿದ್ದಾರೆ.

ಸರ್ಕಾರಕ್ಕೆ ಸಂಬಂಧಪಟ್ಟ ವ್ಯಾಜ್ಯಗಳನ್ನು ಪರಿಣಾಮಕಾರಿಯಾಗಿ ವಾದಿಸಲು ವಿವಿಧ ಇಲಾಖೆಗಳಲ್ಲಿ ಸರ್ಕಾರವು ಹದಿನೇಳು ಕಾನೂನು ಕೋಶಗಳನ್ನು ರಚಿಸಿದೆ. ಈ ಕಾನೂನು ಕೋಶಗಳು ಬಹು ಮುಖ್ಯವಾದ ಮೊಕದ್ದಮೆಗಳು ಹೇಗೆ ನಡೆಯುತ್ತಿವೆ ಎಂಬುದರ ಮೇಲ್ವಿಚಾರಣೆಯನ್ನು ನಡೆಸುವ ತಮ್ಮ ಕರ್ತವ್ಯವನ್ನು ಮಾಡುತ್ತಲೇ ಇಲ್ಲ. ಈ ಕಾನೂನು ಕೋಶ ಯಾರ ಅಡಿಯಲ್ಲಿ ಕೆಲಸ ಮಾಡುತ್ತಿದೆಯೋ ಆ ಸರ್ಕಾರಿ ಇಲಾಖೆಯ ಸಂಬಂಧಪಟ್ಟ ಕಾರ್ಯದರ್ಶಿಗಳು ಪ್ರಕರಣಗಳನ್ನು ಇಲಾಖೆಯಲ್ಲಿಯೇ ಪುನರ್ ಅವಲೋಕನ ಮಾಡಲು ಮಾಸಿಕ ಸಭೆಗಳನ್ನು ನಡೆಸಬೇಕು. ಕಾನೂನು ಕೋಶಗಳನ್ನು ರಚಿಸಿದ ನಿಯಮಗಳಲ್ಲಿ ಅಗತ್ಯ ಪಡಿಸಿರುವ ಪ್ರಕಾರ ಕಾನೂನು ಕಾರ್ಯದರ್ಶಿಗಳು ಕಾನೂನು ಕೋಶಗಳ ಕಾರ್ಯವನ್ನು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಿ ಒಂದು ವರದಿಯನ್ನು ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಬೇಕು. ಆದರೆ ಈ ಕೆಲಸ ವಾಸ್ತವವಾಗಿ ನಡೆಯುತ್ತಲೇ ಇಲ್ಲ. ಈಗ ಪರಿಸ್ಥಿತಿ ಹೇಗಿದೆಯೆಂದರೆ, ನ್ಯಾಯಾಲಯಗಳು ಬಂದು ಮುಖ್ಯ ಕಾರ್ಯದರ್ಶಿಗಳ ಕುರ್ಚಿ ಮತ್ತು ಪೀಠೋಪಕರಣಗಳನ್ನು ಜಪ್ತಿಮಾಡಿಕೊಂಡಾಗ ಮಾತ್ರ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆ. ಇಂಥ ಒಂದು ಪರಿಸ್ಥಿತಿ ಬದಲಾಗಬೇಕು.

### ಸರ್ಕಾರಿ ವಕೀಲರ ಆಯ್ಕೆ

ಸರ್ಕಾರಿ ವಕೀಲರ ಆಯ್ಕೆಯ ಈಗಿರುವ ಅತೃಪ್ತಿಕರ ವ್ಯವಸ್ಥೆ ಬದಲಾಗಬೇಕು. ಈ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಹೊರಗಿನ ಅಂಶ ಪ್ರಭಾವ ಬೀರದಂತೆ ನೋಡಿಕೊಳ್ಳಲು ಒಂದು ಉನ್ನತ ಮಟ್ಟದ ಆಯ್ಕೆ ಸಮಿತಿಯನ್ನು ರಚಿಸುವುದು ಅಗತ್ಯ ಎಂದು ಸಮಿತಿ ಭಾವಿಸುತ್ತದೆ. ಈ ಉನ್ನತ ಮಟ್ಟದ ಸಮಿತಿಯಲ್ಲಿ ಅಡ್ವೋಕೇಟ್ ಜನರಲ್‌ರವರು ಅಧ್ಯಕ್ಷರಾಗಿರಬೇಕು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ನಾಮನಿರ್ದೇಶನ ಮಾಡಿದ ಜಿಲ್ಲಾ ನ್ಯಾಯಾಧೀಶರು ಸದಸ್ಯರಾಗಿದ್ದು ಮತ್ತು ಕಾನೂನು ಕಾರ್ಯದರ್ಶಿಗಳು ಸದಸ್ಯ ಕಾರ್ಯದರ್ಶಿಗಳಾಗಿರಬೇಕು. ಈ ಸಮಿತಿಯು ಅರ್ಜಿಗಳನ್ನು ಆಹ್ವಾನಿಸಿ, ಅಪ್ಪಟ ಮೆರಿಟ್ ಆಧಾರದ ಮೇಲೆ ಸರ್ಕಾರಿ ವಕೀಲರುಗಳನ್ನು ಮತ್ತು ಸರ್ಕಾರಿ ಪ್ಲೀಡರ್‌ಗಳನ್ನು ಆಯ್ಕೆ ಮಾಡಬೇಕು. ಹಾಗೂ ಈ ಸಮಿತಿಯ ನಿರ್ಣಯವೇ ಅಂತಿಮವಾಗಿರಬೇಕು. ಇದೇ ಸಮಿತಿ ಈಗಿರುವ ಸರ್ಕಾರಿ ವಕೀಲರು ಮತ್ತು ಸರ್ಕಾರಿ

ಪ್ಲೀಡರುಗಳ ಕಾರ್ಯ ಸಾಧನೆಯ ಮೌಲ್ಯಮಾಪನ ಮಾಡಿ, ಅವಶ್ಯವೆಂದು ಕಂಡುಬಂದ ಕಡೆ ಅವರ ಸೇವೆಗಳನ್ನು ಅಂತ್ಯಗೊಳಿಸಬೇಕು. ಈಗ ಕೊಡುತ್ತಿರುವ ಸಂಭಾವನೆ ಜೊತೆಯಲ್ಲಿ ಸರ್ಕಾರಿ ವಕೀಲರು ಕೇಸ್‌ಗಳನ್ನು ಗೆದ್ದಾಗ, ಹತ್ತು ಸಾವಿರ ರೂಪಾಯಿಗಳವರೆಗೆ ವಿಶೇಷ ಶುಲ್ಕವನ್ನು ಕೊಡಬೇಕು. ಹಿಂದೆ ಇದ್ದಂತೆ, ಅಡ್ವೊಕೇಟ್ ಜನರಲ್ ಅವರ ಕಛೇರಿಯಲ್ಲಿರುವ ಆಡಳಿತಾಧಿಕಾರಿಯ ಹುದ್ದೆಯನ್ನು ಸಿವಿಲ್ ನ್ಯಾಯಾಧೀಶರೊಬ್ಬರನ್ನು ನೇಮಕ ಮಾಡಿ ಭರ್ತಿ ಮಾಡತಕ್ಕದ್ದು.

ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಬರುವುದಕ್ಕಾಗಿ ಪ್ರತಿಯೊಂದು ಇಲಾಖೆಯು ವಾಣಿಜ್ಯ ತೆರಿಗೆ ಇಲಾಖೆಯ ರೀತಿಯಲ್ಲಿಯೇ ಒಂದು ಕೋಶವನ್ನು ರಚಿಸಿಕೊಳ್ಳಬೇಕು. ಆದ್ದರಿಂದ ಪ್ರತಿಯೊಂದು ಸರ್ಕಾರಿ ಇಲಾಖೆಯು ವಾಣಿಜ್ಯ ತೆರಿಗೆ ಇಲಾಖೆಯಲ್ಲಿರುವ ಕಾರ್ಯ ವ್ಯವಸ್ಥೆಯನ್ನು ಅಧ್ಯಯನ ಮಾಡಿ ಈ ತರಹದ ಒಂದು ಕೋಶವನ್ನು ರಚಿಸಬೇಕು. ಕಂದಾಯ ಇಲಾಖೆಯ ಸಚಿವಾಲಯದ ಕಾನೂನು ಕೋಶದ ಜೊತೆಗೆ, ಬೆಂಗಳೂರಿನಲ್ಲಿರುವ ಪ್ರಾದೇಶಿಕ ಆಯುಕ್ತರವರ ಕಛೇರಿಯಲ್ಲಿ ಇತರೆ ಮೂರು ಪ್ರಾದೇಶಿಕ ಆಯುಕ್ತರುಗಳ ಕಛೇರಿಗಳನ್ನು ಒಳಗೊಂಡಂತೆ ಮತ್ತೊಂದು ಕಾನೂನು ಕೋಶವನ್ನು ರಚಿಸತಕ್ಕದ್ದು. ರಾಷ್ಟ್ರೀಯ ಕಾನೂನು ಶಾಲೆಯ ವಿದ್ಯಾರ್ಥಿಗಳು ತಮ್ಮ ಕಾನೂನು ವ್ಯಾಸಂಗ ಕ್ರಮದಲ್ಲಿ ಕಡ್ಡಾಯವಾಗಿ ಕಾನೂನು ಸಂಸ್ಥೆಗಳೊಂದಿಗೆ ಕೆಲಸ ಮಾಡಬೇಕಾಗುತ್ತದೆ. ಈ ಸಂಸ್ಥೆಯು ತನ್ನ ಪದವಿ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸರ್ಕಾರದ ಪರವಾಗಿ ಮನವಿ ಅರ್ಜಿಗಳನ್ನು ಬರೆದುಕೊಡಲು ನಿಯೋಜಿಸುವುದಕ್ಕೆ ಒಪ್ಪಿಕೊಂಡಿದೆ. ಈ ವಿದ್ಯಾರ್ಥಿಗಳನ್ನು ಅರೆಕಾಲಿಕ ಆಧಾರದ ಮೇಲೆ ಪರಿಣಾಮಕಾರಿಯಾಗಿ ಮನವಿ ಅರ್ಜಿ (ಪಿಟಿಷನ್)ಗಳನ್ನು ಬರೆದುಕೊಡಲು ಅಡ್ವೊಕೇಟ್ ಜನರಲ್ ಕಛೇರಿಗೆ ನಿಯೋಜಿಸಬಹುದಾಗಿದೆ. ಇವರಿಗೆ ಕಾನೂನಿನ ತಳಹದಿ ಚೆನ್ನಾಗಿರುವ ಕಾರಣ ಉತ್ತಮವಾದಂಥ ಅರ್ಜಿ ಕರಡುಗಳನ್ನು ಇವರು ಬರೆದುಕೊಡಬಲ್ಲರು. ರಾಷ್ಟ್ರೀಯ ಕಾನೂನು ಶಾಲಾ ವಿಶ್ವವಿದ್ಯಾಲಯವು ಇದಕ್ಕೆ ಒಪ್ಪಿಕೊಂಡಿರುತ್ತದೆ.

* * * * *

## 17. ಕಾನೂನು ಇಲಾಖೆಯ ಗಣಕೀಕರಣ:

ಕರ್ನಾಟಕ ಉಚ್ಚ ನ್ಯಾಯಾಲಯವು ತನ್ನ ಎಲ್ಲಾ ಕಾನೂನು ವ್ಯವಹರಣೆಗಳನ್ನು ಬಹಳ ವಿಸ್ತೃತವಾಗಿ ಮತ್ತು ಪರಿಣಾಮಕಾರಿಯಾಗಿ ಗಣಕೀಕರಣ ಮಾಡಿರುತ್ತದೆ. ಪ್ರತಿಯೊಂದು ಮೊಕದ್ದಮೆಗೂ ಒಂದು ವಿಶಿಷ್ಟ ಸಂಖ್ಯೆಯನ್ನು ನೀಡಲಾಗಿದೆ. ಇದರಿಂದಾಗಿ, ಮೊಕದ್ದಮೆಗಳನ್ನು ಮತ್ತು ಮೊಕದ್ದಮೆಗಳ ವಸ್ತು ವಿಷಯವನ್ನು ಪತ್ತೆ ಹಚ್ಚುವುದು ಮತ್ತು ಒಂದುಗೂಡಿಸುವುದು ಸುಲಭವಾಗುತ್ತದೆ. ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯಲ್ಲಿ ಇಂಥದೊಂದು ವ್ಯವಸ್ಥೆ ಇಲ್ಲ. ಆದ್ದರಿಂದ, ಕಾನೂನು ಇಲಾಖೆಯವರು ಇದೇ ಮಾದರಿಯಲ್ಲಿ ತಮ್ಮ ದಾಖಲೆಗಳನ್ನು ಮತ್ತು ವ್ಯವಸ್ಥೆಗಳನ್ನು ಗಣಕೀಕರಣ ಮಾಡಬೇಕು.

* * * * *

## 18. ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007:

ಸಮಿತಿಯ ಅಧಿಕಾರಿಗಳು, ಹೈದರಾಬಾದಿಗೆ ಭೇಟಿ ನೀಡಿ ಆಂಧ್ರ ಪ್ರದೇಶ ಭೂ ಕಬಳಿಕೆ (ನಿಷೇಧ) ಅಧಿನಿಯಮ, 1980 ನ್ನು ಕುರಿತು ಅಧ್ಯಯನ ಮಾಡಿದರು ಮತ್ತು ಆಂಧ್ರ ಪ್ರದೇಶ ರಾಜ್ಯದಲ್ಲಿ ರಚಿತವಾದ ವಿಶೇಷ ನ್ಯಾಯಾಲಯದ ಅಧ್ಯಕ್ಷರು ಮತ್ತು ಸದಸ್ಯರೊಡನೆ ಚರ್ಚಿಸಿದರು. ಆಂಧ್ರ ಪ್ರದೇಶದ ಅಧಿನಿಯಮವು, ಸರ್ಕಾರದ, ಶಾಸನಬದ್ಧ ಸಂಸ್ಥೆಗಳ ಮತ್ತು ಖಾಸಗಿ ವ್ಯಕ್ತಿಗಳ ಭೂಮಿಗಳೂ ಸೇರಿದಂತೆ ಇಡೀ ಆಂಧ್ರ ಪ್ರದೇಶದಲ್ಲಿ ನಡೆಯುವ ಯಾವುದೇ ಬಗೆಯ ಭೂ ಕಬಳಿಕೆಯನ್ನು ನಿಷೇಧಿಸುತ್ತದೆ. ಆದ್ದರಿಂದ ಇದೊಂದು ಸಮಗ್ರ ಶಾಸನ.

### ಕರ್ನಾಟಕ ಅಧಿನಿಯಮದ ಮುಖ್ಯಾಂಶಗಳು

1) ಇದು ಸರ್ಕಾರ, ಸ್ಥಳೀಯ ಪ್ರಾಧಿಕಾರಗಳು, ಶಾಸನಬದ್ಧವಾದ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳಿಗೆ ಸೇರಿದ ಅಂದರೆ ಕಂಪೆನಿ, ಟ್ರಸ್ಟ್ ಅಥವಾ ವ್ಯಕ್ತಿಗತ ಸಂಘಗಳಿಗೆ ಸೇರಿದ ಎಲ್ಲಾ ಭೂಮಿಗಳಿಗೆ ಅನ್ವಯವಾಗುತ್ತದೆ.

2) ಭೂ ಕಬಳಿಕೆದಾರ ಎಂಬುದರಲ್ಲಿ ಕಾನೂನುಬಾಹಿರವಾಗಿ ಭೂಮಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ವ್ಯಕ್ತಿ ಅಥವಾ ಹಾಗೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಹಾಯ ಮಾಡುವ ವ್ಯಕ್ತಿ ಮತ್ತು ಸಾರ್ವಜನಿಕ ನೌಕರರಂಥ ದುಷ್ಪ್ರೇರಿಸುವವರೂ ಒಳಗೊಳ್ಳುತ್ತಾರೆ.

3) ಭೂ ಕಬಳಿಕೆಗೆ ವಿಶೇಷ ನ್ಯಾಯಾಲಯವು ಕನಿಷ್ಠ 1 ವರ್ಷ ಗರಿಷ್ಠ ಮೂರು ವರ್ಷದ ಕಾರವಾಸ ಶಿಕ್ಷೆಯನ್ನೂ 25,000 ರೂಪಾಯಿಗಳವರೆಗಿನ ಜುಲ್ಮಾನೆಯನ್ನೂ ವಿಧಿಸುತ್ತದೆ.

4) ವಿಶೇಷ ನ್ಯಾಯಾಲಯವು ಪ್ರಾರಂಭದಲ್ಲಿ, ಸೇವೆಯಲ್ಲಿರುವ ಅಥವಾ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ದರ್ಜೆಯ ಅಧ್ಯಕ್ಷರನ್ನು ಮತ್ತು ಜಿಲ್ಲಾ ನ್ಯಾಯಾಧೀಶರ ದರ್ಜೆಯ ನ್ಯಾಯಿಕ ಸದಸ್ಯರನ್ನು ಮತ್ತು ಜಿಲ್ಲೆಯ ಜಿಲ್ಲಾಧಿಕಾರಿ ದರ್ಜೆಗೆ ಕಡಿಮೆಯಲ್ಲದ ಕಂದಾಯ ಸದಸ್ಯರನ್ನು ಒಳಗೊಂಡಿರುತ್ತದೆ.

5) ನ್ಯಾಯಿಕ ಸದಸ್ಯರು ಅಧ್ಯಕ್ಷರಾಗಿರುವ ಮತ್ತು ಕಂದಾಯ ಸದಸ್ಯರನ್ನು ಹೊಂದಿರುವ ಹೆಚ್ಚುವರಿ ನ್ಯಾಯಪೀಠಗಳನ್ನು ರಚಿಸಬಹುದು.

6) ರಾಜ್ಯದಲ್ಲಿಯ ಎಲ್ಲ ಭೂಕಬಳಿಕೆ ಪ್ರಕರಣಗಳನ್ನು ವಿಶೇಷ ನ್ಯಾಯಾಲಯವು ಮಾತ್ರವೇ ಅಧಿ ವಿಚಾರಣೆ ನಡೆಸುವುದು ಮತ್ತು ವಿಶೇಷ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರುತ್ತದೆ.

7) ವಿಶೇಷ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಹಾಗೂ ಸೆಷನ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುತ್ತದೆ.

8) ಭೂಮಿಯು ಸರ್ಕಾರದ ಭೂಮಿಯಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬಂದರೆ, ಭೂಮಿಯನ್ನು ಕಬಳಿಸಿಲ್ಲ ಎಂಬುದನ್ನು ರುಜುವಾತುಪಡಿಸುವ ಹೊಣೆ ಆಪಾದಿತನ ಮೇಲೆ ಇರುತ್ತದೆ.

9) ಯಾವ ಪ್ರದೇಶಗಳಿಗಾಗಿ ವಿಶೇಷ ನ್ಯಾಯಾಲಯವನ್ನು ರಚಿಸಿಲ್ಲವೋ ಅಂಥ ಪ್ರದೇಶಗಳಲ್ಲಿ ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳ ಅಧಿವಿಚಾರಣೆ ನಡೆಸುವ ಅಧಿಕಾರವನ್ನು ಸರ್ಕಾರವು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರಿಗೆ ನೀಡಬಹುದು.

10) ಈ ಅಧಿನಿಯಮವು ಎಲ್ಲ ಇತರ ಅಧಿನಿಯಮಗಳ ಮೇಲೆ ಅಧ್ಯಾರೋಹಿ ಪ್ರಭಾವವುಳ್ಳದಾಗಿರುತ್ತದೆ. ಭೂಕಬಳಿಕೆ ಸ್ವರೂಪದ ಎಲ್ಲಾ ಪ್ರಕರಣಗಳು ಈ ಅಧಿನಿಯಮದ ಅಡಿಯಲ್ಲಿ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿತವಾಗುತ್ತವೆ.

* * * * *

## 19. ಈ ಅಧಿನಿಯಮದ ಉಪಬಂಧಗಳ ಮತ್ತು ವಿಶೇಷ ನ್ಯಾಯಾಲಯದ ವ್ಯಾಪ್ತಿಯೊಳಗೆ ಒಂದು ವಿಶ್ವಾಸಾರ್ಹ ತನಿಖೆ ಹಾಗೂ ಅಭಿಯೋಜನೆ ಪ್ರಾಧಿಕಾರ ರಚಿಸಬೇಕಾದ ಅವಶ್ಯಕತೆ.

ಮೇಲಿನ ಪ್ಯಾರಾಗಳಲ್ಲಿ ವಿವರಿಸಿದ ವಿಷಯಗಳನ್ನು ಗಮನಿಸಿದಾಗ ಖೋಟಾ ದಾಖಲೆಗಳ ಸೃಷ್ಟಿ, ಭೂಕಬಳಿಕೆದಾರರೊಡನೆ ಶಾಮಿಲಾಗುವುದು ಮತ್ತು ಭೂಕಬಳಿಕೆಗೆ ದುಷ್ಪ್ರೇರಿಸುವ ಪಿಡುಗು ಮಿತಿಮೀರುತ್ತಿರುವುದು ಸ್ಪಷ್ಟವಾಗುತ್ತದೆ. ಉದಾಸೀನ ಹಾಗೂ ದೋಷಪೂರ್ಣ ತನಿಖೆ, ಸರ್ಕಾರಿ ವಕೀಲರು ತೋರಿಕೆಗೆ ಮಾತ್ರ ಅಭಿಯೋಜನೆ ನಡೆಸಿದ್ದರಿಂದ ಬೇಕಾಬಿಟ್ಟಿ ವಾದ ಮಂಡನೆ ಮಾಡಿದ್ದರಿಂದ ಹಾಗೂ ಇನ್ನೂ ಕೆಲವು ಪ್ರಕರಣಗಳಲ್ಲಿ ತಾವೂ ಶಾಮಿಲಾಗಿರುವುದರಿಂದ ನಿಜವಾದ ಭೂಕಬಳಿಕೆಯ ಬಹಳಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿ ಸೋತಿವೆ. ಇದನ್ನು ತಡೆಗಟ್ಟಬೇಕಾದರೆ ಹಾಗೂ ಸಮಗ್ರ ತನಿಖೆ ನಡೆಸಿ ಅಂಥ ಎಲ್ಲ ಭೂಕಬಳಿಕೆಯ ಪ್ರಕರಣಗಳನ್ನು ಅಭಿಯೋಜನೆಗೆ ಒಳಪಡಿಸಬೇಕಾದರೆ, ವಿಶೇಷ ನ್ಯಾಯಾಲಯದ, ಒಂದು ಭಾಗವಾಗಿ ಅತ್ಯಂತ ದಕ್ಷವಾದ ಹಾಗೂ ಉನ್ನತಾಧಿಕಾರವುಳ್ಳ ಒಂದು ಆಡಳಿತ ವಿಭಾಗದ ರಚನೆಯಾಗಬೇಕಾದದ್ದು ಅಗತ್ಯವಿದೆ.

ಅಧಿನಿಯಮದ 12ನೇ ಪ್ರಕರಣದಲ್ಲಿ, ವಿಶೇಷ ನ್ಯಾಯಾಲಯಕ್ಕೆ ನೆರವು ನೀಡಲು ಅಧಿಕಾರಿಗಳು ಮತ್ತು ನೌಕರರನ್ನು ನೇಮಕ ಮಾಡುವುದಕ್ಕಾಗಿ ಉಪಬಂಧಗಳಿವೆ. ತನಿಖೆ, ಅಭಿಯೋಜನೆ ಮತ್ತು ಅಧಿವಿಚಾರಣೆಯು ಯಾವ ನ್ಯೂನತೆಯೂ ಇರದಂತೆ ಆಗಬೇಕಾದರೆ ಸೇವೆಯಲ್ಲಿರುವ ಅಪರ ಮುಖ್ಯ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುವ ಒಂದು ಆಡಳಿತ ವಿಭಾಗ ಇರಬೇಕೆಂದು ಹಾಗೂ ಅವರ ಅಡಿಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪೊಲೀಸ್ ಅಧಿಕ್ಷಕರನ್ನು ಕಾನೂನು ಅಧಿಕಾರಿಗಳನ್ನು ಮತ್ತು ವಿಶೇಷ ಅಭಿಯೋಜಕರನ್ನು ಒದಗಿಸಬೇಕೆಂದು ಸಹ ಸಲಹೆ ಮಾಡಲಾಗಿದೆ. ಲೋಕಾಯುಕ್ತ ಮಾದರಿಯಲ್ಲೇ, ವಿಶೇಷ ನ್ಯಾಯಾಲಯದ ಅಧ್ಯಕ್ಷರು, ಸರ್ಕಾರವು ಒದಗಿಸಿದ ಅಧಿಕಾರಿಗಳ ಪಟ್ಟಿಯಿಂದ ಅಂಥ ಅಧಿಕಾರಿಗಳನ್ನು ಆಯ್ಕೆ ಮಾಡಿ ನೇಮಕಮಾಡತಕ್ಕದ್ದು. ಅಸಾಧಾರಣ ಪ್ರಕರಣಗಳಲ್ಲಿ, ಅಧ್ಯಕ್ಷರು/ ವಿಶೇಷ ತನಿಖಾ ತಂಡವನ್ನು ಮತ್ತು ವಿಶೇಷ ಅಭಿಯೋಜಕರನ್ನು ವಿಶೇಷ ಕಾರ್ಯಚರಣೆ ಅಥವಾ ಕರ್ತವ್ಯದ ಮೇಲೆ ನೇಮಕಮಾಡಿಕೊಳ್ಳಲು ಸಹ ನಿಯಮದಡಿಯಲ್ಲಿ ಅವರಿಗೆ ಅಧಿಕಾರವಿರತಕ್ಕದ್ದು. ಆಡಳಿತ ವಿಭಾಗದ ಮುಖ್ಯಸ್ಥರೊಡನೆ ಶಿಷ್ಟಾಚಾರ ವಿಷಯದಲ್ಲಿ ಸಮಸ್ಯೆ ಉಂಟಾಗುವುದನ್ನು ತಪ್ಪಿಸಲು, ನಿವೃತ್ತರಾದ ಅಥವ ನಿವೃತ್ತರಾಗಲಿರುವ ಮುಖ್ಯ ಕಾರ್ಯದರ್ಶಿಯವರು ಅಥವಾ ತತ್ಸಮಾನ ಹುದ್ದೆಯನ್ನು ಹೊಂದಿರುವ ಅಧಿಕಾರಿಯವರು ಕಂದಾಯ ಸದಸ್ಯರಾಗಿರತಕ್ಕದ್ದು.

ಇ–ಆಡಳಿತ ಅಗತ್ಯತೆಗಳೂ ಸೇರಿದಂತೆ, ಅತ್ಯಾಧುನಿಕ ರೀತಿಯಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕಾಗಿ ಸಾಕಷ್ಟು ಬಜೆಟ್ ಏರ್ಪಾಡು ಮಾಡತಕ್ಕದ್ದು. ಈವರೆಗೆ ಬೆಂಗಳೂರು ನಗರ ಜಿಲ್ಲೆಯೊಂದರಲ್ಲೇ ಪತ್ತೆ ಹಚ್ಚಿರುವಂತೆ ಜಮೀನು ಒತ್ತುವರಿಯ ಪ್ರಮಾಣ ಅಂದಾಜು 30,000 ಎಕರೆಗಳಾಗಿದ್ದು ಎಕರೆಗೆ 2.00 ಕೋಟಿ ಎಂದು ಬೆಲೆ ಕಟ್ಟಿದರೂ ಕನಿಷ್ಠ 60,000 ಕೋಟಿ ರೂಪಾಯಿಗಳಷ್ಟಾಗುತ್ತದೆ. ಒಂದು ಸಮರ್ಥ ಆಡಳಿತ ಶಾಖೆಯನ್ನು ನೇಮಿಸಿ ಖೋಟಾ ದಾಖಲೆಗಳನ್ನು ಹಾಗೂ ಖೋಟಾ ವ್ಯವಹಾರಗಳನ್ನು ಒಂದೂ ಬಿಡದಂತೆ ಪತ್ತೆ ಹಚ್ಚಲು, ದಕ್ಷ ತನಿಖೆ ಹಾಗೂ ಯಶಸ್ವಿ

ಅಭಿಯೋಜನೆ ನಡೆಸಲು ಹಣಕಾಸು ಒದಗಿಸುವುದಕ್ಕೆ ಯಾವ ಕೊರತೆಯೂ ಇಲ್ಲದಂತೆ ನೋಡಿಕೊಳ್ಳಬೇಕು. ಆದ್ದರಿಂದ ಇದನ್ನು ಕಾರ್ಯರೂಪಕ್ಕೆ ತರದೇ ಹೋದರೆ, ಭೂ ಕಬಳಿಕೆ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯದ ನೇಮಕವು ಏನೋ ಮಾಡಲೇ ಬೇಕಲ್ಲಾ ಎಂದು ಮಾಡಿದ ಕಾರ್ಯ ಮತ್ತು ಕಣ್ಣೊರೆಸುವ ನಾಟಕವಾಗುತ್ತದೆ ಅಷ್ಟೇ. ತೀರ ವಯಸ್ಸಾದ, ಹತಾಶೆಯಿಂದ ದಿನೇ ದಿನೇ ಅಧ:ಪತನಗೊಳ್ಳುತ್ತಿರುವ ಸಾಮಾಜಿಕ ಮೌಲ್ಯಗಳ ಹಿಡಿತಕ್ಕೆ ಸಿಲುಕಿದ ವ್ಯಕ್ತಿಗಳ ಬದಲಾಗಿ, ನೈತಿಕ ಶ್ರದ್ಧೆಯುಳ್ಳ ಭಾರತೀಯ ಆಡಳಿತ ಸೇವೆ, ಭಾರತೀಯ ಅರಣ್ಯ ಸೇವೆ, ಭಾರತೀಯ ಪೊಲೀಸ್ ಸೇವೆ ಹಾಗೂ ರಾಜ್ಯ ಸಿವಿಲ್ ಸೇವೆಗಳಿಂದ ಮತ್ತು ಭಾರತದ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಿಂದ ಬಂದ ಯುವ ಪದವೀಧರರನ್ನು ವಿಶೇಷ ನ್ಯಾಯಾಲಯದ ಸೇವೆಗೆ ಸಾಕಷ್ಟು ಸಂಖ್ಯೆಯಲ್ಲಿ ಆಯ್ಕೆ ಮಾಡಬೇಕಾದದ್ದು ಅವಶ್ಯಕವಾಗಿದೆ.

ಜಂಟಿ ಸದನ ಸಮಿತಿಯು ತನ್ನ ಮಧ್ಯಂತರ ವರದಿ ಭಾಗ-1ನ್ನು ಸಲ್ಲಿಸಿದ ನಂತರ ಸರ್ಕಾರಿ ಭೂಮಿ ಒತ್ತುವರಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಲುವಾಗಿ ಆಗಿಂದಾಗ್ಗೆ ಮಾನ್ಯ ಸಭಾಪತಿಗಳ ಮತ್ತು ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರದ ವಿವಿಧ ಇಲಾಖೆಗಳಿಗೆ ಹಲವಾರು ಪತ್ರ ವ್ಯವಹಾರಗಳನ್ನು ನಡೆಸಿರುತ್ತದೆ. ಇಂಥಹ ಕೆಲವು ಆಯ್ದ ಪತ್ರದ ನಕಲುಗಳನ್ನು ಈ ವರದಿಯ **ಅನುಬಂಧ- 5ರಲ್ಲಿ 16** ಪತ್ರಗಳನ್ನು ಲಗತ್ತಿಸಿರುತ್ತದೆ.

* * * * *

## 20. ಒತ್ತುವರಿದಾರರಿಂದ ಹಿಂತೆಗೆದುಕೊಂಡಿರುವಂತಹ ಜಮೀನುಗಳ ಬಳಕೆಗೆ ಒಂದು ಮಾಸ್ಟರ್ ಪ್ಲಾನ್:

ಇಲಾಖೆಗಳು ಕೊಟ್ಟಿರುವಂತಹ ವರದಿ ಪ್ರಕಾರ ಇದುವರೆವಿಗೂ ಇಲಾಖೆಗಳು ಪತ್ತೆಹಚ್ಚಿರುವಂತಹ ಒತ್ತುವರಿಗೆ ಒಳಗಾದ ಭೂಮಿ ಸುಮಾರು 30,000 ಎಕರೆಗಳಷ್ಟು. ಇವುಗಳಲ್ಲಿ 21,700 ಎಕರೆಗಳನ್ನು ಕಂದಾಯ ಇಲಾಖೆಯವರು ಪತ್ತೆ ಹಚ್ಚಿದ್ದಾರೆ. 8,000 ಎಕರೆಗಳಲ್ಲಿ ಒತ್ತುವರಿದಾರರನ್ನು ತೆರವುಗೊಳಿಸಿ ಸ್ತುತ್ಯಾರ್ಹವಾದ ಕೆಲಸವನ್ನು ಕಂದಾಯ ಇಲಾಖೆಯು ಮಾಡಿರುತ್ತದೆ.

ಕಂದಾಯ ಇಲಾಖೆಯವರು ವಿವಿಧ ಸರ್ಕಾರಿ ಇಲಾಖೆಗಳಿಗೆ ಮತ್ತು ಶಾಸನಬದ್ಧ ಸಂಸ್ಥೆಗಳಿಗೆ ಎಷ್ಟು ಜಮೀನು ಬೇಕು ಎಂಬುದನ್ನು ಕೇಳಿದೆ. ಅವುಗಳು 5,000 ಎಕರೆಗಳಷ್ಟು ಜಮೀನಿಗೆ ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆ.

ಸಮಿತಿಯು ಈ ವಿಷಯವನ್ನು ವಿವರವಾಗಿ ಚರ್ಚಿಸಿದೆ. ಇದುವರೆಗೆ ಇಲಾಖೆಗಳು ವರದಿ ಮಾಡಿರುವಂತೆ ಒತ್ತುವರಿಯಾಗಿರುವಂತಹ ಭೂಮಿಯ ಅಂದಾಜು 30,000 ಎಕರೆ ಎಂದು ಇಟ್ಟುಕೊಂಡರೂ ಇದು ಬಹಳಷ್ಟು ವಿಸ್ತಾರವಾದ ಜಮೀನಾಗಿರುತ್ತದೆ. ಈ ಭೂಮಿಯು ಬೆಂಗಳೂರು ನಗರ ಜಿಲ್ಲೆಯಿಡೀ ಸಣ್ಣ ಸಣ್ಣ ತಾಕುಗಳಾಗಿ ಮತ್ತು ಹೆಚ್ಚು ತಾಕುಗಳಿರುವ ಗುಂಪುಗಳಾಗಿ ಚದರಿ ಹರಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರದೇಶದಲ್ಲಿ ಸಣ್ಣ ಸಣ್ಣ ತಾಕು ಭೂಮಿಗಳನ್ನು ಹರಾಜು ಮಾಡುವುದು, ಅವಶ್ಯವಾಗಬಹುದಾದರೂ ಎಲ್ಲಾ ಜಮೀನನ್ನು ಗೊತ್ತುಗುರಿಯಿಲ್ಲದೆ ಹರಾಜು ಮಾಡುತ್ತಾ ಹೋಗುವುದು ಅಥವಾ ವಿವಿಧ ಸರ್ಕಾರಿ ಇಲಾಖೆಗಳಿಗೆ ಹಂಚಿಕೆ ಮಾಡುತ್ತಾ ಹೋಗುವುದು ಸೂಕ್ತವಲ್ಲ.

ಆದುದರಿಂದ ಸಮಿತಿಯು ಅಭಿಪ್ರಾಯಪಡುವುದೇನೆಂದರೆ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ತಜ್ಞರಿರುವಂತಹ ಮತ್ತು ವಿವಿಧ ಇಲಾಖೆಗಳ ಪ್ರತಿನಿಧಿಗಳಿರುವಂತಹ ಒಂದು ಸಮಿತಿಯು ಪುನ: ಸ್ವಾಧೀನಕ್ಕೆ ತೆಗೆದುಕೊಂಡ ಒತ್ತುವರಿಯಾದ ಪ್ರದೇಶದ ಸಂಖ್ಯೆ ಮತ್ತು ವಿಸ್ತಾರಗಳನ್ನು ಪರಿಗಣನೆಗೆ ತೆಗೆದುಕೊಂಡು ಭವಿಷ್ಯದಲ್ಲಿ ಈ ಭೂಮಿಗಳ ಬಳಕೆಯ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರಿಸಬೇಕು. ಒಂದೊಂದೇ ಇಲಾಖೆಗೆ ಗೊತ್ತುಗುರಿ ಇಲ್ಲದೇ ಮತ್ತು ಮನಸ್ಸಿಗೆ ಬಂದಂತೆ ಹಂಚಿಕೆ ಮಾಡುವುದು ಸೂಕ್ತವಲ್ಲ. ಈ ಭೂಮಿಗಳನ್ನು ಒಂದು ವಿಸ್ತಾರವಾದ ನಕಾಶೆಯಲ್ಲಿ ಗುರುತಿಸಬೇಕು. ಭವಿಷ್ಯದಲ್ಲಿ ಆಗುವ ಬೆಳವಣಿಗೆಗಳು ಮತ್ತು ಮೂಲ ಸೌಲಭ್ಯಗಳ ಅವಶ್ಯಕತೆಗಳನ್ನು ಹಾಗೂ ಸ್ಟೇಡಿಯಂಗಳು, ಉದ್ಯಾನವನಗಳು, ಶಾಲೆಗಳು, ಆಟದ ಮೈದಾನಗಳು ಮುಂತಾದ ಅವಶ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದನ್ನು ಗಮನದಲ್ಲಿಟ್ಟುಕೊಂಡು ಈ ಭೂಮಿಗಳ ಬಳಕೆಯನ್ನು ನಿರ್ಧರಿಸಬೇಕೆಂಬುದು ಸಮಿತಿಯ ಒಟ್ಟಾರೆ ಅಭಿಪ್ರಾಯ ವಾಗಿದೆ. ಈಗಲೂ ಬೆಂಗಳೂರು ಪ್ರತಿವರ್ಷ ಶೇಕಡ 3.3 ರಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ. ಇಷ್ಟು ಭಾರಿ ಪ್ರಮಾಣದಲ್ಲಿ ಭವಿಷ್ಯತ್ತಿನಲ್ಲಿ ಬೆಳವಣಿಗೆಯಾಗುತ್ತಿರುವಾಗ ಸರ್ಕಾರಕ್ಕೆ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೆ ಅಗಾಧ ಪ್ರಮಾಣದಲ್ಲಿ ಭೂಮಿ ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಬಿಲ್ಡರ್‌ಗಳಿಗೆ ಅನುಕೂಲವಾಗುವಂತೆ ದೊರೆತ ಸರ್ಕಾರಿ ಭೂಮಿಯನ್ನೆಲ್ಲಾ ಆತುರಾತುರವಾಗಿ ಹರಾಜು ಮಾಡಿಬಿಟ್ಟರೆ ಭವಿಷ್ಯದ ನೈಜ ಅವಶ್ಯಕತೆಗೆ ಬೇಕೆಂದಾಗ ಯಾವ ಭೂಮಿಯು ಉಳಿಯುವುದಿಲ್ಲ. ನಾಳಿನ ಅಗತ್ಯತೆಗಳ ಬಗ್ಗೆ ಯೋಚನೆಯನ್ನೇ ಮಾಡದೆ ದೂರದೃಷ್ಟಿಯಿಲ್ಲದೆ ತತ್ಕಾಲದ ಅಗತ್ಯಕ್ಕಾಗಿ ಕುಟುಂಬದ ಆಪದ್ಧನವನ್ನೆಲ್ಲ ಸೂರೆಗೊಟ್ಟಂತೆ ಆಗುತ್ತದೆ.

ಆದುದರಿಂದ, ಭವಿಷ್ಯದ ಅಗತ್ಯತೆಗಳನ್ನು ಮನಗಂಡು, ಗುರುತಿಸಿ ಅಂತಹ ಅಗತ್ಯತೆಗಳಿಗೆ ಭೂಮಿಯನ್ನು ಮೀಸಲಿಡುವುದಕ್ಕಾಗಿ ಬೃಹತ್ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಲಭ್ಯವಿರುವ ಹಾಗೂ ಲಭ್ಯವಾಗಬಹುದಾದ ಸರ್ಕಾರಿ ಭೂಮಿಗಳ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರಿಸಲೇಬೇಕು ಮತ್ತು ಅದರಂತೆ ಭೂಮಿ ಕಾಯ್ದಿರಿಸಬೇಕೆಂದು ಈ ಸಮಿತಿಯು ಆಗ್ರಹಪೂರ್ವಕವಾಗಿ ಶಿಫಾರಸ್ಸು ಮಾಡುತ್ತದೆ.

* * * * *

## 21. ನಿಷ್ಕ್ರಿಯ ಆಡಳಿತದಿಂದ ತಪ್ಪಿತಸ್ಥರಿಗೆ ರಕ್ಷಣೆ ದೊರಕುತ್ತಿರುವ ಬಗ್ಗೆ.

ಸರ್ಕಾರದ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಮೋಸ, ವಂಚನೆ, ಅವ್ಯವಹಾರಗಳನ್ನು ಮಾಡಿರುವಂತಹ, ಎದ್ದು ಕಾಣುವ ಹಲವಾರು ನಿದರ್ಶನಗಳಿವೆ. ಈ ಅವ್ಯವಹಾರಗಳು ಪೂರ್ವಯೋಜಿತವಾದವುಗಳಾಗಿದ್ದು, ಇಡೀ ಸರ್ಕಾರ ಮತ್ತು ಸಮಾಜವನ್ನು ಮೋಸಗೊಳಿಸುವ ಷಡ್ಯಂತ್ರವಾಗಿರುತ್ತವೆ. ಭೂ ಮಾಫಿಯಾದವರು ಸರ್ಕಾರದ ವಿರುದ್ಧವೇ ಸೆಡ್ಡು ಹೊಡೆದು ಅಕ್ರಮಗಳಲ್ಲಿ ತೊಡಗಿ, ಕ್ರಿಮಿನಲ್ ಸ್ವರೂಪದ ಕೃತ್ಯಗಳನ್ನು ಮಾಡಿದ್ದರೂ ಇದುವರೆವಿಗು ಯಾರದೇ ವಿರುದ್ಧ ಕಠಿಣ ಕ್ರಮಕೈಗೊಂಡಿರುವುದು ಕಂಡುಬಂದಿರುವುದಿಲ್ಲ. ಕ್ರಮಗಳೇನಿದ್ದರೂ, ಕನಿಷ್ಠ ಅವಶ್ಯಕತೆಗಾಗಿ ಒತ್ತುವರಿ ಮಾಡಿಕೊಂಡಿರುವ ಬಡವರ ವಿರುದ್ಧವೇ ಆಗಿರುತ್ತದೆ. ಇದರಿಂದ ಅಕ್ರಮ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವವರು ಮತ್ತು ಅಕ್ರಮ ವ್ಯವಹಾರಗಳನ್ನು ಮಾಡಲು ಉತ್ತೇಜಿಸಿ, ಸಹಕರಿಸಿರುವ ಅಧಿಕಾರಿಗಳು ನಿರ್ಭೀತಿಯಿಂದ ಇರುವುದರಿಂದಲೇ, ನಿರಂತರವಾಗಿ ಅವ್ಯವಹಾರಗಳು ನಡೆಯುತ್ತಿದ್ದು, ಸರ್ಕಾರದ ಆಡಳಿತದ ಬಗ್ಗೆ ಜನ ಸಾಮಾನ್ಯರಲ್ಲಿ ವಿಶ್ವಾಸ ಕುಂದುತ್ತಿದೆ. ವ್ಯವಸ್ಥೆಗೆ ಸೇರಿದ ಕೆಲವೇ ಕೆಲವು ವ್ಯಕ್ತಿಗಳಿಂದ ದಿನನಿತ್ಯವು ಶೋಷಣೆ ಮತ್ತು ಅನ್ಯಾಯಗಳು ನಿರಂತರವಾಗಿ ನಡೆಯುತ್ತಿದ್ದು, ಅವರಿಗೆ ಕಾನೂನು ಅನ್ವಯಿಸುವುದಿಲ್ಲವೆಂಬ ಭಾವನೆ ಬಂದಲ್ಲಿ, ನಾವು ಇಷ್ಟೊಂದು ಹೆಮ್ಮೆ ಪಡುವಂತಹ ಕಾನೂನು ಮತ್ತು ನ್ಯಾಯ ಎಂಬ ಗೌರವಾನ್ವಿತ ತತ್ವಗಳು ತಮ್ಮ ಗಹನ ಅರ್ಥವನ್ನು ಕಳೆದುಕೊಳ್ಳುತ್ತವೆ. ಈಗಲಾದರು ಸರ್ಕಾರ ಎಚ್ಚೆತ್ತುಕೊಂಡು ಕ್ರಮಜರುಗಿಸದಿದ್ದರೆ, **"ಸಮಿತಿಯ ವರದಿಯು ನೀರಿನಲ್ಲಿ ಬರೆದ ಜಲ ಲಿಪಿಯಾಗುತ್ತದೆ"**. ಆದುದರಿಂದ ಮೇಲ್ನೋಟಕ್ಕೆ ಎದ್ದುಕಾಣುವ ಪ್ರಕರಣಗಳಲ್ಲಿ ಸರ್ಕಾರವು ಕಠಿಣ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಎ.ಟಿ.ರಾಮಸ್ವಾಮಿ
ಅಧ್ಯಕ್ಷರು,
ಜಂಟಿ ಸದನ ಸಮಿತಿ

ಡಿ'ಸೋಜಾ ರಾಬಿನ್‌ಸನ್
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿಧಾನ ಮಂಡಲ

* * * * *

## ಅನುಬಂಧಗಳು:

1. ಕರ್ನಾಟಕ ಭೂಕಬಳಿಕೆ (ನಿಷೇಧ) ವಿಧೇಯಕ, 2007.

2. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2007.

3. ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಉಚ್ಚ/ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಹಂಚಿರುವ ನಿವೇಶನಗಳ ಪಟ್ಟಿ .

4. ಅರೆ ನ್ಯಾಯಿಕ ಕರ್ತವ್ಯಗಳ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ.

5. ಸನ್ಮಾನ್ಯ ಸಭಾಪತಿಗಳು ಮತ್ತು ಸನ್ಮಾನ್ಯ ಸಭಾಧ್ಯಕ್ಷರ ಮೂಲಕ ವಿವಿಧ ಇಲಾಖೆಗಳಿಗೆ ಜಂಟಿ ಸದನ ಸಮಿತಿಯ ಅಧ್ಯಕ್ಷರು ಬರೆದಿರುವ 16 ಪತ್ರಗಳು.

# ಅನುಬಂಧಗಳು

ANNEX
ಅನುಬಂಧ - 1

# ಕರ್ನಾಟಕ ವಿಧಾನಸಭೆ

## ಹನ್ನೆರಡನೇ ವಿಧಾನಸಭೆ

## ಐದನೇ ಅಧಿವೇಶನ

## ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007

### (2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 27)

ಸರ್ಕಾರಕ್ಕೆ, ಸ್ಥಳೀಯ ಸಂಸ್ಥೆಗಳಿಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳಿಗೆ ಸೇರಿದ, ಭೂಮಿಗಳನ್ನು ಕಬಳಿಸಲು ಮಾಡಲಾಗುವ ಸಂಘಟಿತ ಪ್ರಯತ್ನಗಳನ್ನು ತಡೆಗಟ್ಟಲು ಕ್ರಮಕೈಗೊಳ್ಳುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಅಂಥ ಭೂಕಬಳಿಕೆದಾರರು, ನಕಲಿ ಗೃಹ ನಿರ್ಮಾಣ ಸಹಕಾರಿ ಸಂಘಗಳನ್ನು ರಚಿಸುತ್ತಿರುವುದರಿಂದ ಅಥವಾ ಸುಳ್ಳು ಕ್ಲೇಮುಗಳನ್ನು ಸೃಷ್ಟಿಸಿಕೊಳ್ಳುತ್ತಿರುವುದರಿಂದ ಮತ್ತು ನೀತಿಗೆಟ್ಟ ಸ್ಥಿರಾಸ್ತಿ ವ್ಯಾಪಾರಿಗಳ ಮೂಲಕವಾಗಿ ಅಥವಾ ಅನ್ಯಥಾ ಅಂಥ ಭೂಮಿಗಳನ್ನು ಭಾರಿ ಪ್ರಮಾಣದಲ್ಲಿ ಹಾಗೂ ಹಿಂದೆಂದೂ ಇಲ್ಲದ ರೀತಿಯಲ್ಲಿ ಮೋಸದಿಂದ ಜನತೆಯ ಕೆಲವು ವರ್ಗಕ್ಕೆ ಮಾರಾಟ ಮಾಡುತ್ತಿರುವುದರಿಂದ ಹಾಗು ಇದರಿಂದ ಈ ಭೂಕಬಳಿಕೆದಾರರ ಬಳಿ ಲೆಕ್ಕಕ್ಕೇ ಸಿಗದ ಸಂಪತ್ತು, ದಿಢೀರ್ ಸಂಪಾದನೆಯ ಹಣ ಯಥೇಚ್ಛವಾಗಿ ಸಂಗ್ರಹವಾಗುತ್ತಿದ್ದು ಇದರಿಂದಾಗಿ ಸಾರ್ವಜನಿಕ ಸುವ್ಯವಸ್ಥೆಗೆ ಪ್ರತಿಕೂಲ ಪರಿಣಾಮವಾಗುತ್ತಿರುವುದರಿಂದ,

ಮತ್ತು, ಕರ್ನಾಟಕ ರಾಜ್ಯದಲ್ಲಿ ಭೂಕಬಳಿಕೆದಾರರಾಗಿ, ಈ ವ್ಯಕ್ತಿಗಳು ಕಾನೂನು ಉಲ್ಲಂಘಿಸಿ, ಭೂ ಕಬಳಿಕೆಯ ಅಕ್ರಮ ಚಟುವಟಿಕೆಗಳನ್ನು ಎಷ್ಟು ದೊಡ್ಡ ಪ್ರಮಾಣದಲ್ಲಿ, ಹಾಗೂ ಎಂಥ ರೀತಿಯಲ್ಲಿ ಸಂಘಟಿಸಿ ನಡೆಸಿಕೊಂಡು ಬಂದಿದ್ದರು, ಸಂಘಟಿಸಿ ನಡೆಸಿಕೊಂಡು ಬಂದಿದ್ದಾರೆ ಮತ್ತು ಸಂಘಟಿಸಿ ನಡೆಸುತ್ತಾ ಇದ್ದಾರೆ ಎಂಬುದನ್ನು ಹಾಗೂ ಎಷ್ಟೊಂದು ಸಂಪನ್ಮೂಲ ಮತ್ತು ಪ್ರಭಾವ ಅವರ ಬಳಿಯಲ್ಲಿದೆ ಎಂಬುದನ್ನು ಗಮನಿಸಿದಾಗ ಇದರಲ್ಲಿ ಇನ್ನು ಮುಂದೆ ಹೇಳಿದ ಕ್ರಮಗಳ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಮೂಲಕ ಅಂಥ ಭೂ ಕಬಳಿಕೆಯ ಕಾನೂನು ಬಾಹಿರ ಚಟುವಟಿಕೆಗಳನ್ನು ಕೂಡಲೇ ತಡೆಗಟ್ಟುವುದು ಅವಶ್ಯಕವಾಗಿರುವುದರಿಂದ ಮತ್ತು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:

**1. ಸಂಕ್ಷಿಪ್ತ ಹೆಸರು, ಅನ್ವಯ ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಬಳಿಕೆ (ನಿಷೇಧ) ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು ಕರ್ನಾಟಕ ರಾಜ್ಯದಲ್ಲಿ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ, ಅಥವಾ ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳಿಗೆ ಸೇರಿದ ಭೂಮಿಗೆ ಅನ್ವಯಿಸುತ್ತದೆ.

(3) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು:-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(1) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ;

(2) "ಭೂಮಿ" ಎಂಬುದು,

(i) ಸರ್ಕಾರಕ್ಕೆ, ಒಂದು ಸ್ಥಳೀಯ ಪ್ರಾಧಿಕಾರಕ್ಕೆ, ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಒಂದು ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿದ ಭೂಮಿಯನ್ನು;

(ii) ಭೂಮಿಯಲ್ಲಿ ಅಥವಾ ಅದರ ಮೇಲೆ ಇರುವ ಹಕ್ಕುಗಳು, ಭೂಮಿಯಿಂದ ಪ್ರಾಪ್ತವಾಗುವ ಪ್ರಯೋಜನಗಳು ಮತ್ತು ಭೂಮಿಗೆ ಲಗತ್ತಾಗಿರುವ ಅಥವಾ ಭೂಮಿ ಲಗತ್ತಾಗಿರುವ ಯಾವುದೇ ವಸ್ತುವಿಗೆ ಖಾಯಂ ಆಗಿ ಜೋಡಿಸಲಾದ ಕಟ್ಟಡಗಳು, ನಿರ್ಮಿತಿಗಳು ಮತ್ತು ಇತರ ವಸ್ತುಗಳನ್ನು;

–ಒಳಗೊಳ್ಳುತ್ತದೆ.

(3) "ಭೂ ಕಬಳಿಕೆದಾರ" ಎಂದರೆ, ಭೂ ಕಬಳಿಕೆಯನ್ನು ಮಾಡುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಒಂದು ಗುಂಪು ಮತ್ತು ಇದರಲ್ಲಿ ಭೂಮಿಗಳನ್ನು ಕಾನೂನು ಬಾಹಿರ ಸ್ವಾಧೀನ ತೆಗೆದುಕೊಳ್ಳುವುದಕ್ಕಾಗಿ ಅಥವಾ ಅದರ ಮೇಲೆ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಯಾವನೇ ವ್ಯಕ್ತಿಗೆ ಆರ್ಥಿಕ ನೆರವು ನೀಡುವ ಯಾವೊಬ್ಬ ವ್ಯಕ್ತಿ ಅಥವಾ ಅಂಥ ಭೂಮಿಗಳ ಯಾವುದೇ ಅಧಿಭೋಗದಾರರಿಂದ ಆಪರಾಧಿಕ ಭಯೋತ್ಪಾದನೆಯ ಮೂಲಕ ಬಾಡಿಗೆ, ಪರಿಹಾರ ಮತ್ತಿತರ ಶುಲ್ಕವನ್ನು ವಸೂಲು ಮಾಡುವ ಅಥವಾ ವಸೂಲು ಮಾಡಲು ಪ್ರಯತ್ನಿಸುವ ಅಥವಾ ಮೇಲೆ ಹೇಳಿದ ಯಾವುದಾದರೊಂದು ಕೃತ್ಯ ಮಾಡುವುದನ್ನು ದುಷ್ಪ್ರೇರಿಸುವ ಯಾವುದೇ ವ್ಯಕ್ತಿ ಒಳಗೊಳ್ಳುತ್ತಾನೆ; ಮತ್ತು ಅವನ ಹಿತಾಸಕ್ತಿಯ ಉತ್ತರಾಧಿಕಾರಿಯೂ ಒಳಗೊಳ್ಳುತ್ತಾನೆ;

(4) "ಭೂ ಕಬಳಿಕೆ " ಎಂದರೆ, ಯಾವುದೇ ಕಾನೂನುಬದ್ಧ ಹಕ್ಕುದಾರಿಕೆಯಿಲ್ಲದೆ ಮತ್ತು ಭೂಮಿಯನ್ನು ಕಾನೂನುಬಾಹಿರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಯಾವುದೇ ಭೂಮಿಯನ್ನು ಕಬಳಿಸುವ ಅಥವಾ ಕಾನೂನುಬಾಹಿರ ಗೇಣಿ ಅಥವಾ ಗುತ್ತಿಗೆ ಮತ್ತು ಲೈಸೆನ್ಸ್ ಒಪ್ಪಂದಗಳನ್ನು ಮಾಡಿಕೊಳ್ಳುವ ಅಥವಾ ಅವುಗಳನ್ನು ಸೃಷ್ಟಿಮಾಡುವ, ಅಥವಾ

ಮಾರಾಟ ಅಥವಾ ಬಾಡಿಗೆ ಕೊಡಲು ಭೂಮಿಯ ಮೇಲೆ ಅಕ್ರಮ ನಿರ್ಮಿತಿಗಳನ್ನು ಕಟ್ಟುವ ಅಥವಾ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಮತ್ತು ಅಧಿಭೋಗಿಸುವುದಕ್ಕಾಗಿ ಬಾಡಿಗೆ ಮೇಲೆ ಅಥವಾ ಗುತ್ತಿಗೆ ಮೇಲೆ ಮತ್ತು ಲೈಸೆನ್ಸ್ ಆಧಾರದ ಮೇಲೆ ಅಂಥ ಭೂಮಿಗಳನ್ನು ಯಾವನೇ ವ್ಯಕ್ತಿಗೆ ಕೊಡುವ ಪ್ರತಿಯೊಂದು ಚಟುವಟಿಕೆ; ಮತ್ತು "ಭೂಮಿಯನ್ನು ಕಬಳಿಸುವುದಕ್ಕೆ" ಎಂಬುದನ್ನು ಇದಕ್ಕೆ ಅನುಸಾರವಾಗಿ ಅರ್ಥೈಸತಕ್ಕದ್ದು.

(5) "ಸ್ಥಳೀಯ ಪ್ರಾಧಿಕಾರ" ಎಂಬುದರಲ್ಲಿ, ನಗರಪಾಲಿಕೆ, ಪುರಸಭೆ, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್, ಪಟ್ಟಣ ಪಂಚಾಯತಿ, ಕೈಗಾರಿಕಾ ಉಪನಗರ, ಸುಧಾರಣಾ ಮಂಡಳಿ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಯಾವುದೇ ಸ್ಥಳೀಯ ಸ್ವಯಮಾಡಳಿತ ಸಂಸ್ಥೆ ಒಳಗೊಳ್ಳುತ್ತವೆ.

(6) "ಅಧಿಸೂಚನೆ" ಎಂದರೆ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ಒಂದು ಅಧಿಸೂಚನೆ ಮತ್ತು "ಅಧಿಸೂಚಿತ" ಎಂಬುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(7) "ವ್ಯಕ್ತಿ" ಎಂಬುದು, ನಿಗಮಿತವಾಗಿರುವ ಅಥವಾ ನಿಗಮಿತವಾಗಿರದ ವ್ಯಕ್ತಿಗಳ ಒಂದು ಗುಂಪನ್ನು ಅಥವಾ ಸಂಸ್ಥೆಯನ್ನು, ಒಂದು ಕಂಪೆನಿಯನ್ನು ಅಥವಾ ಒಂದು ಸಂಘವನ್ನು ಒಳಗೊಳ್ಳುತ್ತದೆ.

(8) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(9) "ವಿಶೇಷ ನ್ಯಾಯಾಲಯ" ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ರಚಿತವಾದ ವಿಶೇಷ ನ್ಯಾಯಾಲಯ;

(10) "ಅನಧಿಕೃತ ನಿರ್ಮಿತಿಗಳು" ಎಂದರೆ, ಸಂಬಂಧಪಟ್ಟ ಕಾನೂನಿನ ಅಡಿಯಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಸ್ಪಷ್ಟ ಅನುಮತಿ ಪಡೆಯದೇ ನಿರ್ಮಿಸಿದ ಯಾವುದೇ ನಿರ್ಮಿತಿ.

**3. ಭೂ ಕಬಳಿಕೆಯು ಕಾನೂನು ಬಾಹಿರವಾಗಿರುವುದು:–** ಯಾವುದೇ ರೀತಿಯಲ್ಲಿ ಭೂ ಕಬಳಿಕೆ ಮಾಡುವುದನ್ನು ಈ ಮೂಲಕ ಕಾನೂನು ಬಾಹಿರವೆಂದು ಘೋಷಿಸಲಾಗಿದೆ ಮತ್ತು ಭೂ ಕಬಳಿಕೆಗೆ ಸಂಬಂಧಿಸಿದ ಅಥವಾ ಅದರಿಂದ ಉಂಟಾಗುವ ಯಾವುದೇ ಚಟುವಟಿಕೆಯು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯ ಅಪರಾಧವಾಗಿರತಕ್ಕದ್ದು.

**4. ಭೂ ಕಬಳಿಕೆಯ ನಿಷೇಧ:–** (1) ಯಾವ ವ್ಯಕ್ತಿಯೂ ಭೂ ಕಬಳಿಕೆಯನ್ನು ಮಾಡತಕ್ಕದ್ದಲ್ಲ ಅಥವಾ ಮಾಡುವಂತೆ ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭದಂದು ಅಥವಾ ತರುವಾಯ, ಯಾವೊಬ್ಬ ವ್ಯಕ್ತಿಯು, ಕಾನೂನುಬದ್ಧ ಗೇಣಿದಾರನಾಗಿ ಹೊರತು, ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ, ಸರ್ಕಾರದ ಒಡೆತನದಲ್ಲಿ, ನಿಯಂತ್ರಣದಲ್ಲಿ ಅಥವಾ ವ್ಯವಸ್ಥಾಪನೆಯಲ್ಲಿರುವ

ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿದ ಕಬಳಿಸಲಾದ ಭೂಮಿಯ ಅಧಿಭೋಗದಲ್ಲಿ ಮುಂದುವರಿದಲ್ಲಿ ಈ ಅಧಿನಿಯಮದಡಿಯ ಒಂದು ಅಪರಾಧದ ತಪ್ಪಿತಸ್ಥನಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷಕ್ಕೆ ಕಡಿಮೆಯಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**5. ಭೂ-ಕಬಳಿಕೆಗೆ ಸಂಬಂಧಪಟ್ಟಂತೆ ಇತರೆ ಅಪರಾಧಗಳಿಗಾಗಿ ದಂಡ.–** ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಭೂಕಬಳಿಕೆ ಮಾಡುವ ದೃಷ್ಟಿಯಿಂದ ಅಥವಾ ಯಾವುದೇ ಅಂಥ ಭೂಕಬಳಿಕೆ ಸಂಬಂಧದಲ್ಲಿ,–

(ಎ) ಕಬಳಿಸಲಾದ ಯಾವುದೇ ಭೂಮಿಯನ್ನು ಮಾರಾಟ ಮಾಡಿದರೆ ಅಥವಾ ಹಂಚಿಕೆ ಮಾಡಿದರೆ ಅಥವಾ ಮಾರಾಟ ಅಥವಾ ಹಂಚಿಕೆ ಮಾಡುವುದಾಗಿ ಆಹ್ವಾನಿಸಿದರೆ ಅಥವಾ ಜಾಹೀರಾತು ಮಾಡಿದರೆ ಅಥವಾ ಮಾರಾಟ ಅಥವಾ ಹಂಚಿಕೆಯ ಉದ್ದೇಶಕ್ಕಾಗಿ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ;

(ಬಿ) ಯಾವೊಬ್ಬ ವ್ಯಕ್ತಿಯನ್ನು ಭೂ-ಕಬಳಿಕೆ ಮಾಡುವಂತೆ ಪ್ರಚೋದಿಸಿದರೆ ಅಥವಾ ಚಿತಾವಣೆ ಮಾಡಿದರೆ;

(ಸಿ) ಕಬಳಿಸಲಾದ ಯಾವುದೇ ಭೂಮಿಯನ್ನು ಬಳಸಿಕೊಂಡರೆ ಅಥವಾ ತಿಳಿದೂ ತಿಳಿದೂ ಮಾರಾಟ ಅಥವಾ ಹಂಚಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಬಳಸುವಂತೆ ಮಾಡಿದರೆ ಅಥವಾ ಬಳಸುವುದಕ್ಕೆ ಅನುಮತಿಸಿದರೆ;

(ಡಿ) ಅಂಥ ಭೂಮಿಯ ಮೇಲೆ ಯಾವುದೇ ರಚನೆ ಅಥವಾ ಕಟ್ಟಡದ ನಿರ್ಮಾಣಕ್ಕಾಗಿ ಒಪ್ಪಂದ ಮಾಡಿಕೊಂಡರೆ;

(ಇ) ಯಾವೊಬ್ಬ ವ್ಯಕ್ತಿಯು ಮೇಲೆ ನಮೂದಿಸಿದ ಯಾವುದೇ ಕೃತ್ಯ ಮಾಡುವಂತೆ ಮಾಡಿದರೆ ಅಥವಾ ಅದಕ್ಕಾಗಿ ಯಾವೊಬ್ಬ ವ್ಯಕ್ತಿಯನ್ನು ದೊರಕಿಸಿಕೊಂಡರೆ ಅಥವಾ ದೊರಕಿಸಿಕೊಳ್ಳಲು ಪ್ರಯತ್ನಿಸಿದರೆ;

ಅವನು, ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷಕ್ಕೆ ಕಡಿಮೆ ಇಲ್ಲದ ಆದರೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು;

**6. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧಗಳಿಗೆ ವಿರುದ್ಧವಾಗಿ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಅದಕ್ಕಾಗಿ ಕಂಪನಿಗೆ ಜವಾಬ್ದಾರನಾದ ಪ್ರತಿಯೊಬ್ಬ

ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ಅದಕ್ಕನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು;

ಪರಂತು, ಈ ಉಪ-ಪ್ರಕರಣದಲ್ಲಿ ಇರುವುದಾವುದೂ, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತು ಪಡಿಸಲಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ**:- ಈ ಪ್ರಕರಣದ ಉದ್ದೇಶಕ್ಕಾಗಿ,-

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು, ಸಂಘ (ಸೊಸೈಟಿ) ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) "ನಿರ್ದೇಶಕ" ಎಂದರೆ,-

(i) ಫರ್ಮಿನ ಸಂಬಂಧದಲ್ಲಿ ಫರ್ಮಿನ ಪಾಲುಗಾರ;

(ii) ಸಂಘ (ಸೊಸೈಟಿ), ನ್ಯಾಸ ಅಥವಾ ವ್ಯಕ್ತಿಗಳ ಇತರ ಸಂಘದ ಸಂಬಂಧದಲ್ಲಿ, ಸಂದರ್ಭಾನುಸಾರ, ಸಂಘದ (ಸೊಸೈಟಿಯ), ನ್ಯಾಸದ ಅಥವಾ ಇತರ ಸಂಘದ ನಿಯಮಗಳ ಅಡಿಯಲ್ಲಿ ಸಂಘ (ಸೊಸೈಟಿ), ನ್ಯಾಸ ಅಥವಾ ಇತರ ಸಂಘದ ಆಡಳಿತ ವ್ಯವಹಾರಗಳನ್ನು ವಹಿಸಲಾದ ಯಾವೊಬ್ಬ ವ್ಯಕ್ತಿ.

**7. ವಿಶೇಷ ನ್ಯಾಯಾಲಯಗಳ ರಚನೆ:-** (1) ಸರ್ಕಾರವು, ಭೂ ಕಬಳಿಕೆ ಎಂದು ಆಪಾದಿಸಲಾದ ಯಾವುದೇ ಕೃತ್ಯದ ಶೀಘ್ರ ವಿಚಾರಣೆಗೆ ಮತ್ತು ಕಬಳಿಸಲಾದ ಭೂಮಿಯ ಒಡೆತನ ಮತ್ತು ಹಕ್ಕು ಸ್ವಾಮ್ಯಕ್ಕೆ ಅಥವಾ ಕಾನೂನು ಸಮ್ಮತ ಸ್ವಾಧೀನತೆಗೆ ಸಂಬಂಧಪಟ್ಟ ಮೊಕದ್ದಮೆಗಳ ಮತ್ತು ಕರ್ನಾಟಕ ಭೂ-ಕಂದಾಯ ಅಧಿನಿಯಮ-1964 ರ 14ಎ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಲಾದಂಥ ಅಪರಾಧಗಳ ಅಧಿವಿಚಾರಣೆ ನಡೆಸುವುದಕ್ಕೆ ಉಪಬಂಧಕಲ್ಪಿಸಲು, ಅಧಿಸೂಚನೆಯ ಮೂಲಕ ಒಂದು ವಿಶೇಷ ನ್ಯಾಯಾಲಯವನ್ನು ರಚಿಸಬಹುದು.

(2) ವಿಶೇಷ ನ್ಯಾಯಾಲಯವು, ಪ್ರಾರಂಭದಲ್ಲಿ ಸರ್ಕಾರವು ನೇಮಕ ಮಾಡುವ ಒಬ್ಬರು ಅಧ್ಯಕ್ಷರನ್ನು ಮತ್ತು ನಾಲ್ವರು ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಅಧ್ಯಕ್ಷರು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿದ್ದ ಒಬ್ಬ ವ್ಯಕ್ತಿಯಾಗಿರತಕ್ಕದ್ದು ಮತ್ತು ಉಳಿದ ನಾಲ್ವರು ಸದಸ್ಯರ ಪೈಕಿ ಇಬ್ಬರು, ಜಿಲ್ಲಾನ್ಯಾಯಾಧೀಶರಾಗಿರುವವರು ಅಥವಾ ಜಿಲ್ಲಾ ನ್ಯಾಯಾಧೀಶರಾಗಿದ್ದವರಾಗಿರತಕ್ಕದ್ದು (ಇದರಲ್ಲಿ ಮುಂದೆ ನ್ಯಾಯಿಕ ಸದಸ್ಯರೆಂದು ಉಲ್ಲೇಖಿಸಲಾಗಿದೆ) ಮತ್ತು ಉಳಿದ ಇಬ್ಬರು ಸದಸ್ಯರು ಜಿಲ್ಲೆಯ ಜಿಲ್ಲಾಧಿಕಾರಿಗಳ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಹುದ್ದೆಯನ್ನು ಹೊಂದಿರುವವರು ಅಥವಾ ಹೊಂದಿದ್ದವರಾಗಿರತಕ್ಕದ್ದು (ಇದರಲ್ಲಿಇನ್ನು ಮುಂದೆ ಕಂದಾಯ ಸದಸ್ಯರೆಂದು ಉಲ್ಲೇಖಿಸಲಾಗಿದೆ):

ಪರಂತು, ವಿಶೇಷ ನ್ಯಾಯಾಲಯದ ಅಧ್ಯಕ್ಷರಾಗಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ವ್ಯಕ್ತಿಯ ನೇಮಕಾತಿಯನ್ನು ಉಚ್ಚನ್ಯಾಯಾಲಯದ ಮುಖ್ಯನ್ಯಾಯಾಧೀಶರೊಂದಿಗೆ ಸಮಾಲೋಚಿಸಿದ ತರುವಾಯ ಮಾಡತಕ್ಕದ್ದು.

(4) ಸರ್ಕಾರವು, ಅಂಥ ಮೊಕದ್ದಮೆಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯದ ಹೆಚ್ಚುವರಿ ಪೀಠದ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಲ್ಲಿ, ಅದರಂತೆಯೇ ಅದು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಹೆಚ್ಚುವರಿ ಪೀಠವನ್ನು ರಚಿಸಬಹುದು.

(5) ಅಂಥ ಹೆಚ್ಚುವರಿ ಪೀಠವು, (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆ ಹೊಂದಿದ ಒಬ್ಬ ನ್ಯಾಯಿಕ ಸದಸ್ಯ ಮತ್ತು ಒಬ್ಬ ಕಂದಾಯ ಸದಸ್ಯನನ್ನು ಒಳಗೊಂಡಿರತಕ್ಕದ್ದು.

(6) ಸರ್ಕಾರವು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ (1) ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಲಾದ ವಿಶೇಷ ನ್ಯಾಯಾಲಯವನ್ನು ಪುನಾರಚಿಸಬಹುದು.

(7) ಅಧ್ಯಕ್ಷರು ಅಥವಾ ಇತರ ಸದಸ್ಯರು, ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ವಿಶೇಷ ನ್ಯಾಯಾಲಯವು ಪುನಾರಚನೆಯಾಗುವವರೆಗೆ ಇವುಗಳಲ್ಲಿ ಯಾವುದು ತರುವಾಯದ್ದೋ ಆ ವರೆಗೆ ಹಾಗೆ ಅಂಥ ಪದವನ್ನು ಧಾರಣ ಮಾಡತಕ್ಕದ್ದು.

(8) (ಎ) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ವಿಶೇಷ ನ್ಯಾಯಾಲಯದ ಅಧಿಕಾರವ್ಯಾಪ್ತಿ, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಅದರ ವಿವಿಧ ಪೀಠಗಳು ಅಂದರೆ ಅಧ್ಯಕ್ಷರು, ಒಬ್ಬರು ನ್ಯಾಯಿಕ ಸದಸ್ಯರು ಮತ್ತು ಒಬ್ಬರು ಕಂದಾಯ ಸದಸ್ಯರನ್ನು ಒಳಗೊಂಡ ಒಂದು ಪೀಠ ಮತ್ತು ಒಬ್ಬರು ನ್ಯಾಯಿಕ ಸದಸ್ಯರು ಮತ್ತು ಒಬ್ಬರು ಕಂದಾಯ ಸದಸ್ಯರನ್ನು ಒಳಗೊಂಡ ಇನ್ನೊಂದು ಪೀಠವು ಚಲಾಯಿಸಬಹುದು.

(ಬಿ) ಅಧ್ಯಕ್ಷರನ್ನು ಒಳಗೊಂಡ ಪೀಠದ ಸಂಬಂಧದಲ್ಲಿ, ಅವರು ಅಂಥ ಪೀಠದ ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು ಮತ್ತು ಪೀಠವು ಇಬ್ಬರು ಸದಸ್ಯರನ್ನು ಒಳಗೊಂಡಿದ್ದಲ್ಲಿ, ನ್ಯಾಯಿಕ ಸದಸ್ಯರು ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು.

(ಸಿ) ಅಧ್ಯಕ್ಷರು ತಾವಾಗಿಯೇ ಆಗಲಿ ಅಥವಾ ತಮಗೆ ಮಾಡಿದ ಉಲ್ಲೇಖದ ಮೇಲಾಗಲಿ ಇಬ್ಬರು ಸದಸ್ಯರನ್ನು ಒಳಗೊಂಡ ಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ಹಿಂತೆಗೆದುಕೊಂಡು ಅದನ್ನು ವಿಲೆ ಮಾಡುವುದಕ್ಕೆ ಅಥವಾ ಯಾವುದೇ ಪ್ರಕರಣವನ್ನು ಒಂದು ಪೀಠದಿಂದ ಇನ್ನೊಂದು ಪೀಠಕ್ಕೆ ವರ್ಗಾಯಿಸುವುದಕ್ಕೆ ಸಕ್ಷಮರಾಗಿರತಕ್ಕದ್ದು.

(ಡಿ) ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯ ಸಿವಿಲ್ ಹೊಣೆಗಾರಿಕೆಯ ಬಗ್ಗೆ ವಿಚಾರಣೆಯು, ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸಂಭವವಿದೆ ಎಂದು ವಿವೇಚನಾತ್ಮಕವಾಗಿ ಪೂರ್ವಭಾವನೆ ಮಾಡಲಾಗಿದ್ದಲ್ಲಿ, ಅಧ್ಯಕ್ಷರು, ಅಂಥ ಅಪರಾಧಿಯ ಕ್ರಿಮಿನಲ್ ಹೊಣೆಗಾರಿಕೆಯ ಬಗ್ಗೆ ವಿಚಾರಣೆಯನ್ನು, ಮೊಕದ್ದಮೆಯ ಶೀಘ್ರ ವಿಲೆಯ ದೃಷ್ಟಿಯಿಂದ ಇನ್ನೊಂದು ಪೀಠಕ್ಕೆ ವಹಿಸಬಹುದು.

(ಇ) ಇಬ್ಬರು ಸದಸ್ಯರನ್ನೊಳಗೊಂಡ ಪೀಠವು ಈ ಪ್ರಕರಣದ ಅಡಿಯಲ್ಲಿಯ ಮೊಕದ್ದಮೆಯ ವಿಚಾರಣೆಯನ್ನು ನಡೆಸಿದ್ದರೆ ಮತ್ತು ಅದರ ಸದಸ್ಯರ ನಡುವೆ ಅಭಿಪ್ರಾಯ ಭೇದವಿದ್ದರೆ ಅವರ ಅಭಿಪ್ರಾಯಗಳೊಡನೆ ಮೊಕದ್ದಮೆಯನ್ನು ಇನ್ನೊಬ್ಬ ನ್ಯಾಯಿಕ ಸದಸ್ಯರ ಅಥವಾ ಅಧ್ಯಕ್ಷರ ಮುಂದೆ ಮಂಡಿಸತಕ್ಕದ್ದು ಮತ್ತು ಆ ಸದಸ್ಯರು ಅಥವಾ ಸಂದರ್ಭಾನುಸಾರ ಅಧ್ಯಕ್ಷರು, ತಾವು ಸೂಕ್ತವೆಂದು ಭಾವಿಸುವಂಥ ಸುನಾವಣೆ ನಡೆಸಿದ ತರುವಾಯ ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದು ಮತ್ತು ತೀರ್ಮಾನ ಅಥವಾ ಆದೇಶವು ಆ ಅಭಿಪ್ರಾಯಕ್ಕೆ ಅನುಸಾರವಾಗಿರತಕ್ಕದ್ದು.

(9) ವಿಶೇಷ ನ್ಯಾಯಾಲಯದ ಯಾವುದೇ ಪೀಠದ ಸಭೆಯ ಕೋರಂ ಎರಡು ಆಗಿರತಕ್ಕದ್ದು.

(10) ವಿಶೇಷ ನ್ಯಾಯಾಲಯದ ಯಾವುದೇ ಕಾರ್ಯ ಅಥವಾ ನಡೆವಳಿಕೆಯು, ಅದರ ಸದಸ್ಯರ ಯಾವುದಾದರೂ ಸ್ಥಾನವು ಖಾಲಿ ಇರುವ ಅಥವಾ ಅದರ ರಚನೆ ಅಥವಾ ಪುನಾರಚನೆಯಲ್ಲಿ ಯಾವುದೇ ದೋಷ ಇರುವ ಕಾರಣ ಮಾತ್ರದಿಂದಲೇ ಅನೂರ್ಜಿತವಾಗತಕ್ಕದ್ದಲ್ಲ.

**8. ಅಧಿಕಾರಿಗಳಿಗೆ ಪ್ರಾಧಿಕಾರ ನೀಡುವುದು.–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ತಹಸೀಲ್ದಾರ್ ದರ್ಜೆಗೆ ಕಡಿಮೆಯಲ್ಲದ ಒಬ್ಬ ಸರ್ಕಾರಿ ಅಧಿಕಾರಿಗೆ, ಆಡಳಿತದ ಜವಾಬ್ದಾರಿಯುಳ್ಳ ಹಾಗೂ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳ ಸಂಬಂಧದಲ್ಲಿ ಅಂಥ ಅಧಿಕಾರಗಳನ್ನು ಚಲಾಯಿಸುವ ಹಾಗೂ ಅಂಥ ಪ್ರಕಾರ್ಯಗಳನ್ನು ನೆರವೇರಿಸುವ ಅಧಿಕಾರಿಯೆಂದು ಪ್ರಾಧಿಕಾರ ನೀಡಬಹುದು.

**9. ವಿಶೇಷ ನ್ಯಾಯಾಲಯಗಳ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ವಿಶೇಷ ನ್ಯಾಯಾಲಯವು ತಾನಾಗಿಯೇ ಆಗಲಿ ಅಥವಾ ಯಾವೊಬ್ಬ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರವು ಸಲ್ಲಿಸಿದ ಅರ್ಜಿಯ ಮೇಲೆ ಆಗಲಿ, ಭೂ ಕಬಳಿಕೆ ಮಾಡಲಾಗಿದೆ ಎಂದು ಆರೋಪಿಸಲಾದ ಯಾವುದೇ ಕೃತ್ಯದ ಅಥವಾ ಕಬಳಿಸಲಾದ ಭೂಮಿಯ ಮಾಲೀಕತ್ವದ ಮತ್ತು

ಸ್ವಾಮ್ಯದ ಸಂಬಂಧದಲ್ಲಿ, ಅಥವಾ ಕಾನೂನುಬದ್ಧ ಸ್ವಾಧೀನತ್ವದ ಸಂಬಂಧದಲ್ಲಿ ಉದ್ಭವಿಸುವ, ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ನಂತರ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಅಧ್ಯಾಯ XIV–ಎ ನಿರ್ದಿಷ್ಟಪಡಿಸಿದ ಅಪರಾಧಗಳಿಂದ ಉದ್ಭವಿಸುವ ಪ್ರತಿಯೊಂದು ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು ಮತ್ತು ಅಧಿವಿಚಾರಣೆಯನ್ನು ನಡೆಸಬಹುದು ಮತ್ತು ಮಧ್ಯಂತರ ನಿರ್ದೇಶನಗಳ ಸ್ವರೂಪದಲ್ಲಿನ ಆದೇಶಗಳೂ ಒಳಗೊಂಡಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(2) ವಿಶೇಷ ನ್ಯಾಯಾಲಯವು, ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಭೂ ಕಬಳಿಕೆ ಮಾಡಲಾಗಿದೆಯೆಂದು ಆರೋಪಿಸಲಾದ ಭೂಮಿ ಇರುವ ಜಾಗ ಅಥವಾ ಅದರ ವಿಸ್ತೀರ್ಣ ಅಥವಾ ಮೌಲ್ಯವನ್ನು ಅಥವಾ ಒಳಗೊಂಡಿರುವ ಕೆಡಕಿನ ಗಹನತೆ ಅಥವಾ ಅಗತ್ಯವಿರುವ ನ್ಯಾಯೋದ್ದೇಶದ ದೃಷ್ಟಿಯನ್ನು ಅಥವಾ ಸಂಬಂಧಪಟ್ಟ ಯಾವುವೇ ಇತರ ವಿಷಯಗಳನ್ನು ಪರಿಗಣಿಸತಕ್ಕದ್ದು.

(3) ಆರೋಪಿತ ಭೂಕಬಳಿಕೆ ಕೃತ್ಯದ ಅಥವಾ ಈ ಅಧಿನಿಯಮದಡಿ ಕಬಳಿಸಲಾದ ಯಾವುದೇ ಭೂಮಿಯ ಹಕ್ಕುಸ್ವಾಮ್ಯ, ಮಾಲೀಕತ್ವ ಅಥವಾ ಕಾನೂನುಬದ್ಧ ಸ್ವಾಧೀನದ ಪ್ರಶ್ನೆಯನ್ನು ನಿರ್ಧರಿಸುವ ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ XIV-A ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಲಾದಂಥ ಅಪರಾಧಗಳ ಸಂಬಂಧದಲ್ಲಿ ಮೊಕದ್ದಮೆಯನ್ನು, ಕಬಳಿಸಲಾದ ಭೂಮಿ ಎಲ್ಲಿದೆಯೋ ಆ ಪ್ರದೇಶಕ್ಕಾಗಿ ರಚಿಸಲಾದ ವಿಶೇಷ ನ್ಯಾಯಾಲಯದಲ್ಲಿ ಮಾತ್ರವೇ ವಿಚಾರಣೆ ನಡೆಸತಕ್ಕದ್ದು ಮತ್ತು ಆ ವಿಶೇಷ ನ್ಯಾಯಾಲಯದ ನಿರ್ಧಾರವೇ ಅಂತಿಮವಾಗಿರತಕ್ಕದ್ದು:

ಪರಂತು, ವಿಶೇಷ ನ್ಯಾಯಾಲಯವು ತನ್ನ ಮುಂದೆ ಸಲ್ಲಿಸಲಾದ ಯಾವುದೇ ಅರ್ಜಿಯು ಮೇಲ್ನೋಟಕ್ಕೆ ಕ್ಷುಲ್ಲಕ ಅಥವಾ ಕಿರುಕುಳಕಾರಿಯಾಗಿದೆಯೆಂದು ಅಭಿಪ್ರಾಯಪಟ್ಟರೆ ಅದು, ಆ ಅರ್ಜಿಯನ್ನು ಯಾವುದೇ ಹೆಚ್ಚಿನ ವಿಚಾರಣೆಯನ್ನು ನಡೆಸದೆ ತಿರಸ್ಕರಿಸತಕ್ಕದ್ದು.

(4) ವಿಶೇಷ ನ್ಯಾಯಾಲಯವು ಭೂ ಕಬಳಿಕೆದಾರನ ವಿರುದ್ಧ ಯಾವ ಕ್ರಮದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಹೊಣೆಗಾರಿಕೆಯನ್ನು ಹೂಡಬೇಕು ಎಂಬುದನ್ನು ತೀರ್ಮಾನಿಸತಕ್ಕದ್ದು. ಸಿವಿಲ್ ಮತ್ತು ಕ್ರಿಮಿನಲ್ ಎರಡೂ ವ್ಯವಹರಣೆಗಳು ಮುಕ್ತಾಯವಾಗುವವರೆಗೆ ತನ್ನ ತೀರ್ಮಾನ ಅಥವಾ ಆದೇಶವನ್ನು ಹೊರಡಿಸಬೇಕೇ ಅಥವಾ ಬೇಡವೇ ಎಂಬುದು ವಿಶೇಷ ನ್ಯಾಯಾಲಯದ ವಿವೇಚನೆಗೆ ಸೇರಿದ್ದಾಗಿರತಕ್ಕದ್ದು. ಕ್ರಿಮಿನಲ್ ವ್ಯವಹರಣೆಗಳ ಸಂದರ್ಭದಲ್ಲಿ ಅಂಗೀಕರಿಸಿದ ಸಾಕ್ಷ್ಯಗಳನ್ನು ಸಿವಿಲ್ ಹೊಣೆಗಾರಿಕೆಯ ಅಧಿವಿಚಾರಣೆಯನ್ನು ನಡೆಸುವಾಗ ಉಪಯೋಗಿಸಿಕೊಳ್ಳಬಹುದು. ಆದರೆ ಸಿವಿಲ್ ವ್ಯವಹರಣೆಯಲ್ಲಿ ಯಾವುದಾದರೂ ಹೆಚ್ಚಿನ ಸಾಕ್ಷ್ಯಗಳನ್ನು, ಒದಗಿಸಿದಲ್ಲಿ, ಕ್ರಿಮಿನಲ್ ಹೊಣೆಗಾರಿಕೆಯನ್ನು ನಿರ್ಧರಿಸುವಾಗ ವಿಶೇಷ ನ್ಯಾಯಾಲಯವು ಅದನ್ನು ಪರಿಗಣಿಸತಕ್ಕದ್ದಲ್ಲ. ಭೂ ಕಬಳಿಕೆ ಅಥವಾ ಅದಕ್ಕೆ ದುಷ್ಪ್ರೇರಣೆ ಮಾಡಿದವನೆಂದು ಆರೋಪಿತನಾದ ಯಾವೊಬ್ಬ ವ್ಯಕ್ತಿಯು ವಿಶೇಷ ನ್ಯಾಯಾಲಯದ ಮುಂದೆ ಪ್ರತಿವಾದಿಗಳಿಗೆ ಸಕ್ಷಮ ಸಾಕ್ಷಿಯಾಗಿರತಕ್ಕದ್ದು ಮತ್ತು ಕ್ರಿಮಿನಲ್ ವ್ಯವಹರಣೆಯಲ್ಲಿ ತನ್ನ ವಿರುದ್ಧ ಅಥವಾ ತನ್ನೊಡನೆ ಆರೋಪಿಸಲಾದ ಯಾವೊಬ್ಬ ವ್ಯಕ್ತಿಯ ವಿರುದ್ಧ ಮಾಡಲಾದ ಆರೋಪದ ನಿರಾಕರಣೆ ಮಾಡಲು ಮೌಖಿಕ ಸಾಕ್ಷ್ಯ ನೀಡಬಹುದು:

ಪರಂತು, ಆತನನ್ನು ಆತನ ಸ್ವಂತ ಲಿಖಿತ ಕೋರಿಕೆಯ ಮೇಲಲ್ಲದೆ ಸಾಕ್ಷಿಯೆಂದು ಕರೆಯತಕ್ಕದ್ದಲ್ಲ ಅಥವಾ ಆತನು ಸಾಕ್ಷ್ಯವನ್ನು ನೀಡಲು ತಪ್ಪಿದಲ್ಲಿ ಅದನ್ನು ಯಾವೊಬ್ಬ ಪಕ್ಷಕಾರನು ಅಥವಾ ವಿಶೇಷ ನ್ಯಾಯಾಲಯವು ಯಾವುದೇ ಟೀಕೆಗೆ ವಸ್ತುವಿಷಯವಾಗಿ ಮಾಡಿಕೊಳ್ಳತಕ್ಕದ್ದಲ್ಲ ಅಥವಾ ಆತನ ವಿರುದ್ಧ ಅಥವಾ ಅದೇ ವ್ಯವಹರಣೆಯಲ್ಲಿ ಆತನ ಜೊತೆಯಲ್ಲಿ ಆರೋಪಿಸಲಾದ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ಪೂರ್ವಭಾವನೆ ಮಾಡುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದಲ್ಲ.

(5) (ಎ) ವಿಶೇಷ ನ್ಯಾಯಾಲಯವು, ಒಬ್ಬ ವ್ಯಕ್ತಿಯ ಸಿವಿಲ್ ಹೊಣೆಗಾರಿಕೆಯನ್ನು ತೀರ್ಮಾನಿಸುವಾಗ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಉಪಬಂಧಗಳಿಗೆ ಅಸಂಗತವಾಗದಂತೆ ತನ್ನದೇ ಆದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(ಬಿ) ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಪ್ರತಿಯೊಂದು ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ನಡೆಸತಕ್ಕದ್ದು.

(ಸಿ) ಅಪರಾಧಿಕ ಬಲ ಪ್ರಯೋಗಿಸಿ ಅಥವಾ ಬಲ ಪ್ರದರ್ಶಿಸಿ ಅಥವಾ ಅಪರಾಧಿಕ ಭಯೋತ್ಪಾದನೆಯ ಮೂಲಕ ಭೂ ಕಬಳಿಕೆ ಮಾಡಿದ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯು ನಿರ್ಣಿತ ಅಪರಾಧಿಯಾದಾಗ, ಮತ್ತು ಅಂಥ ಬಲ ಪ್ರಯೋಗ ಅಥವಾ ಬಲ ಪ್ರದರ್ಶನ ಅಥವಾ ಭಯೋತ್ಪಾದನೆಯ ಮೂಲಕ ಭೂ ಕಬಳಿಕೆ ಮಾಡಲಾಗಿದೆ ಎಂದು ವಿಶೇಷ ನ್ಯಾಯಾಲಯಕ್ಕೆ ಕಂಡುಬಂದರೆ ಆಗ ವಿಶೇಷ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಬಹುದಾದಂತೆ, ಅವಶ್ಯವಿದ್ದಲ್ಲಿ ಬಲಪ್ರಯೋಗವನ್ನು ಬಳಸಿ ಅವರನ್ನು ಹೊರದೂಡಿ, ಅದರ ಸ್ವಾಧೀನತೆಯನ್ನು ಮೊದಲಿನವರಿಗೇ ಕೊಡಿಸಿಕೊಡಬೇಕೆಂದು ಆದೇಶಿಸಬಹುದು.

(6) (1)ನೇ ಉಪಪ್ರಕರಣದಡಿಯ ಪ್ರತಿಯೊಂದು ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯವು, ಸಾಧ್ಯವಾದಷ್ಟು ಮಟ್ಟಿಗೆ ತನ್ನ ಮುಂದಿನ ಮೊಕದ್ದಮೆಯನ್ನು ಅದನ್ನು ಹೂಡಿದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಅಂತಿಮವಾಗಿ ಇತ್ಯರ್ಥಗೊಳಿಸತಕ್ಕದ್ದು.

(7) ಭೂ ಕಬಳಿಕೆ ಆರೋಪಿತ ಕೃತ್ಯದ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಪ್ರತಿಯೊಂದು ನಿರ್ಣಯವು ಭೂ ಕಬಳಿಕೆಯ ವಾಸ್ತವಾಂಶದ ಬಗ್ಗೆ ಮತ್ತು ಅಂಥ ಭೂ ಕಬಳಿಕೆಯನ್ನು ಮಾಡಿದ ವ್ಯಕ್ತಿಗಳ ಬಗ್ಗೆ ನಿರ್ಣಾಯಕ ರುಜುವಾತು ಆಗಿರತಕ್ಕದ್ದು ಹಾಗೂ ಭೂ ಕಬಳಿಕೆಗೊಳಗಾದ ಯಾವುದೇ ಭೂಮಿಯ ಹಕ್ಕು ಸ್ವಾಮ್ಯ ಮತ್ತು ಮಾಲೀಕತ್ವದ ಅಥವಾ ಕಾನೂನುಬದ್ಧ ಸ್ವಾಧೀನತೆಯ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಪ್ರತಿಯೊಂದು ತೀರ್ಪು ಅಂಥ ಭೂಮಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳಿಗೆ ಬಂಧನಕಾರಿಯಾಗಿರತಕ್ಕದ್ದು:

ಪರಂತು, ವಿಶೇಷ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಸಂಗತಿಯನ್ನು ಅಧಿಸೂಚಿಸುವ ಮೂಲಕ ನಿರ್ದಿಷ್ಟವಾಗಿ ತಿಳಿಸತಕ್ಕದ್ದು. ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ,

ಖಾಲಿ ಮಾಡಿಸಬೇಕಾದ ಸ್ವತ್ತಿನ ಅಭಿರಕ್ಷೆಉಳ್ಳವನೂ ಸೇರಿದಂತೆ ಯಾವೊಬ್ಬ ವ್ಯಕ್ತಿಯಿಂದ ವಿಶೇಷ ನ್ಯಾಯಾಲಯವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆಯನ್ನು ಅದು ಪರಿಗಣಿಸುತ್ತದೆ ಎಂಬುದನ್ನು ತಿಳಿಸತಕ್ಕದ್ದು:

ಮತ್ತು ಪರಂತು, ಖಾಲಿ ಮಾಡಿಸಬೇಕಾದ ಸ್ವತ್ತಿನ ಅಭಿರಕ್ಷೆದಾರನು, ವಿಶೇಷ ನ್ಯಾಯಾಲಯವು ಮೊಕದ್ದಮೆಯ ಸಂಜ್ಞಾನ ತೆಗೆದುಕೊಳ್ಳುವುದನ್ನು ಆಕ್ಷೇಪಿಸಿದ್ದಲ್ಲಿ ವಿಶೇಷ ನ್ಯಾಯಾಲಯವು ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಮೊಕದ್ದಮೆಯನ್ನು ಮುಂದುವರೆಸತಕ್ಕದ್ದಲ್ಲ:

ಮತ್ತೂ ಪರಂತು, ಆ ಭೂಮಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಸಾಧ್ಯತೆ ಇದೆ ಎನ್ನುವಂಥ ವ್ಯಕ್ತಿಗಳ ಬಗ್ಗೆ ವಿಶೇಷ ನ್ಯಾಯಾಲಯವು ಒಂದು ಕ್ಷಿಪ್ರ ವಿಚಾರಣೆ ನಡೆಸಿ ಮನದಟ್ಟು ಮಾಡಿಕೊಂಡ ಮೇಲೆ ಆ ಭೂಮಿಯಲ್ಲಿ ಹಿತಾಸಕ್ತಿಉಳ್ಳವನೆಂದು ಗೊತ್ತಾದ ಅಥವಾ ನಂಬಲಾದ ಯಾವುದೇ ವ್ಯಕ್ತಿಗೂ, ಅಧಿನಿಯಮದ ಅಡಿಯಲ್ಲಿ ಈ ಪ್ರಕರಣದ ಸಂಜ್ಞಾನವನ್ನು ತೆಗೆದುಕೊಳ್ಳುವ ಬಗ್ಗೆ ಒಂದು ನೋಟಿಸನ್ನು ಜಾರಿಮಾಡುವಂತೆ ಮಾಡತಕ್ಕದ್ದು.

(8) ವಿಶೇಷ ನ್ಯಾಯಾಲಯವು, ನ್ಯಾಯೋದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸುವುದು ಕಾನೂನು ಬದ್ಧವಾಗಿರತಕ್ಕದ್ದು. ಕಬಳಿಕೆ ಮಾಡಲಾದ ಭೂಮಿಯ ಅಕ್ರಮ ಸ್ವಾಧೀನತೆಯಲ್ಲಿದ್ದುದ್ದಕ್ಕಾಗಿ ಹಣದ ರೂಪದಲ್ಲಿ ಪರಿಹಾರವನ್ನು ನೀಡಬೇಕೆಂದು ಐತೀರ್ಪು ನೀಡಬಹುದು, ಅದು, ಆದೇಶದ ದಿನಾಂಕದಂದು ಇದ್ದಂತೆ ಕಬಳಿಕೆ ಮಾಡಲಾದ ಭೂಮಿಯ ಮಾರುಕಟ್ಟೆ ಬೆಲೆಗೆ ಸಮನಾದ ಮೊಬಲಗಿಗಿಂತ ಕಡಿಮೆಯಲ್ಲದ ಮೊಬಲಗಾಗಿರತಕ್ಕದ್ದು, ಹಾಗೂ ಭೂಮಿಯಿಂದ ಪ್ರಾಪ್ತವಾದ ಲಾಭವನ್ನು ಭೂ ಕಬಳಿಕೆ ಮಾಡಿದವನು ಕಬಳಿಕೆಯಾದ ಭೂಮಿಯ ಮಾಲೀಕನಿಗೆ ಸಂದಾಯಮಾಡತಕ್ಕದ್ದು ಮತ್ತು ಕಬಳಿಕೆ ಮಾಡಲಾಗಿದ್ದ ಭೂಮಿಯನ್ನು ಅದಕ್ಕೆ ಹಕ್ಕುಳ್ಳ ಮಾಲೀಕನಿಗೆ ಪುನಃ ಒಪ್ಪಿಸುವಂತೆ ನಿರ್ದೇಶಿಸಬಹುದು. ಹಾಗೆ ಐತೀರ್ಪು ನೀಡಿದ ಪರಿಹಾರದ ಮೊಬಲಗು ಹಾಗೂ ಲಾಭದ ಮೊಬಲಗು ಮತ್ತು ಪುನಃ ವಶಕ್ಕೆ ತಗಲುವ ವೆಚ್ಚಗಳು, ಯಾವುದಾದರೂ ಇದ್ದರೆ ಅವುಗಳನ್ನು, ಸರ್ಕಾರವು ಭೂ ಮಾಲೀಕನಾಗಿದ್ದ ಸಂದರ್ಭದಲ್ಲಿ, ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು ಅಥವಾ ಯಾವುವೇ ಇತರ ಸಂದರ್ಭದಲ್ಲಿ ವಿಶೇಷ ನ್ಯಾಯಾಲಯವು ಜಾರಿಗೊಳಿಸುವ ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ವಸೂಲಿ ಮಾಡತಕ್ಕದ್ದು:

ಪರಂತು, ವಿಶೇಷ ನ್ಯಾಯಾಲಯವು ಈ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವ ಮೊದಲು ಭೂ ಕಬಳಿಕೆ ಮಾಡಿದವನಿಗೆ, ತನ್ನ ಮನವಿಯನ್ನು ಸಲ್ಲಿಸಲು ಅಥವಾ ಈ ಸಂಬಂಧದಲ್ಲಿ ಸಾಕ್ಷ್ಯವನ್ನು ಒದಗಿಸಲು ಒಂದು ಅವಕಾಶವನ್ನು ಕೊಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಮನವಿಯನ್ನು ಮತ್ತು ಸಾಕ್ಷ್ಯವನ್ನು ಪರಿಗಣಿಸತಕ್ಕದ್ದು.

**10. ವಿಶೇಷ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಮತ್ತು ಸೆಷನ್ಸ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುತ್ತದೆ.–** ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದ್ದುದನ್ನುಳಿದು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟರ ಮಟ್ಟಿಗೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973ರ ಉಪಬಂಧಗಳು ವಿಶೇಷ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮಗಳ ಉಪಬಂಧಗಳ

ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಲಯವನ್ನು ಸಿವಿಲ್ ನ್ಯಾಯಾಲಯವೆಂದು ಅಥವಾ ಸಂದರ್ಭಾನುಸಾರ, ಸೆಷನ್ಸ್ ನ್ಯಾಯಾಲಯವೆಂದು ಭಾವಿಸತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ಮುಂದೆ ಅಭಿಯೋಗವನ್ನು ನಡೆಸುವ ವ್ಯಕ್ತಿಯನ್ನು ಸರ್ಕಾರಿ ಅಭಿಯೋಜಕ ಎಂದು ಭಾವಿಸತಕ್ಕದ್ದು.

11. **ರುಜುವಾತಿನ ಭಾರ.–** ಈ ಅಧಿನಿಯಮದಡಿಯ ಯಾವುವೇ ವ್ಯವಹರಣೆಗಳಲ್ಲಿ ಭೂಮಿಯು ಸರ್ಕಾರದ ಒಡೆತನದ ಭೂಮಿ ಎಂದು ಮೇಲುನೋಟಕ್ಕೆ ರುಜುವಾತಾದಲ್ಲಿ, ಭೂಮಿಯನ್ನು ಕಬಳಿಸಲಾಗಿದೆಯೆಂದು ಆಪಾದಿಸಲಾದ ವ್ಯಕ್ತಿಯು ಭೂ ಕಬಳಿಕೆ ಮಾಡಿದ್ದಾನೆ ಎಂದು ವಿಶೇಷನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು ಮತ್ತು ತಾನು ಭೂಕಬಳಿಕೆ ಮಾಡಿಲ್ಲವೆಂದು ರುಜುವಾತು ಮಾಡುವ ಭಾರವು ಅಂಥ ವ್ಯಕ್ತಿಯದೇ ಆಗಿರತಕ್ಕದ್ದು.

12. **ವಿಶೇಷ ನ್ಯಾಯಾಲಯದ ಸಿಬ್ಬಂದಿ.–** (1) ಈ ಅಧಿನಿಯಮದಡಿಯಲ್ಲಿ ವಿಶೇಷ ನ್ಯಾಯಾಲಯವು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಹಾಯಕ್ಕಾಗಿ ಬೇಕಾಗುವ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ವಿಶೇಷ ನ್ಯಾಯಾಲಯದ ಅಧ್ಯಕ್ಷರು ನೇಮಿಸಿಕೊಳ್ಳಬಹುದು.

(2) (1)ನೇ ಉಪ ಪ್ರಕರಣದಡಿ ನೇಮಿಸಬಹುದಾದ ಅಧಿಕಾರಿಗಳು ಮತ್ತು ನೌಕರರ ಪ್ರವರ್ಗಗಳು, ಅವರ ಸಂಬಳಗಳು, ಭತ್ಯೆಗಳು, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ಮತ್ತು ವಿಶೇಷ ನ್ಯಾಯಾಲಯದ ಅಧ್ಯಕ್ಷರ ಆಡಳಿತಾಧಿಕಾರಗಳು, ಅಧ್ಯಕ್ಷರೊಡನೆ ಸಮಾಲೋಚಿಸಿದ ತರುವಾಯ, ನಿಯಮಿಸಬಹುದಾದಂಥವು ಆಗಿರತಕ್ಕದ್ದು.

13. **ಅಪರಾಧಗಳ ಅಧಿವಿಚಾರಣೆಯ ಅಧಿಕಾರಗಳು.–** ಈ ಅಧಿನಿಯಮದಡಿಯಲ್ಲಿ ದಂಡನೀಯವಾದ ಎಲ್ಲಾ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು. ವಿಶೇಷ ನ್ಯಾಯಾಲಯವು ಸ್ಥಾಪನೆಯಾಗದೇ ಇರುವ ಸ್ಥಳಗಳಲ್ಲಿ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಸರ್ಕಾರವು, ನಿರ್ದಿಷ್ಟವಾಗಿ ಸಕ್ಷಮಗೊಳಿಸಿರುವ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು ಈ ಅಧಿನಿಯಮದಡಿಯಲ್ಲಿ ದಂಡನೀಯವಾದ ಪ್ರತಿಯೊಂದು ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದು.

14. **ಅಧಿನಿಯಮದಡಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರುವರು.–** ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯನ್ನು, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ, ಸಾರ್ವಜನಿಕ ನೌಕರನೆಂದು ಭಾವಿಸತಕ್ಕದ್ದು.

15. **ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ವಿಶೇಷ ನ್ಯಾಯಾಲಯದ ಯಾವೊಬ್ಬ ಅಧಿಕಾರಿ ಅಥವಾ ನೌಕರ ಅಥವಾ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವು ಇರತಕ್ಕದ್ದಲ್ಲ.

16. **ಇತರ ಕಾನೂನುಗಳ ಮೇಲೆ ಈ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ರೂಢಿ, ಆಚರಣೆ ಅಥವಾ ಒಪ್ಪಂದದಲ್ಲಿ ಅಥವಾ

ನ್ಯಾಯಾಲಯದ ಅಥವಾ ಯಾವುದೇ ಇತರ ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶದಲ್ಲಿ ಅವುಗಳಿಗೆ ಅಸಂಗತವಾಗಿ ಏನೆ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

17. **ಪುನರೀಕ್ಷಣೆ.–** ವಿಶೇಷ ನ್ಯಾಯಾಲಯವು, ನ್ಯಾಯ ವಿಫಲತೆಯನ್ನು ತಡೆಗಟ್ಟಲು, 9ನೇ ಪ್ರಕರಣದಡಿಯಲ್ಲಿ ನೀಡಲಾದ ಆದೇಶ ಅಥವಾ ತನ್ನ ತೀರ್ಪನ್ನು ಪುನರೀಕ್ಷಿಸಬಹುದು ಆದರೆ ದಾಖಲೆಯ ಮೇಲ್ನೋಟಕ್ಕೆ ಕಂಡುಬರುವಂತೆ ಅದನ್ನು ಸಂಗತಿಯ ತಪ್ಪುಗ್ರಹಿಕೆಯಿಂದ, ಯಾವುದೇ ಮುಖ್ಯ ಸಂಗತಿಯ ತಿಳುವಳಿಕೆಯಿಲ್ಲದಿರುವುದರಿಂದ ಅಥವಾ ಸ್ಪಷ್ಟವಾದ ತಪ್ಪಿನಿಂದ ನೀಡಲಾಗಿದೆ ಎಂಬ ಆಧಾರದ ಮೇಲೆ ಹೊರತು ಅಂಥ ಪುನರೀಕ್ಷಣೆಯನ್ನು ಪುರಸ್ಕರಿಸತಕ್ಕದ್ದಲ್ಲ:

ಪರಂತು, ವಿಶೇಷ ನ್ಯಾಯಾಲಯವು, ಅರ್ಜಿದಾರನ ಅಹವಾಲನ್ನು ಕೇಳದೇ, ಪರಿಚಲನೆಯಲ್ಲಿರುವ ಪುನರೀಕ್ಷಣಾ ಅರ್ಜಿಯನ್ನು ಅಂಗೀಕರಿಸುವುದು ಅಥವಾ ತಿರಸ್ಕರಿಸುವುದು ಕಾನೂನು ಬದ್ಧವಾಗಿರತಕ್ಕದ್ದು:

ಮತ್ತೂ ಪರಂತು, ವಿಶೇಷ ನ್ಯಾಯಾಲಯವು, ಬಾಧಿತ ಪಕ್ಷಕಾರರ ಅಹವಾಲನ್ನು ಕೇಳದೇ, ಯಾವುದೇ ಪುನರೀಕ್ಷಣೆ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ ಮತ್ತು ತನ್ನ ಹಿಂದಿನ ಆದೇಶ ಅಥವಾ ತೀರ್ಪನ್ನು, ರದ್ದುಗೊಳಿಸತಕ್ಕದ್ದಲ್ಲ.

18. **ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಮತ್ತು ಅದು ಅಧಿವೇಶನದಲ್ಲಿಲ್ಲದಿರುವಾಗ ನಿಕಟ ತರುವಾಯ ಬರುವ ಅಧಿವೇಶನದಲ್ಲಿ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿ ಯಾಗಿರತಕ್ಕದ್ದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

19. **ವಿನಿಯಮಗಳ ರಚನಾಧಿಕಾರ.–** (1) ವಿಶೇಷ ನ್ಯಾಯಾಲಯವು, ಸರ್ಕಾರದ ಸಹಮತಿಯೊಡನೆ ಅಧಿಸೂಚನೆಯ ಮೂಲಕ, ಮೊಕದ್ದಮೆಗಳನ್ನು ನಡೆಸುವಾಗ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ತೀರ್ಮಾನವನ್ನು ತೆಗೆದುಕೊಳ್ಳುವ ರೀತಿಯನ್ನು ನಿಯಂತ್ರಿಸುವ ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸಬಹುದು.

(2) ಜನ ಸಾಮಾನ್ಯರ ತಿಳುವಳಿಕೆಗಾಗಿ, ವಿಶೇಷ ನ್ಯಾಯಾಲಯವು ಅಂಥ ವಿನಿಯಮಗಳ ಸಾರವನ್ನು ಸಾರ್ವಜನಿಕರ ಗಮನಕ್ಕೆ ಬರುವಂತೆ ಮಾಡಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವ್ವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು, ಈ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಯಾವುದೇ ವಿನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ ಅಂಥ ವಿನಿಯಮಗಳು, ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ವಿನಿಯಮದ ಅಡಿಯಲ್ಲಿ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**20. ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆ.–** ವಿಶೇಷ ನ್ಯಾಯಾಲಯದ ರಚನೆಯ ನಿಕಟಪೂರ್ವದಲ್ಲಿ, ಯಾವುದೇ ನ್ಯಾಯಾಲಯದ ಅಥವಾ ಇತರೆ ಪ್ರಾಧಿಕಾರದ ಮುಂದೆ, ಅಂಥ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಇರಬಹುದಾಗಿದ್ದ ಯಾವುದೇ ಮೊಕದ್ದಮೆಯು ಇತ್ಯರ್ಥದಲ್ಲಿದ್ದರೆ, ಆ ದಾವೆಯ ಅಥವಾ ವ್ಯವಹರಣೆಯ ವ್ಯಾಜ್ಯಕಾರಣವು ವಿಶೇಷ ನ್ಯಾಯಾಲಯದ ರಚನೆಯ ತರುವಾಯ ಉದ್ಭವಿಸಿದ್ದರೆ ಹೇಗೋ ಹಾಗೆ ಆ ದಾವೆ ಅಥವಾ ವ್ಯವಹರಣೆಯನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು.

**21. ಕಬಳಿಸಲಾದ ಭೂಮಿಯ ಪರಭಾರೆಯ ನಿಷೇಧ.–** ಕಬಳಿಕೆ ಮಾಡಲಾದ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ, ಗುತ್ತಿಗೆ, ದಾನ, ವಿನಿಮಯ, ಒಪ್ಪಂದ, ಅಧ್ಯರ್ಪಣ, ಭೋಗ್ಯದ ಅಡಮಾನ ಅಥವಾ ಅನ್ಯಥಾ ರೂಪದಲ್ಲಿ ಪರಭಾರೆ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರವು ಅಥವಾ ಅಂಥ ಭೂಮಿಯ ಸಂಬಂಧದಲ್ಲಿ, ಮಾಡಿಕೊಳ್ಳಲಾದ ಆಸ್ತಿ ವಿಭಜನೆ ಅಥವಾ ರಚಿಸಲಾದ ಒಂದು ನ್ಯಾಸವು, ಅವುಗಳನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿರಲಿ ಅಥವಾ ತರುವಾಯ ಮಾಡಿರಲಿ ವಿಶೇಷ ನ್ಯಾಯಾಲಯ ಆದೇಶಿಸುವಷ್ಟು ಮಟ್ಟಿಗೆ ಹೊರತು ಉಳಿದಂತೆ ಅಕೃತ ಮತ್ತು ಶೂನ್ಯವಾಗಿರತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ, ವಕ್ಫ್‌ಗಳೂ ಸೇರಿದಂತೆ ಒಂದು ಧಾರ್ಮಿಕ ಅಥವಾ ಧರ್ಮಾದಾಯ ಸಂಸ್ಥೆಗೆ ಅಥವಾ ದತ್ತಿಗೆ ಸೇರಿದ ಭೂಮಿಗಳನ್ನು ಕೆಲವು ಕಾನೂನು ವಿರೋಧಿ ವ್ಯಕ್ತಿಗಳು ಒಬ್ಬರೇ ಮತ್ತು ಗುಂಪುಗಳಲ್ಲಿ ಬಲಾತ್ಕಾರದಿಂದ ಅಥವಾ ಮೋಸದಿಂದ ಅಥವಾ ಇನ್ನಾವುದೇ ರೀತಿಯಿಂದ, ಕಬಳಿಸುವುದಕ್ಕೆ ಸಂಘಟಿತ ಪ್ರಯತ್ನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಭೂಕಬಳಿಕೆದಾರರು ನಕಲಿ ಗೃಹ ನಿರ್ಮಾಣ ಸಹಕಾರಿ ಸಂಘಗಳನ್ನು ರಚಿಸುತ್ತಿದ್ದಾರೆ ಅಥವಾ ಸುಳ್ಳು ಕ್ಲೇಮುಗಳನ್ನು ಸೃಷ್ಟಿಸುತ್ತಿದ್ದಾರೆ ಮತ್ತು ನೀತಿಗೆಟ್ಟ ಸ್ಥಿರಾಸ್ತಿ ವ್ಯಾಪಾರಿಗಳ ಮೂಲಕವಾಗಿ ಅಥವಾ ಅನ್ಯಥಾ ಅಂಥ ಭೂಮಿಗಳನ್ನು ಭಾರಿ ಪ್ರಮಾಣದಲ್ಲಿ ಹಾಗೂ ಹಿಂದೆಂದೂ ಇಲ್ಲದ ರೀತಿಯಲ್ಲಿ ಮೋಸದಿಂದ ಜನತೆಯ ಕೆಲವು ವರ್ಗಕ್ಕೆ ಮಾರಾಟ ಮಾಡುತ್ತಿದ್ದಾರೆ ಹಾಗೂ ಇದರಿಂದ ಈ ಭೂಕಬಳಿಕೆದಾರರ ಬಳಿ ಲೆಕ್ಕಕ್ಕೇ ಸಿಗದ ಸಂಪತ್ತು ಯಥೇಚ್ಛವಾಗಿ ಸಂಗ್ರಹವಾಗುತ್ತಿದೆ. ರಾಜ್ಯದಲ್ಲಿ ಭೂಕಬಳಿಕೆದಾರರ ಇಂಥ ಕಾನೂನುಬಾಹಿರ ಚಟುವಟಿಕೆಗಳಿಂದಾಗಿ, ಸಾರ್ವಜನಿಕ ಸುವ್ಯವಸ್ಥೆಯ ಮೇಲೆ, ಅದರಲ್ಲೂ ನಗರ ಮತ್ತು ನಗರೀಕರಣಕ್ಕೆ ಯೋಗ್ಯವಾದ ಭೂಮಿಗಳ ಮೇಲೆ, ದುಷ್ಪರಿಣಾಮ ಆಗುತ್ತಿರುವುದರಿಂದ, ರಾಜ್ಯ ಸರ್ಕಾರವು ಅಂಥ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟಲು ಈ ಸಂಬಂಧದಲ್ಲಿ ಒಂದು ವಿಶೇಷ ಕಾನೂನನ್ನು ಕೂಡಲೇ ಜಾರಿಗೆ ತರುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ, ಭೂ ಕಬಳಿಕೆಯ ಚಟುವಟಿಕೆಗಳನ್ನು ನಿಷೇಧಿಸಿ ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ರಾಜ್ಯ ಸರ್ಕಾರವು, ಕರ್ನಾಟಕ ಭೂ ಕಬಳಿಕೆ (ನಿಷೇಧ) ಅಧಿನಿಯಮವನ್ನು ಜಾರಿಗೆ ತರಲು ಉದ್ದೇಶಿಸಿದೆ. ಭೂ ಕಬಳಿಕೆಯನ್ನು ಕಾನೂನು ಬಾಹಿರವೆಂದು ಘೋಷಿಸುವುದಷ್ಟೆ ಅಲ್ಲದೆ ಅಂಥ ಭೂಕಬಳಿಕೆಯನ್ನು ನಿಷೇಧಿಸಲು ಸಹ ರಾಜ್ಯ ಸರ್ಕಾರವು ಉದ್ದೇಶಿಸಿದೆ. ಆದ್ದರಿಂದ ಈ ಅಧಿನಿಯವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ಭೂ ಕಬಳಿಕೆಯ ಸಂಬಂಧದ ಅಪರಾಧಕ್ಕಾಗಿ ದಂಡವನ್ನು ವಿಧಿಸಲು ಹಾಗೂ ಆರೋಪಿತ ಭೂ ಕಬಳಿಕೆ ಕೃತ್ಯದ ಶೀಘ್ರ ವಿಚಾರಣೆ ನಡೆಸುವುದಕ್ಕಾಗಿ ಮತ್ತು ಕಬಳಿಕೆ ಮಾಡಲಾದ ಭೂಮಿಯ ಮಾಲೀಕತ್ವದ ಹಾಗೂ ಅದರ ಹಕ್ಕು ಮೂಲದ ಅಥವಾ ಕಾನೂನುಬದ್ಧ ಸ್ವಾಧೀನತೆಯ ಬಗ್ಗೆ ಮೊಕದ್ದಮೆಯ ಅಧಿವಿಚಾರಣೆಯನ್ನು ನಡೆಸಲು ವಿಶೇಷ ನ್ಯಾಯಾಲಯವನ್ನು ಅಧಿಸೂಚನೆಯ ಮೂಲಕ ರಚಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಸಹ ಪ್ರಸ್ತಾವಿಸಲಾಗಿದೆ. ಪ್ರಸ್ತಾವಿತ ಶಾಸನವನ್ನು ಜಾರಿಗೊಳಿಸುವುದರಿಂದ ರಾಜ್ಯಸರ್ಕಾರಕ್ಕೆ ಅಕ್ರಮ ಭೂ ಕಬಳಿಕೆಯನ್ನು ತಡೆಹಿಡಿಯಲು ಸಾಧ್ಯವಾಗುವುದೆಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಅಂದಾಜು, 1,69,07,452-00 ರೂಪಾಯಿಗಳ ವೆಚ್ಚವಾಗುವುದೆಂದು ಲೆಕ್ಕಹಾಕಲಾಗಿದೆ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ ಪತ್ರ

**ಖಂಡ 7:** (1) ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

(2) ವಿಶೇಷ ನ್ಯಾಯಾಲಯದ ಹೆಚ್ಚುವರಿ ಪೀಠವನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 8:** ತಹಸೀಲ್ದಾರ್ ದರ್ಜೆಗೆ ಕಡಿಮೆಯಲ್ಲದ ಒಬ್ಬ ಸರ್ಕಾರಿ ಅಧಿಕಾರಿಗೆ, ಆಡಳಿತ ಜವಾಬ್ದಾರಿಯುಳ್ಳ ಹಾಗೂ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳ ಸಂಬಂಧದಲ್ಲಿ ಅಂಥ ಅಧಿಕಾರಗಳನ್ನು ಚಲಾಯಿಸುವ ಹಾಗೂ ಅಂಥ ಪ್ರಕಾರ್ಯಗಳನ್ನು ನೆರವೇರಿಸುವ ಅಧಿಕಾರಿಯೆಂದು ಪ್ರಾಧಿಕಾರ ನೀಡಲು ರಾಜ್ಯಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

**ಖಂಡ 9:** ಈ ಅಧಿನಿಯಮದ ಅಡಿಯಲ್ಲಿ ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಂಡಿರುವ ಅಂಶವನ್ನು ನಿರ್ದಿಷ್ಟವಾಗಿ ತಿಳಿಸಲು ವಿಶೇಷ ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 13:** ವಿಶೇಷ ನ್ಯಾಯಾಲಯವನ್ನು ರಚಿಸದಿರುವ ಕಡೆಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಎಲ್ಲ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ನೀಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 18:** ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ಪೂರ್ವ ಪ್ರಕಟಣೆ ಮಾಡಿ ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

**ಖಂಡ 19:** ಮೊಕದ್ದಮೆಗಳನ್ನು ನಡೆಸುವಾಗ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ರೀತಿಯನ್ನು ನಿಯಂತ್ರಿಸುವ ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ, ಸರ್ಕಾರದ ಸಹಮತಿಯೊಡನೆ, ವಿನಿಯಮಗಳನ್ನು ರಚಿಸಲು ವಿಶೇಷ ನ್ಯಾಯಾಲಯಕ್ಕೆ ಅಧಿಕಾರನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

**ಎಂ.ಪಿ. ಪ್ರಕಾಶ್**
ಗೃಹ, ಕಾನೂನು, ನ್ಯಾಯ, ಮಾನವ ಹಕ್ಕುಗಳು
ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

**ಎಸ್.ಬಿ. ಪಾಟೀಲ್**
ಅಪರ ಕಾರ್ಯದರ್ಶಿ

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು. Sl.No. /DPAL-C7

Annex
ಅನುಬಂಧ - 2

# ಕರ್ನಾಟಕ ವಿಧಾನಸಭೆ

## ಹನ್ನೆರಡನೇ ವಿಧಾನಸಭೆ

## ಐದನೇ ಅಧಿವೇಶನ

## ಕರ್ನಾಟಕ ಭೂ-ಕಂದಾಯ (ತಿದ್ದುಪಡಿ) ವಿಧೇಯಕ 2007

## (2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 28)

ಕರ್ನಾಟಕ ಭೂ-ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಭೂ-ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 12) ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ-ಕಂದಾಯ (ತಿದ್ದುಪಡಿ) ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು, 2006ನೇ ಡಿಸೆಂಬರ್ ಹನ್ನೊಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಹೊಸ ಅಧ್ಯಾಯ-XIV-ಎ ರ ಸೇರ್ಪಡೆ.-** ಕರ್ನಾಟಕ ಭೂ-ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ XIVನೇ ಅಧ್ಯಾಯದ ತರುವಾಯ ಈ ಮುಂದಿನ ಹೊಸ ಅಧ್ಯಾಯವನ್ನು ಸೇರಿಸತಕ್ಕದ್ದು, ಎಂದರೆ:-

### "ಅಧ್ಯಾಯ-XIV-ಎ

### ಅಪರಾಧಗಳು ಮತ್ತು ದಂಡಗಳು

**192-ಎ. ಅಪರಾಧಗಳು ಮತ್ತು ದಂಡಗಳು.-** ಈ ಅಧಿನಿಯಮದಲ್ಲಿ ಅಥವಾ ಇದರಡಿಯಲ್ಲಿ ರಚಿಸಿದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಕೆಳಕಂಡ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳಲ್ಲಿ ಯಾವುದೇ ಅಪರಾಧವನ್ನು ಮಾಡಿದ ಯಾವೊಬ್ಬ ವ್ಯಕ್ತಿಯು, ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಂದ ಅಪರಾಧ ನಿರ್ಣಯವಾದ ಮೇಲೆ, ಅದರ (3)ನೇ ಅಂಕಣದಲ್ಲಿ ಸೂಚಿಸಿರುವ ಶಿಕ್ಷೆಯಿಂದ ದಂಡಿತನಾಗತಕ್ಕದ್ದು:-

## ಕೋಷ್ಟಕ

| ಕ್ರ. ಸಂ. | ಅಪರಾಧ | ಶಿಕ್ಷೆ |
|---|---|---|
| 1 | ಸರ್ಕಾರಿ ಭೂಮಿಯ ಹಿಡುವಳಿ ಹೊಂದುವ ಉದ್ದೇಶದಿಂದ ಯಾವುದೇ ಸರ್ಕಾರಿ ಭೂಮಿಯಲ್ಲಿ ಕಾನೂನು ಬಾಹಿರವಾಗಿ ಪ್ರವೇಶಿಸುವುದು ಅಥವಾ ಅದನ್ನು ಸ್ವಾಧೀನಪಡಿಸಿ ಕೊಳ್ಳುವುದು:<br>ಪರಂತು, ಕೊಡಗು ಜಿಲ್ಲೆಯಲ್ಲಿರುವ ಜಮ್ಮಾ, ಬಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳ ಅಥವಾ ಅಧಿನಿಯಮದ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ: | ಒಂದು ವರ್ಷ ಕಾರಾವಾಸ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ |
| 2 | ಯಾವುದೇ ಸರ್ಕಾರಿ ಭೂಮಿಯನ್ನು ಮಾರುವ ಅಡಮಾನ ಇಡುವ ಅಥವಾ ದಾನ ಅಥವಾ ಅನ್ಯಥಾ ವರ್ಗಾವಣೆ ಮಾಡುವ ಉದ್ದೇಶದಿಂದ ಮೋಸ ಮಾಡುವುದು ಮತ್ತು ಆ ಮೂಲಕ ಅಪ್ರಮಾಣಿಕವಾಗಿ ದಾಖಲೆಗಳನ್ನು ಸೃಷ್ಟಿಸುವುದು. | ಮೂರು ವರ್ಷಗಳ ಕಾರಾವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ |
| 3 | ಆ ಉದ್ದೇಶಕ್ಕಾಗಿ ಬಳಸಬಹುದು ಎಂದು ತಿಳಿದೂ ಸರ್ಕಾರಿ ಭೂಮಿಯ ಸಂಬಂಧದಲ್ಲಿ ಖೋಟಾ ದಾಖಲೆಯನ್ನು ಸೃಜಿಸಿರುವುದು ಅಥವಾ ಅಂಥ ಭೂಮಿಯನ್ನು ಕಬಳಿಸುವುದು | ಮೂರು ವರ್ಷಗಳ ಕಾರಾವಾಸ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ |
| 4 | ಸರ್ಕಾರಿ ಭೂಮಿಯ ಕಾನೂನುಬಾಹಿರ ಅಧಿಭೋಗದಾರಿಕೆಯ ಬಗ್ಗೆ ವರದಿಯನ್ನು ನೀಡುವ ಅಥವಾ ಅಂಥ ಕಾನೂನುಬಾಹಿರ ಅಧಿಭೋಗದಾರರನ್ನು ಹೊರಹಾಕುವ ಜವಾಬ್ದಾರಿಯನ್ನು ಹೊಂದಿದ್ದು ಅಂಥ ವರದಿಯನ್ನು ನೀಡಲು ತಪ್ಪಿದ ಅಥವಾ ಅಂಥ ಕಾನೂನು ಬಾಹಿರ ಅಧಿಭೋಗದಾರರನ್ನು ಹೊರಹಾಕುವುದಕ್ಕೆ ಕ್ರಮಕೈಗೊಳ್ಳುವಲ್ಲಿ ವಿಫಲನಾದ ಕಂದಾಯ ಅಧಿಕಾರಿ.<br>ಪರಂತು, ಕೊಡಗು ಜಿಲ್ಲೆಯಲ್ಲಿರುವ ಜಮ್ಮಾ, ಬಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳ ಅಥವಾ ಅಧಿನಿಯಮದ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ: | ಮೂರು ವರ್ಷಗಳ ಕಾರಾವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ |

| ಕ್ರ. ಸಂ. | ಅಪರಾಧ | ಶಿಕ್ಷೆ |
|---|---|---|
| 5 | ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ, ಅಂಥ ಭೂಮಿಯನ್ನು ಪರಿವರ್ತಿಸದೆ ಅಥವಾ ಸಕ್ಷಮ ಪ್ರಾಧಿಕಾರಿಯಿಂದ ಪೂರ್ವಾನುಮೋದನೆಯನ್ನು ಪಡೆಯದೆ ಮಾರಾಟ ಮಾಡುವುದು:<br>ಪರಂತು, ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಮೂರು ವರ್ಷಗಳ ಕಾರಾವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ |
| 6 | ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗಾಗಿ ಪರಿವರ್ತಿಸಿದ ಬಗ್ಗೆ ಖೋಟಾ ದಾಖಲೆಗಳನ್ನು ಸೃಜಿಸುವುದು ಅಥವಾ ಕೃಷಿ ಭೂಮಿಯನ್ನು ಹೊಂದಿರುವವನು ಅದನ್ನು ಕೃಷಿಯೇತರ ಉದ್ದೇಶಗಳಿಗಾಗಿ ಬಳಸುತ್ತಿರುವವನೆಂದು ಪ್ರಾಧೀಕರಿಸುವುದು. | ಒಂದು ವರ್ಷದ ಕಾರಾವಾಸ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ |
| 7 | ದಾಖಲೆಗಳನ್ನು ನಿರ್ವಹಿಸುವ ಸಾರ್ವಜನಿಕ ನೌಕರನಾಗಿದ್ದು ಹೊಣೆಗಾರಿಕೆ ಹೊತ್ತಿದ್ದು ರೆವಿನ್ಯೂ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಕಾನೂನು ಬಾಹಿರವಾಗಿ ಪರಿವರ್ತಿಸಿರುವುದನ್ನು ಸಕ್ಷಮ ಪ್ರಾಧಿಕಾರಿಗೆ ವರದಿ ಮಾಡಲು ಅಥವಾ ಆ ಬಗ್ಗೆ ಕ್ರಮ ಕೈಗೊಳ್ಳಲು ತಪ್ಪುವುದು:<br>ಪರಂತು, ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಮೂರು ವರ್ಷಗಳ ಕಾರಾವಾಸ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ |
| 8 | ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಕಾನೂನು ಬದ್ಧ ಆದೇಶದ ಉಲ್ಲಂಘನೆ | ಮೊದಲ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಎರಡನೆ ಹಾಗೂ ತದನಂತರದ ಅಪರಾಧಗಳಿಗೆ ಜುಲ್ಮಾನೆಯ ಐದರಷ್ಟು ಹೆಚ್ಚಿನ ಜುಲ್ಮಾನೆ. |

**192-ಬಿ. ಅಪರಾಧಗಳ ದುಷ್ಪ್ರೇರಣೆ.-** ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ದುಷ್ಪ್ರೇರಣೆ ಮಾಡುವ ಅಥವಾ ಅಂಥ ಅಪರಾಧವನ್ನು ಮಾಡಲು ಪ್ರಯತ್ನಿಸುವ ಯಾವೊಬ್ಬ ವ್ಯಕ್ತಿಯು ಈ ಅಧಿನಿಯಮದ ಅಡಿಯಲ್ಲಿ ಅಂಥ ಅಪರಾಧವನ್ನು ಎಸಗಿದ್ದಕ್ಕಾಗಿ ಉಪಬಂಧಿಸಲಾದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**192-ಸಿ. ಇತರ ಕಾನೂನುಗಳ ಅಡಿಯಲ್ಲಿಯ ದಂಡನೆಗಳಿಗೆ ಪ್ರತಿಷೇಧವಿಲ್ಲ.-** ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಕೃತ್ಯ ಎಸಗಿದ್ದಕ್ಕಾಗಿ ಅಥವಾ ಲೋಪಕ್ಕಾಗಿ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಿಂದ ಯಾವೊಬ್ಬ ವ್ಯಕ್ತಿಯು ಅಭಿಯೋಗಕ್ಕೆ ಒಳಗಾಗುವುದು ಅಥವಾ ದಂಡನೆಗೆ ಗುರಿಯಾಗುವುದನ್ನು ತಪ್ಪಿಸತಕ್ಕದ್ದಲ್ಲ:

ಪರಂತು, ಒಂದೇ ಅಪರಾಧಕ್ಕಾಗಿ ಯಾವೊಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಬಾರಿ ಹಾಗೆ ಅಭಿಯೋಗಕ್ಕೆ ಒಳಗಾಗತಕ್ಕದ್ದಲ್ಲ ಅಥವಾ ದಂಡಿತನಾಗತಕ್ಕದ್ದಲ್ಲ.

**192–ಡಿ. ಅಪರಾಧಗಳ ಸಂಜ್ಞೇಯತೆ.–** ಈ ಅಧ್ಯಾಯದ ಅಡಿಯಲ್ಲಿನ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು."

**3. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ಭೂ–ಕಂದಾಯ (ತಿದ್ದುಪಡಿ) ಅಧ್ಯಾದೇಶ, 2006ನ್ನು (2006ರ ಕರ್ನಾಟಕ ಅಧ್ಯಾದೇಶ 3) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನದಲ್ಲಿ ಏನೇ ಇದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮದ 94ನೇ ಪ್ರಕರಣವು, ಸರ್ಕಾರಿ ಭೂಮಿಗಳ ಅನಧಿಕೃತ ಅಧಿಭೋಗವನ್ನು ನಿವಾರಿಸುವುದಕ್ಕೆ ಡೆಪ್ಯುಟಿ ಕಮೀಷನರ್‌ಗಳಿಗೆ ಅಧಿಕಾರ ನೀಡುತ್ತದೆ. ಹೀಗಿದ್ದರೂ ಸರ್ಕಾರಿ ಜಮೀನುಗಳನ್ನು ವ್ಯಾಪಕ ಒತ್ತುವರಿಯು ಅದರಲ್ಲೂ ಬೆಂಗಳೂರು, ಮೈಸೂರು, ಬೆಳಗಾಂ, ಹುಬ್ಬಳ್ಳಿ – ಧಾರವಾಡ ಮತ್ತು ಗುಲ್ಬರ್ಗಾ ಮತ್ತಿತರ ನಗರ ಪ್ರದೇಶಗಳೊಳಗೆ ಹಾಗೂ ಸುತ್ತಮುತ್ತ ನಡೆಯುತ್ತಲಿದೆ. ಅಂಥ ಭೂಕಬಳಿಕೆದಾರರು ಸ್ಥಿರಾಸ್ತಿ ಮಾರಾಟ ವ್ಯವಹಾರದಲ್ಲಿ ತೊಡಗಿ ಮುಗ್ಧ ಜನತೆ ಮತ್ತು ಸರ್ಕಾರಕ್ಕೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಇನ್ನುಮುಂದೆ ನಗರ ಪ್ರದೇಶಗಳಲ್ಲಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡುವುದನ್ನು ತಡೆಗಟ್ಟಿ ಅಂಥ ಭೂಕಬಳಿಕೆದಾರರನ್ನು ತೀವ್ರ ಶಿಕ್ಷೆಗೆ ಗುರಿಪಡಿಸುವುದು ಅವಶ್ಯಕವಾಗಿದೆ.

ಅಧಿಕಾರಿಗಳು ಭೂ ಕಬಳಿಕೆದಾರರೊಡನೆ ಶಾಮೀಲಾಗುವುದನ್ನು ತಡೆಗಟ್ಟಿ, ಅಧಿಕಾರಿಗಳು ಅಂಥ ಚಟುವಟಿಕೆಗಳ ಬಗ್ಗೆ ತಿಳಿದಿದ್ದರೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿರುವ ಅಧಿಕಾರಿಗಳನ್ನು, ಒತ್ತುವರಿಗೆ ದುಷ್ಪ್ರೇರಣೆ ನೀಡುವ ಅಧಿಕಾರಿಗಳನ್ನು, ಖೋಟಾ ದಾಖಲೆಗಳನ್ನು ಸೃಷ್ಟಿಸುವ ಮತ್ತು ನಕಲಿ ರೆವಿನ್ಯೂ ದಾಖಲೆಗಳನ್ನು ಸೃಷ್ಟನೆ ಮಾಡುವ ಅಧಿಕಾರಿಗಳನ್ನು ಅಪರಾಧಿಗಳನ್ನಾಗಿ ಮಾಡಿ ಅವರನ್ನು ಅಭಿಯೋಜನೆಗೆ ಗುರಿಪಡಿಸಬೇಕು.

ಮೇಲ್ಕಂಡ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು "ಅಪರಾಧಗಳು ಮತ್ತು ದಂಡಗಳು" ಎಂಬ ಹೆಸರಿನ ಒಂದು ಹೊಸ ಅಧ್ಯಾಯವನ್ನು ಸೇರಿಸುವ ಮೂಲಕ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿರುವ ಜಮ್ಮಾ, ಬಾಣೆ ಭೂಮಿಗಳ ಪ್ರಕರಣಗಳಿಗೆ ಅಥವಾ ಸಕ್ರಮಗೊಳಿಸಲಾದ ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳ ಅಥವಾ ಅಧಿನಿಯಮದ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಅಡಿಯಲ್ಲಿ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳಿಗೆ ಮತ್ತು ಈ ಸಂಬಂಧದಲ್ಲಿ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರತುಪಡಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿ ಇಲ್ಲದೇ ಇದ್ದುದರಿಂದ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶ, 2006ನ್ನು (2006ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಮೇಲ್ಕಂಡ ಉದ್ದೇಶ ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ 80ನೇ ನಿಯಮದ (1)ನೇ ಉಪ ನಿಯಮಧ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮದ 94ನೇ ಪ್ರಕರಣವು, ಸರ್ಕಾರಿ ಭೂಮಿಗಳ ಅನಧಿಕೃತ ಅಧಿಭೋಗವನ್ನು ನಿವಾರಿಸುವುದಕ್ಕೆ ಡೆಪ್ಯುಟಿ ಕಮೀಷನರ್‌ಗಳಿಗೆ ಅಧಿಕಾರ ನೀಡುತ್ತದೆ. ಹೀಗಿದ್ದರೂ ಸರ್ಕಾರಿ ಜಮೀನುಗಳನ್ನು ವ್ಯಾಪಕ ಒತ್ತುವರಿಯು ಅದರಲ್ಲೂ ಬೆಂಗಳೂರು, ಮೈಸೂರು, ಬೆಳಗಾಂ, ಹುಬ್ಬಳ್ಳಿ – ಧಾರವಾಡ ಮತ್ತು ಗುಲ್ಬರ್ಗಾ ಮತ್ತಿತರ ನಗರ ಪ್ರದೇಶಗಳೊಳಗೆ ಹಾಗೂ ಸುತ್ತಮುತ್ತ ನಡೆಯುತ್ತಲಿದೆ. ಅಂಥ ಭೂಕಬಳಿಕೆದಾರರು ಸ್ಥಿರಾಸ್ತಿ ಮಾರಾಟ ವ್ಯವಹಾರದಲ್ಲಿ ತೊಡಗಿ ಮುಗ್ಧ ಜನತೆ ಮತ್ತು ಸರ್ಕಾರಕ್ಕೆ ಮೋಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಇನ್ನುಮುಂದೆ ನಗರ ಪ್ರದೇಶಗಳಲ್ಲಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡುವುದನ್ನು ತಡೆಗಟ್ಟಿ ಅಂಥ ಭೂಕಬಳಿಕೆದಾರರನ್ನು ತೀವ್ರ ಶಿಕ್ಷೆಗೆ ಗುರಿಪಡಿಸುವುದು ಅವಶ್ಯಕವಾಗಿದೆ.

ಅಧಿಕಾರಿಗಳು ಭೂ ಕಬಳಿಕೆದಾರರೊಡನೆ ಶಾಮೀಲಾಗುವುದನ್ನು ತಡೆಗಟ್ಟಿ, ಅಧಿಕಾರಿಗಳು ಅಂಥ ಚಟುವಟಿಕೆಗಳ ಬಗ್ಗೆ ತಿಳಿದಿದ್ದರೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿರುವ ಅಧಿಕಾರಿಗಳನ್ನು, ಒತ್ತುವರಿಗೆ ದುಷ್ಪ್ರೇರಣೆ ನೀಡುವ ಅಧಿಕಾರಿಗಳನ್ನು, ಖೋಟಾ ದಾಖಲೆಗಳನ್ನು ಸೃಷ್ಟಿಸುವ ಮತ್ತು ನಕಲಿ ರೆವಿನ್ಯೂ ದಾಖಲೆಗಳನ್ನು ಸೃಷ್ಟನೆ ಮಾಡುವ ಅಧಿಕಾರಿಗಳನ್ನು ಅಪರಾಧಿಗಳನ್ನಾಗಿ ಮಾಡಿ ಅವರನ್ನು ಅಭಿಯೋಜನೆಗೆ ಗುರಿಪಡಿಸಬೇಕು.

ಮೇಲ್ಕಂಡ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು "ಅಪರಾಧಗಳು ಮತ್ತು ದಂಡಗಳು" ಎಂಬ ಹೆಸರಿನ ಒಂದು ಹೊಸ ಅಧ್ಯಾಯವನ್ನು ಸೇರಿಸುವ ಮೂಲಕ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿ ಇಲ್ಲದೇ ಇದ್ದುದರಿಂದ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶ, 2006ನ್ನು (2006ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಮೇಲ್ಕಂಡ ಉದ್ದೇಶ ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲು ಈ ವಿಧೇಯಕವನ್ನು ಮಂಡಿಸಲಾಗಿದೆ.

**ಜಗದೀಶ್ ಶೆಟ್ಟರ್**
ಕಂದಾಯ ಸಚಿವರು

**ಎಸ್.ಬಿ. ಪಾಟೀಲ್**
ಅಪರ ಕಾರ್ಯದರ್ಶಿ

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು Sl.No. /DPAL-C7

ANNEX
ಅನುಬಂಧ - 3

**ಕರ್ನಾಟಕ ಸರ್ಕಾರ**
**(ಸಹಕಾರ ಇಲಾಖೆ)**
**ಸಹಕಾರ ಸಂಘಗಳ ಉಪನಿಬಂಧಕರು-2, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರ ಕಾರ್ಯಾಲಯ.**

ಸಂಖ್ಯೆ: ಡಿಆರ್‌ಬಿ-2/ಗೃಹ/13/2007-08. ದಿನಾಂಕ:04-06-2007.

ಇವರಿಗೆ,

ವಿಶೇಷ ಅಧಿಕಾರಿಗಳು,
ಜಂಟಿ ಸದನ ಸಮಿತಿ,
ಸರ್ಕಾರಿ ಜಮೀನು ಒತ್ತುವರಿ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು ಇದರಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ.

ಉಲ್ಲೇಖ: ತಮ್ಮ ಅಸಪ ಸಂಖ್ಯೆ:ಜಸಸ:ಕವಿಮ:ಸಿಆರ್:89:2006-07 02-06-2007.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ. ಬೆಂಗಳೂರು ಇದರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಿಗೆ ಹಂಚಿಕೆಯಾಗಿರುವ ನಿವೇಶನಗಳ ವಿವರಗಳನ್ನು ಸಂಘದಿಂದ ಪಡೆದು ಈ ಪತ್ರಕ್ಕೆ ಲಗತ್ತಿಸಿ, ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಕಾರ ಸಂಘಗಳ ಉಪ ನಿಬಂಧಕರು-2,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

# ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಉಚ್ಚ ನ್ಯಾಯಾಲಯ ಕಟ್ಟಡ, ಬೆಂಗಳೂರು-560 001
(ನೋಂದಣಿ ಸಂಖ್ಯೆ ಜೆ.ಆರ್.ಬ್ರಿ./ಆರ್.ಜಿ.ಎನ್./39/4916/83-84 ತಾ|| 11-8-1983)

ಸಂ. ಕ.ರಾ.ನ್ಯಾ.ಇ.ನೌ.ಗೃ.ನಿ.ಸ.ಸ./20/2007-08 ದಿನಾಂಕ :

ದಿನಾಂಕ : 04.06.2007

ಗೆ :

ಸಹಕಾರ ಸಂಘಗಳ ಉಪ ನಿಬಂಧಕರು -2
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು - 560003.

ಮಾನ್ಯರೆ

ವಿಷಯ : ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಇದರಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ.

ಉಲ್ಲೇಖ : ಶ್ರೀ ಕೆ.ನರಸಿಂಹಯ್ಯ, ವಿಶೇಷ ಅಧಿಕಾರಿ, ಜಂಟಿ ಸದನ ಸಮಿತಿ, ಸರ್ಕಾರಿ ಜಮೀನು ಒತ್ತುವರಿ ಇವರ ಅಸಪ ಸಂ.ಜಸಸ/ಕವಿಮ/ಸಿಆರ್/89/2006-07 ದಿನಾಂಕ : 03.06.2007.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ನಮ್ಮ ಸಂಘದಿಂದ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಹಂಚಿಕೆಯಾಗಿರುವ ನಿವೇಶನ ವಿವರಗಳ ಮಾಹಿತಿಯನ್ನು ಈ ಪತ್ರಕ್ಕೆ ಲಗತ್ತಿಸಿ ಸಲ್ಲಿಸಲಾಗಿದೆ.

| | |
|---|---|
| ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು | - 75 |
| ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಸರು | - 09 |
| ಒಟ್ಟು | - 84 |

ತಮ್ಮ ವಿಶ್ವಾಸಿ

for SECRETARY

# Karnataka State Judicial Department Employees House Building Co-operative Society

## Site allotted to the Hon'ble Judges

| Sl. No. | SLF No. | SDL No | Site No | Dimension | Name | Remarks |
|---|---|---|---|---|---|---|
| 01. | 1731 | 1773 | 1383 | 80x120 | Justice P.K.Shamasundar | High Court |
| 02. | 1385 | 1036 | 1384 | 80x120 | Justice D.P.Hiremath | High Court |
| 03. | 1518 | 1082 | 1387 | 80x120 | Justice M.M.Mirde | High Court |
| 04. | 1172 | 891 | 1401 | 80x120 | Justice A.B.Murgod | High Court |
| 05. | 355 | 917 | 1403 | 80x120 | Justice R.G.Desai | High Court |
| 06. | 830 | 1803 | 1407 | 80x120 | Justice P.A.Kulakarni | High Court |
| 07. | 897 | 640 | 1415 | 80x120 | Justice P.Jagannath Hegde | High Court |
| 08. | 598 | 41 | 1416 | 80x120 | Justice M.B.Vishwanath | High Court |
| 09. | 1471 | 1072 | 1419 | 80x120 | Justice M.P.Chinnappa | High Court |
| 10. | 823 | 1792 | 1421 | 80x120 | Justice M.S.Patil | High Court |
| 11. | 852 | 1793 | 1381 | 80x120 | Justice N.Venkatachala | Supreme court |
| 12. | 1918 | 1761 | 1389 | 80x120 | Justice S.Rajendra Babu | Supreme Court |
| 13. | 1960 | 1771 | 1399 | 80x120 | Justice Shivaraj Patil | Supreme Court |
| 14. | 849 | 1747 | 1408 | 80x120 | Justice D.R.Vittal Rao | High Court |
| 15. | 2404 | 1807 | 1417 | 80x120 | Justice C.Shivappa | High Court |
| 16. | 844 | 1859 | 1418 | 80x120 | Justice V.S.Malimath | High Court |
| 17. | 2342 | 1797 | 1382 | 80x120 | Justice K.Shivashankar Bhat | High Court |
| 18. | 2495 | 1851 | 1385 | 80x120 | Justice A.J.Sadashiva | High Court |
| 19. | 2341 | 1791 | 1388 | 80x120 | Justice S.A.Hakeem | High Court |
| 20. | 1835 | 1810 | 1390 | 80x120 | Justice K.A.Swamy | High Court |
| 21. | 2497 | 1847 | 1392 | 80x120 | Justice R.V.Ravindran | Supreme Court |
| 22. | 2494 | 1809 | 1394 | 80x120 | Justice D.M.Chandrashekar | High Court |
| 23. | 2514 | 1918 | 1395 | 80x120 | Justice Vishwanatha shetty | High Court |

| | | | | | | |
|---|---|---|---|---|---|---|
| 24. | 1959 | 1769 | 1402 | 80x120 | Justice Kedambadi Jagannat Shetty | High Court |
| 25. | 841 | 1774 | 1404 | 80x120 | Justice K.S.Puttaswamy | High Court |
| 26. | 2503 | 1919 | 1410 | 80x120 | Justice K.H.N.Kuranga | High Court |
| 27. | 1611 | 1802 | 1411 | 80x120 | Justice H.G.Balakrishna | High Court |
| 28. | 825 | 1775 | 1412 | 80x120 | Justice Doddakalegowda (Smt. Yeshodamma) | High Court |
| 29. | 821 | 1779 | 1413 | 80x120 | Justice K.Jagannatha shetty | Supreme Court |
| 30. | 2405 | 1777 | 1414 | 80x120 | Justice L.Srinivasa Reddy | High Court |
| 31. | 1878 | 1806 | 1420 | 80x120 | Justice G.P.Shivaprkash | High Court |
| 32. | 845 | 1788 | 1422 | 80x120 | Justice M.Ramajois | High Court |
| 33. | 1338 | 1789 | 1232 | 60x90 | Justice S.R.Venkateshmurthy | High Court |
| 34. | 2496 | 1830 | 1267 | 60x90 | Justice R.Ramakrishna | High Court |
| 35. | 1418 | 1081 | 1288 | 60x90 | Justice B.Padmaraj | High Court |
| 36. | 1477 | 1805 | 1356 | 60x90 | Justice N.D.Venkatesh | High Court |
| 37. | 217 | 1496 | 1470 | 60x90 | Justice R.G.Vidyanathan | High Court |
| 38. | 2038 | 1780 | 1471 | 60x90 | Justice S.Venkataraman | High Court |
| 39. | 1652 | 1243 | 1472 | 60x90 | Justice M.S.Rajendra Prasad | High Court |
| 40. | 1579 | 1353 | 1473 | 60x90 | Justice Manjula Challur | High Court |
| 41. | 1577 | 1141 | 1474 | 60x90 | Justice K.Bhakthavatsalam | High Court |
| 42. | 1088 | 934 | 1475 | 60x90 | Justice B.M.Mallikarjuna | High Court |
| 43. | 1400 | 1067 | 1476 | 60x90 | Justice H.N.Narayana | High Court |
| 44. | 914 | 772 | 1480 | 60x90 | Justice Md. Anwar | High Court |
| 45. | 2358 | 1893 | 859/A | 60x90 | Justice B.K.Somashekar | High Court |
| 46. | 1188 | 1032 | 1269 | 60x90 | Justice B.K.Sanglad | High Court |
| 47. | 2504 | 1836 | 1266 | 60x90 | Justice G.C.Bharuka | High Court |
| 48. | 2498 | 1852 | 1268 | 60x90 | Justice V.P.Mohan Kumar | High Court |
| 49. | 2500 | 1854 | 1270 | 60x90 | Justice P.Krishnamurthy | High Court |
| 50. | 2499 | 1839 | 1271 | 60x90 | Justice Kumara Raja Rathnam | High Court |
| 51. | 2501 | 1840 | 1272 | 60x90 | Justice J.Eshwara Prasad | High Court |
| 52. | 2502 | 1837 | 1273 | 60x90 | Justice T.S.Thakur | High Court |
| 53. | 61 | 1861 | 1295 | 60x90 | Justice M.N.Venkatachalaiah | Supreme Court |

1) 80x120 = 32
2) 60x90 = 31
3) 50x80 = 14
4) 40x60 = 7

Total 84

(1) SC: J = 8
(2) HC J = 76

84

| | | | | | | |
|---|---|---|---|---|---|---|
| 54. | 828 | 1595 | 1453 | 60x90 | Justice A.K.Laksheshwara | High Court |
| 55. | 124/A | 1948 | 1501 | 60x90 | Justice Balakrishna Herade | Supreme Court |
| 56. | 2512 | 1943 | 1253 | 60x90 | Justice Y.Bhaskar Rao | High Court |
| 57. | 2929 | 1992 | 1264 | 60x90 | Justice V.Gopala Gowda | High Court |
| 58. | 2513 | 1920 | 2118 | 60x90 | Justice V.K.Singal | High Court |
| 59. | 257/A | 2024 | 859/C | 60x90 | Justice S.R.Nayak | High Court |
| 60. | 2511 | 1877 | 859/D | 60x90 | Justice H.L.Dattu | High Court |
| 61. | 2518 | 1916 | 2118/A | 60x90 | Justice S.R.Bannurmath | High Court |
| 62. | 3000 | 2034 | 2118/B | 60x90 | Justice K.L.Manjunath | High Court |
| 63. | 2981 | 2030 | 2118/C | 60x90 | Justice A.V.Srinivasareddy | High Court |
| 64. | 1578 | 1245 | 1052 | 50x80 | Justice V.G.Sabahit | High Court |
| 65. | 819 | 591 | 1337 | 50x80 | Justice S.B.Majage | High Court |
| 66. | 899 | 1109 | 1342 | 50x80 | Justice G.Patri Basavanagowda | High Court |
| 67. | 820 | 1153 | 1886 | 50x80 | Justice G.N.Sabahit (Janaki) | High Court |
| 68. | 2500 | 1872 | 981/B | 50x80 | Justice Hulvadi G.Ramesh | High Court |
| 69 | 1924 | 1743 | 981/D | 50x80 | Justice K.Ramanna | High Court |
| 70 | 813 | 590 | 1296/8 | 50x80 | Justice K.Ramachanrdaiah | High Court |
| 71. | 2466 | 1768 | 863 | 50x80 | Justice B.N.Krishnan | High Court |
| 72. | | 1863 | 1296/ 11 | 50x80 | Justice Chandrashekaraiah | High Court |
| 73 | | 1000 | 861 | 50x80 | Justice S.Mohan | Supreme Court |
| 74 | | 1004 | 862 | 50x80 | Justice N.Y.Hanumanthappa | High Court |
| 75 | | 1725 | 864 | 50x80 | Justice S.R.Rajashekara Murthy | High Court |
| 76 | | 1801 | 858 | 50x80 | Justice M.Ramakrishna | High Court |
| 77. | | 2110 | 362/2 | 50x80 | Justice Chidananda Ullal | High Court |
| 78 | 623 | 27 | 1439 | 40x60 | Justice C.N.Ashwathanarayana Rao | High Court |
| 79. | 115/A | 1922 | 239/15 | 40x60 | Justice M.S.Nesargi | High Court |
| 80. | | 1939 | 2068 | 40x60 | Justice T.J.Chouta | High Court |
| 81. | | 1917 | 2070 | 40x60 | Justice G.T.Nanavathi | Supreme Court |
| 82 | | 1875 | 2094 | 40x60 | Justice R.V.Vasanthakumar | High Court |
| 83 | | 1956 | 2093 | 40x60 | Justice R.Gururajan | High Court |
| 84 | | 2025 | 1 | 40x60 | Justice P.V.Reddy | High Court |

BY
Kamataka State Judicial Department [illegible]
[illegible]

COURT NO.1 SECTION IVA

# SUPREME COURT OF INDIA
## RECORD OF PROCEEDINGS

-071751

Petition(s) for Special Leave to Appeal (Civil) No(s).5057/2007

(From the judgement and order dated 02/03/2007 in CCC No. 87/2004 & WP No. 40994/2002 of The HIGH COURT OF KARNATAKA AT BANGALORE)

KARNATKA STATE JUDL.DEP.E.H.B.COOP.STY. Petitioner(s)

VERSUS

JUDICIAL LAYOUT RES.& SITE HOL.ASSN.&ORS Respondent(s)

(With prayer for interim relief and office report )

Date: 11/05/2007 This Petition was called on for hearing today.

CORAM :
HON'BLE THE CHIEF JUSTICE
HON'BLE MR. JUSTICE H.S. BEDI

Certified to be true copy
Assistant Registrar (Judl.)
15.5.07
Supreme Court of India

For Petitioner(s) Mr.K.K.Venugopal, Sr.Adv.
Mr.T.R.Subbanna, Sr.Adv.
Mr.M.Shivappa, Adv.
Mr.Anil Kumar, Adv.
Mr. P.R. Ramasesh,Adv.

For Respondent(s)

UPON hearing counsel the Court made the following

**O R D E R**

Issue notice.

There shall be interim stay of the impugned order until further orders.

(G.V.Ramana)
Court Master

(Veera Verma)
Court Master

(As directed by Hon'ble CJI, not to be heard by Hon'ble Mr.Justice R.V.Raveendran)

SUPREME COURT OF INDIA
Certified copy

Matter No. UA(C) 5057/07
KSJ DEH BCS
VS
JLRSHA 20A

Brief Cause Title

SERIAL No. OF 1 A1-15551
No. of Folio(s):
Costs Including Certification
Fees [illegible]

Date of application for copy 12/5/07
Date of notifying requisite stamp
Date of delivery of requisite stamp 15/5/07
Date of which the copy was ready
Date of delivery to the copy

[illegible] 15/5
Section Officer
Supreme Court of India

15/5/07

Law 626 Opn 2006 Law Department(Opinion),
RD 109 MuAaBee 2006 Date: 3.01.2007.

23) In Union of India Vs K.K. Dhawan (1993(2) SCC 56), Hon'ble Supreme Court has held that disciplinary action can be taken against an officer who acts negligently or recklessly or in order to confer undue favour on a person while exercising judicial or quasi judicial powers in the following cases:

vii) Where the officer had acted in a manner as would reflect on his reputation for integrity or good faith or devotion to duty;

viii) If there is prime facie material to show recklessness or misconduct in the discharge of his duty;

ix) If he has acted in a manner which is unbecoming of a government servant;

x) If he had acted negligently or that he omitted the prescribed conditions which are essential for the exercise of statutory powers

xi) If he had acted in order to unduly favour a party

xii) If he had been actuated by corrupt motive, however small the bribe may be

24) The omissions/commissions of an officer while passing an order in a quasi-judicial capacity can be investigated by the police in a criminal case, only if such criminal case is initiated by the State Government. Further, such a criminal case can be instituted provided there are reasonable grounds for believing that such officer has committed an offence warranting institution of such criminal case.

**(Approved by Law Secretary)**

Sd/-

**Addl. Law Secretary (Opinion).**

**(G.S.REVANKAR)**
**Deputy Secretary to Government (Opn. 1),**
**Department of Law, Justice & Human Rights.**

ಅನುಬಂಧ - 5

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ - 2006

ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in

ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ: 26.12.2006

ಮಾನ್ಯರೆ,

ವಿಷಯ: ಬೆಂಗಳೂರು ನಗರದ ವಾರ್ಡ್ ಸಂಖ್ಯೆ:36ರ ಗೋವಿಂದರಾಜನಗರದ ಬಡಾವಣೆಯಲ್ಲಿರುವ ಸಿ.ಎ. ನಿವೇಶನ/ಪಾರ್ಕ್ ಬಗ್ಗೆ

ವಿಷಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ಸ್ಥಳದಲ್ಲಿ 280/81 ಅಡಿ ಅಳತೆಯ ಸಿ.ಎ. ನಿವೇಶನ/ಪಾರ್ಕ್ ಇದ್ದುದನ್ನು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ದಿನಾಂಕ : 01.10.1969ರಂದು ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಹಸ್ತಾಂತರಿಸಿರುವುದಕ್ಕೆ ಅವರ ಪತ್ರ ದಿನಾಂಕ: 02.12.2006ರಂದು ತಿಳಿಸಿರುತ್ತಾರೆ. ಆದರೆ, ಬೆಂಗಳೂರು ಮಹಾನಗರ ಪಾಲಿಕೆಯವರು ಸದರಿ ಬಡಾವಣೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಹಿಂದಿನ ಸಿ.ಐ.ಟಿ.ಬಿ.) ವತಿಯಿಂದ ತೆಗೆದುಕೊಂಡು, ಈ ನಿವೇಶನವನ್ನು ಸಿ.ಎ. ನಿವೇಶನ 11 ಎಂದು ಗುರುತಿಸಲಾಗಿದೆ ಮತ್ತು ಈ ಸಿ.ಎ. ನಿವೇಶನವನ್ನು ಅಧಿಕೃತವಾಗಿ ಯಾವ ಉದ್ದೇಶ ಅಥವಾ ಉಪಯೋಗಕ್ಕಾಗಿ ಕಾಯ್ದಿರಿಸಲಾಗಿದೆ ಹಾಗೂ ಈ ನಿವೇಶನದ ನಿಖರ ಅಳತೆ ಹಾಗೂ ಚೆಕ್ಕುಬಂದಿ ಏನು ಎಂಬ ವಿವರವನ್ನು ಒದಗಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ದಿನಾಂಕ : 29.11.2006ರಂದು ತಿಳಿಸಿರುತ್ತಾರೆ.

ಮೇಲ್ಕಂಡ ಸಿ.ಎ. ನಿವೇಶನ/ಪಾರ್ಕ್ ಸ್ಥಳವು ಒತ್ತುವರಿಯಾಗಿರುತ್ತದೆ. ಈ ಹಿಂದೆ ಒತ್ತುವರಿಯಾಗಿರುವ ವಿವರಗಳನ್ನು ಒದಗಿಸುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಸಮಿತಿಯು ಸೂಚಿಸಿತ್ತು. ಆದರೆ ಮೇಲ್ಕಂಡ ಸ್ಥಳದ ಒತ್ತುವರಿಯ ಬಗ್ಗೆ ಎರಡು ಶಾಸನಾತ್ಮಕ ಸಂಸ್ಥೆಗಳು ಒತ್ತುವರಿಯ ಮಾಹಿತಿಯನ್ನು ಒದಗಿಸುವಲ್ಲಿ ವಿಫಲವಾಗಿರುತ್ತವೆ. ಸಮಿತಿಗೆ ಬಂದ ಮಾಹಿತಿಯನ್ವಯ ಸಮಿತಿಯು ವಿವರವನ್ನು ಕೋರಿದ್ದರ ಹಿನ್ನೆಲೆಯಲ್ಲಿ ಮೇಲ್ಕಂಡ ಎರಡೂ ಸಂಸ್ಥೆಗಳು ಜವಾಬ್ದಾರಿಕೆಯನ್ನು ಒಬ್ಬರ ಮೇಲೊಬ್ಬರು ಹಾಕಿ ಭೂ ಕಬಳಿಕೆಗೆ ಅವಕಾಶ ಮಾಡಿಕೊಟ್ಟಿರುವುದು ತುಂಬ ವಿಷಾದನೀಯ. ಇದೊಂದು ಉದಾಹರಣೆ ಮಾತ್ರ. ಇಂತಹ ಎಷ್ಟೋ ಸ್ಥಳಗಳು ಒತ್ತುವರಿಯಾಗಿ ಸಮಿತಿಯ ಗಮನಕ್ಕೆ ಬಾರದಿರುವ ಸಂದರ್ಭಗಳು ಹಲವಾರು ಇರಬಹುದು.

ಆದುದರಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯವರು ಅವರುಗಳ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಸ್ಥಳಗಳ ಒತ್ತುವರಿಯ ಬಗ್ಗೆ ಜಂಟಿ ತಪಾಸಣೆ ಮಾಡಿ ಇನ್ನು 15 ದಿನಗಳಲ್ಲಿ ಒತ್ತುವರಿಯ ವಿವರವಾದ ವರದಿಯನ್ನು ಕೊಡುವಂತೆ ಮೇಲ್ಕಂಡ ಎರಡೂ ಸಂಸ್ಥೆಗಳಿಗೂ ಸೂಕ್ತ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ. ರಾಮಸ್ವಾಮಿ)
ಅಧ್ಯಕ್ಷರು

ಶ್ರೀಮತಿ ಲಕ್ಷ್ಮೀ ವೆಂಕಟಾಚಲಮ್,
ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಕರ್ನಾಟಕ ಸರ್ಕಾರ,
ವಿಕಾಸ ಸೌಧ,
ಬೆಂಗಳೂರು 560 001.

ಯಥಾ ನಕಲನ್ನು:

1. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸರಿಯಾದ ಮಾಹಿತಿಯನ್ನು ಒದಗಿಸುವಂತೆ ಸಂಬಂಧಿಸಿದವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಕಳುಹಿಸಲಾಗಿದೆ.

(ಎ.ಟಿ. ರಾಮಸ್ವಾಮಿ)
ಅಧ್ಯಕ್ಷರು

ಸುವರ್ಣ ಕರ್ನಾಟಕ - ೨೦೦೬

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ಸಂಖ್ಯೆ: ಕವಿಮ/ಜಂಸಸ/ /2006

ದಿನಾಂಕ 27.12.2006

ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಕರ್ನಾಟಕ ಗೃಹ ಮಂಡಳಿಗೆ ಸೇರಿದ ಸ್ಥಳಗಳ ಒತ್ತುವರಿ ಬಗ್ಗೆ.

***

ವಿಷಯಕ್ಕೆ ಸಂಬಂಧಿಸಿದಂತೆ ಜಂಟಿ ಸದನ ಸಮಿತಿಯು ದಿನಾಂಕ 27.12.2006ರ ಬುಧವಾರದಂದು ಕರ್ನಾಟಕ ಗೃಹ ಮಂಡಳಿಗೆ ಸೇರಿದ ಬೆಂಗಳೂರು ನಗರದಲ್ಲಿರುವ ಅಳ್ಳಾಳಸಂದ್ರ ಗ್ರಾಮದ ಒತ್ತುವರಿ ಸ್ಥಳಗಳನ್ನು ಖುದ್ದು ಭೇಟಿ ನೀಡಿ ಪರಿಶೀಲಿಸಿರುತ್ತದೆ. ಅಳ್ಳಾಳಸಂದ್ರ ಗ್ರಾಮದ ಸರ್ವೆ ಸಂ. 34 ರಲ್ಲಿ 52,816 ಚದರ ಅಡಿ ಪ್ರದೇಶವು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದು, ಹಾಲಿ ನ್ಯಾಯಾಲಯದಲ್ಲಿ ಯಾವುದೇ ವ್ಯಾಜ್ಯಗಳು ಸಹ ಇರುವುದಿಲ್ಲ. ಸದರಿ ಸ್ಥಳವು ಮುಖ್ಯ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ಅತ್ಯಂತ ಬೆಲೆ ಬಾಳುವ ಸ್ಥಳವಾಗಿರುತ್ತದೆ.

ಅಳ್ಳಾಳಸಂದ್ರ ಗ್ರಾಮದ ಸರ್ವೆ ನಂ. 63, 64/1 ರಲ್ಲಿ 3,21,259 ಚದರ ಅಡಿ ಪ್ರದೇಶವಿದ್ದು, ಸದರಿ ಪ್ರದೇಶದಲ್ಲಿ ಚಿಕ್ಕ-ಪುಟ್ಟ ಬಹುತೇಕ ಒಂದೇ ರೀತಿಯ ಶೀಟಿನ ಮನೆಗಳು ಇದ್ದು, ಸದರಿ ಪ್ರದೇಶವು ಒಂದೇ ಕಡೆ ಇರುತ್ತದೆ.

ಅದೇ ಗ್ರಾಮದ ಸರ್ವೆ ನಂ. 4/2 ಮತ್ತು 4/3 ರಲ್ಲಿ 14,157 ಚದರ ಅಡಿ ಪ್ರದೇಶವನ್ನು ಜನಪ್ರಿಯ ಅಪಾರ್ಟ್‌ಮೆಂಟ್‌ನವರು ಒತ್ತುವರಿ ಮಾಡಿಕೊಂಡಿದ್ದು, ಸದರಿ ಪ್ರಕರಣವು ದಿನಾಂಕ 11.02.2003 ರಂದು ನ್ಯಾಯಾಲಯದಲ್ಲಿ ಇತ್ಯರ್ಥವಾಗಿದ್ದು, ಒತ್ತುವರಿದಾರರ ಮನವಿಯನ್ನು ನಿಯಮಾನುಸಾರ ಪರಿಗಣಿಸುವಂತೆ ನ್ಯಾಯಾಲಯದಲ್ಲಿ ಕರ್ನಾಟಕ ಗೃಹ ಮಂಡಳಿ ಆಯುಕ್ತರಿಗೆ ನಿರ್ದೇಶನ ನೀಡಿದೆ.

ಅಳ್ಳಾಳಸಂದ್ರ ಗ್ರಾಮದ ಸರ್ವೆ ನಂ. 34, 63, ಮತ್ತು 64/1ರ ಒತ್ತುವರಿಯನ್ನು ತೆರವುಗೊಳಿಸಲು ಯಾವುದೇ ತೊಡಕು ಇಲ್ಲದಿದ್ದರೂ ಸಹ, ಒತ್ತುವರಿಯನ್ನು ತೆರವುಗೊಳಿಸಲು ಮತ್ತು ಮಂಡಳಿಯ ಆಸ್ತಿಯನ್ನು ಸಂರಕ್ಷಿಸಲು ಕ್ರಮಕ್ಕೈಗೊಂಡಿರುವುದಿಲ್ಲ. ಕೂಡಲೇ ಒತ್ತುವರಿ

ಪು.ತಿ.ನೋ.

ತೆರವುಗೊಳಿಸಲು ಕ್ರಮಕೈಗೊಳ್ಳುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ. ಇಲ್ಲದಿದ್ದಲ್ಲಿ ಒತ್ತುವರಿದಾರರು ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುವಲ್ಲಿ ಪ್ರಯತ್ನಗಳನ್ನು ಮುಂದುವರೆಸುವ ಸಾಧ್ಯತೆಗಳಿರುತ್ತವೆ.

ಸರ್ವೆ ನಂ. 4/2 ಮತ್ತು 4/3 ರಲ್ಲಿ ಆಗಿರುವ ಒತ್ತುವರಿಯನ್ನು ಕರ್ನಾಟಕ ಗೃಹ ಮಂಡಳಿಯು ನಿಯಮಾನುಸಾರ ಪರಿಶೀಲಿಸುವಂತೆ ದಿನಾಂಕ 11.02.2003 ರಲ್ಲಿಯೇ ನಿರ್ದೇಶನ ನೀಡಿದ್ದರೂ ಸಹ ಮಂಡಳಿಯು ಇನ್ನೂ ಕ್ರಮಕೈಗೊಳ್ಳದಿರುವ ಬಗ್ಗೆ ಸಮಿತಿಯು ವಿಷಾಧಿಸುತ್ತದೆ.

ಆದುದರಿಂದ ಮೇಲೆ ಪ್ರಸ್ತಾಪಿಸಿರುವ ಒತ್ತುವರಿಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

ಪ್ರತಿ:

1. ಗೌರವಾನ್ವಿತ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001-ಇವರಿಗೆ ಮಾಹಿತಿಗಾಗಿ.
2. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಗೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001-ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು-ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

(ಎ.ಟಿ.ರಾಮಸ್ವಾಮಿ)

ಸುವರ್ಣ ಕರ್ನಾಟಕ - ೨೦೦೬

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ: 10.01.2007

ಮಾನ್ಯಶ್ರೀ ಜಾಮ್‌ದಾರ್‌ರವರೆ,

ವಿಷಯ: ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವಾಗ ಸರ್ಕಾರವನ್ನು ವಂಚಿಸಿ ಬೊಕ್ಕಸಕ್ಕೆ ಅತೀವ ನಷ್ಟ ಉಂಟು ಮಾಡುತ್ತಿರುವ ಬಗ್ಗೆ.

* * *

ಸಮಿತಿಯು ಬೆಂಗಳೂರು ನಗರ ಹಾಗೂ ನಗರ ಜಿಲ್ಲೆಯ ವಿವಿಧ ಭಾಗಗಳಿಗೆ ಭೇಟಿಯಿತ್ತು ನಾನಾ ಇಲಾಖೆಗಳಿಗೆ ಸೇರಿದ ಭೂ ವ್ಯವಹಾರ ಹಾಗೂ ಬಳಕೆಯ ಬಗ್ಗೆ ಪರಿಶೀಲನೆ ನಡೆಸಿದೆ. ಈ ಸಂದರ್ಭದಲ್ಲಿ ಮತ್ತೊಂದು ಆತಂಕ ಹಾಗೂ ಆಘಾತಕಾರಿ ಅಂಶವನ್ನು ಗಮನಿಸಿದೆ.

ನಗರ ಅಥವಾ ಪಟ್ಟಣಗಳಲ್ಲಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಉಪಯೋಗಿಸುವ ಮುನ್ನ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಪಟ್ಟ ಪ್ರಾಧಿಕಾರದಿಂದ ಭೂ ಪರಿವರ್ತನೆ ಅಥವಾ ಅನ್ಯಕ್ರಾಂತ ಆದೇಶ ಪಡೆಯಬೇಕೆಂಬುದು ಸರ್ವವೇದ್ಯವಾದ ಅಂಶ. ಈ ರೀತಿ ಆದೇಶ ಪಡೆಯಬೇಕಾದರೆ ತನ್ನ ಹಕ್ಕನ್ನು ಸಾಬೀತು ಪಡಿಸಲು ಅರ್ಜಿದಾರ ಬಹು ಪ್ರಾಮುಖ್ಯವಾದ ಹಲವಾರು ದಾಖಲೆಗಳನ್ನು ಒದಗಿಸುವುದರ ಜೊತೆಗೆ ಸರ್ಕಾರಕ್ಕೆ ಶುಲ್ಕ ಹಾಗೂ ತೆರಿಗೆ ಪಾವತಿ ಮಾಡಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಭೂ ಪರಿವರ್ತನೆ ಆದೇಶ ಪಡೆಯದೆ ಅಥವಾ ಅನಿವೇಶನ ಗ್ರಾಮಠಾಣವೆಂದೋ ಖಾನೇಶುಮಾರಿ ಅಥವಾ ಮುನಿಸಿಪಾಲಿಟಿ ನಂಬರು ಸೃಷ್ಟಿಸುವುದು ಇಲ್ಲವೆ ನೋಂದಣಿ ಸಮಯದಲ್ಲಿ ಫಾರಂ ನಂ. 9 ಅಥವಾ 10ನ್ನು ಸುಳ್ಳು ದಾಖಲೆಯಾಗಿ ಒದಗಿಸಿ ಜಾರಿಯಲ್ಲಿರುವ ಎಲ್ಲಾ ನಿಯಮ ಪದ್ಧತಿಗಳಿಗೂ ತಿಲಾಂಜಲಿ ಇತ್ತು ಸರ್ಕಾರವನ್ನು ವಂಚಿಸುವುದಲ್ಲದೆ ಬೊಕ್ಕಸಕ್ಕೆ ಸಾವಿರಾರು ಕೋಟಿ ಆದಾಯವನ್ನು ನಷ್ಟ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಬೆಂಗಳೂರು ನಗರ ಹಾಗೂ ನಗರಜಿಲ್ಲೆ ವ್ಯಾಪ್ತಿಯಲ್ಲಿ ಅನೇಕ ಬಡಾವಣೆಗಳು, ಕೈಗಾರಿಕಾ ಕೇಂದ್ರಗಳು, ವ್ಯಾಪಾರಿ ಮಳಿಗೆಗಳು, ವಸತಿಗೃಹಗಳು ಇತರೆ ಕಟ್ಟಡಗಳ ಮಾಲೀಕರು ಇಂತಹ ಅವ್ಯವಹಾರದಲ್ಲಿ ತೊಡಗಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂ.ಗಳ ವಂಚನೆ ಎಸಗಿರುವುದನ್ನು ಗಮನಿಸಬಹುದಾಗಿದೆ.

ಈ ಕಾರಣ ಬೆಂಗಳೂರು ನಗರ ಹಾಗೂ ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದ ಸಮೀಕ್ಷೆ ನಡೆಸಿ ಇಂತಹ ಅವ್ಯವಹಾರಗಳನ್ನು ಪತ್ತೆ ಹಚ್ಚಿ ಇದರಲ್ಲಿ ಶಾಮೀಲಾಗಿರುವ ವ್ಯಕ್ತಿಗಳ ವಿವರ ತಿಳಿಸುವುದರ ಜೊತೆಗೆ ಸರ್ಕಾರಕ್ಕೆ ಆಗಿರುವ ಆರ್ಥಿಕ ಹಾನಿ, ಒಟ್ಟು ವಿಸ್ತೀರ್ಣ, ಇದನ್ನು ಸರಿಪಡಿಸುವ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆಯೂ ಒಂದು ಸ್ಪಷ್ಟ ವರದಿ ನೀಡಬೇಕಾಗಿ ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-

ಡಾ: ಎಸ್.ಎಂ.ಜಾಮ್‌ದಾರ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಪ್ರತಿಗಳು:-

1. ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿ.ಖಾ ಸಮಿತಿ)

ಸುವರ್ಣ ಕರ್ನಾಟಕ - ೨೦೦೭
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ 10.01.2007

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು-560 001.

ಮಾನ್ಯರೆ,

ಜಂಟಿ ಸದನ ಸಮಿತಿಯು ದಿನಾಂಕ 10.01.2007 ರಂದು ವಿವಿಧ ಸ್ಥಳಗಳಿಗೆ ಭೇಟಿ ಕೊಟ್ಟು ಪರಿಶೀಲಿಸಿದ ವೇಳೆಯಲ್ಲಿ ಈ ಕೆಳಕಂಡ ನ್ಯೂನತೆಗಳನ್ನು ಗಮನಿಸಿರುತ್ತದೆ.

ಸರ್ಕಾರಿ ಕೆರೆ, ಗೋಮಾಳ ಮತ್ತಿತರ ಸರ್ಕಾರದ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವುದಾಗಿ ಇನಾಂ ರದ್ದಿಯಾತಿ ಕಾಯ್ದೆಯಡಿಯಲ್ಲಿ ಮಂಜೂರು ಮಾಡಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಉದಾಹರಣೆಗೆ ಬಾಣಸವಾಡಿ ಕೆರೆಯು ಇನ್ನೂ ಅಸ್ತಿತ್ವದಲ್ಲಿದ್ದು, ಯಾರು ಸಾಗುವಳಿ ಮಾಡದಿದ್ದರೂ ಮೇಲ್ಕಂಡ ಕಾಯ್ದೆಯಡಿಯಲ್ಲಿ ಮಂಜೂರು ಮಾಡಿರುವುದು ತುಂಬಾ ಆಶ್ಚರ್ಯಕರವಾಗಿರುತ್ತದೆ ಹಾಗೂ ಇದೊಂದು ನಿದರ್ಶನವಾಗಿರುತ್ತದೆ. ಸದರಿ ಮಂಜೂರಾತಿಯಲ್ಲಿ ದಾಖಲೆಗಳನ್ನು ಸೃಷ್ಟಿಸಿರುವ ಶಂಕೆಯಿರುತ್ತದೆ. ಇಂತಹ ಎಷ್ಟೋ ಪ್ರಕರಣಗಳು ಇರುವುದಾಗಿ ಸಮಿತಿಯು ಅಭಿಪ್ರಾಯಪಡುತ್ತದೆ.

ಆದುದರಿಂದ ಮೇಲ್ಕಂಡ ಕಾಯ್ದೆಯಡಿಯಲ್ಲಿ ಮಂಜೂರಾಗಿರುವ ಪ್ರಕರಣಗಳ ನೈಜತೆ ಬಗ್ಗೆ ಪರಿಶೀಲಿಸಿ ದೃಢೀಕರಿಸುವ ಅವಶ್ಯಕತೆ ಬಹಳವಾಗಿ ಇರುತ್ತದೆ. ಇದರಲ್ಲಿ ನಕಲಿ ದಾಖಲೆಗಳ ಮೂಲಕ ಅತ್ಯಂತ ಬೆಲೆ ಬಾಳುವ ಸರ್ಕಾರಿ ಸ್ಥಳವನ್ನು ಕಬಳಿಸುವುದು ಕಂಡುಬಂದಿರುವುದರಿಂದ, ತುರ್ತಾಗಿ ಪರಿಶೀಲಿಸಿ ಕ್ರಮತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

ಪ್ರತಿಗಳು:-

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ,ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಸನ್ಮಾನ್ಯ ಸಭಾಧ್ಯಕ್ಷರವರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಸನ್ಮಾನ್ಯ ಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ - ೨೦೦೬

ದೂರವಾಣಿ : ಕಛೇರಿ : 2225070
ಫ್ಯಾಕ್ಸ್ : 2225830
E-mail : atramaswamyjc@yahoo.co.i
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ ೧೦.೦೧.೨೦೦೬
2002

ಮಾನ್ಯರೇ,

ವಿಷಯ: ಬಿ.ಡಿ.ಎ. ನಿರ್ಮಿಸುವ ಬಡಾವಣೆಗಳಿಗೆ ಸರ್ಕಾರಿ ಜಮೀನುಗಳನ್ನು ಭೂ ಸ್ವಾಧೀನಪಡಿಸಿಕೊಂಡು ಖಾಸಗಿಯವರಿಗೆ ಪರಹಾರ ನೀಡಿರುವ ಬಗ್ಗೆ.

---

ವಿವಿಧ ಇಲಾಖೆಗಳಿಂದ ಸಂಗ್ರಹಿಸಿದ ಮಾಹಿತಿಗಳನ್ನು ಜಂಟಿ ಸದನ ಸಮಿತಿಯು ಪರಿಶೀಲಿಸುವ ಸಂದರ್ಭದಲ್ಲಿ ಹಲವು ಬಹು ಪ್ರಾಮುಖ್ಯವಾದ ಹಾಗೂ ನಿಯಮಬಾಹಿರವಾದ ಕ್ರಮಗಳು ಸಮಿತಿಯ ಗಮನಕ್ಕೆ ಬಂದಿವೆ. ಇವುಗಳಲ್ಲಿ ಮುಖ್ಯವಾದುದೆಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತನ್ನ ವತಿಯಿಂದ ಬಡಾವಣೆಗಳನ್ನು ನಿರ್ಮಿಸುವುದಕ್ಕಾಗಿ ಜಮೀನು ಭೂಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಹಲವಾರು ಸರ್ಕಾರಿ ಜಮೀನುಗಳನ್ನೂ ಸಹ ಸ್ವಾಧೀನಪಡಿಸಿಕೊಂಡಿದೆ. ನಿಯಮಗಳ ಪ್ರಕಾರ ಸರ್ಕಾರಿ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯಡಿ ಸ್ವಾಧೀನಪಡಿಸಿಕೊಳ್ಳಲು ಬರುವುದಿಲ್ಲ. ಹಾಗೆ ಪಡೆಯಬೇಕಾದಲ್ಲಿ ಸರ್ಕಾರದಿಂದ ಅಥವಾ ಸಂಬಂಧಪಟ್ಟ ಇಲಾಖೆಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಿಕೊಳ್ಳಬಹುದಾಗಿರುತ್ತದೆ. .ಇಷ್ಟು ಮಾತ್ರವಲ್ಲದೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಿ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯಡಿ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಂಡಿರುವುದು ಮಾತ್ರವಲ್ಲದೆ ಇಂತಹ ಜಮೀನುಗಳಿಗೆ ಮಾಲೀಕತ್ವವನ್ನು ಪರಿಶೀಲಿಸದೆ. ಖಾಸಗಿ ವ್ಯಕ್ತಿಗಳಿಗೆ ಪರಿಹಾರ ಧನವನ್ನು ನೀಡಿರುವುದು ಸಮಿತಿಯ ಗಮನಕ್ಕೆ ಬಂದಿದೆ.

ಉದಾಹರಣೆಗಾಗಿ ದೊಡ್ಡತೋಗೂರು ಗ್ರಾಮ, ಬೇಗೂರು ಹೋಬಳಿ ಸರ್ವೆ ನಂ.೬೮, ೬೭ ಈ ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, ಸುಮಾರು ೨೫ ವರ್ಷಗಳ ಹಿಂದೆ ಭೂಸ್ವಾಧೀನವಾಗಿದ್ದು, ಇತ್ತೀಚೆಗೆ ಖಾಸಗಿ ವ್ಯಕ್ತಿಗಳಿಗೆ ಪರಿಹಾರ ಹಣವನ್ನು ನೀಡಲಾಗಿದೆ ಎಂದು ತಿಳಿದು ಬಂದಿದೆ.

ಅಲ್ಲದೆ, ಹುರಹಳ್ಳಿ ಸರ್ವೆ ನಂ.೮ ಸರ್ಕಾರಿ ಕಿರು ಅರಣ್ಯ ಪ್ರದೇಶವಾಗಿದ್ದು, ಇದರಲ್ಲಿಯೂ ಸಹ ಸುಮಾರು ೪ ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಖಾಸಗಿ ವ್ಯಕ್ತಿಗಳ ಪರ ಐತೀರ್ಪು ನೀಡಲಾಗಿದೆ.

ವಿವಿಧ ಶಾಸನಾತ್ಮಕ ಸಂಸ್ಥೆಗಳಲ್ಲಿಯೂ ಸಹ ಇಂತಹ ಇನ್ನೂ ಅನೇಕ ಪ್ರಕರಣಗಳಿರಬಹುದೆಂದು ತಿಳಿದುಬಂದಿದೆ. ಈ ಕಾರಣ ತಾವು ಎಲ್ಲಾ ಭೂಸ್ವಾಧೀನ ಪ್ರಕರಣಗಳನ್ನು ಪರಿಶೀಲಿಸಿ ಅಂತಹ ಪ್ರಕರಣದಲ್ಲಿ ಸೇರಿದ್ದರೆ, ಅವುಗಳ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ತಕ್ಷಣವೇ ವರದಿ ಮಾಡಲು ಕೋರಿದೆ.

ತಮ್ಮ ವಿಶ್ವಾಸಿ,

ಸಹಿ/-
(ಎ.ಟಿ. ರಾಮಸ್ವಾಮಿ)

ಶ್ರೀ ಕೆ.ಎಂ.ಶಂಕರಲಿಂಗೇಗೌಡ, ಐ.ಎ.ಎಸ್.,
ಆಯುಕ್ತರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಪ್ರತಿಗಳು:-

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ,ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಸನ್ಮಾನ್ಯ ಸಭಾಧ್ಯಕ್ಷರವರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001, ಇವರಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಸನ್ಮಾನ್ಯ ಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಸುವರ್ಣ ಕರ್ನಾಟಕ – ೨೦೦೬

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು ಒತ್ತುವರಿ ಸಮಗ್ರ ತನಿಖಾ ಸಮಿತಿ)

ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ: 10.01.2007

ಗೆ,
ಆಯುಕ್ತರು,
ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್.ವೃತ್ತ,
ಬೆಂಗಳೂರು.

ಮಾನ್ಯರೆ,

ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ವಾರ್ಡ್ ನಂ. 85ರ ಬಿನ್ನಮಂಗಲ ಮನವರ್ತೆ ಕಾವಲಿಗೆ ಸೇರಿದ ಬೈಯಪ್ಪನ ಹಳ್ಳಿ ಬಡಾವಣೆಯಲ್ಲಿ ಪುರವಂಕರ ಪ್ರಾಜೆಕ್ಟ್‌ನವರು ಅಪಾರ್ಟ್‌ಮೆಂಟ್ ನಿರ್ಮಿಸುವ ಸಲುವಾಗಿ ಯೋಜನೆ ಮಂಜೂರಾತಿಯಾಗಿರುವ ಸ್ಥಳ ಪರಿಶೀಲನೆಯನ್ನು ಸಮಿತಿಯು ದಿನಾಂಕ 10.01.2007ರಂದು ಮಾಡಿರುತ್ತದೆ. 1975ರಲ್ಲಿ ಸದರಿ ಬಡಾವಣೆ ಯೋಜನೆಯು ಮಂಜೂರಾತಿಯಾಗಿರುವುದಾಗಿ ತಿಳಿದುಬಂದಿರುತ್ತದೆ. ಆದರೆ ನಮ್ಮ ಸ್ಥಳ ಪರಿಶೀಲನೆ ವೇಳೆಯಲ್ಲಿ ಗಮನಿಸಿದ ನ್ಯೂನತೆಗಳು ಈ ಕೆಳಕಂಡಂತೆ ಇರುತ್ತವೆ.

ಬಡಾವಣೆ ಯೋಜನೆಯ ನಕ್ಷೆಗೆ ಅನುಗುಣವಾಗಿ ಅಪಾರ್ಟ್‌ಮೆಂಟ್ ನಿರ್ಮಿಸಲು ಯೋಜನೆ ಮಂಜೂರಾಗಿರುವುದಿಲ್ಲ.

ಬಡಾವಣೆ ಯೋಜನೆಯಲ್ಲಿರುವ ಸಿ.ಎ. ನಿವೇಶನ, ರಸ್ತೆಗಳೆಲ್ಲವನ್ನು ಸೇರಿಸಿ ಅಪಾರ್ಟ್‌ಮೆಂಟ್ ನಿರ್ಮಿಸಲು ಯೋಜನೆಗೆ ಅನುಮತಿ ನೀಡಿರುವುದು ಕಂಡು ಬಂದಿರುತ್ತದೆ.

ಭೂ ಪರಿವರ್ತನೆಯ ಆದೇಶವು ನಕಲಿಯಾಗಿರಬಹುದೆಂದು ಶಂಕಿಸಲಾಗಿದೆ.

ಸಾರ್ವಜನಿಕರ ಉಪಯೋಗಕ್ಕಿದ್ದ ರಸ್ತೆಯನ್ನು ಸೇರಿಸಿ, ಕಾಂಪೌಂಡ್ ನಿರ್ಮಿಸಲಾಗುತ್ತಿದೆ.

ಸಮಿತಿಯು ಸ್ಥಳ ಪರಿಶೀಲನಾ ವೇಳೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಿ ಅಪಾರ್ಟ್‌ಮೆಂಟ್ ನಿರ್ಮಿಸುವ ಯೋಜನೆ ಮಂಜೂರಾತಿ ಬಗ್ಗೆ, ಸಾರ್ವಜನಿಕರ ಅನುಕೂಲದ ರಸ್ತೆ ಮತ್ತು ಸಿ.ಎ. ನಿವೇಶನ ಕಬಳಿಸುತ್ತಿರುವ ಬಗ್ಗೆ ಪ್ರತಿಭಟಿಸುತ್ತಿರುವುದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಿರುತ್ತದೆ.

ಆದುದರಿಂದ , ಕೂಡಲೇ ಮೇಲ್ಕಂಡ ಅಂಶಗಳ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

ಪ್ರತಿಗಳು:-

1. ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಸುವರ್ಣ ಕರ್ನಾಟಕ – ೨೦೦೬

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ಸಂಖ್ಯೆ: ಕವಿಮು/ಜಂಸಸ/ /2006

ದಿನಾಂಕ 16.01.2007

ಶ್ರೀ ಜಾಮ್‌ದಾರ್‌ರವರು,ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು-560 001.

ಮಾನ್ಯರೆ,

ಭೂಸುಧಾರಣೆ ಕಾಯ್ದೆ ಕಲಂ. 79(ಎ), 79(ಬಿ) ಮತ್ತು 109ರ ಸರ್ಕಾರಿ ಕಾಯ್ದೆಗಳನ್ನು ಉಲ್ಲಂಘಿಸಿರುವ ಬಗ್ಗೆ ಸಮಿತಿಯು ಚರ್ಚಿಸಿರುತ್ತದೆ. ಹಲವಾರು ಸಂದರ್ಭಗಳಲ್ಲಿ ಭೂಸುಧಾರಣೆ ಕಾಯ್ದೆ ಕಲಂ. 79(ಎ)ನ್ನು ಉಲ್ಲಂಘಿಸಿ, ಬೇನಾಮಿ ಹೆಸರುಗಳಲ್ಲಿ ವ್ಯವಹರಿಸಿರುವ ಸಂದರ್ಭಗಳಿರುವುದಾಗಿ ತಿಳಿದುಬಂದಿರುತ್ತದೆ. ಅಂತಹ ಬೇನಾಮಿ ವ್ಯಕ್ತಿಗಳಿಗೆ ಭೂಮಿ ಹೊಂದಲು ಅವರ ಆದಾಯದ ಮೂಲ, ವಿಳಾಸ ಮತ್ತಿತರ ವಿವರಗಳನ್ನು ಒದಗಿಸುವುದು.

ಆದುದರಿಂದ ಮೇಲ್ಕಂಡ ಎಲ್ಲಾ ಕಾಯ್ದೆಗಳನ್ನು ಉಲ್ಲಂಘಿಸಿ ನಡೆದಿರುವ ಪ್ರಕರಣಗಳ ವಿವರಗಳನ್ನು ತುರ್ತಾಗಿ ಸಮಿತಿಗೆ ಒದಗಿಸಲು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

ಪ್ರತಿ:

1. ಗೌರವಾನ್ವಿತ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಗೌರವಾನ್ವಿತ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001-ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸನ್ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಿಗೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001-ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ - 50
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ,
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ 18.01.2007

ಮಾನ್ಯಶ್ರೀ ಶಂಕರಲಿಂಗೇಗೌಡರವರೇ,

ಬೆಂಗಳೂರು ದಕ್ಷಿಣ ತಾಲ್ಲೂಕು ಉತ್ತರಹಳ್ಳಿ ಹೋಬಳಿ ಕತ್ತರಿಗುಪ್ಪೆ ಗ್ರಾಮದ ಸರ್ವೆ ನಂ. 17 ರಲ್ಲಿರುವ ಒಟ್ಟು ವಿಸ್ತೀರ್ಣ 73 ಎಕರೆ 12 ಗುಂಟೆ ಪೂರ್ಣ ಪ್ರದೇಶವನ್ನು 1971 ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಜಮೀನಿನ ಮಾಲೀಕರು ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಿದ್ದು, ಉಚ್ಚ ನ್ಯಾಯಾಲಯವು ಸದರಿ ಮೊಕದ್ದಮೆಗಳನ್ನು, ಸರ್ವೆ ನಂ. 17 ಈಗಾಗಲೇ ಭೂಸ್ವಾಧೀನವಾಗಿರುವ ಪ್ರಯುಕ್ತ ಜಮೀನಿನ ಮಾಲೀಕರಿಗೆ ಇದರ ಬಗ್ಗೆ ಯಾವ ರೀತಿಯ ಹಕ್ಕು ಇಲ್ಲವೆಂದು ವ್ಯಕ್ತಪಡಿಸಿ, ಎರಡು ಬಾರಿ ತೀರ್ಪಿತ್ತಿರುತ್ತದೆ.

ಆದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸರ್ವೆ ನಂ. 17 ರಲ್ಲಿ 73 ಎಕರೆ 12 ಗುಂಟೆ ಪ್ರದೇಶವಿರುವುದು ಖಚಿತವಾಗಿದ್ದರೂ ಒತ್ತುವರಿದಾರರಿಗೆ ಸಹಾಯ ಮಾಡಲು ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿ, ಮೇಲ್ಕಂಡ ಸರ್ವೆ ನಂಬರಿನಲ್ಲಿ 74 ಎಕರೆ 34 ಗುಂಟೆ ವಿಸ್ತೀರ್ಣವಿರುವುದಾಗಿ ತಿಳಿಸಿರುತ್ತಾರೆ.

ಸಮಿತಿಯು ಮೇಲ್ಕಂಡ ಸರ್ವೆ ನಂಬರಿನ ವಿಸ್ತೀರ್ಣದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿದಾಗ ಅದರ ವಿಸ್ತೀರ್ಣವು 73 ಎಕರೆ 12 ಗುಂಟೆ ಎಂಬುದಾಗಿ ದೃಢಪಟ್ಟಿರುತ್ತದೆ.

ಮೇಲ್ಕಂಡ ಅಂಶಗಳು ಬೆಂಗಳೂರು ಪ್ರಾಧಿಕಾರಕ್ಕೆ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ತಪ್ಪು ಪ್ರಮಾಣ ಪತ್ರವನ್ನು ಸಲ್ಲಿಸಿ, ಒತ್ತುವರಿದಾರರು ಬಹು ಅಂತಸ್ತಿನ ಸಮುಚ್ಚಯ ನಿರ್ಮಿಸುವಲ್ಲಿ ಸಹಕರಿಸಿರುವುದು ತಿಳಿದುಬಂದಿರುತ್ತದೆ.

ಆದುದರಿಂದ ಮೇಲ್ಕಂಡ ಅಂಶಗಳ ಬಗ್ಗೆ ಪರಿಶೀಲಿಸಿ, ಒತ್ತುವರಿ ಮಾಡಲು ಸಹಕರಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಒತ್ತುವರಿಯನ್ನು ತೆರವುಗೊಳಿಸಲು ಜರೂರು ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-

ಶ್ರೀ ಕೆ.ಶಂಕರಲಿಂಗೇಗೌಡರವರು,ಭಾ.ಆ.ಸೇ.,
ಆಯುಕ್ತರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಹಡ್ಸನ್ ವೃತ್ತ,
ಬೆಂಗಳೂರು.

ಪು.ತಿ.ನೋ.

ಪ್ರತಿಗಳು:

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ - 20(
ದೂರವಾಣಿ : ಕಛೇರಿ : 222507(
ಫ್ಯಾಕ್ಸ್ : 222583(
E-mail : atramaswamyjc@yahoo.cc
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 56000

ಸಂಖ್ಯೆ: ಕ.ವಿ.ಮ/ಜಸಸ/87/2006

18.01.2007

ಮಾನ್ಯ ಶ್ರೀ ಜಯರಾಜ್‌ರವರೇ,

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು ಬಿನ್ನಮಂಗಲ ಮನವರ್ತೆ ಕಾವಲ್ ಸರ್ವೆ ನಂ.4/1 ಜಮೀನಿನಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ.

---

ದಿನಾಂಕ 17.01.2007 ರಂದು ಜಂಟಿ ಸದನ ಸಮಿತಿಯ ಸಭೆಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಬಿನ್ನಮಂಗಲ ಮನವರ್ತೆ ಕಾವಲ್ ಸರ್ವೆ ನಂ.4/1ರಲ್ಲಿ ಅನೇಕ ಅವ್ಯವಹಾರಗಳು ನಡೆದಿವೆ ಎಂದು ಜಂಟಿ ಸದನ ಸಮಿತಿಗೆ ಬಂದಿರುವ ದೂರಿನ ಮೇರೆಗೆ ಸಮಿತಿಯ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದಾಗ ಸಭೆಯ ಮುಂದೆ ತಾವು ಬಹು ಮಹತ್ವಪೂರ್ಣವಾದ ಹಲವು ಮಾಹಿತಿಯನ್ನು ನೀಡಿದ್ದು, ಇದರಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ ತಮಗೆ ಈಗಾಗಲೇ ಮನವರಿಕೆಯಾಗಿರುವುದನ್ನು ನೆನಪು ಮಾಡಬಯಸುತ್ತೇನೆ.

ಇಷ್ಟಲ್ಲದೆ ಈ ದಿನ ಸಮಿತಿಯು ಬೆಂಗಳೂರು ಮಹಾನಗರ ಪಾಲಿಕೆಯ ಹಲವು ಅಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಲವು ಅಧಿಕಾರಿಗಳು ಹಾಗೂ ಇತರೇ ಅಧಿಕಾರಿಗಳ ಜೊತೆಗೂಡಿ ಸ್ಥಳ ಪರಿಶೀಲನೆ ನಡೆಸಿದೆ. ಸ್ಥಳ ಪರಿಶೀಲನೆ ಸಂದರ್ಭದಲ್ಲಿ ಹಾಗೂ ಸಮಿತಿಗೆ ಒದಗಿಸಿರುವ ಹಲವಾರು ದಾಖಲೆಗಳಿಂದ ಸಮಿತಿಯ ಗಮನಕ್ಕೆ ಬಂದಿರುವ ಅಂಶಗಳು ಈ ಕೆಳಕಂಡಂತಿವೆ:

1. 1965-66ರಲ್ಲಿ ಆಗಿರುವ ಶುದ್ಧ ಕ್ರಯ ಪತ್ರದ ಪ್ರಕಾರ ಸರ್ವೆ ನಂ.4/1ರಲ್ಲಿ 9 ಎಕರೆ 12 ಗುಂಟೆ ವಿಸ್ತೀರ್ಣವನ್ನು ಶ್ರೀ ಡಿ. ರಂಗದಾಮುಲು ನಾಯ್ಡು ಎಂಬುವವರು ಆರ್ಚ್ ಬಿಷಪ್ ಡಾ: ಲೂರ್ದುಸ್ವಾಮಿರವರಿಂದ ಕ್ರಯಕ್ಕೆ ಪಡೆದಿರುತ್ತಾರೆ.
2. ಖಾತೆದಾರರಾದ ಶ್ರೀ ಡಿ ರಂಗದಾಮುಲು ನಾಯ್ಡುರವರು ಅಂದಿನ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಖರಾಬು ವಿಸ್ತೀರ್ಣವನ್ನು ಸೇರಿ 8 ಎಕರೆ 8 ಗುಂಟೆ ವಿಸ್ತೀರ್ಣಕ್ಕೆ ಆದೇಶ ಸಂಖ್ಯೆ ಬಿಡಿಸ್.ಎವಲ್‌ಎನ್ ಎಸ್ ಆರ್ 1801 ದಿನಾಂಕ 27.12.1965ರಂದು ಭೂ ಪರಿವರ್ತನಾ ಆದೇಶ ಪಡೆದಿದ್ದಾರೆ. ಈ ಆದೇಶ ವಸತಿ ಬಡಾವಣೆ ನಿರ್ಮಿಸುವ ಉದ್ದೇಶಕ್ಕಾಗಿದ್ದು, ಈ ಕೆಳಕಂಡ ಷರತ್ತುಗಳನ್ನು ಹೊಂದಿರುತ್ತದೆ.

a. ಸದರಿ ಪ್ರದೇಶವು ರಾಷ್ಟ್ರೀಯ ಹೆದ್ದಾರಿ ಬೆಂಗಳೂರು-ಮದ್ರಾಸು ರಸ್ತೆಗೆ ಹೊಂದಿಕೊಂಡಿರುವುದರಿಂದ ರಸ್ತೆಯ ಮಧ್ಯಭಾಗದಿಂದ 250 ಅಡಿ ಜಾಗ ಖಾಲಿ ಬಿಡುವುದು ಮತ್ತು ಯಾವುದೇ ಕಟ್ಟಡ ನಿರ್ಮಾಣಗೊಳ್ಳದು.

b. ಸದರಿ ಸ್ಥಳದ ರಸ್ತೆ ಮಾರ್ಜಿನ್ ಮತ್ತು ಸಾರ್ವಜನಿಕ ಉದ್ದೇಶದ ಸ್ಥಳಗಳನ್ನು ಬೆಂಗಳೂರು ನಗರಸಭೆ ಮತ್ತು ಸಿ.ಐ.ಟಿ.ಬಿ. ನಿಯಮಗಳಂತೆ ರಕ್ಷಿಸುವುದು.

c. ಬಡಾವಣೆಯಲ್ಲಿ ಬರುವ ಸಿ.ಎ. ನಿವೇಶನ ಮತ್ತು ರಸ್ತೆಗಳನ್ನು ಸಿ.ಐ.ಟಿ.ಬಿಗೆ ವಹಿಸಿಕೊಡುವುದು.

d. ಬಡಾವಣೆ ನಕ್ಷೆ ಮತ್ತು ಕಟ್ಟಡದ ನಕ್ಷೆಗಳನ್ನು ಸಿ.ಐ.ಟಿ.ಬಿ.ಯಿಂದ ಮಂಜೂರು ಮಾಡಿಸಿಕೊಳ್ಳುವುದು.

e. ಕಟ್ಟಡ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯುವುದು.

f. ಭೂ ಪರಿವರ್ತನೆ ಆದೇಶದ ದಿನಾಂಕದಿಂದ ಎರಡು ವರ್ಷಗಳ ಅವಧಿಯಲ್ಲಿ ಉದ್ದೇಶಿತ ಕಾರ್ಯಕ್ಕಾಗಿ ಪರಿವರ್ತಿತ ಭೂಮಿಯನ್ನು ಉಪಯೋಗಿಸಿಕೊಳ್ಳದಿದ್ದಲ್ಲಿ, ಭೂ ಪರಿವರ್ತನೆ ಆದೇಶ ರದ್ದಾಗಿದೆ ಎಂದು ಭಾವಿಸತಕ್ಕದ್ದು.

g. ಮೇಲ್ಕಂಡ ಯಾವುದೇ ಷರತ್ತನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ್ದಲ್ಲಿ, ಅವುಗಳನ್ನು ನೆಲಸಮ ಗೊಳಿಸಲಾಗುವುದು. ಹಾಗೂ ಇದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಪಟ್ಟವರಿಂದ ಕಂದಾಯ ಬಾಕಿ ಎಂದು ವಸೂಲಿ ಮಾಡಲಾಗುವುದು.

ಮೇಲಿನ ಯಾವುದೇ ಷರತ್ತುಗಳನ್ನು ಜಮೀನಿನ ಮಾಲೀಕರು ಅನುಸರಿಸುವುದಾಗಲೀ ಅಥವಾ ಗಣನೆಗೆ ತೆಗೆದುಕೊಂಡಿರುವುದಾಗಲೀ ಕಂಡು ಬರುವುದಿಲ್ಲ. ಇದಕ್ಕೆ ತದ್ವಿರುದ್ಧವಾಗಿ 1975ರಲ್ಲಿ ಅಂದರೆ ಭೂಪರಿವರ್ತನೆ ಆದೇಶ ಪಡೆದ ಸುಮಾರು 10 ವರ್ಷಗಳ ತರುವಾಯ ಬೈಯಪ್ಪನಹಳ್ಳಿ ಗ್ರಾಮ ಪಂಚಾಯಿತಿ ಮೂಲಕ ಬಡಾವಣೆ ನಕ್ಷೆಗೆ ಅನುಮೋದನೆ ಪಡೆದಿರುವುದು ಕಂಡುಬರುತ್ತದೆ. ಆದರೆ ಗ್ರಾಮ ಪಂಚಾಯಿತಿಯು ಬಡಾವಣೆ ನಕ್ಷೆಗೆ ಅನುಮೋದನೆ ನೀಡುವ ಸಕ್ಷಮ ಪ್ರಾಧಿಕಾರವಾಗಿರಲಿಲ್ಲ.

ಇದಾದ ತರುವಾಯ ಲಭ್ಯವಿರುವ ಮಾಹಿತಿ ಪ್ರಕಾರ ಈ ಕೆಳಕಂಡ 4 ಜನ ವ್ಯಕ್ತಿಗಳು ಒಟ್ಟು 47 ನಿವೇಶನಗಳನ್ನು ಮತ್ತು ರಸ್ತೆಗಳಿಗೆ ಸಂಬಂಧಪಟ್ಟ 4 ಶುದ್ಧ ಕ್ರಯಪತ್ರಗಳನ್ನು ಒಟ್ಟು 51 ಕ್ರಯಪತ್ರಗಳನ್ನು ಹಲವು ಈರ್ವ ವ್ಯಕ್ತಿಗಳ ಹೆಸರಿಗೂ, ಮತ್ತೆ ಕೆಲವನ್ನು ಏಕ ವ್ಯಕ್ತಿಯ ಹೆಸರಿಗೂ ಬರೆಸಿಕೊಂಡಿರುವುದು ಕಂಡುಬರುತ್ತದೆ. ಅಂದರೆ ಯಾವ ಕ್ರಯಪತ್ರವೂ ಎಲ್ಲಾ ನಾಲ್ಕು ಜನರ ಹೆಸರಿನಲ್ಲಿ ಜಂಟಿಯಾಗಿರುವುದು ಕಂಡುಬರುವುದಿಲ್ಲ. ಕ್ರಯದಾರರ ಹೆಸರುಗಳು ಈ ಕೆಳಕಂಡಂತಿವೆ:

1. ಸುರೇಶ ಸಲಾರಿಯ
2. ಮಹಮದ್ ಸಮದ್ ಎಸ್.ಎಸ್.

ಹೊರಟ ಕರ್ನಾಟಕ - ೨೦೧
ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು,
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ದೂರವಾಣಿ : ಕಛೇರಿ : 222507
ಫ್ಯಾಕ್ಸ್ : 222583
E-mail : atramaswamyjc@yahoo.co
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 56000



3. ರೋಹಿಣಿ ಸಲಂಬಡು

4. ಮಹಮದ್ ಸೈಫ್ ಉಲ್ಲಾ

ದಾಖಲೆಗಳ ಪರಿಶೀಲನೆಯಿಂದ ರಸ್ತೆಗಳಿಗಾಗಿ ಬಿಟ್ಟುಕೊಟ್ಟ ಹಾಗೂ ಮಾರಾಟವಾಗಿರುವ ಜಮೀನಿನ ವಿಸ್ತೀರ್ಣ 39,910 ಚದರ ಅಡಿಗಳಾಗಿರುತ್ತದೆ.

ಕ್ರಯದಾರರಾದ ನಾಲ್ಕು ಜನರು ಬೆಂಗಳೂರು ಮಹಾನಗರ ಪಾಲಿಕೆಗೆ 23.05.2003ರಲ್ಲಿ ಕ್ರೋಢೀಕೃತ ಖಾತೆ (Consolidated Khatha) ಮಾಡಿಕೊಡಲು ಅರ್ಜಿ ಸಲ್ಲಿಸಿದ್ದಾರೆ. ಇದನ್ನು ಪರಿಶೀಲಿಸಿ ಅಂದಿನ ಅಧಿಕಾರಿಗಳು 03.06.2003ರಂದೇ ಒಟ್ಟು ವಿಸ್ತೀರ್ಣ 2,34,489 ಚದರ ಅಡಿಗೆ ಕ್ರೋಢೀಕೃತ ಖಾತೆಗೆ ಆದೇಶ ನೀಡಿರುತ್ತಾರೆ.

ಚರ್ಚೆಯ ಸಂದರ್ಭದಲ್ಲಿ ಕ್ರೋಢೀಕೃತ ಖಾತೆ ಮಾಡಲು ಅಗತ್ಯವೆನಿಸಿದ ಹಾಗೂ ಪ್ರಾಮುಖ್ಯವಾದ ಅಂಶಗಳನ್ನು ತಾವು ಸದನ ಸಮಿತಿಯ ಗಮನಕ್ಕೆ ತಂದಿದ್ದೀರಿ. ಇದರ ಪ್ರಕಾರ
ಅ. ಕ್ರಯದಾರರು ಎಲ್ಲಾ ನಿವೇಶನಗಳಿಗೂ ಸಂಬಂಧಪಟ್ಟಂತೆ ಜಂಟಿ ಕ್ರಯದಾರರಾಗಿರಬೇಕು.
ಆ. ಇವರುಗಳು ರಕ್ತ ಸಂಬಂಧಿಕರಾಗಿರಬೇಕು.

ಆದರೆ ಈ ಯಾವ ಷರತ್ತನ್ನೂ ಗಣನೆಗೆ ತೆಗೆದುಕೊಳ್ಳದೇ ಸಂಬಂಧಪಟ್ಟ ಅಧಿಕಾರಿಗಳು ಕ್ರೋಢೀಕೃತ ಖಾತೆ ಮಾಡಿರುವುದು ಕಂಡುಬರುತ್ತದೆ.

ಇಷ್ಟು ಮಾತ್ರವಲ್ಲದೆ, ಖಾತೆದಾರರುಗಳು ದಿನಾಂಕ 24.12.2003ರಂದು ವಸತಿ ಸಮುಚ್ಛಯ ನಿರ್ಮಿಸುವುದಾಗಿ ಮಹಾನಗರ ಪಾಲಿಕೆಯ ಅನುಮತಿಯನ್ನು ಕೋರಿದ್ದಾರೆ. ಇದನ್ನು ಪರಿಗಣಿಸಿ ಮಹಾ ನಗರ ಪಾಲಿಕೆಯು ಅನುಮತಿ ನೀಡಿದೆ. ತರುವಾಯ ದಿನಾಂಕ 24.06.2004ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಾಣಿಜ್ಯ ಸಂಕೀರ್ಣ ನಿರ್ಮಿಸಲು ಖಾತೆದಾರರುಗಳು ಅನುಮತಿ ಪಡೆದುಕೊಂಡಿರುತ್ತಾರೆ. ನಂತರ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ 24.05.005ರಂದು ಬಹುಮಹಡಿ ಕಟ್ಟಡದ ಪರಿಷ್ಕೃತ ಯೋಜನೆಗೆ ಅನುಮತಿ ನೀಡಲಾಗಿದೆ. ಹಾಗೂ 2,30,241.5 ಚದರ ಅಡಿಗಳಲ್ಲಿ ಕಟ್ಟಡ ನಿರ್ಮಿಸಲು ದಿನಾಂಕ 10.06.2005ರಂದು ಮಹಾನಗರ ಪಾಲಿಕೆಯು ನಕ್ಷೆಗೆ ಮಂಜೂರಾತಿ ನೀಡಿದೆ.

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ

ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ: 08.03.2007

ಗೆ:

ಆಯುಕ್ತರು,
ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್.ವೃತ್ತ,
ಬೆಂಗಳೂರು.

ಮಾನ್ಯರೆ,

ನಿಮ್ಹಾನ್ಸ್ ಸಂಸ್ಥೆಗೆ ಸೇರಿದ, ಹಿಂದಿನ ಬೈರಸಂದ್ರ ಗ್ರಾಮದ ಸರ್ವೆ ನಂಬರ್ 2/2, 2/3, 2/4, 2/5 ರ 9004.22 ಚ.ಮೀ. ವಿಸ್ತೀರ್ಣವನ್ನು ಸುಳ್ಳು ದಾಖಲೆಗಳ ಮೇರೆ ಮೂಲ ಮಾಲೀಕರ ಮಕ್ಕಳು ಶ್ರೀ ಕೆ.ವಿ.ಶಿವಕುಮಾರ ಎಂಬುವವರಿಗೆ ಕ್ರಯಕ್ಕೆ ಕೊಟ್ಟಿದ್ದಾರೆಂದು, ನಗರ ಪಾಲಿಕೆಯವರು ಶ್ರೀ ಕೆ.ವಿ. ಶಿವಕುಮಾರ ಎಂಬುವವರ ಹೆಸರಿಗೆ ಸರಿಯಾಗಿ ಪರಿಶೀಲಿಸದೆ ಖಾತೆ ಮಾಡಿದ್ದರು.

ಆದರೆ ಮೇಲ್ಕಂಡ ವಿಸ್ತೀರ್ಣವಲ್ಲದೆ ಸರ್ವೆ ನಂಬರ್ 2/1ನ್ನು ಸೇರಿಕೊಂಡಂತೆ 14,776.39 ಚ.ಮೀ. ಪ್ರದೇಶಕ್ಕೆ ಕಟ್ಟಡ ನಕ್ಷೆಗೆ ಮಂಜೂರಾತಿ ಕೊಟ್ಟು, ಎಲ್ಲಾ ನಿಯಮಗಳನ್ನು ಸಂಪೂರ್ಣ ಬದಿಗೊತ್ತಿ ನಿಮ್ಹಾನ್ಸ್ ಸಂಸ್ಥೆಗೆ ಸೇರಿದ ಸರ್ಕಾರಿ ಭೂಮಿ ಕಬಳಿಕೆಯಾಗಲು ತಮ್ಮ ಪಾಲಿಕೆಯ ಸಂಬಂಧಿಸಿದ ಅಧಿಕಾರಿ ವರ್ಗದವರೆ ಸಂಪೂರ್ಣ ಜವಾಬ್ದಾರರೆಂದು ಭಾವಿಸುತ್ತೇನೆ. ಇದೊಂದು ಅತ್ಯಂತ ಭೂ ಕಬಳಿಕೆಯ ಸ್ಪಷ್ಟ ನಿದರ್ಶನವಾಗಿರುತ್ತದೆ. ಆದುದರಿಂದ ಸಂಬಂಧಿಸಿದ ಅಧಿಕಾರಿ/ನೌಕರರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಬೇಕೆಂದು ಮತ್ತು ಸರ್ಕಾರಿ ಸ್ವತ್ತನ್ನು ಉಳಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-

ಯಥಾ ನಕಲುಗಳನ್ನು:

1. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಪ್ರಧಾನ ಕಾರ್ಯದರ್ಶಿಯವರಿಗೆ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

(ಎ. ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ಸಂಖ್ಯೆ: ಕವಿಸ:ಅಸಪ/ಜಂಸಸ/ಸಜಒ/ 111/2006

ದಿನಾಂಕ 06.06.2007

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560 001.

ಮಾನ್ಯರೆ,

ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಬೆಂಗಳೂರು ಉತ್ತರ ತಾಲ್ಲೂಕಿನ ಅಲ್ಲಾಳಸಂದ್ರ, ಚಿಕ್ಕಬೊಮ್ಮಸಂದ್ರ ಮತ್ತು ಜಕ್ಕೂರು ಪ್ಲಾಂಟೇಷನ್‌ನಲ್ಲಿ ಸುಮಾರು 36 ಎಕರೆ ಕೃಷಿ ಭೂಮಿಯನ್ನು ಭೂ ಮಾಲೀಕರಿಂದ ಗೃಹ ನಿರ್ಮಾಣಕ್ಕೆ ನೇರವಾಗಿ ಖರೀದಿಸಿ, ಬಡಾವಣೆ ನಿರ್ಮಾಣ ಮಾಡಿರುವುದು ಭೂ ಸುಧಾರಣಾ ಕಾಯಿದೆ 79(ಬಿ)ಯ ಸಂಪೂರ್ಣ ಉಲ್ಲಂಘನೆಯಾಗಿರುತ್ತದೆ.

ಆದುದರಿಂದ ಸದರಿ ಭೂ ಸುಧಾರಣಾ ಕಾಯಿದೆ ಉಲ್ಲಂಘನೆ ಬಗ್ಗೆ ಪರಿಶೀಲಿಸಿ ಕಾನೂನು ರೀತ್ಯ ಕ್ರಮಕೈಗೊಳ್ಳಬೇಕಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

<u>ಪ್ರತಿಗಳು:</u>

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸನ್ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ: 06.06.2007

ಗೆ:
ಆಯುಕ್ತರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೆ,

ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಬೆಂಗಳೂರು ಉತ್ತರ ತಾಲ್ಲೂಕಿನ ಅಲ್ಲಾಳಸಂದ್ರ, ಚಿಕ್ಕಬೊಮ್ಮಸಂದ್ರ ಮತ್ತು ಜಕ್ಕೂರು ಪ್ಲಾಂಟೇಷನ್‌ಗಳಲ್ಲಿ ಅನಧಿಕೃತವಾಗಿ ಬಡಾವಣೆ ನಿರ್ಮಿಸಿ ಹಲವಾರು ಅವ್ಯವಹಾರಗಳಿಗೆ ತವರಾಗಿರುವುದು ತಮಗೂ ತಿಳಿದಿರುತ್ತದೆ. ಈ ಕ್ರಮವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನಿಗೆ ವಿರುದ್ಧವಾಗಿರುವುದರಿಂದ, ಸದರಿ ಕಾನೂನಿನ ಕಲಂ 33ರಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,
ಸಹಿ/-
(ಎ. ಟಿ.ರಾಮಸ್ವಾಮಿ)

<u>ಯಥಾ ನಕಲನ್ನು:</u>

1. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಸನ್ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಪ್ರಧಾನ ಕಾರ್ಯದರ್ಶಿಯವರಿಗೆ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

(ಎ. ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ಸಂಖ್ಯೆ: ಕವಿಸ:ಅಸಪ/ಜಂಸಸ/ 114/2006-07 ದಿನಾಂಕ :08.06.2007

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ,
ವಿಕಾಸ ಸೌಧ,
ಬೆಂಗಳೂರು-560 001.

ಮಾನ್ಯರೆ,

ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರಂ ಹೋಬಳಿ, ಬಾಣಸವಾಡಿ ಗ್ರಾಮದ ಸರ್ವೆ ನಂ.14 ಸರ್ಕಾರಿ ಗುಂಡುತೋಪಾಗಿದ್ದು, ಅದರ ವಿಸ್ತೀರ್ಣ 1.07 ಎ/ಗು ಆಗಿರುವುದಾಗಿ ತಿಳಿದಿರುತ್ತದೆ. ಮೇಲ್ಕಂಡ ಗುಂಡುತೋಪಿಗೆ ಶ್ರೀ ಗೋಪಾಲರೆಡ್ಡಿ ಬಿನ್ ಪೆದ್ದಣ್ಣ ರೆಡ್ಡಿ ಎಂಬುವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಿವೇಶನಗಳನ್ನಾಗಿ ವಿಂಗಡಿಸಿ, ಸುಮಾರು 18 ಜನರಿಗೆ ಮಾರಾಟ ಮಾಡಿ ಕಟ್ಟಡ ನಿರ್ಮಿಸಿರುವುದನ್ನು ದಿನಾಂಕ 7.6.2007ರಂದು ನಡೆಸಿದ ಪರಿಶೀಲನಾ ಸಂದರ್ಭದಲ್ಲಿ ಸಮಿತಿಗೆ ತಿಳಿದುಬಂದಿದೆ. ಮೇಲ್ಕಂಡ ಸ್ವತ್ತು ಸರ್ಕಾರಿ ಗುಂಡುತೋಪಾಗಿದ್ದು, ಅದಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಕ್ಕು ಸ್ಥಾಪಿಸಿಕೊಂಡು ಮಾರಾಟ ಮಾಡಿ ವಂಚಿಸಿರುವುದು ಅಪರಾಧವಾಗಿರುತ್ತದೆ ಹಾಗೂ ಕೊಂಡುಕೊಂಡ ಅಮಾಯಕರಿಗೂ ತೊಂದರೆಯಾಗುತ್ತಿದೆ.

ಆದುದರಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಕ್ಕು ದಾಖಲೆಗಳನ್ನು ಸ್ಥಾಪಿಸಿಕೊಂಡು ವಂಚಿಸಿರುವ ಶ್ರೀ ಗೋಪಾಲರೆಡ್ಡಿ ಬಿನ್ ಪೆದ್ದಣ್ಣ ರೆಡ್ಡಿ ಇವರ ವಿರುದ್ಧ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

<u>ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು.
2. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ,ಬೆಂಗಳೂರು,
3. ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು,
4. ಸನ್ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ,ಬೆಂಗಳೂರು,
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
7. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು,

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 22250
ಫ್ಯಾಕ್ಸ್ : 22258
E-mail : atramaswamyjc@yahoo.c
ಕೊಠಡಿ ಸಂಖ್ಯೆ : 121, 1ನೇ ಮಹ
ವಿಧಾನ ಸೌಧ, ಬೆಂಗಳೂರು - 5600

ಸಂಖ್ಯೆ: ಕವಿಸ:ಅಸಪ/ಜಂಸಸ/ 116/2006-07

ದಿನಾಂಕ 08.06.2007

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ,
ಬಹುಮಹಡಿ ಕಟ್ಟಡ
ಬೆಂಗಳೂರು-560 001.

ಮಾನ್ಯರೆ,

ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಗ್ರಾಮದ ಸರ್ವೆ ನಂ. 69 ಮತ್ತು 70ರ ಮಧ್ಯೆ ಸುಮಾರು 7 ಎಕರೆ ಬಿ ಖರಾಬು ಇರುವುದಾಗಿ(ಹಳ್ಳ) ತಿಳಿದಿರುತ್ತದೆ. ಆ ಪೈಕಿ ಸುಮಾರು 1.20ಎ/ಗು ಪ್ರದೇಶವನ್ನು ಮಾತ್ರ ಅಳತೆ ಮಾಡಿ, ಒತ್ತುವರಿಯಾಗಿರುವುದಾಗಿ ಸಮಿತಿಗೆ ತಿಳಿಸಿರುತ್ತಾರೆ. ದಿನಾಂಕ 07.06.2007 ರಂದು ಸಮಿತಿಯು ಸ್ಥಳ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಸ್ಥಳೀಯ ಸಾರ್ವಜನಿಕರು ಕಂದಾಯ ಇಲಾಖೆಯವರು ಪೂರ್ಣ ಖರಾಬು ಒತ್ತುವರಿ ಸ್ಥಳವನ್ನು ಅಳತೆ ಮಾಡದೇ ಸ್ವಲ್ಪ ಭಾಗ ಮಾತ್ರ ಅಳತೆ ಮಾಡಿರುವುದಾಗಿಯೂ ಮತ್ತು ಕೆಲ ಒತ್ತುವರಿದಾರರಿಗೆ ಪರೋಕ್ಷವಾಗಿ ಅನುಕೂಲ ಮಾಡುವ ಸಲುವಾಗಿ ಉಳಿದ ಒತ್ತುವರಿ ಅಳತೆ ಮಾಡದೆ ಬಿಟ್ಟಿರುವುದಾಗಿ ದೂರನ್ನು ಸಲ್ಲಿಸಿರುತ್ತಾರೆ.

ಆದುದರಿಂದ ಮೇಲ್ಕಂಡ ಪೂರ್ಣ ಬಿ ಖರಾಬು ಜಮೀನು ಒತ್ತುವರಿಯನ್ನು ನಿಷ್ಪಕ್ಷಪಾತವಾಗಿ ಅಳತೆ ಮಾಡಿಸಿ, ಎಲ್ಲಾ ಒತ್ತುವರಿದಾರರ ಮೇಲೆಯೂ ಸಮನಾದ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
(ಎ.ಟಿ.ರಾಮಸ್ವಾಮಿ)

<u>ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು.
2. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ,ಬೆಂಗಳೂರು,
3. ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು,
4. ಸನ್ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ,ಬೆಂಗಳೂರು,
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
7. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು,

(ಎ.ಟಿ.ರಾಮಸ್ವಾಮಿ)

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 2225070
ಫ್ಯಾಕ್ಸ್ : 2225830
E-mail : atramaswamyjc@yahoo.co.i

ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ಸಂಖ್ಯೆ: ಕವಿಸ:ಅಸಪ/ಜಂಸಸ/ಸಜಒ/120/2006 ದಿನಾಂಕ 27.06.2007

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಮಾನ್ಯರೆ,

ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಕೋನೇನ ಅಗ್ರಹಾರ ಗ್ರಾಮದ ಸರ್ವೆ ನಂ. 60, ಕೆರೆ ಅಂಗಳವಾಗಿದ್ದು, 20.10 ಎಕರೆ/ಗುಂಟೆ ವಿಸ್ತೀರ್ಣವಿರುತ್ತದೆ. ಸದರಿ ಸ್ಥಳವು ಬೆಂಗಳೂರು ವಿಮಾನ ರಸ್ತೆಗೆ ಹೊಂದಿಕೊಂಡಿರುತ್ತದೆ.

ಜಂಟಿ ಸದನ ಸಮಿತಿಯು ದಿನಾಂಕ 27.06.2007 ರಂದು ಸ್ಥಳ ಪರಿಶೀಲನೆ ವೇಳೆಯಲ್ಲಿ ಕಂದಾಯ ಇಲಾಖೆಯು ಒದಗಿಸಿದ ಮಾಹಿತಿಯಂತೆ ಈಗಾಗಲೇ 15.32 ಎಕರೆ/ಗುಂಟೆ ಪ್ರದೇಶವು ಒತ್ತುವರಿಯಾಗಿರುತ್ತದೆ. ಇದು ಬೆಂಗಳೂರು ನಗರದಲ್ಲಿಯೇ ಅತ್ಯಂತ ಬೆಲೆ ಬಾಳುವ ಪ್ರದೇಶವಾಗಿರುತ್ತದೆ. ಒತ್ತುವರಿ ಪರಿಶೀಲನೆ ವೇಳೆಯಲ್ಲಿ ಗಮನಿಸಿದಾಗ, ಈಗಲೂ ಸಹ ನೂತನ ಕಟ್ಟಡಗಳನ್ನು ನಿರ್ಮಿಸುತ್ತಿರುವುದನ್ನು ಕಂಡಿರುತ್ತೇವೆ.

ಸರ್ಕಾರಿ ಸ್ಥಳಗಳಲ್ಲಿ ಇನ್ನಾದರೂ ಅಕ್ರಮ ಕಟ್ಟಡಗಳು ನಿರ್ಮಾಣವಾಗುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಳ್ಳಬೇಕೆಂದು ಜಂಟಿ ಸದನ ಸಮಿತಿಯು ಈ ಹಿಂದೆ ಹಲವಾರು ಬಾರಿ ತಿಳಿಸಿದ್ದರೂ ಸಹ ಅಕ್ರಮವಾಗಿ ಕಟ್ಟಡಗಳು ನಿರ್ಮಾಣವಾಗುವುದನ್ನು ತಡೆಗಟ್ಟಲು ಎಲ್ಲಾ ಇಲಾಖೆಗಳು ಸಂಪೂರ್ಣವಾಗಿ ವಿಫಲವಾಗಿರುವುದು ತುಂಬಾ ವಿಷಾಧನೀಯ ಮತ್ತು ಭೂಕಬಳಿಕೆಯನ್ನು ತಡೆಯುವ ಬದ್ಧತೆ ಇಲ್ಲದಿರುವುದು ಸಹ ಸ್ಪಷ್ಟವಾಗುತ್ತದೆ.

... 2 ...

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 2250702
ಫ್ಯಾಕ್ಸ್ : 2225830
E-mail : atramaswamyjc@yahoo.co.i
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001



ಆದುದರಿಂದ, ಸಂಬಂಧಿಸಿದ ಇಲಾಖೆಗಳು ಹೆಚ್ಚು ಜಾಗ್ರತಿಯಿಂದ ಅಕ್ರಮ ಕಟ್ಟಡಗಳು ನಿರ್ಮಾಣವಾಗುವುದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಸಹಿ/-
**(ಎ.ಟಿ.ರಾಮಸ್ವಾಮಿ)**

<u>ಪ್ರತಿಗಳು:</u>

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಇಲಾಖೆ, ವಿಕಾಸ ಸೌಧ, ಬೆಂಗಳೂರು-560 001, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಹಡ್ಸನ್ ವೃತ್ತ, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಕುಮಾರಪಾರ್ಕ್ ವೆಸ್ಟ್, ಬೆಂಗಳೂರು, ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಎ.ಟಿ.ರಾಮಸ್ವಾಮಿ

**(ಎ.ಟಿ.ರಾಮಸ್ವಾಮಿ)**

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸರ್ಕಾರ ಕರ್ನಾಟಕ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001

ದಿನಾಂಕ:05.07.2007

ಶ್ರೀಮತಿ ವತ್ಸಲ ವತ್ಸರವರು, ಐ.ಎ.ಎಸ್.
ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಒಳಾಡಳಿತ ಇಲಾಖೆ,
ವಿಧಾನಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:ಬೈರಸಂದ್ರ ಗ್ರಾಮದ ಸ.ನಂ.56ರ ಕೆರೆಯಂಗಳ ಪ್ರದೇಶವನ್ನ
ಬ್ಯಾಂಕಿನಲ್ಲಿ ಒತ್ತೆಯಿಟ್ಟು ಸಾಲ ಪಡೆದು ಅವ್ಯವಹಾರ ನಡೆಸಿರುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಬರೆದ ಪತ್ರ ಸಂಖ್ಯೆ :ಕವಿಸ/ಅಸಪ/ಜಂಸಸ/ಸಜಓ/122/2006, ದಿನಾಂಕ:27.06 2007ರ ಕಡೆ ತಮ್ಮ ಗಮನ ಸೆಳೆಯುತ್ತೇನೆ. ಈ ಪತ್ರದಲ್ಲಿ ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕಿಗೆ ಸೇರಿದ ಉತ್ತರಹಳ್ಳಿ ಹೋಬಳಿ, ಬೈರಸಂದ್ರ ಗ್ರಾಮದ ಸರ್ವೆ ನಂ.56ರ ಕೆರೆಯಂಗಳ ಪರಭಾರೆಯಾಗಿರುವ ಬಗ್ಗೆ ಹಲವು ಮಹತ್ವಪೂರ್ಣವಾದ ಅಂಶಗಳನ್ನು ಸಂಗ್ರಹಿಸಿ ಇದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳುವಂತೆ ಕೋರಿರುವುದು ಸರಿಯಷ್ಟೆ. ಇದನ್ನು ಮುಂದುವರೆಸುತ್ತಾ, ಅದಕ್ಕೆ ಸಂಬಂಧಿಸಿದಂತೆ ಸಮಿತಿಯು ಇನ್ನು ಹೆಚ್ಚಿನ ಮಾಹಿತಿಯನ್ನು ಪಡೆದಿದ್ದು ಅವುಗಳನ್ನು ಈ ಕೆಳಕಂಡಂತೆ ವಿವರಿಸಲು ಬಯಸುತ್ತೇನೆ.

ದಿನಾಂಕ 13.4.1995ರಂದು ಚನ್ನೈನ ಟಿ.ನಗರ ಶಾಖೆಗೆ ಸೇರಿದ ಸಿಟಿ ಯೂನಿಯನ್ ಬ್ಯಾಂಕ್ ನಿ.,ದ ರೂ.42,17,600=00ಗಳ ಚೆಕ್ ಒಂದು ಸಿಯಾರ ಪ್ರಾಪರ್ಟಿ ಡೆವಲಪರ್ಸ್ ಪ್ರೈ. ಲಿಮಿಟೆಡ್ ಹೆಸರಿನಲ್ಲಿದ್ದುದನ್ನು, ಬೆಂಗಳೂರು ಜಯನಗರ ಶಾಖೆಯ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನಲ್ಲಿ ಹಾಜರು ಪಡಿಸಿ ಪಾವತಿಯಾಗಿರುತ್ತದೆ. ಸದರಿ ಚೆಕ್‌ನ್ನು ಶ್ರೀ ಬೋಪಣ್ಣ ಎಂಬುವರು ಕೊಟ್ಟಿರುವುದಾಗಿ ತಿಳಿದಿರುತ್ತದೆ.

ತರುವಾಯ ಸದರಿ ಚೆಕ್‌ನ್ನು ನಗದು ಪಾವತಿಗಾಗಿ ಚನ್ನೈನ ಸಿಟಿ ಯೂನಿಯನ್ ಬ್ಯಾಂಕಿಗೆ ಕಳುಹಿಸಿಕೊಟ್ಟಿದ್ದು, ದಿನಾಂಕ 19.4.1995ರಂದು ಅವರ ಖಾತೆಯಲ್ಲಿ ಅಗತ್ಯ ಹಣವಿಲ್ಲವೆಂಬ ಕಾರಣಕ್ಕಾಗಿ ಚೆಕ್ ತಿರಸ್ಕರಿಸಿ, ಹಿಂದುರಿಗಿಸಲ್ಪಟ್ಟಿದೆ.

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001



ಬೆಂಗಳೂರಿನ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಅಧಿಕಾರಿಗಳು ಚೆಕ್‌ನ್ನು ಚನ್ನೈ ಬ್ಯಾಂಕಿಗೆ ಕಳುಹಿಸಿ ಹಣವನ್ನು ಪಡೆಯದೆ ಅಥವಾ ಖಾತೆಯಲ್ಲಿ ಸಾಕಷ್ಟು ಹಣವಿದೆಯೇ ಇಲ್ಲವೇ ಎಂಬುದನ್ನು ಸಹ ಪರಿಶೀಲಿಸದೆ ಮುಂಗಡವಾಗಿ ರೂ.42,17,600=00 ಹಣ ಪಾವತಿ ಮಾಡಿರುತ್ತಾರೆ.

ಬೆಂಗಳೂರಿನ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನವರು ಮಾಡಿದ ತಪ್ಪನ್ನು ಸರಿಪಡಿಸಿಕೊಳ್ಳಲು ನೀಡಿರುವ ಹಣವನ್ನು ಸಾಲವಾಗಿ ಪರಿವರ್ತಿಸಲಾಗುವುದೆಂದು, ಪ್ರತಿಯಾಗಿ ಬೆಲೆ ಬಾಳುವ ಆಸ್ತಿಯನ್ನು ಕೊಲೆಟರಲ್ ಸೆಕ್ಯೂರಿಟಿಯಾಗಿ ನೀಡಬೇಕೆಂದು ತಿಳಿಸಿರುವುದಾಗಿ ಕಂಡುಬಂದಿದೆ.

ನಮಗೆ ಬಂದಿರುವ ಮಾಹಿತಿಯಂತೆ ಶ್ರೀ ಮನೋಹರ್ ಎಂಬುವರು, ಬೈರಸಂದ್ರ ಕೆರೆಯ 15.11 ಎ/ಗುಂ. ಪ್ರದೇಶವು ತಮ್ಮ ಪಿತ್ರಾರ್ಜಿತ ಆಸ್ತಿಯೆಂದು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದು, ಶ್ರೀ ಸುಬ್ರಹ್ಮಣ್ಯ ಎಂಬುವವರು ಅದರ ಜಿ.ಪಿ.ಎ.ಹೋಲ್ಡರ್ ಆಗಿ ಶ್ರೀ ಬೋಪಣ್ಣನವರ ಜೊತೆಗೂಡಿ ಕೆರೆಯಂಗಳವನ್ನು ಕೊಲೆಟರಲ್ ಸೆಕ್ಯೂರಿಟಿ ನೀಡಿ ಬ್ಯಾಂಕಿನಿಂದ ಪಡೆದ ಹಣವನ್ನು ಸಾಲವಾಗಿ ಪರಿವರ್ತಿಸಿಕೊಂಡಿರುತ್ತಾರೆ.

ನಂತರ ಬ್ಯಾಂಕಿಗೆ ಹಣ ಪಾವತಿ ಮಾಡಲಿಲ್ಲವೆಂದು ಬ್ಯಾಂಕಿನವರು ನೋಟಿಸ್ ಕೊಟ್ಟ ತರುವಾಯ 8ನೇ ಅಡಿಷನಲ್ ಮೆಟ್ರೊಪಾಲಿಟಿನ್ ಕೋರ್ಟಿನಲ್ಲಿ ಸಿ.ಸಿ.ಆರ್.ನಂ.105/96ರಂತೆ ಮೊಕದ್ದಮೆ ದಾಖಲಾಗಿರುತ್ತದೆ. ಮೊಕದ್ದಮೆಗೆ ಸಂಬಂಧಪಟ್ಟಂತೆ ನ್ಯಾಯಾಲಯವು ಸಾಲಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬ್ಯಾಂಕಿನಿಂದ ಪರಿಶೀಲನೆಗಾಗಿ ತರಿಸಿಕೊಂಡಿರುತ್ತಾರೆ.

ಶ್ರೀ ಸುಬ್ರಹ್ಮಣ್ಯರವರು ಸುಳ್ಳು ನೆಪಹೂಡಿ ನ್ಯಾಯಾಲಯದಲ್ಲಿದ್ದ ದಾಖಲೆಗಳನ್ನು ವಾಪಸ್ಸು ಪಡೆದಿರುತ್ತಾರೆ. ಇಂಡಿಯನ್ ಓವರ್‌ಸೀಸ್ ಬ್ಯಾಂಕಿನವರು ನ್ಯಾಯಾಲಯದಲ್ಲಿದ್ದ ದಾಖಲೆಗಳನ್ನು ಬ್ಯಾಂಕಿನ ಪರಿಶೀಲನೆಗಾಗಿ ವಾಪಸ್ಸು ಕೊಡುವಂತೆ ಕೋರಿರುವುದಾಗಿ ಕಂಡುಬಂದಿರುತ್ತದೆ.

ಎ. ಟಿ. ರಾಮಸ್ವಾಮಿ
ಶಾಸಕರು ಹಾಗೂ ಅಧ್ಯಕ್ಷರು
ಜಂಟಿ ಸದನ ಸಮಿತಿ (ಬೆಂಗಳೂರು ನಗರ ಮತ್ತು
ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಜಮೀನು
ಒತ್ತುವರಿ ಸಮಗ್ರ ತನಿಖಾ ಸಮಿತಿ)

ಸುವರ್ಣ ಕರ್ನಾಟಕ
ದೂರವಾಣಿ : ಕಛೇರಿ : 22250702
ಫ್ಯಾಕ್ಸ್ : 22258301
E-mail : atramaswamyjc@yahoo.co.in
ಕೊಠಡಿ ಸಂಖ್ಯೆ : 121, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560001



ನ್ಯಾಯಾಲಯವು ಶ್ರೀ ಸುಬ್ರಹ್ಮಣ್ಯರವರಿಗೆ, ದಾಖಲೆಗಳನ್ನು ನೀಡುವಂತೆ ತಿಳಿಸಿದಾಗ, ಸದರಿ ದಾಖಲೆಗಳು ರಿಕ್ಷಾದಲ್ಲಿ ಪ್ರಯಾಣಿಸುವಾಗ ಕಳೆದು ಹೋಗಿರುವುದಾಗಿ, ಜಯನಗರ ಪೋಲಿಸ್ ಠಾಣೆಯಲ್ಲಿ ಶ್ರೀ ಸುಬ್ರಹ್ಮಣ್ಯರವರು ದೂರನ್ನು (ನಂ.109/96) ದಾಖಲು ಮಾಡಿರುತ್ತಾರೆ.

ನಂತರ ಬ್ಯಾಂಕಿನವರು ಪರಿವರ್ತಿಸಲಾದ ಸಾಲವನ್ನು ವಸೂಲು ಮಾಡಲಾಗದೆ Debt Recovery Tribunal ಮುಂದೆ ಪ್ರಕರಣ ದಾಖಲು ಮಾಡುತ್ತಾರೆ. Debt Recovery Tribunal ರವರ ಆದೇಶದಂತೆ, ಸದರಿ ಕೆರೆ ಅಂಗಳವನ್ನು ಹರಾಜಿಗೆ ಇಡಲಾಯ್ತು. ಹರಾಜಿನಲ್ಲಿ ಶ್ರೀ ಮುಸ್ತಾಕ್ ಅಹಮದ್ ಎಂಬುವವರು 6.70 ಕೋಟಿ ರೂ.ಗಳಿಗೆ ಹರಾಜು ಕೂಗಿ, ಹರಾಜು ಮೊಬಲಿಗಿನ ಶೇ.25 ರಷ್ಟನ್ನು ಪಾವತಿ ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಅತ್ಯಂತ ವ್ಯವಸ್ಥಿತವಾಗಿ ಸರ್ಕಾರದ ಆಸ್ತಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲೆ ಸೃಷ್ಟಿಸಿ, ಮೋಸ, ವಂಚನೆ, ಅವ್ಯವಹಾರಗಳನ್ನು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ಕಾರ್ಯ ಪೂರ್ವಯೋಜಿತವಾಗಿದ್ದು, ಸರ್ಕಾರ, ಆರ್ಥಿಕ ಸಂಸ್ಥೆ ಮತ್ತು ಇಡೀ ಸಮಾಜವನ್ನು ಮೋಸಗೊಳಿಸುವ ಷಡ್ಯಂತ್ರವಾಗಿರುತ್ತದೆ. ಇದು ಸಹ ಒಂದು ಗಂಭೀರ ವಂಚನೆ ಪ್ರಕರಣವಾಗಿದ್ದು, ತುರ್ತಾಗಿ ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಕಾರದ ಆಡಳಿತವನ್ನೆ ಪ್ರಶ್ನೆ ಮಾಡುವಂತಹುದ್ದಾಗಿರುವುದರಿಂದ ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ತಮ್ಮ ವಿಶ್ವಾಸಿ,

ಸಹಿ/-

(ಎ.ಟಿ.ರಾಮಸ್ವಾಮಿ)

ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಸನ್ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು.
2. ಸನ್ಮಾನ್ಯ ಸಭಾಧ್ಯಕ್ಷರವರು, ಕರ್ನಾಟಕ ವಿಧಾನಸಭೆ, ಬೆಂಗಳೂರು.
3. ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
4. ಸನ್ಮಾನ್ಯ ಗೃಹ,ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು.
5. ಮಾನ್ಯ ಅರಣ್ಯ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ, ಪ್ರಧಾನ ಕಾರ್ಯದಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

(ಎ.ಟಿ.ರಾಮಸ್ವಾಮಿ)